"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**8ನೇ ಡಿಸೆಂಬರ್ 2020**
**ಮಂಗಳವಾರ**

**ವಿಷಯಾನುಕ್ರಮಣಿಕೆ**


**01. ವಿತ್ತೀಯ ಕಾರ್ಯಕಲಾಪ**

**2020–2021ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡನೆ,**
**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)**

**02. ಶಾಸನ ರಚನೆ**
**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಭೂ ಸುಧಾರಣೆಗಳ(ಎರಡನೇ ತಿದ್ದುಪಡಿ) ವಿಧೇಯಕ, 2020ರ**
**ಮೇಲಿನ ಮುಂದುವರೆದ ಚರ್ಚೆ**

ಶ್ರೀ ಬಸವರಾಜ ಪಾಟೀಲ್ ಇಟಗಿ
ಶ್ರೀ ಬಿ.ಕೆ.ಹರಿಪ್ರಸಾದ್
ಶ್ರೀ ಎನ್.ರವಿಕುಮಾರ್
ಡಾ||ತೇಜಸ್ವಿನಿ ಗೌಡ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
ಶ್ರೀ ಸಿ.ಎಂ.ಇಬ್ರಾಹಿಂ
ಶ್ರೀ ಹೆಚ್.ಎಂ.ರಮೇಶ ಗೌಡ
ಶ್ರೀ ಮರಿತಿಬ್ಬೇಗೌಡ
ಶ್ರೀ ಪಿ.ಆರ್.ರಮೇಶ್
ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)
ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಆಯನೂರ್ ಮಂಜುನಾಥ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಪುಟ್ಟಣ್ಣ
ಶ್ರೀ ಆರ್. ಧರ್ಮಸೇನ
ಶ್ರೀ ಎಸ್.ಎಲ್.ಭೋಜೇಗೌಡ


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಆರ್.ಬಿ.ತಿಮ್ಮಾಪೂರ
ಶ್ರೀ ಎಂ.ಟಿ.ಬಿ.ನಾಗರಾಜ್
ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**03. ಪ್ರಕಟಣೆ**

**04. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ.**

**"ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳು ಹಾಗೂ ಪ್ರಾಣ ಹಾನಿಯಾಗಿದ್ದು, ಸರ್ಕಾರವು ಪರಿಹಾರ ಕಾರ್ಯಗಳನ್ನು ಕೈಗೊಳ್ಳದಿರುವ ಬಗ್ಗೆ."**

ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
ಶ್ರೀ ಭೈರತಿ ಬಸವರಾಜು(ನಗರಾಭಿವೃದ್ಧಿ ಸಚಿವರು)
ಡಾ॥ ಅಶ್ವತ್ಥನಾರಾಯಣ ಸಿ.ಎನ್, ಉಪಮುಖ್ಯ ಮಂತ್ರಿ(ಉನ್ನತ ಶಿಕ್ಷಣ ಹಾಗೂ ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**05. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

111– **ಮಂಡ್ಯ ಕೆರೆ ಅಂಗಳದ ವಿವೇಕಾನಂದ ನಗರ ಬಡಾವಣೆ ಬಗ್ಗೆ.**

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

184– **ತೋಟಗಾರಿಕೆ ಬೆಳೆಗಳ ಮಾರಾಟಕ್ಕೆ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಕುರಿತು.**

ಶ್ರೀ.ಪಿ.ಆರ್.ರಮೇಶ್
ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)

144– **ರೈತರ ಸಾಲಮನ್ನಾ ಬಗ್ಗೆ**

ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

122– **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೀಡುತ್ತಿರುವ ಸಾಲಗಳ ಬಗ್ಗೆ**

ಶ್ರೀ ಎಂ.ಎ.ಗೋಪಾಲಸ್ವಾಮಿ
ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

176– **ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಕಾರ್ಡ್‌ಗಳ ವಿತರಣೆ ಬಗ್ಗೆ**

ಶ್ರೀ ಆರ್.ಧರ್ಮಸೇನ
ಶ್ರೀ ಕೆ.ಗೋಪಾಲಯ್ಯ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)

160– **ಪಟ್ಟಣ ಪಂಚಾಯಿತಿಗಳಿಗೆ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ**

ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು)

210– **ಎಂ.ಪಿ.ಎಂ. ಕಾರ್ಖಾನೆ ಪುನಶ್ಚೇತನಗೊಳಿಸುವ ಬಗ್ಗೆ.**

ಶ್ರೀ ಕಾಂತರಾಜ್(ಬಿಎಂಎಲ್)
ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

118– **ರಾಜ್ಯದಲ್ಲಿನ ತೋಟಗಾರಿಕಾ ಬೆಳೆಗಳ ಶೇಖರಣೆ ಕುರಿತು**

ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
ಡಾ॥ ಕೆ.ಸಿ.ನಾರಾಯಣಗೌಡ(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

138– **ಕೊಡಗು ಜಿಲ್ಲೆಯ ಮಡಿಕೇರಿ ನಗರ ಸಭೆಯ ವ್ಯಾಪ್ತಿಯ ತ್ಯಾಜ್ಯ ವಿಲೇವಾರಿಗೆ ಶಾಶ್ವತ ಯೋಜನೆ ರೂಪಿಸುವ ಕುರಿತು.**

ಶ್ರೀಮತಿ ಎಸ್.ವೀಣಾ ಅಚ್ಚಯ್ಯ
ಡಾ॥ ಕೆ.ಸಿ.ನಾರಾಯಣಗೌಡ (ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

128– **ನಗರಪಾಲಿಕೆಗಳ ಖಾಯಂ/ಗುತ್ತಿಗೆ ಪೌರಕಾರ್ಮಿಕರ ಬಗ್ಗೆ**

ಶ್ರೀ ಮರಿತಿಬ್ಬೇಗೌಡ
ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು)

220+142– **ಸ್ಮಾರ್ಟ್ ಸಿಟಿ ಯೋಜನೆ ಬಗ್ಗೆ**

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು)
ಶ್ರೀ ಕೆ.ಗೋವಿಂದರಾಜ್
ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

164– **ದೊಡ್ಡಬಳ್ಳಾಪುರ ಕೇಂದ್ರದಲ್ಲಿ ವಾಣಿಜ್ಯ ಸಂಕೀರ್ಣ ಬಸ್ಸು ನಿಲ್ದಾಣ ನಿರ್ಮಾಣ ಕುರಿತು**

ಡಾ: ತೇಜಸ್ವಿನಿ ಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
ಡಾ: ಕೆ.ಸಿ.ನಾರಾಯಣಗೌಡ, (ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**06. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಸರ್ಕಾರಿ ಸ್ವಾಮ್ಯದ ಮಂಡ್ಯ ಮೈಶುಗರ್ ಕಾರ್ಖಾನೆಯನ್ನು ಪ್ರಾರಂಭಿಸುವ ಹಾಗೂ ಕಾರ್ಮಿಕರ ಸಮಸ್ಯೆ ಬಗೆಹರಿಸುವ ಬಗ್ಗೆ.**

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ಜಮಖಂಡಿ ತಾಲ್ಲೂಕಿನ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.**

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ವೃತ್ತಿ ಶಿಕ್ಷಣ(ಜೆಓಸಿ)ಇಲಾಖೆಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ 95 ಉಪನ್ಯಾಸಕರು ಬಿ.ಇಡಿ., ಷರತ್ತಿನಿಂದ 7 ವರ್ಷ ಕಳೆದರೂ ಪ್ರೊಬೇಷನರಿ ಅವಧಿ ಘೋಷಿಸದೆ ಖಾಯಂ ಆಗದೆ ಅತಂತ್ರರಾಗಿರುವ ಕುರಿತು.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಗ್ರಾಮ ಪಂಚಾಯಿತಿಯ ಸದಸ್ಯತ್ವವನ್ನು ಬಹಿರಂಗವಾಗಿ ಹರಾಜು ಹಾಕುತ್ತಿರುವ ವಿಷಯ ಇಂದಿನ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಬಗ್ಗೆ.**

ಶ್ರೀ ಅರುಣ ಶಹಾಪುರ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸೃಷ್ಟಿಸಿರುವ ಪ್ರತ್ಯೇಕ ಸಚಿವಾಲಯದ ವ್ಯಾಪ್ತಿಗೆ ಕೇಂದ್ರದ ಹಿಂದುಳಿದ ಪಟ್ಟಿಯಲ್ಲಿ ಇಲ್ಲದೇ ಇರುವ ಜಾತಿಗಳಿಗೂ ಅನ್ವಯಿಸುವುದರ ಬಗ್ಗೆ.**

ಶ್ರೀ ಪಿ.ಆರ್. ರಮೇಶ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

~*~*~*~*~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(995)08.12.2020/11.20/ವೈಎಲ್–ಎಕೆ

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಮಂಗಳವಾರ, 8ನೇ ಡಿಸೆಂಬರ್ 2020**

ಸದನವು ವಿಧಾನ ಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ **11** ಗಂಟೆ **19** ನಿಮಿಷಕ್ಕೆ ಸಮಾವೇಶಗೊಂಡಿತು.

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ)** ಅವರು
ಪೀಠದಲ್ಲಿ ಉಪಸ್ಥಿತರಿದ್ದರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ವಿತ್ತೀಯ ಕಾರ್ಯಕಲಾಪ**

**2020-2021ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡನೆ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, 2020-2021ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

(996)08.12.2020/11.20/ಎಸ್‌ಕೆ-ವಿಕೆ

**02. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಭೂ ಸುಧಾರಣೆಗಳ(ಎರಡನೇ ತಿದ್ದುಪಡಿ) ವಿಧೇಯಕ, 2020ರ ಮೇಲಿನ ಮುಂದುವರೆದ ಚರ್ಚೆ.**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾನು ಅರ್ಧ ಮಾತನಾಡಿದ್ದೇನೆ. ನಾನು ಮಾತನಾಡುವಾಗ ಮಾನ್ಯ ಸದಸ್ಯರೆಲ್ಲರೂ ನನ್ನ ಸಮಯವನ್ನು ಕಸಿದುಕೊಂಡರು. ಆದ್ದರಿಂದ ನಾನು ಮಾತನಾಡಬೇಕಲ್ಲ.

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಬೇರೆ ಯಾವ ಸದಸ್ಯರು ತಾವು ಮಾತನಾಡಿರುವಷ್ಟು ಸಮಯ ಮಾತನಾಡಿಲ್ಲ, ತಾವು ಎಲ್ಲರಿಗಿಂತ ಹೆಚ್ಚಿನ ಸಮಯ ಮಾತನಾಡಿದ್ದೀರಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಇದರ ಬಗ್ಗೆ ಮಾತನಾಡಲಿಲ್ಲವೆಂದರೆ, ನಾನು ಬೇರೆ ಯಾವುದರ ಬಗ್ಗೆ ಮಾತನಾಡಬೇಕು ಹೇಳಿ.

**ಶ್ರೀ ಆರ್. ಅಶೋಕ್:-** ಇನ್ನೂ ಈ ವಿಧೇಯಕದ ಮೇಲೆ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಮತ್ತು ಮಾನ್ಯ ಹೆಚ್.ಎಂ. ರಮೇಶ್‌ಗೌಡರು ಮಾತನಾಡಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಕೃಷಿ ಮೇಲೆ ಬೆಳಕು ಚೆಲ್ಲುವಂತಹ ಅನೇಕ ಮಹತ್ವದ ವಿಚಾರಗಳಿವೆ.

**ಶ್ರೀ ಆರ್. ಅಶೋಕ್:** ನಿನ್ನೆ ಅರ್ಧ ಗಂಟೆ ಕಾಲ ಈ ವಿಚಾರದ ಮೇಲೆ ಚರ್ಚೆಯಾಗಿದೆ.

**ಶ್ರೀ ಎಸ್. ಆರ್. ಪಾಟೀಲ್:–**ಇದರ ಬಗ್ಗೆ ವಿಸ್ತೃತವಾಗಿ ಮಾತನಾಡಿದರೆ ಒಳ್ಳೆಯದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ರೈತರ ಬಗ್ಗೆ ಜಾಸ್ತಿ ಚರ್ಚೆಯಾದಷ್ಟು ನಮಗೂ ಮತ್ತು ನಿಮಗೂ ಒಳ್ಳೆಯದು.

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ನಾವು ಮಾತನಾಡದೇ ಹೋದರೆ, ಕಾಂಗ್ರೆಸ್‌ನವರು ಇದರ ವಿರುದ್ಧವಿದ್ದರೂ ಅಡ್ಜೆಸ್ಟ್ ಆಗಿಬಿಟ್ಟಿದ್ದಾರೆಂದು ತಿಳಿದುಕೊಳ್ಳುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಿನ್ನೆಯ ದಿವಸ ನಾನು ಮಾತನಾಡುವಾಗ ಅರ್ಧಕ್ಕೆ ನಿಲ್ಲಿಸುವಂತಹ ಕೆಲಸವಾಯಿತು. ಪ್ರಥಮವಾಗಿ Land Reforms ಅನ್ನು ಖಂಡಿಸುತ್ತಾ, ಇದೊಂದು ರೈತರಿಗೆ ಮಾರಕವಾದಂತಹ ಒಂದು ವಿಧೇಯಕವಾಗಿದೆ. ನಮ್ಮ ರಾಜ್ಯದಲ್ಲಿ ರೈತರು ಶೇಕಡ 70 ರಷ್ಟು ಇರತಕ್ಕಂತಹ ಪ್ರದೇಶದಲ್ಲಿ ಈ ಕೃಷಿಗೆ ಸಂಬಂಧಪಟ್ಟಂತೆ ಕಾಯಿದೆಗಳನ್ನು ತರಬೇಕಾದರೆ, ಸರ್ಕಾರ ಆಲೋಚನೆ ಮಾಡಬೇಕಾಗಿರುವಂತಹದ್ದು ಬಹಳ ಮುಖ್ಯವಾಗಿದೆ. ಇವತ್ತು ತಮಗೆ ಗೊತ್ತಿರುವಂತೆ ನಮ್ಮದೇ ಸರ್ಕಾರವಿರಬಹುದು ಅಥವಾ ಯಾವುದೇ ಸರ್ಕಾರಗಳು ಇರಬಹುದು. ನಾವು ರೈತರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆಂಬ ಮಾತನ್ನು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇವೆ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೃಷಿ ಬಜೆಟ್‌ನ್ನೇ ಮಾಡುವಂತಹದ್ದನ್ನ ಈ ಹಿಂದೆ ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಶೇಕಡ 160 ರಿಂದ 170 ರಷ್ಟು ಮಳೆ ಬಂದಿರತಕ್ಕದ್ದನ್ನು ಕೂಡ ನಾವು ನೋಡಿದ್ದೇವೆ. ಇವತ್ತು ಒಳ್ಳೆ ಬೆಳೆಯಿದ್ದಂತಹ ಸಮಯದಲ್ಲಿ ಮಳೆ ಬಂದು, ಶೇಕಡ 50 ರಷ್ಟು yield ಸಹಿತ ಬರಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಹದಿನೈದು ಕ್ವಿಂಟಾಲ್ ಹತ್ತಿ ಪ್ರತಿ ಎಕರೆಗೆ ಬರುವಂತಹದ್ದು, ಇವತ್ತು ಪ್ರತಿ ಹೊಲದಲ್ಲಿ ನಾಲ್ಕು ಅಥವಾ ಐದಾರು ಕ್ವಿಂಟಾಲ್ ಹತ್ತಿ yield ಬರುತ್ತಿದೆ. ಇವತ್ತು ಹಾಕಿದಂತಹ ಬೀಜ, ಗೊಬ್ಬರ, ಉಳುಮೆ ಮಾಡುವಂತಹದ್ದಕ್ಕೆ ಅಷ್ಟು ಹಣವನ್ನು ಬರಲಾರದಂತಹ ಪರಿಸ್ಥಿತಿ ಇವತ್ತು ಇದೆ. ಇಂತಹ ಪರಿಸ್ಥಿತಿಯಲ್ಲಿ ನನ್ನ ಅನುಭವದಲ್ಲಿ ನಾನು ಕೃಷಿ ಮಾಡುವುದರಿಂದ, ನಾಲ್ಕು ವರ್ಷಕ್ಕೆ ಒಂದು ಸಲ ಪೂರ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಷ್ಟವಾಗುತ್ತದೆ. ಒಂದು ಸಲ ಏನೆಂದರೆ, ಗಂಟಿಗೆ ಗಂಟು ಸರಿಯಾಗುತ್ತದೆ. ಒಂದು ಸಲ ಸ್ವಲ್ಪ ಲಾಭವಾಗುತ್ತದೆ. ಒಂದು ವರ್ಷ ಲಾಭವಾಗಬಹುದು ಅಥವಾ ಈ ನಾಲ್ಕು ಕ್ರಮೇಣವಾಗಿ ಆಗುವಂತಹದ್ದು, cycle ತರಹ ಇದ್ದಂತೆ. ಯಾವಾಗ ಲಾಭ ಬರುತ್ತದೆಯೋ, ಆಗ ಸಾಲವನ್ನೆಲ್ಲಾ ತೀರಿಸುತ್ತಾನೆ ರೈತ. ಮತ್ತೆ ಏನಾದರೂ ನಷ್ಟವಾದಾಗ, ಸಾಲ ಮಾಡುವಂತಹ ಪರಿಸ್ಥಿತಿಯಿದೆ. ಇಂತಹ ಒಂದು ಸಂದರ್ಭದಲ್ಲಿ ಅವನು ಶೇಕಡ 90 ರಷ್ಟು, ಅವರ ಕುಟುಂಬ ಹಳ್ಳಿಯಲ್ಲಿರುವಂತಹವರೆಲ್ಲರೂ ಕೂಡ ಇವತ್ತು ಹೊಲದಲ್ಲಿ ಹೋಗಿ ಕೆಲಸ ಮಾಡತಕ್ಕಂತಹದ್ದು ಮಾಡುತ್ತಾರೆ. ಇವತ್ತು ಒಂದು ವೇಳೆ ಬೇರೆ ದೊಡ್ಡ ಕಂಪನಿಗಳಿಗೆ ಭೂಮಿಯನ್ನು ಖರೀದಿ ಮಾಡುವುದಕ್ಕೆ ಬಿಟ್ಟರೆ, ಅವರು ಒಂದೊಂದು ಊರಿನಲ್ಲಿ ಐನೂರು ಎಕರೆ, ಸಾವಿರ ಎಕರೆ, ಎರಡು ಸಾವಿರ ಎಕರೆ ಖರೀದಿ ಮಾಡಿದ ಮೇಲೆ, ಅಲ್ಲಿರುವಂತಹ farm labourers ಮತ್ತು farm women's ಎಲ್ಲಿಗೆ ಹೋಗಬೇಕು. ಇವತ್ತು ಬಹಳ ಅವರು dependent ಆಗಿ ಇರುತ್ತಾರೆ. ಇವತ್ತು ರೈತ ನಾಲ್ಕು ಎಕರೆ ಹೊಲ ಇದ್ದಂತಹವನು, ಒಂದು ಹಸು, ನಾಲ್ಕಾರು ಮೇಕೆಗಳು, ಎರಡ್ಮೂರು ಕೋಳಿಗಳು ಸಾಕಿಕೊಳ್ಳುತ್ತಾ, ಜೀವನವನ್ನು ಸಾಗಿಸುವಂತಹ ಕೆಲಸವನ್ನು ಮಾಡುತ್ತಿರುತ್ತಾನೆ. ಒಂದು ವರ್ಷ ನಷ್ಟವಾಗುತ್ತದೆ ಮತ್ತು ಒಂದು ವರ್ಷ ಲಾಭವಾಗುತ್ತದೆ. ಒಂದು ವರ್ಷ ಅಲ್ಲಿ ಅಲ್ಲಿಗೆ ಸರಿ ಆಗುತ್ತದೆ. ಊರಿನಲ್ಲಿದ್ದಂತಹ ರೈತರಿಗೆ ಇವತ್ತು ಕಷ್ಟ ಬಂದಾಗ, ಅವರ ಪಕ್ಕದಲ್ಲಿದ್ದಂತಹವರು ರೈತರು ನೋಡಪ್ಪಾ, ಈ ವರ್ಷ ನಿಮಗೆ ನಷ್ಟವಾಗಿದೆ, ಇನ್ನೂ ಬೇಕೆಂದರೆ ಹತ್ತು ಸಾವಿರ ತೆಗೆದುಕೊಳ್ಳಿ. ಸಹಾಯವನ್ನು ಪಡೆದುಕೊಂಡು ಉಳುಮೆ ಮಾಡಿ, ಮುಂದಿನ ವರ್ಷ ಕೊಡುವಂತಹ ಒಂದು ಸಂದರ್ಭವಿದೆ. ಇವತ್ತು ಕಾರ್ಪೋರೇಟ್ ಕಂಪನಿಗಳು ಅಲ್ಲಿಗೆ ಬಂದು ಠಿಕಾಣಿ ಹೂಡಿದ ನಂತರ ಯಾರ್‍ಯಾರು ಹಣವನ್ನು ಕೊಡುವುದಿಲ್ಲ. ಇವತ್ತು ವಿಧೇಯಕಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ಆದರೆ conditions ಏನೆಂದರೆ, ಇವತ್ತು MSP (Minimum Support Price) ನಮ್ಮ ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆ ಮತ್ತು ರಾಜ್ಯ ಸರ್ಕಾರದವರು ಪ್ರತಿಯೊಂದು produce ಅನ್ನು MSP ಗೆ ತೆಗೆದುಕೊಳ್ಳಿ.

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ ಒಂದೇ ನಿಮಿಷ. ಇಲ್ಲಿ ನಾನು ಭೂ ಸುಧಾರಣೆ ಕಾಯಿದೆಯ ಬಗ್ಗೆ ಬಿಲ್ಲನ್ನು ತಂದಿರುವುದು. ತಾವು ಹೇಳಿರುವಂತೆ ಕಾರ್ಪೋರೇಟ್ ಕಂಪನಿಗಳು ಯಾವುದು ಇಲ್ಲಿ ಬರುವಂಥ ಪ್ರಶ್ನೆ ಇಲ್ಲ. ಈ ಭೂ ಸುಧಾರಣೆ ಕಾಯಿದೆ ಒಂದು ಕುಟುಂಬಕ್ಕೆ 54 ಎಕರೆಯಷ್ಟೇ ಇರುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಆ ವಿಚಾರಕ್ಕೆ related ಆಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಐದು ಜನ ಕುಟುಂಬಗಳಿದ್ದರೆ ಮಾತ್ರ 54 ಎಕರೆ ಮಾತ್ರ ತೆಗೆದುಕೊಳ್ಳುವುದಕ್ಕೆ ಇರುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಆರ್. ಅಶೋಕ್:** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ ಒಂದೇ ನಿಮಿಷ. ತಾವು ಹೇಳಿದ್ದಕ್ಕೆ ಮಾತ್ರ ಹೇಳುತ್ತಿದ್ದೇನೆ. ತಾವು ಹಿರಿಯ ಸಚಿವರು. ತಾವು ಕೃಷಿ ವಿಶ್ವವಿದ್ಯಾನಿಲಯದಿಂದ ಬಂದಿದ್ದೀರಾ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ recommendation ಕೊಟ್ಟಿದ್ದಾರೆ. ಅದಕ್ಕೆ ನಾನು reply ಕೊಡುತ್ತಿದ್ದೇನೆ. ಐವತ್ನಾಲ್ಕು ಎಕರೆ ಬಿಟ್ಟು ಮಾಡುವುದಕ್ಕೆ ಬರುವುದಿಲ್ಲ ಹಾಗೂ ನೀರಾವರಿ ಜಮೀನು ಏನಿದೆಯೋ, ನೀರಾವರಿಯನ್ನೇ ಮಾಡಬೇಕು. ತಾವು ಹೇಳಿದಂತೆ, ಯಾರೋ ಟಾಟಾ, ಬಿರ್ಲಾ ಬಂದು ಎರಡು-ಮೂರು ಸಾವಿರ ಎಕರೆ ಜಮೀನುಗಳನ್ನು ತೆಗೆದುಕೊಳ್ಳುವುದಕ್ಕೆ ಇದರಲ್ಲಿ provision ಇಲ್ಲ. ಐದು ಜನರಲ್ಲಿ ಆರನೇ ವ್ಯಕ್ತಿ ಬರಬೇಕಾದರೆ, ಮತ್ತೆ ಅವರಿಗೆ ಒಂದು ಯೂನಿಟ್ ಅಷ್ಟೇ. ಒಬ್ಬೊಬ್ಬ ಬಂದರೆ, ಯೂನಿಟ್‌ಗಳು ಜಾಸ್ತಿಯಾಗುತ್ತವೆ ಹೊರತು, ಯಾವುದೇ Multinational Company ಗಳು ಇದರಲ್ಲಿ ಬರುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಕೃಷಿ ಭೂಮಿಯನ್ನು ಖರೀದಿಸುವುದರ ಮೇಲಿನ ಮತ್ತು ಕೃಷಿ ಭೂಮಿಯನ್ನು ಖರೀದಿಸುವವನು ಅಂಥ ಭೂಮಿಯನ್ನು ಕೃಷಿ ಉದ್ದೇಶಕ್ಕಾಗಿ ಮಾತ್ರ ಬಳಸುವುದರ ಮೇಲಿನ ನಿರ್ಬಂಧವನ್ನು ತೆಗೆದು ಹಾಕಲಾಗಿದೆ ಎನ್ನುವಂತಹ ಪ್ರಶ್ನೆ ಇಲ್ಲಿ ಇರುವುದು. ಅದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಸ್ವಲ್ಪ ತಾಳ್ಮೆಯನ್ನಿಟ್ಟುಕೊಳ್ಳಿ. Strength ಇದೆ ಎಂದು ಬಿಲ್‌ನ್ನು ಪಾಸ್ ಮಾಡಿಕೊಳ್ಳುತ್ತೀರಾ. ಮಾನ್ಯ ವಿರೋಧ ಪಕ್ಷದವರು ಹೇಳುವ ಮಾತನ್ನು ಸ್ವಲ್ಪ ಕೇಳಿ. ತಾವು ಮಾಡುವುದೇನೂ ಬೇಕಾಗಿಲ್ಲ. ಮಾನ್ಯ ಸಚಿವರೇ ನಮ್ಮ ಜವಾಬ್ದಾರಿ. ನಾವು ಹೇಳುವಂತಹ ಕರ್ತವ್ಯವಿದೆ, ನಾವು ಹೇಳುತ್ತೇವೆ. ತಾವು ಕೇಳಬೇಕು ಎನ್ನುವಂತಿಲ್ಲ. ಜನಸಾಮಾನ್ಯರು ಕೇಳಬೇಕೆಂದು ನಾವು ಹೇಳುತ್ತೇವೆ.

**ಶ್ರೀ ಆರ್. ಅಶೋಕ್:-** ನಾವು ಕೇಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಈಗ ಕೇಂದ್ರದವರು ಈಗಾಗಲೇ farmers ಜೊತೆ ಚರ್ಚೆ ಮಾಡುತ್ತಿದ್ದಾರೆ. ಅದರ outcome ಬರುವ ತನಕ ತಡೆಯಿರಿ. ತಾವು ಏತಕ್ಕಾಗಿ urgent ಮಾಡುತ್ತಿದ್ದೀರಿ. ಈಗ ಅವರು ಕೂಡ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಈಗಾಗಲೇ ಆರು ಸಭೆಗಳು ನಡೆದಿವೆ. ಇಡೀ ದೇಶದಲ್ಲಿರುವ ರೈತರು ಒಂದು ಕಾಲ ಮೇಲೆ ನಿಂತುಕೊಂಡಿದ್ದಾರೆಂದು ಹೇಳಿದರೆ, ಇದು ಆಗಬಾರದು ಎಂದು ಹೇಳಿದಾಗ, ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. At least ಅಲ್ಲಿ ತೀರ್ಮಾನ ಏನಾಗುತ್ತಿದೆ ಎಂದು, ಅಲ್ಲಿ ತೀರ್ಮಾನವಾಗುವ ತನಕವಾದರೂ ಏತಕ್ಕೆ ಕಾಯಬಾರದು ಎನ್ನುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಯಾರ ಹತ್ತಿರ ಕೃಷಿ ಜಮೀನು ಇಲ್ಲ, ಅವರಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಎರಡನೆಯದಾಗಿ, Societies, Corporations ಬಂದು ಜಮೀನುಗಳನ್ನು ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತವೆ. ಅವರು ರಿಜಿಸ್ಟರ್ ಮಾಡುತ್ತಾರೆ. ಒಂದೊಂದು ರಿಜಿಸ್ಟರ್ ಮಾಡಿ ತಮ್ಮದೇನೂ ಲಿಮಿಟ್ ಇದೆಯೆಲ್ಲಾ, ಅದರ ಲಿಮಿಟ್‌ನ ಪ್ರಕಾರವಾಗಿ ಚೆನ್ನಾಗಿರುವಂತಹ ಭೂಮಿಯನ್ನು ಖರೀದಿ ಮಾಡುವಂತಹ ಕೆಲಸವನ್ನು ಮಾಡುತ್ತಾರೆ. ಆಗ ತಾವು ನಿರ್ಬಂಧ ಮಾಡುವುದಕ್ಕಾಗುತ್ತದೆಯೇ? ಅದು ಆಗುವಾಗಿಲ್ಲ. ಈ ಮೂರು ಏನು ಕಾಯಿದೆಗಳಿದ್ದಾವೆ ಒಂದಕ್ಕೊಂದು completely related ಇದೆ. ಈ ಮೂರು ಬಿಲ್ ತರುವಂತಹದ್ದಕ್ಕೆ ಎ.ಪಿ.ಎಂ.ಸಿ. ಬಿಲ್ ಮತ್ತು Land Reforms ಬಿಲ್ ಆಗಿರಬಹುದು. ಇವೆಲ್ಲಾ ಬಿಲ್‌ಗಳು ಒಂದಕ್ಕೊಂದು interlinked ಇರತಕ್ಕಂಥ ಬಿಲ್‌ಗಳು. ಮಾನ್ಯ ಸಚಿವರೇ ನಮಗೆ ಇವತ್ತು ಆತಂಕವೇನೆಂದರೆ, ರೈತರು ನೆಮ್ಮದಿಯಾಗಿ ಹೊಲದಲ್ಲಿ ಬದುಕು ಮಾಡಿಕೊಂಡು, ಜೀವನವನ್ನು ಸಾಗಿಸುವಂತಹದ್ದನ್ನು ನಾವು ನೋಡಿದ್ದೇವೆ. ಇವತ್ತು ರಾಜ್ಯ ಸರ್ಕಾರ ನೀರಾವರಿಯನ್ನು ಹೆಚ್ಚು ಮಾಡುವಲ್ಲಿ ಬಹಳಷ್ಟು ಶ್ರಮವಹಿಸುತ್ತಿದ್ದೀರಿ. ಇವತ್ತು ಏನೆಂದರೆ, ಭೂಮಿ ಉಳಿದರೆ ರೈತರಿಗೆ ಉಪಯುಕ್ತವಾಗತಕ್ಕಂತಹದ್ದು. ಇವತ್ತು ಯಾರೂ ಬೇಕಾದರೂ ಭೂಮಿಯನ್ನು ಖರೀದಿ ಮಾಡುವುದಾದರೆ, ನಾಳೆ ಎಲ್ಲರೂ ಖರೀದಿ ಮಾಡುವುದಕ್ಕೆ ಬರುತ್ತಾರೆ. ರೈತರಲ್ಲಿ ಹತ್ತು ಎಕರೆ ಹೊಲ ಇತ್ತು ಎಂದರೆ, ಐದು ಎಕರೆ ಹೊಲವನ್ನು ಮಾರಿ, ಸಾಲವನ್ನು ತೀರಿಸಿ ಆರಾಮವಾಗಿ ಇರಬೇಕು, ಇರುವುದಷ್ಟೇ ಸಾಕು ಎನ್ನುವಂತಹ ಮನಸ್ಥಿತಿ ಬರುತ್ತದೆ. ಇನ್ನು ಹತ್ತು ವರ್ಷಗಳಾದ ಮೇಲೆ ರೈತರ ಮಕ್ಕಳು ಆ ಐದು ಎಕರೆ ಹೊಲದಲ್ಲಿ, ಮತ್ತೆ ಮೂರು ಎಕರೆ ಮಾರಿ ಆರಾಮವಾಗಿ ಇರಬೇಕು ಎನ್ನುತ್ತಾರೆ. ಒಂದು fine day ಏನೆಂದರೆ, ಇಪ್ಪತ್ತು ವರ್ಷದೊಳಗೆ ಪೂರ್ತಿ ಹೊಲವನ್ನು ಮಾರುವಂತಹದ್ದಾಗುತ್ತದೆ ಹೊರತು ನಾವು land retain ಮಾಡುವಾಗಿಲ್ಲ. ಮಾನ್ಯ ಸಚಿವರೇ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಾಕ್‌ಡೌನ್ ಬಂತು. ನಾವೆಲ್ಲರೂ ನೋಡಿರುವಂತೆ ಮನೆಯಲ್ಲಿ ಕುಳಿತುಕೊಂಡಿದ್ದೆವು. ಎಂ.ಎಲ್.ಎ. ಅವರು ಮನೆಯಲ್ಲಿ ಕುಳಿತುಕೊಂಡರು. ಎಲ್ಲಾ ಇಂಡಸ್ಟ್ರಿಗಳು ಮುಚ್ಚಿದವು ಮತ್ತು ಎಲ್ಲಾ shops ಮುಚ್ಚಿದವು. Except Hospitals, Vegetables and Milk vendors ಮಾತ್ರ ಇದ್ದರು. ಮಾನ್ಯ ಸಚಿವರೇ ರೈತರು ಏನಾದರೂ ಮನೆಯಲ್ಲಿಯೇ ಕುಳಿತುಕೊಂಡಿದ್ದಾರೆಯೇ? ರೈತರು ಪ್ರತಿ ದಿವಸ ಹೊಲಕ್ಕೆ ಹೋಗಿ, ಅವರು ಕಾಯಿ ಪಲ್ಲೆಯನ್ನು ತಂದು ಬಜಾರ್‌ಗೆ ಕೊಟ್ಟಮೇಲೆ ತಾನೇ, ನಾವೆಲ್ಲರೂ ಮನೆಯಲ್ಲಿ ಕುಳಿತುಕೊಂಡು ಊಟ ಮಾಡುತ್ತಿರುವುದು. ಅವರು ಹೋಗಿ ದವಸಧಾನ್ಯ ತಂದು, ರೇಷನ್ ಅಂಗಡಿಗೆ ಹಾಕಿದಾಗ, ನಾವು ಕುಳಿತಲ್ಲೇ ಒಂದೊಂದು ವರ್ಷಗಟ್ಟಲೇ ತಿಂದಿದ್ದೇವೆ. ಆ ರೈತರು ಕಷ್ಟು ಪಡುವುದರ ಬಗ್ಗೆ ಯಾವತ್ತಿಗೂ ತಲೆಯನ್ನು ಕೆಡಿಸಿಕೊಂಡಿಲ್ಲ. ನಾವು ಬದುಕಬೇಕೆಂಬ ಆಸೆಯಿಂದ ಅವರು ಪ್ರತಿ ನಿತ್ಯವೂ ಕೂಡ ಆರೇಳು ತಿಂಗಳ ಕಾಲ ಲಾಕ್‌ಡೌನ್ ಇದ್ದರೂ ಕೂಡ ಇವತ್ತಿಗೂ ಕೂಡ ಕೃಷಿ ಕೆಲಸ ಮಾಡುವಂತಹ ಕಾರ್ಯವನ್ನು ಮಾಡಿದ್ದಾರೆ. ಒಂದು ವೇಳೆ ಅವರು ಕೆಲಸ ಮಾಡುವುದನ್ನು ಬಿಟ್ಟರೆ, ನಮ್ಮ ಪರಿಸ್ಥಿತಿ ಏನಾಗುತ್ತದೆ? ನಾವು ಕುಳಿತುಕೊಂಡು ತಿನ್ನುವುದಕ್ಕಾಗುತ್ತದೆಯೇ? ಒಂದು ಅಥವಾ ಎರಡು ವರ್ಷ ಕರೋನಾ ಇರಬಹುದು ಮತ್ತೇ ಲಾಕ್‌ಡೌನ್ ಬರಬಹುದು. ನಮಗೆ ಊಟವನ್ನು ತಂದು ಹಾಕುವವರು ಯಾರು? ಇಂತಹ ರೈತರನ್ನು ಒಕ್ಕಲೆಬ್ಬಿಸುವ ಕಾರ್ಯಕ್ರಮವನ್ನು ಯಾವ ಸರ್ಕಾರವೂ ಕೂಡ ಮಾಡಬಾರದು ಎನ್ನುವುದು ನನ್ನ ವಿನಂತಿ. ತಾವು ತಂದಿರುವ ವಿಧೇಯಕಕ್ಕೆ ಇನ್ನೂ ಸ್ವಲ್ಪ ತಿದ್ದುಪಡಿ ಮಾಡಿ. ಇವತ್ತು ರೈತರು small and marginal farmers ಇವತ್ತು ತಮ್ಮ ಸರ್ಕಾರವಿದೆ. ರೈತರ ಬಗ್ಗೆ ಕಾಳಜಿಯಿದೆ. ನಾವು ಅವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ. Schemes ಗಳನ್ನು ತೆಗೆದುಕೊಂಡು ಬನ್ನಿ. ಯಾರು small and marginal farmers ಇದ್ದಾರೋ, power tillers ಅನ್ನು free ಆಗಿ ಕೊಡುತ್ತೇವೆ. sowing machines ಅನ್ನು free ಆಗಿ ಕೊಡುತ್ತೇವೆ. harvesting machine ಗೆ subsidy ಅನ್ನು ಕೊಡುತ್ತೇವೆ. Seeds, fertilizers, and other inputs ಅವುಗಳಿಗೆಲ್ಲಾ free ಆಗಿ ಕೊಡುತ್ತೇವೆ. Subsidy amount ನಲ್ಲಿ ಸರಬರಾಜು ಮಾಡುತ್ತೇವೆಂಬ ಮಾತನ್ನು ಹೇಳಿದರೆ, ನಾವು ಇವತ್ತು ಸ್ವಾಗತ ಮಾಡುತ್ತೇವೆ. ನಮ್ಮ ದೇಶದಲ್ಲಿರುವ ಪ್ರತಿಯೊಬ್ಬರೂ ಕೂಡ ರೈತರ ಮೇಲೆ dependent ಆಗಿದ್ದಾರೆ. ಇವತ್ತು farming sector ನಿಂದಲೇ ಸಾಕಷ್ಟು ಕೈಗಾರಿಕೆಗಳು, ರೈಸ್ ಮಿಲ್‌ಗಳು, textile mills ನಡೆಯುವಂತಹದ್ದಾಗಿದೆ. Bio-products ನಿಂದಲೇ ಇವತ್ತು ಏನು tomato ನಿಂದ ketchup ಮಾಡುತ್ತೇವೆಯೆಲ್ಲಾ bio-product factory, ಅದು ಕೂಡ ನಡೆಯುವಂತಹದ್ದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

farming sector ನಿಂದಲೇ. ಭಾರತದ ವ್ಯಾಪ್ತಿಯಿಂದ ರೈತರು ಏತಕ್ಕಾಗಿ ಮುಷ್ಕರ ಮಾಡುತ್ತಿದ್ದಾರೆ? ಒಂದು ವೇಳೆ ಕೇಂದ್ರ ಸರ್ಕಾರ ಹೇಳುವಂತಹದ್ದು ಸರಿಯಿದ್ದರೆ, ಅವರು ಮುಷ್ಕರ ಏತಕ್ಕೆ ಮಾಡುತ್ತಿದ್ದಾರೆ? ಇದಕ್ಕೊಂದು ಅರ್ಥವಿರಬೇಕಲ್ಲಾ.

(ಮುಂದು)

(997) 08.12.2020 11.30 ಟಿಸಿಹೆಚ್-ವಿಕೆ

**ಶ್ರೀ ಬಸವರಾಜ್ ಪಾಟೀಲ್ ಇಟಗಿ (ಮುಂದು...)**

ಇವತ್ತು ಅವರಿಗೆ ಗೊತ್ತಾಗಿದೆ. ಈ ಬಿಲ್ ತಂದರೆ ನಾವು ಯಾವ ರೈತರು ಕೂಡ ಉಳಿಯುವುದಿಲ್ಲ. ಇದಾದನಂತರ ಎ.ಪಿ.ಎಂ.ಸಿ., ಕಾಯ್ದೆ ಬಂದುಬಿಡುತ್ತದೆ. ಇವತ್ತು ನಾವು ಎ.ಪಿ.ಎಂ.ಸಿ.,ಗೆ ಹೋಗಿ ನಾವು ಮಾಲನ್ನು ಮಾರಾಟ ಮಾಡಬೇಕಿದೆ. ನಾಳೆದಿವಸ ಯಾರೋ ಒಬ್ಬರು ಬಾಂಬೆ, ಕೊಲ್ಕತ್ತಾ, ಬ್ರಿಟನ್ ದೇಶದಿಂದ ಬಂದು ಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಸಾಕಷ್ಟು paddy ಇವೆ. North India, South India, East India, and West India ಎಂದು ನಾಲ್ಕು ಭಾಗಗಳನ್ನಾಗಿ ಕ್ರಿಯೇಟ್ ಮಾಡುತ್ತಾರೆ. ಅವನು ಅಲ್ಲಿ ಒಂದಷ್ಟು ಗೋಡನ್‌ಗಳನ್ನು prepare ಮಾಡಿ ಸ್ಟಾಕ್ ಮಾಡಿಬಿಡುತ್ತಾನೆ. ಅವನು artificial ಆಗಿ create ಮಾಡುತ್ತಾನೆ. ಇದ್ದಂತಹ ಎಲ್ಲಾ ಮಾಲನ್ನು ತೆಗೆದುಕೊಂಡು 1 ವರ್ಷ ಅಥವಾ 3 ತಿಂಗಳು ಅಥವಾ 6 ತಿಂಗಳು ಅದನ್ನು regulate ಮಾಡುವಂಥ ಕೆಲಸ ಮಾಡುತ್ತಾನೆ. ಇವತ್ತಿನ ದಿವಸ ನಾವು 12 ರೂಪಾಯಿಗಳಿಗೆ ಒಂದು ಕೆ.ಜಿಗೆ paddy ಕೊಟ್ಟು, 50 ರೂಪಾಯಿಗಳಿಗೆ ಒಂದು ಕೆ.ಜಿ ಅಕ್ಕಿ ತೆಗೆದುಕೊಳ್ಳಬೇಕಾಗುತ್ತದೆ. ಇವೆಲ್ಲಾ ಆಗತಕ್ಕಂಥದ್ದು ಇದೆ. ಇವತ್ತು MSP (Minimum Support Price), ಈಗ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ನನಗೆ ಸಿಕ್ಕಿದ್ದರು. ಅವರಿಗೆ ನಾನು ನಮ್ಮ ಕಡೆ ಸಾಕಷ್ಟು paddy ಬಂದಿದೆ, ಸಾಕಷ್ಟು ಇಳುವರಿ ಲಾಸ್ ಆಗಿದೆ. ಸರ್ಕಾರ ಇದುವರೆಗೂ ಕೂಡ ಖರೀದಿ ಕೇಂದ್ರಗಳನ್ನು ತೆರೆದಿಲ್ಲ ಎಂದು ಕೇಳಿದೆನು. ಅದಕ್ಕೆ ಅವರು ನಿನ್ನೆಯೇ ಪಾಸ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಪ್ರತಿ ಕ್ರಿಂಟಾಲ್ paddyಗೆ ರೂ. 1866 ಎಂ.ಎಸ್.ಪಿ.ರೇಟ್ ಇದೆ. 75 ಕೆ.ಜಿ ಬ್ಯಾಗ್‌ನ್ನು 1030 ರೂಪಾಯಿಗಳಿಗೆ ಮಾರ್ಕೆಟ್‌ನಲ್ಲಿ ನನ್ನದೇ ಉತ್ಪಾದನೆಯನ್ನು ಮಾರಾಟ ಮಾಡಿದ್ದೇನೆ. ಅದನ್ನು ಹಾಗೆಯೇ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಈಗ ಸೈಕ್ಲೋನ್ ಬರುತ್ತಿದೆ. ಎರಡ್ಮೂರು ಸೈಕ್ಲೋನ್‌ಗಳು ಮೇಲಿಂದ ಮೇಲೆ ಬಂದವು. ಒಂದು ವೇಳೆ ಅದನ್ನು ಇಟ್ಟುಕೊಂಡರೆ ಅದು ಮತ್ತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದ್ದೆಯಾಗಿರುವುದನ್ನು ಪ್ರತಿ ಕ್ವಿಂಟಾಲ್‌ಗೆ 800 ರೂಪಾಯಿಗಳಿಗೂ ಕೂಡ ಕೇಳುವವರಿಲ್ಲ. ಈಗ ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ, ಎಷ್ಟು ಹೊತ್ತಾದರೂ ಕೂಡ ನಾವು ಮಾರಾಟ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಸರ್ಕಾರ ಕೂಡ ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಮತ್ತೆ ನಾವು ಆ ಉತ್ಪನ್ನವನ್ನು ಎಲ್ಲಿಗೆ ತಗೆದುಕೊಂಡು ಹೋಗುವುದು, ಮತ್ತೆ ನಾವು ಬೆಳೆಯನ್ನು ಬೆಳೆಯಬೇಕಾಗುತ್ತದೆ. ಈ ರೀತಿಯ ಸಮಸ್ಯೆಗಳಿವೆ. ಆದ್ದರಿಂದ ನಾವು ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರಕ್ಕೆ ಏನು request ಮಾಡುತ್ತೇವೆಂದರೆ, ನೀವು ಯಾವುದೇ ಬಿಲ್‌ನ್ನು ತೆಗೆದುಕೊಂಡು ಬನ್ನಿ. ಆದರೆ ನಮ್ಮ ಉತ್ಪಾದನೆಗೆ ಬೆಲೆ ಕಡಿಮೆಯಾದರೆ ನೀವು ಎಂ.ಎಸ್.ಪಿ., ದರಕ್ಕೆ ಖರೀದಿ ಮಾಡುವುದಕ್ಕೆ ತಯಾರಾಗಿ. ಇವತ್ತು ಹಲವೆಡೆ coconut ಬೆಳೆಯುತ್ತೇವೆ, ಆ coconut grower ಗೆ ಕೂಡಲೇ ವೈಜ್ಞಾನಿಕವಾಗಿ ಒಂದು ಬೆಲೆ ಫಿಕ್ಸ್ ಮಾಡಿ. ಇವತ್ತಿನ ದಿವಸ ರೈತರು ಬೆಳೆದ ಉತ್ಪನ್ನಗಳಿಗೆ ಸರ್ಕಾರ ಬೆಲೆ ಫಿಕ್ಸ್ ಮಾಡುವುದಕ್ಕೆ ಶಕ್ತಿ ಇಲ್ಲ. ಅದೇ ಒಬ್ಬ ಟ್ರೇಡರ್ಸ್‌ಗೆ ಬೆಲೆ ಫಿಕ್ಸ್ ಮಾಡುವುದಕ್ಕೆ ಶಕ್ತಿ ಇದೆ. ಇವತ್ತು ನಮ್ಮಿಂದ 12 ರೂಪಾಯಿಗಳಿಗೆ ಒಂದು ಕೆ.ಜಿ., ಪ್ಯಾಡಿ ತೆಗೆದುಕೊಂಡು ಹೋಗಿ ಅವನು 50 ರೂಪಾಯಿಗಳಿಗೆ ಸೋನಾಮಸೂರಿ ಅಕ್ಕಿಯನ್ನು ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಾನೆ. ಇದು ಎಷ್ಟು ವ್ಯತ್ಯಾಸ ಆಯಿತು ನೋಡಿ. ವೈಜ್ಞಾನಿಕವಾಗಿ ಎಂ.ಎಸ್.ಪಿ., rate fix ಮಾಡಿ. ಇನ್ನು ಮುಂದೆ ಯಾವುದೇ ಪ್ಯಾಡಿಯನ್ನು ಒಂದು ಕೆ.ಜಿಗೆ ಇಷ್ಟು ರೂಪಾಯಿಗಳಿಗೆ ನೀವು ತೆಗೆದುಕೊಳ್ಳಬೇಕು. ಅದು process ಆದಮೇಲೆ ಅದಕ್ಕೆ ವೈಜ್ಞಾನಿಕವಾಗಿ ದರವನ್ನು ನಿಗದಿ ಮಾಡಿ. ಇಷ್ಟು ದರಕ್ಕೆ ಅದನ್ನು ಮಾರಾಟ ಮಾಡಬೇಕೆಂದು ಸರ್ಕಾರಗಳು ಫಿಕ್ಸ್ ಮಾಡಲಿ. ಅವರಿಗೂ ಮಾರ್ಜಿನ್ ಕೊಡಲಿ, ಏಕೆಂದರೆ ಅವರು ಕೂಡ ಬದುಕಬೇಕು ಮತ್ತು ರೈತರು ಕೂಡ ಬದುಕಬೇಕು. ರೈತರು ಬರೀ ದುಡಿದು, ದುಡಿದು ಮಧ್ಯವರ್ತಿಗಳ ಬಾಯಿಗೆ ಇಡತಕ್ಕಂಥ ಕೆಲಸವಾಗಿದೆ. ಇವೆಲ್ಲಾ ಕಾನೂನುಗಳು ಕೂಡ ಅವರಿಗೆ ಅನುಕೂಲವಾಗುವ ರೀತಿಯಲ್ಲಿಯೇ ಇವೆ. ಇವತ್ತು ಅವರು ಏನು ಮಾಡುತ್ತಾರೆಂದರೆ, ಸೊಸೈಟಿಗಳ ಮುಖಾಂತರ ಒಂದು ಸಾವಿರ, ಎರಡು ಸಾವಿರ ಮತ್ತು ಮೂರು ಸಾವಿರ ಎಕರೆಯಲ್ಲಿ ಮೂರ್‍ನಾಲ್ಕು ಸೊಸೈಟಿ form ಮಾಡಿ, ಆ ಊರನ್ನೇ ಅವರ ನಿಯಂತ್ರಣಕ್ಕೆ ಇಟ್ಟುಕೊಂಡುಬಿಡುತ್ತಾರೆ. ಎಲ್ಲಾ ಲೇಬರ್‌ಗಳು ಬೆಳಗ್ಗೆ ಎದ್ದು ಅವರ ಹೊಲಕ್ಕೆ ಹೋಗಬೇಕು. ಅವರು ಹೇಳಿದಂಥ ರೇಟ್‌ನ್ನು ನಾವು ಕೊಡಬೇಕಾಗುತ್ತದೆ. ನಾವು ಸ್ವಂತ ಹೊಲ ಮಾಡತಕ್ಕಂಥವರು, ಲೇಬರ್ ಕೇಳಿದ ರೇಟ್ ಕೊಡದಿದ್ದರೆ, ನಮ್ಮ ಹತ್ತಿರ ಅವರು ಬರುವುದೇ ಇಲ್ಲ. ನಾಳೆ ದಿವಸ ಅವನು ಏನು ಮಾಡುತ್ತಾನೆಂದರೆ, artificial ಆಗಿ create ಮಾಡಿ ಅವನಿಗೆ ಯಾವ ಬೆಲೆಗೆ ಬೇಕಿದೆಯೋ ಅದೇ ಬೆಲೆಗೆ ಮಾರಾಟ ಮಾಡುತ್ತಾನೆ. ಆದರೆ ನಮ್ಮಿಂದ ಮಾರಾಟ ಮಾಡಲು ಆಗುತ್ತದೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಶ್ರೀ ಬಸವರಾಜ್ ಪಾಟೀಲ್ ಇಟಗಿಯವರೇ, ಮಧ್ಯವರ್ತಿಗಳ ಹಾವಳಿಯನ್ನು ತಡೆಗಟ್ಟುವುದಕ್ಕೋಸ್ಕರವೇ ಈ ಎ.ಪಿ.ಎಂ.ಸಿ., ಆಕ್ಟ್‌ನ್ನು ತರುತ್ತಿರುವುದು.

**ಶ್ರೀ ಬಸವರಾಜ್ ಪಾಟೀಲ್ ಇಟಗಿ:-** ಈ ವಿಚಾರ ನನಗೂ ಸ್ವಲ್ಪ ಗೊತ್ತಿದೆ. ಆದರೆ ನಿಮ್ಮಷ್ಟು ಗೊತ್ತಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಲ್ಟಿ ನ್ಯಾಷನಲ್ ಕಂಪನಿಯಿಂದ ದೊಡ್ಡ middlemen ಬರುತ್ತಾರೆ. He is a big middleman. ಆಗ ಏನಾಗುತ್ತದೆ ಎಂದರೆ. . .

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆದರೆ ನಮಗೆ ಹೇಗೆ ಬದುಕಬೇಕೆಂದು ಗೊತ್ತಿದೆ. ನಿಮ್ಮಷ್ಟು ಬುದ್ದಿ ನಮಗೆ ಇಲ್ಲ. ನಾವು ಇಲ್ಲಿ ಕುಳಿತುಕೊಂಡು ಕಥೆ ಹೇಳುವುದಕ್ಕೆ ಆಗುವುದಿಲ್ಲ. ನಾವು ಹಳ್ಳಿಯಲ್ಲಿ ಇರುತ್ತೇವೆ. ಬೆಳಗ್ಗೆ ಆದ ಕೂಡಲೇ ರೈತರು ಮನೆ ಮುಂದು ಬಂದು ನಿಲ್ಲುತ್ತಾರೆ. ನಮ್ಮ ಕಡೆ ರಾಯಚೂರು, ಗುಲ್ಬರ್ಗಾ, ಯಾದಗಿರಿ ಮತ್ತು ಬೀದರ್‌ನಲ್ಲಿ ಯಾವ ರೀತಿ ಬಡತನ ಇದೆಯೆಂದು ಮಾನ್ಯ ಶ್ರೀರಾಮುಲುರವರಿಗೆ ಗೊತ್ತಿದೆ, ನೀವು ಅವರನ್ನು ಕೇಳಿ. ನಮ್ಮ ಹಳ್ಳಿಯಲ್ಲಿ ಹೆಣ್ಣು ಮಕ್ಕಳ ಸೀರೆ ತೂತು ಬಿದ್ದಿದೆ, ಆ ಮಕ್ಕಳಿಗೆ ಹಾಕಿಕೊಳ್ಳುವುದಕ್ಕೆ underwear ಇಲ್ಲ. ಹಾಗೆಯೇ ಬದುಕುತ್ತಿದ್ದಾರೆ. ರೈತರು ಹೊಲ ಮಾಡಿಕೊಂಡು ಅಷ್ಟರಲ್ಲಿಯೇ ಬದುಕುತ್ತಾರೆ. ನಿಮಗೆ ಏನು ಗೊತ್ತಿದೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರೇ, ನಾನು ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬ ರೈತರು ಮುಂಚೆ ಟೊಮೊಟೋವನ್ನು ಎಷ್ಟು ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದರು? 10 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದರು ಎಂದು ಇಟ್ಟುಕೊಂಡರೆ, ಅದೇ consumer ಗೆ 40 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾನೆ. ಆ 30 ರೂಪಾಯಿಗಳು ಯಾರಿಗೆ ಹೋಗುತ್ತಿದೆ. ಆ 30 ರೂಪಾಯಿಗಳು ಮಿಡಲ್‌ಮೆನ್‌ಗೆ ಹೋಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೋಸ್ಕರವೇ ಎ.ಪಿ.ಎಂ.ಸಿ., ಬಿಲ್‌ನ್ನು ತರುತ್ತಿರುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಹೌದು, ನಾವು ಅದನ್ನೇ ಹೇಳುತ್ತಿದ್ದೀವಲ್ಲಾ, ಎಂ.ಎಸ್.ಪಿ.,ಯನ್ನು ತೆಗೆದುಕೊಂಡು ಬನ್ನಿ. ನೀವು ಖರೀದಿ ಮಾಡಿ ನಮ್ಮ ರೈತರಿಗೆ ಒಂದು ದರ ನಿಗದಿ ಮಾಡಿ. ಆ ಟ್ರೇಡರ್ಸ್ ಯಾರು process ಮಾಡುತ್ತಾರೆ, ಅವರ ಚಾರ್ಜಸ್ ಏನಿದೆ, ಅವರಿಗೆ ಏನು margin ಕೊಡಬೇಕಿದೆ ಕೊಟ್ಟು ಅದನ್ನೂ ಕೂಡ fix ಮಾಡಿ. ಆಗ ನಾವು ಒಪ್ಪುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ರೈತರು ಬೆಳೆದ ಬೆಳೆಗಳಿಗೆ ನೇರವಾಗಿ ಲಾಭ ಸಿಗಲಿ ಎಂದು ಈ ಬಿಲ್‌ನ್ನು ಮಾಡುತ್ತಿರುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವನು ಖರೀದಿ ಮಾಡಲು ಹೋದಾಗ ಅವನು ಬೆಲೆ ನಿಯಂತ್ರಣ ಮಾಡಿದರೆ ಆಗ ನೀವೇನು ಮಾಡುತ್ತೀರಿ?

**ಶ್ರೀ ಎನ್.ರವಿಕುಮಾರ್:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ನಾನು ಒಂದೇ ಪಾಯಿಂಟ್ ಹೇಳುತ್ತೇನೆ. ರೈತರು ಬೆಳೆದ ಬೆಳೆಗಳಿಗೆ ಅವನಿಗೆ ನೇರವಾಗಿ ಲಾಭ ಸಿಗಲಿ ಎಂದು ಈ ಬಿಲ್‌ನ್ನು ಮಾಡುತ್ತಿರುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಈಗಾಗಲೇ ಅಲ್ಲೆಲ್ಲಾ ಟೊಮೊಟೊವನ್ನು ಲೋಡ್‌ಗಟ್ಟಲೆ ಟ್ರಾಕ್ಟರ್‌ನಲ್ಲಿ ತಂದು ಸುರಿಯುತ್ತಿದ್ದಾರೆ, ಅದಕ್ಕೆ ಯಾರು ಜವಾಬ್ದಾರಿ ನೀವು ನೋಡಿದ್ದೀರಾ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಮಿಡಲ್‌ಮೆನ್ ಅವೈಡ್ ಮಾಡುವುದಕ್ಕೆ . . .

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಸುರಿಯೋದು ಬೇರೆ, ಸುರಿಸುವುದು ಬೇರೆ. (ಗೊಂದಲ) ನಾವು ಕೂಡ ಒಬ್ಬ ರೈತರೆ. ಈ Globalisation ನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಈ Globalisation ಶ್ರೀ ಪಿ.ವಿ.ನರಸಿಂಹರಾವ್ ಮತ್ತು ಡಾ|| ಮನಮೋಹನ್‌ಸಿಂಗ್ ರವರ ಕಾಲದಿಂದಲೂ ಪ್ರಾರಂಭವಾಯಿತು. ಸನ್ಮಾನ್ಯ ನರೇಂದ್ರ ಮೋದಿಯವರ ಕಾಲದಲ್ಲಿ ಪ್ರಾರಂಭವಾಗಿಲ್ಲ. ಸನ್ಮಾನ್ಯ ಯಡಿಯೂರಪ್ಪನವರು ರೈತರಿಗೆ ಅನುಕೂಲವಾಗಲಿ ಎಂದು ನಾವು ಈ ಕಾಯ್ದೆಯನ್ನು ತಂದಿರುವುದು ಜನ ಅದನ್ನು ನಂಬುತ್ತಾರೆ. ನೀವು ನಂಬಬೇಕಾಗಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-** ಡಾ॥ ತೇಜಸ್ವಿನಿಗೌಡರವರೇ, ನೀವು ಅಲ್ಲಿಗೆ ಒಮ್ಮೆ ಅಲ್ಲಿಗೆ ಬಂದು ನೋಡಿ, ಅಲ್ಲಿ ಯಾವ ರೀತಿ ಇದೆಯೆಂದು ಗೊತ್ತಾಗುತ್ತದೆ. ಏನೋ ಒಂದು ಮಾತನಾಡಿ ಒಂದು ಕೆ.ಜಿ ಟೊಮೊಟೊ ಬೆಲೆ ರೂ.10 ಎಂದು ಹೇಳಿದರು.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಕೋಲಾರದಲ್ಲಿ ಒಂದು ವಾರದಿಂದ ಟೊಮೊಟೊ ತಂದು ಸುರಿಯುತ್ತಿದ್ದಾರೆ. ಸುಮ್ಮನೆ ಬಾಯಿಗೆ ಬಂದಂತೆ ಮಾತನಾಡಬಾರದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ವಿಷಯವನ್ನು ಡೈವರ್ಟ್ ಮಾಡಬಾರದು. ಈ land reforms ಬಿಲ್‌ನ್ನು ನಾನು support ಮಾಡಿ ಮಾತನಾಡಿದ್ದೇನೆ. ಆದರೆ ನೀವು ಎಲ್ಲವನ್ನು mix-up ಮಾಡಬೇಡಿ. ದಯವಿಟ್ಟು ರೈತರ ಬಗ್ಗೆ ಕಾಳಜಿ ಇರಬೇಕು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ವಿರೋಧ ಪಕ್ಷದವರು ಮಾತನಾಡುವಾಗ treasury bench ನವರು patience ಇಟ್ಟುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:-** ನಿನ್ನೆ ದಿವಸ ನಮ್ಮ ತಾಳ್ಮೆಯನ್ನು ನೀವು ನೋಡಿದ್ದೀರಿ. ನೀವು ತಾಳ್ಮೆ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ನೀವು ಒಂದು ಬಾರಿ ಕೋಲಾರಕ್ಕೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಒಂದು ವಾರದಿಂದ ಟಮೊಟೊ ತಂದು ಸುರಿಯುತ್ತಿದ್ದಾರೆ. ಇವತ್ತು ಭಾರತ್ ಬಂದ್ ಇರುವುದರಿಂದ ತಂದು ಸುರಿಯುತ್ತಿಲ್ಲ. ಅದಕ್ಕೆ ಸರ್ಕಾರ ಏನು ಪರಿಹಾರ ಕೊಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ನಾವು ಟಮೊಟೊ ತಿನ್ನುವವರು ಅಲ್ಲ, ನಾವೂ ಟೊಮೊಟೊ ಬೆಳೆಯತಕ್ಕಂಥವರು. ನಾನು ಕೂಡ ಆ ಭಾಗದವರೆ. ಇಲ್ಲಿ ಕುಳಿತಿರುವಂತಹ ಸದಸ್ಯರೆಲ್ಲರೂ ರೈತರ ಮಕ್ಕಳೆ ಗೆದ್ದು ಬಂದಿರುವುದು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಸುಮ್ಮನೆ ಯಾವುದೋ ವಿಷಯವನ್ನು ಪ್ರಸ್ತಾಪ ಮಾಡುವುದಲ್ಲ. ಸುಮ್ಮನೆ ವಿಷಯವನ್ನು ಡೈವರ್ಟ್ ಮಾಡಬೇಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ರೈತರು ಏನಾಗಿದ್ದಾರೆಂದು ಯಾವತ್ತಾದರೂ ಮಾರುಕಟ್ಟೆಗೆ ನೀವು ಮಾರುಕಟ್ಟೆಗೆ ಹೋಗಿದ್ದೀರಾ? ಸುಮ್ಮನೆ ಮಾತನಾಡುವುದಲ್ಲ. ದಯವಿಟ್ಟು ನೀವು ಎಲ್ಲಾ ವಿಚಾರಗಳನ್ನು ಒಂದೇ ರೀತಿ ತೆಗೆದುಕೊಳ್ಳಬೇಡಿ. ನಾನು ಸಪೋರ್ಟ್ ಮಾಡಿ ಮಾತನಾಡಿದ್ದೇನೆ. ವಿಷಯ ಡೈವರ್ಟ್ ಮಾಡಬೇಡಿ. ಮಾನ್ಯ ಸಚಿವರು ಕುಳಿತಿದ್ದೀರಿ, ತಾವು ಉತ್ತರ ಕೊಡಿ. ವಿಷಯ ಡೈವರ್ಟ್ ಮಾಡಿದ್ದಕ್ಕೆ ಇಷ್ಟೆಲ್ಲಾ ಅನಾಹುತ ಆಗುತ್ತಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎ.ಪಿ.ಎಂ.ಸಿ., ಬಗ್ಗೆ ಮಾತನಾಡಿದರು. ಎ.ಪಿ.ಎಂ.ಸಿ.ಯಲ್ಲಿ ಇ–ಟೆಂಡರಿಂಗ್ ಪ್ರೊಸೆಸ್‌ಗೆ ಅಲ್ಲಿ ರೈತ ತನ್ನ commodity ತೆಗೆದುಕೊಂಡು ಹೋದ ಮೇಲೆ ಅಲ್ಲಿ ನಡೆಯುತ್ತಿರುವ ಪ್ರಕಾರ, ಖರೀದಿದಾರರು ಟೆಂಡರ್ ಮಾಡುತ್ತಾರೆ. (ಗೊಂದಲ)ಯಾರು ಹೆಚ್ಚಿಗೆ ಬಿಡ್ ಮಾಡುತ್ತಾರೋ ಅವರಿಗೆ ಕೊಡುತ್ತಾರೆ. ಎ.ಪಿ.ಎಂ.ಸಿ., ಕ್ಲೋಸ್ ಆದರೆ ಅಲ್ಲಿ ಏನು ನಡೆಯುತ್ತೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈಗ ನಾವು ಕಲಂ 79(ಎ) ಮತ್ತು ಕಲಂ 79(ಬಿ) ಮೇಲೆ ಚರ್ಚೆ ನಡೆಯುತ್ತಿರುವುದು. ಎ.ಪಿ.ಎಂ.ಸಿ.ಕಾಯ್ದೆ ಬಗ್ಗೆ. . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:–** ಅದರ ಬಗ್ಗೆ ಮಾತನಾಡಿದ್ದು ಯಾರು? ನಿಮ್ಮ ಸದಸ್ಯರು ಮಾತನಾಡಿದ್ದು ನಾವಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾವಲ್ಲ. ನಿಮ್ಮ ಸಚಿವರು ಮತ್ತು ನಿಮ್ಮ ಸದಸ್ಯರಿಗೆ ಹೇಳಿ.

**(ಗೊಂದಲ)**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮೊದಲು ಇಲ್ಲಿ ನಾವು ಕಲಂ 79(ಎ) ಮತ್ತು ಕಲಂ 79(ಬಿ) ಮೇಲೆ ಮಾತನಾಡುತ್ತಿದ್ದೇವೆ. ಅವರು ಎ.ಪಿ.ಎಂ.ಸಿ., ಕಾಯ್ದೆ ಬಗ್ಗೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ನಾವು ಮಾತನಾಡಿಲ್ಲ, ಟೊಮೊಟೊ ಬಗ್ಗೆ ಶುರು ಮಾಡಿದ್ದು ನೀವು. ಭೂ ಸುಧಾರಣೆ ವಿಧೇಯಕದ ಬಗ್ಗೆ ನಿನ್ನೆಯಿಂದ ಚರ್ಚೆ ನಡೆಯುತ್ತಿದೆ.

(ಗೊಂದಲ)

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮೊದಲು ವಿರೋಧ ಪಕ್ಷದ ಸದಸ್ಯರು ಮಾತನಾಡಿದರು. ನಾವು land reforms ಬಗ್ಗೆ ಮಾತನಾಡುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಆಯ್ಕೆಯಾದರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಟಿ.ಸೋಮಶೇಖರ್ ರವರೇ, ಇವತ್ತು ನೀವು ಆ ಬಿಲ್‌ನ್ನು ತರುತ್ತೀರೋ, ಇಲ್ಲವೋ? ನಾನು ಮೊದಲೇ ಕೇಳಿದೆ. ಅಲ್ಲಿ ಕೇಂದ್ರ ಸರ್ಕಾರದವರು ರೈತರ ಜೊತೆ ಮಾತನಾಡುತ್ತಿದ್ದಾರೆ. ಅದು ತೀರ್ಮಾನ ಆಗುವುದಕ್ಕಿಂತ ಮುಂಚೆಯೇ ಈ ಬಿಲ್‌ನ್ನು ತರುತ್ತೀರಾ? ಆಕಸ್ಮಾತ್ ಆ ತೀರ್ಮಾನ ಉಲ್ಟಾ ಆದಲ್ಲಿ ಏನು ಮಾಡುತ್ತೀರಿ? ಅದೇಕೆ ಡಬಲ್ ಡಬಲ್ ಕೆಲಸ ಮಾಡುತ್ತೀರಿ? ಒಂದು ವೇಳೆ ಕೇಂದ್ರದಲ್ಲಿ ಮಾನ್ಯ ನರೇಂದ್ರ ಮೋದಿಯವರು ಒಪ್ಪಿಕೊಂಡರೆ ಏನು ಮಾಡುವುದು?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಆ ಬಿಲ್‌ಗೂ ಈ ಬಿಲ್‌ಗೂ ಏನೂ ಸಂಬಂಧವಿಲ್ಲ. ಅಲ್ಲಿ ರೈತರು ಹೋರಾಟ ಮಾಡುತ್ತಿರುವುದಕ್ಕೂ ಇದಕ್ಕೂ ಸಂಬಂಧವಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಈ ವಿಷಯ ಅದರಲ್ಲಿದೆ.

**ಶ್ರೀ ಆರ್.ಅಶೋಕ್:–** ಸಂಬಂಧ ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಚಿವರೇ, ಈ ಮೂರು ಬಿಲ್‌ಗಳನ್ನು ವಿರೋಧ ಮಾಡಿ ಅಲ್ಲಿ protest ಮಾಡುತ್ತಿದ್ದಾರೆ. ಇವೆಲ್ಲಾ ಅದಕ್ಕೆ interlink ಇದೆ. ತಮ್ಮ ಸದಸ್ಯರೆಲ್ಲರೂ ಈ ಭೂಸುಧಾರಣೆ ಕಾಯ್ದೆಗೂ ಎ.ಪಿ.ಎಂ.ಸಿ., ಕಾಯ್ದೆಗೂ ಅಪ್ಲೈ ಆಗುವುದಿಲ್ಲವೆಂದು ಹೇಳಿದರು. ನಾನು ಬಿಲ್ ಬಗ್ಗೆ ಹೇಳುತ್ತಿರುವುದು.

**ಶ್ರೀ ಸಿ.ಎಂ.ಇಬ್ರಾಹಿಂ:–** ನಾನು ಭವಿಷ್ಯ ಹೇಳುತ್ತಿದ್ದೇನೆ. ನೀವು ಈ ಬಿಲ್‌ನ್ನು ಪಾಸ್ ಮಾಡಿದರೆ ಕೇಂದ್ರ ಸರ್ಕಾರದವರು ಹೇಳಿದರೆ, ಮತ್ತೆ ನೀವು ಈ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳುತ್ತೀರಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಚಿವರೇ, ಸ್ವಲ್ಪ ಅರ್ಥ ಮಾಡಿಕೊಳ್ಳಿ. ನೀವು ಬಿಲ್ ತಂದಿರುವುದು ಕಾರ್ಪೊರೇಟ್ ಕಂಪನಿಗಳು ಮಾಲನ್ನು ತೆಗೆದುಕೊಳ್ಳುವುದಕ್ಕೆ ಒಂದೊಂದು ಸೊಸೈಟಿ ಮಾಡಿಕೊಂಡು ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ಮಾಡಿಕೊಡುತ್ತಿದ್ದೀರಿ. ಇದನ್ನು ಮಾಡಿಕೊಟ್ಟ ನಂತರ ಅವರು ಏನು ಮಾಡುತ್ತಾರೆಂದರೆ, ಈಗ ತರುತ್ತಿರುವ ಎ.ಪಿ.ಎಂ.ಸಿ., ಕಾಯ್ದೆಯಲ್ಲಿ ಏನಿದೆಯೆಂದರೆ, ಯಾರು ಬೇಕಾದರೂ ಕೂಡ ಬಂದು ಉತ್ಪನ್ನವನ್ನು ತೆಗೆದುಕೊಳ್ಳುವಂಥ ಒಂದು ಅಧಿಕಾರವನ್ನು ಕೊಡುತ್ತೀರಿ. ಮಾನ್ಯ ಎನ್.ರವಿಕುಮಾರ್ ಸಾಹೇಬ್ರು middlemen route out ಮಾಡುವುದಕ್ಕೆ ಎಂದು ಹೇಳಿದರು. ಹೌದು, ಇವತ್ತಿನ ದಿವಸ ಕಂಪನಿಗಳು ಎಲ್ಲಾ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿ ಅವರ ಗೋಡೌನ್‌ನೊಳಗೆ ಇಟ್ಟುಕೊಳ್ಳುತ್ತಾರೆ. ಟಮೊಟೊ ಮತ್ತು ಉಳ್ಳಾಗಡ್ಡಿಯನ್ನು ಗೋಡೌನ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ಸುಮಾರು 8 ದಿವಸಗಳು ಮಾರುಕಟ್ಟೆಗೆ ಬಿಡುವುದಿಲ್ಲ. ಅವರ ಹತ್ತಿರ cold storage ಗಳು ಇರುತ್ತವೆ. ಉತ್ಪನ್ನಗಳನ್ನು 8 ದಿವಸ ಅವರ ಹತ್ತಿರವೇ ಇಟ್ಟುಕೊಂಡರೆ ಕೊರತೆ ಉಂಟಾಗುವುದಿಲ್ಲವೇ? ಉತ್ಪನ್ನಗಳ ಕೊರತೆಯಿಂದಾಗಿ 50 ರೂಪಾಯಿಗಳಿಗೆ ಮಾರಾಟವಾಗುತ್ತಿದ್ದ ಉತ್ಪನ್ನವು ಸುಮಾರು 60 ರಿಂದ 70 ರೂಪಾಯಿಗಳಾಗುತ್ತದೆ. ಇನ್ನು ಮುಂದೆ ಹೋಗಿ 80 ರೂಪಾಯಿಗಳು ರೇಟ್ ಬಂದಾಗ ಆ ಉತ್ಪನ್ನವನ್ನು release ಮಾಡುತ್ತಾರೆ. ಆಗ ಇದು ನಮ್ಮ ಕೈಯಲ್ಲಿ ಇರುತ್ತದೆಯೇ? ಇವತ್ತಿನ ದಿವಸ ಎ.ಪಿ.ಎಂ.ಸಿ., ಮಾರುಕಟ್ಟೆಯಲ್ಲಿ ದಿನಾಲೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

fluctuation ಇರುತ್ತದೆ. E-tendering ಇರುತ್ತದೆ. ಅಲ್ಲಿ ಸಾಕಷ್ಟು ಲೋಕಲ್‌ನವರು ಮತ್ತು ಮಾರಾಟಗಾರರು ಇರುತ್ತಾರೆ. ಅಲ್ಲಿ ಮಿನಿ ಹೋಲ್‌ಸೇಲ್ ಅಂಗಡಿಯವರು ಕೂಡ ಇರುತ್ತಾರೆ.

(ಮುಂದು...)

(998)/8.12.2020/11.40/ಎಂ.ಎಂ-ಬಿ.ಎನ್.ಎಸ್

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು)**

ಇವತ್ತು ಏನೆಂದರೆ, ಎಲ್ಲಾ produce ಗೋಡೌನ್‌ನಲ್ಲಿ ಇಟ್ಟುಕೊಂಡ ಮೇಲೆ ನಾವು ಅವರನ್ನು approach ಮಾಡಬೇಕಾದರೆ ಮೂರು ದಿವಸಗಳು ಬೇಕಾಗುತ್ತದೆ. ಮೊದಲು ಮೇಸ್ತ್ರಿಯನ್ನು ಭೇಟಿಯಾಗಬೇಕು ನಂತರ ಮ್ಯಾನೇಜರ್‌ನನ್ನು ಭೇಟಿಯಾಗಬೇಕು. ನಮಗೆ ಉತ್ಪನ್ನಗಳು ಬೇಕಾಗಿದೆ, ಇಂತಹ ಗ್ರಾಮಗಳಿಗೆ ಉಳ್ಳಾಗಡ್ಡಿ ಇಲ್ಲವಾಗಿದೆ. ಆದರೆ ಅವನು ಎಲ್ಲಿಯೋ ದೆಹಲಿಯಲ್ಲೋ ಅಥವಾ ಲಂಡನ್‌ನಲ್ಲೋ ಕುಳಿತಿರುತ್ತಾನೆ. ನಾವು ಅವನ ಜೊತೆ ಮಾತನಾಡಬೇಕು. ಆಗ ಅವನು ಪ್ರಸ್ತುತ ಅಲ್ಲಿನ ರೇಟ್ ಏನಿದೆ, ನಾವು ಹೇಗೆ ಮಾರ್ಕೆಟ್ ಮಾಡಬಹುದು ಎಂದು ಕೇಳುತ್ತಾನೆ. ಅವನು ನಿವೃತ್ತ ಐ.ಎ.ಎಸ್., ಅಧಿಕಾರಿಯನ್ನು ಸಿ.ಇ.ಓ. ಆಗಿ ಇಟ್ಟಿರುತ್ತಾನೆ. ಅವನು ನಾವು ಇಷ್ಟು ದಿವಸ ಬಂದ್ ಮಾಡಿದರೆ ನಮಗೆ ಇಷ್ಟು ರೊಕ್ಕ ಬರುತ್ತದೆ ಎಂದು ಹೇಳುತ್ತಾನೆ. ಅಲ್ಲಿಯವರೆಗೆ ಉತ್ಪನ್ನಗಳನ್ನು ನಿರ್ಬಂಧ ಮಾಡುತ್ತಾರೆ. ನಾವೇ ಕಾನೂನನ್ನು ಅವರ ಕೈಗೆ ಕೊಟ್ಟು ನಮಗೆ ಪ್ರತಿಕೂಲ ಪರಿಸ್ಥಿತಿಯನ್ನು ನಾವೇ ನಿರ್ಮಾಣ ಮಾಡಿಕೊಳ್ಳುವಂತಹ ಕೆಲಸ ಆಗುತ್ತದೆ.

ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ದೇವರಾಜ ಅರಸುರವರು ಆಗ ತಂದಿದ್ದ ಬಿಲ್ ಏನಿದೆ ಅದು ಬಹಳ ಸಮಂಜಸವಾಗಿತ್ತು. ಆಮೇಲೆ ಅದು ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿತ್ತು. ಅವತ್ತಿನ ಉದ್ದೇಶ ಏನಿತ್ತು, ಭೂ ಸುಧಾರಣೆ ಕಾಯಿದೆಯನ್ನು ಏತಕ್ಕೆ ತಂದರು? ಜಮೀನ್ದಾರರ ಹತ್ತಿರ ಈಗ 3,000 ಎಕರೆ, 2,000 ಎಕರೆ, 500, 600 ಎಕರೆ ಭೂಮಿ ಇದ್ದದ್ದು; ಎಷ್ಟೋ ಜನರು ಬಡವರಿದ್ದು ಎಸ್.ಸಿ., ಎಸ್.ಟಿ., ಇರಬಹುದು, ಹಿಂದುಳಿದವರ್ಗದವರು ಇರಬಹುದು ಅಥವಾ ಸಾಮಾನ್ಯ ಬಡವರಾಗಿರಬಹುದು, ಯಾರು ಭೂರಹಿತರು ಇರುತ್ತಾರೆ ಅವರಿಗೆ ಕೊಡುವಂತಹ ಕಾನೂನು ಮಾಡಿದರು; ಏಕೆಂದರೆ, ಅವರು ಕೂಡ ಉಳುಮೆ ಮಾಡಲಿ ಎಲ್ಲಾ ರೈತರೂ ಉಳುಮೆ ಮಾಡಿ ಗ್ರಾಮದಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡುವ ಕೆಲಸವಾಗಲಿ, ಪ್ರತಿಯೊಬ್ಬರೂ ಅಣ್ಣತಮ್ಮಂದಿರಂತೆ ಇರಲಿ, ಎಲ್ಲರೂ ಹಂಚಿ ತಿನ್ನೋಣ ಎಂಬ ಭಾವನೆಯಿಂದ ಈ ಬಿಲ್ ತಂದಿದ್ದರು. ಒಟ್ಟಾರೆ ಇದು ವ್ಯತಿರಿಕ್ತವಾಗಿ ಹೋಗುತ್ತಿದೆ. ಇದರಿಂದ ಹಳ್ಳಿಗಳಲ್ಲಿ ಸಾಮಾಜಿಕ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯ ಇರುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಉಳ್ಳವನು ಏನು ಮಾಡುತ್ತಾನೆ ಎಂದರೆ, ಹೇಗೂ ಈಗ ಕಾನೂನು ಬಂದಿದೆ; ಹೇಗಾದರೂ ಮಾಡಿ ಸೊಸೈಟಿ ರಿಜಿಸ್ಟರ್ ಮಾಡುತ್ತೇನೆ, ಮೊದಲೇ ಬಹಳ ಮಂದಿಗೆ ಅನಿವಾರ್ಯತೆ ಇರುತ್ತದೆ. ಆದರೆ ಹೊಲವನ್ನು ಯಾರೂ ತೆಗೆದುಕೊಳ್ಳುವುದಿಲ್ಲ, ಹೊಲ ಹಾಗೆಯೇ ಇರುತ್ತದೆ. ಒಳ್ಳೆಯ ಬೆಲೆ ಬಂದರೆ ಎಲ್ಲರೂ ದಡದಡನೆ ಕೊಟ್ಟು ಕುಳಿತುಕೊಳ್ಳುತ್ತಾರೆ. ಆಗ ಮತ್ತೆ ನಿರುದ್ಯೋಗ ಸೃಷ್ಟಿಯಾಗುತ್ತದೆ. ಆಗ urbanisation ಪ್ರಾರಂಭವಾಗುತ್ತದೆ. ಮೂರು ಹಂತಗಳಲ್ಲಿ ಕಾವೇರಿ ನೀರನ್ನು ಎತ್ತಿ ಬೆಂಗಳೂರಿಗೆ ಕೊಟ್ಟರೂ ಎಷ್ಟೋ ಬಡಾವಣೆಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಪ್ರತಿ ಹಳ್ಳಿಗಳಿಂದಲೂ ರೈತರು ಬೆಂಗಳೂರು, ಮಂಗಳೂರು ಇಂತಹ ದೊಡ್ಡ ದೊಡ್ಡ ಊರುಗಳಿಗೆ ವಲಸೆ ಹೋದಮೇಲೆ ಹಳ್ಳಿಯಲ್ಲಿ ಯಾರೂ ಇರಲಾರದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. ಪ್ರತಿಯೊಬ್ಬರಿಗೂ ರೈತರಾಗಿ ದುಡಿಯುವುದಕ್ಕೆ ಅವಕಾಶ ಮಾಡಿಕೊಡಿ. ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ಇವತ್ತು ಸಾಕಷ್ಟು Agriculture Graduates ಹೊರಗೆ ಬರುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಐದೈದು ಎಕರೆ ಜಮೀನನ್ನು ರೇಟ್ ಮೇಲೆ ಕೊಡಿಸಿ. 10-20 ವರ್ಷಗಳ ನಂತರ ವಾಪಸ್ ಕೊಡುವ ಹಾಗೆ ಟೈಮ್ ಕೊಡಿ, ಅವರಿಗೆ ನೀರಾವರಿ ಅನುಕೂಲ ಮಾಡಿಕೊಡಿ. ಅವರು ಟೆಕ್ನಿಕಲಿ ಬೇಸಾಯ ಮಾಡಲಿ. 10 ಕ್ವಿಂಟಾಲ್ ಬರುವ ಭತ್ತ; ಸಾಮಾನ್ಯವಾಗಿ ನಾವು ಒಂದು ಎಕರೆಗೆ 40 ಚೀಲ ಭತ್ತ ಬೆಳೆಯುತ್ತೇವೆ. ಪದವೀಧರರಿಗೆ 60 ಚೀಲ ಭತ್ತ ಬೆಳೆಯಲು ಅನುಕೂಲ ಮಾಡಿಕೊಡುವ ಕೆಲಸ ಮಾಡಿ. ಉದಾಹರಣೆಗೆ ಸಾಕಷ್ಟು ಜನರು placement ಆಗದೇ start-up ಕಂಪನಿಗಳಿಗೆ ಹೋಗುತ್ತಾರೆ. ಸಾಕಷ್ಟು horticulture crops ಇದೆ, ಆ ಪದವೀಧರರಿಗೆ ಸರ್ಕಾರದಿಂದ ತಲಾ 10 ಎಕರೆಗಳಂತೆ ಜಮೀನನ್ನು ಕೊಡಿ. ಕ್ರಮೇಣವಾಗಿ ಜಮೀನನ್ನು ವಾಪಸ್ ತೆಗೆದುಕೊಳ್ಳಿ. ಇಂತಹ ಕೆಲಸ ಮಾಡಿದರೆ ಇನ್ನಷ್ಟು ಯುವಕರು ವಾಪಸ್ ಹಳ್ಳಿಗಳಿಗೆ ಹೋಗುತ್ತಾರೆ.

ತಾವು ಮೊನ್ನೆ ನೋಡಿದಿರಿ, ಲಾಕ್‌ಡೌನ್ ಆದಾಗ ಸಾಕಷ್ಟು ಯುವಕರು ವಾಪಸ್ ಊರಿಗೆ ಬಂದರು. ಉದಾಹರಣೆಗೆ ನಮ್ಮ ಊರಿನಲ್ಲಿ ಸುಮಾರು 125 ರಿಂದ 130 ಜನರು ಬೆಂಗಳೂರಿನಲ್ಲಿ ಗಾರೆ ಕೆಲಸ ಮಾಡಿಕೊಂಡು ಇದ್ದಾರೆ. ಲಾಕ್‌ಡೌನ್ ಆದ ಮೇಲೆ ಸುಮಾರು 15-20 ಜನರು ಮಾತ್ರ ಇಲ್ಲಿ ಉಳಿದುಕೊಂಡು 100 ಜನರು ವಾಪಸ್ ಹಳ್ಳಿಗೆ ಬಂದರು. 100 ಜನರು ವಾಪಸ್ ಬಂದ ನಂತರ ಸುಮಾರು 5-6 ತಿಂಗಳಾಯಿತು, ಬೆಂಗಳೂರಿನಲ್ಲಿದ್ದರೆ ನಾವು ಉಳಿಯುವುದಿಲ್ಲವೆಂದು ಅಂಜಿಕೆ ಬಂದು ಕ್ರಮೇಣ ಅವರು ಒಕ್ಕಲುತನ ಮಾಡುವ ಕೆಲಸ ಮಾಡಿದರು. ನಾವು ಹೆಚ್ಚಿನ ಯುವಕರನ್ನು ಒಕ್ಕಲುತನಕ್ಕೆ ಅಳವಡಿಸಿದಾಗ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತ್ರ ನಮ್ಮ ದೇಶ ಮುಂದೆ ಬರುವುದಕ್ಕೆ ಸಾಧ್ಯವಿದೆ. ಸಾಕಷ್ಟು ಯುವಕರು ಹಳ್ಳಿಗಳಲ್ಲಿ ಸರಿಯಾಗಿ ಮಾರ್ಗದರ್ಶನ ಇಲ್ಲದೇ, ಬೆಂಬಲವಿಲ್ಲದೇ ಬೆಂಗಳೂರಿಗೆ ಬಂದು ಅಲ್ಲಿಲ್ಲಿ ಅಲೆದಾಡಿ ಹೆಚ್ಚು ಕಡಿಮೆ ಮಾಡಿ ಊರಿಗೆ ಓಡಿ ಬರುವಂತಹ ಕೆಲಸವಾಗುತ್ತಿದೆ. ನಾವು ರೈತರನ್ನು ಉದ್ಧಾರ ಮಾಡಬೇಕು, ರೈತರ ಹಿತ ಕಾಪಾಡಬೇಕೆಂದರೆ ಸಾಕಷ್ಟು ಸ್ಕೀಂಗಳನ್ನು ಹಂತಹಂತವಾಗಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಅವರಿಗೆ ಮುಟ್ಟಿಸಿದಾಗ ಮಾತ್ರ ರೈತ ಮೇಲೆ ಬರುತ್ತಾನೆ, ಅವನ standard of living ಹೆಚ್ಚು ಮಾಡುವ ಕಡೆ ಒತ್ತು ಕೊಡಬೇಕು. ಅದಕ್ಕೆ ವ್ಯತಿರಿಕ್ತವಾಗಿ ರೈತರಿಗೆ ಅನಾನುಕೂಲವಾಗುವ ಬಿಲ್‌ಗಳನ್ನು ಪಾಸ್ ಮಾಡಿದಾಗ ನಮ್ಮ ರಾಜ್ಯದಲ್ಲಿರುವ ಎಲ್ಲಾ ಬಡವರಿಗೂ, small and marginal farmers ಗೆ ಮಾರಕವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನಿನ್ನೆ ನಾನು ಬಹಳಷ್ಟು ಮಾತನಾಡಿದ್ದೇನೆ, ಜಗ್ಗಿ ಮಾತನಾಡುತ್ತಾನೆಂದು ಎಲ್ಲರೂ ಬೈಯ್ಯಬಹುದು, ನನಗೆ ಇಷ್ಟು ಮಾತನಾಡಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ವಿಧೇಯಕದ ಬಗ್ಗೆ ಮಾತನಾಡಲು ನನಗೆ ಹಿಂದೆ ಕೂಡ ಸ್ವಲ್ಪ ಅವಕಾಶ ಸಿಕ್ಕಿತ್ತು. ಮಾತನಾಡುವುದಕ್ಕೆ ಸ್ವಲ್ಪ ಪ್ರಾರಂಭ ಮಾಡಿದ್ದೆ. ತಾವು ಮತ್ತೆ ಈ ಕಾಯಿದೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಕರ್ನಾಟಕ ಭೂ ಸುಧಾರಣೆ ಕಾಯಿದೆ ಎನ್ನುವುದು ಭಾರತ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರ ಭಾರತ ದೇಶದ ಆರ್ಥಿಕ ಪರಿಸ್ಥಿತಿಯ ಸುಧಾರಣೆ, ಭಾರತ ದೇಶವನ್ನು ಆರ್ಥಿಕ ಸಂಪನ್ಮೂಲವಾಗಿ ಕಾಣುವುದು ಯಾವುದೇ ದೇಶದಲ್ಲಿ, ಆ ದೇಶದಲ್ಲಿ ಯಾವುದು ಆರ್ಥಿಕ ಸಂಪನ್ಮೂಲ ಬರುತ್ತದೆ ಎನ್ನುವುದು ಅದರಲ್ಲಿ ಭಾರತ ದೇಶ ಇಂದಿಗೂ ಕೂಡ ಕೃಷಿಯಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ಇವತ್ತು ಎಲ್ಲ ದೇಶಗಳಿಗೂ ಸವಾಲಾಗಿ ನಿಂತಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಭಾರತ ದೇಶದಲ್ಲಿ ಶೇ.60ಕ್ಕೂ ಹೆಚ್ಚು ಜನರು ರೈತರು, ರೈತ ಕಾರ್ಮಿಕರು, ರೈತ ಕಾರ್ಮಿಕ ಮಹಿಳೆಯರು ಇವತ್ತು ಜೀವನ ಮಡುತ್ತಿದ್ದಾರೆ. ಇವತ್ತು ಭಾರತ ಸರ್ಕಾರ ಅನೇಕ ಯೋಜನೆಗಳನ್ನು ಕಾರ್ಯಕ್ರಮಗಳನ್ನು ರೈತರ ಪರವಾಗಿ ಅದರಲ್ಲೂ ಸಣ್ಣ ರೈತರ ಪರವಾಗಿ, ಅತಿ ಸಣ್ಣ ರೈತರ ಪರವಾಗಿ ಕೊಟ್ಟುಕೊಂಡು ಬಂದಿವೆ. ಆದರೆ ಈ ರೈತರ ಪರವಾಗಿ ಮಾಡಿದ ಕೃಷಿ ಆಯೋಗಗಳು ಡಾ: ಸ್ವಾಮಿನಾಥನ್ ಆಯೋಗದಿಂದ ಹಿಡಿದು ಇದುವರೆಗೂ ಯಾವುದೇ ಆಯೋಗವನ್ನು ಕೂಡ ಅದನ್ನು ಬಿಚ್ಚಿ ನೋಡಿ ಆ ಆಯೋಗದಲ್ಲಿರುವಂತಹ ಮುಖ್ಯಾಂಶಗಳನ್ನು ರೈತರ ಪರವಾಗಿ ಜಾರಿಗೆ ತಂದಂತಹ ಸರ್ಕಾರ ಇದುವರೆಗೂ ಭಾರತದಲ್ಲಿ ಯಾವುದೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲ, ಯಾವುದೇ ರಾಜ್ಯದಲ್ಲಿಯೂ, ಕೇಂದ್ರ ಸರ್ಕಾರದಲ್ಲಿಯೂ ಇಲ್ಲ. ಈ ಮಾತನ್ನು ಅತ್ಯಂತ ನೋವಿನಿಂದ ಹೇಳಬಯಸುತ್ತೇನೆ.

ಇವತ್ತು ಕರ್ನಾಟಕ ರಾಜ್ಯದಲ್ಲಿ ಭೂ ಸುಧಾರಣೆ ಕಾಯಿದೆ ತಿದ್ದುಪಡಿ ತರುತ್ತಿದ್ದೀರಿ. ಇದು ಭೂ ಸುಧಾರಣೆ ಕಾಯಿದೆಯಲ್ಲ, ಇದು ಭೂ ಕಳ್ಳರ ಕಾಯಿದೆ. ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಮೊಟ್ಟಮೊದಲಿನಿಂದಲೂ ಬಹಳ ದೀರ್ಘ ಕಾಲದಿಂದಲೂ ರೈತ ಚಳುವಳಿಯಿಂದಲೇ ಈ ನಾಡಿನಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದಾರೆ, ಅದಕ್ಕೆ ನಾನು ಬಹಳ ಸಂತೋಷ ಪಡುತ್ತೇನೆ. ರೈತರ ಪರವಾಗಿ ಅವರು ಮಾಡಿದ ಚಳುವಳಿ, ಹೋರಾಟವನ್ನು ನಾನು ಮೆಚ್ಚುತ್ತೇನೆ. ಇದರಿಂದಲೇ ಅವರು ನಾಲ್ಕು ಬಾರಿ ಮುಖ್ಯಮಂತ್ರಿಯಾದರು. ಆಗ ಬಹಳ ಸಂತೋಷ ಪಟ್ಟವರಲ್ಲಿ ನಾನೂ ಒಬ್ಬ. ರೈತರ ಹಸಿರು ಶಾಲು ಹಾಕಿಕೊಂಡು, ರೈತರ ಹೆಸರು ಹೇಳಿ ಮತ್ತು ಕೃಷಿಗೇ ಒಂದು ಪ್ರತ್ಯೇಕ ಬಜೆಟ್‌ನ್ನು ರಾಜ್ಯದಲ್ಲಿ ಪ್ರಥಮಬಾರಿಗೆ ಕೃಷಿ ಬಜೆಟ್‌ನ್ನು ಮಂಡನೆ ಮಾಡಿದ ಕೀರ್ತಿ ಕೂಡ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲುತ್ತದೆ. ಇದು ಇತಿಹಾಸದ ದಾಖಲೆಯ ಪುಟಗಳಲ್ಲಿದೆ. ಆದರೆ ಇಂತಹ ಬಹಳ ಹಿರಿಯರೂ, ಮೇಧಾವಿಗಳೂ, ಹೋರಾಟಗಾರರೂ, ರೈತರ ಮಗನಾದ ಇವರು ಇಂತಹ ಒಂದು ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತರುತ್ತಿರುವುದು ನನಗೆ ಅತ್ಯಂತ ನೋವಿನ ಸಂಗತಿಯಾಗಿದೆ. ಇವತ್ತು ಬೆಳಿಗ್ಗೆ ದೂರದರ್ಶನದಲ್ಲಿ ಪ್ರಸಾರವಾಗುತ್ತಿತ್ತು, ಭೂ ಸುಧಾರಣೆ ಕಾಯಿದೆಯಿಂದ ನಾಡಿನ ರೈತರ ಅಭಿವೃದ್ಧಿಯಾಗುತ್ತದೆ ಎಂದು ಮುಖ್ಯಮಂತ್ರಿಯವರು ಹೇಳುತ್ತಿರುವುದನ್ನು ನೋಡಿದೆ. ಇದು ಅಕ್ಷರಶಃ ಸುಳ್ಳು. ಇದರಿಂದ ಖಂಡಿತವಾಗಿಯೂ ಕೂಡ ಯಾವ ರೈತರ ರಕ್ಷಣೆ ಕೂಡ ಇಲ್ಲ. ಒಂದು ಮಾತನ್ನು ಹೇಳುತ್ತೇನೆ, ಈ ಕಾಯಿದೆಯಲ್ಲಿ ತರುವಾಗ ಉದ್ದೇಶಗಳನ್ನು ಹೇಳಿದ್ದಾರೆ. ಅದೇನೆಂದರೆ, '*ಕೃಷಿ ಭೂಮಿ ಖರೀದಿಗಾಗಿ ಇರುವ ನಿರ್ಬಂಧಗಳನ್ನು ತೆಗೆದುಹಾಕಲು ಭಾರೀ ಪ್ರಮಾಣದ ಮನವಿಗಳನ್ನು ಸರ್ಕಾರವು ಸ್ವೀಕರಿಸುತ್ತಿರುವುದರಿಂದ ಮತ್ತು ರಿಟ್ ಅರ್ಜಿ ಸಂ: 16199/2019ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ತೀರ್ಪಿನಲ್ಲಿ ಸದರಿ ಅಧಿನಿಯಮದ 79ಎ ಮತ್ತು 79ಬಿ ಪ್ರಕರಣವನ್ನು ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಸೇವೆಗಳನ್ನು ಸರಳಗೊಳಿಸಲು ಮತ್ತು ಸಾರ್ವಜನಿಕ ಕುಂದುಕೊರತೆಗಳಿಗೆ ಸೂಕ್ತವಾಗಿ ಸ್ಪಂದಿಸಲು ನಿರ್ದೇಶನವನ್ನು ನೀಡಿರುವುದರಿಂದ*' ಎಂದು ಇದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(999) 08-12-2020/ 11-50/ ಕೆಹೆಚ್-ಬಿಎನ್ಎಸ್

**ಶ್ರೀ ಮರಿತಿಬ್ಬೇಗೌಡ (ಮುಂದು):**

ಯಾವುದೇ ಒಂದು ಸರ್ಕಾರ ಒಂದು ಕಾಯ್ದೆಗೆ ವಿರುದ್ಧವಾಗಿ ಯಾವುದೇ ಒಂದು ನ್ಯಾಯಾಲಯ ಮಧ್ಯಂತರ ತೀರ್ಪಿನಲ್ಲಿ ಸಲಹೆ-ಸೂಚನೆಗಳನ್ನು ಕೊಡಬಹುದೆನ್ನುವುದರ ಬಗ್ಗೆ ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ. ಹೀಗೆಯೇ ಮಾಡಬೇಕೆಂದು ನಿರ್ದೇಶನ ಕೊಡುವಂತಹ ಅಧಿಕಾರ ಮಧ್ಯಂತರ ಆಜ್ಞೆಯಲ್ಲಿ ಯಾವ ನ್ಯಾಯಾಂಗಕ್ಕೂ ಮತ್ತು ಯಾವ ನ್ಯಾಯಾಲಯಕ್ಕೂ ಕೂಡ ಇಲ್ಲ. ಇದೊಂದು ಮಧ್ಯಂತರ ಆಜ್ಞೆಯಾಗಿದೆ. ಈ ಮಧ್ಯಂತರ ಆಜ್ಞೆಯ ಬಗ್ಗೆ ಸರ್ಕಾರ ಏಕೆ ರಿಟ್ ಅಪೀಲ್ ಹಾಕಲಿಲ್ಲ? ದಯಮಾಡಿ, ಮಧ್ಯಂತರ ಆಜ್ಞೆಯನ್ನು ಪುನರ್ ಪರಿಶೀಲಿಸಿ ನಮಗೆ ಅಂತಿಮ ಆದೇಶ ಕೊಡಿ ಎಂದು ಏಕೆ ಅದೇ ನ್ಯಾಯಾಲಯದ ಮುಂದೆ ಕೇಳಲಿಲ್ಲ. ತಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳ ಪ್ರಕಾರ ಮಾಡಿದರೆ ಮತ್ತೆ ನಮಗೆ ಕಾನೂನು ತೊಡಕಾಗಬಹುದು. ತಾವು ಅಂತಿಮ ತೀರ್ಪನ್ನು ಕೊಟ್ಟರೆ, ಅದನ್ನು ನಮ್ಮ ಸರ್ಕಾರ ಜಾರಿಗೊಳಿಸುತ್ತೇವೆ ಎಂದು ನ್ಯಾಯಾಲಯದ ಮುಂದೆ ಏಕೆ ಕೇಳಲಿಲ್ಲ. ಈ ಎರಡು ಅವಕಾಶಗಳು ಸರ್ಕಾರಕ್ಕೆ ಇತ್ತು. ಸರ್ಕಾರ ಈ ಅವಕಾಶಗಳನ್ನು ಬಿಟ್ಟು, ಒಂದು ಮಧ್ಯಂತರ ಆದೇಶವನ್ನೇ ನೆಪವಾಗಿಟ್ಟುಕೊಂಡು ಬಂಡವಾಳಶಾಹಿಗಳ ಪರವಾಗಿರುವಂತಹ ವಿಧೇಯಕವನ್ನು ತಂದಿದ್ದಾರೆಯಲ್ಲವೇ. ಅತಿ ಸಣ್ಣ, ಸಣ್ಣ ರೈತರ, ಹಿಡುವಳಿದಾರರ, ಮಹಿಳೆಯರ, ಕೂಲಿ-ಕಾರ್ಮಿಕರ ಬಗ್ಗೆ ಈ ಸರ್ಕಾರಕ್ಕೆ ಏನಾದರೂ ಚಿಂತೆ ಇದೆಯೇ, ಮಧ್ಯಂತರ ಆಜ್ಞೆಯನ್ನು ಆಧಾರವಾಗಿಟ್ಟುಕೊಂಡು, ಮಧ್ಯಂತರ ಆಜ್ಞೆಯೇ ಅಂತಿಮ ತೀರ್ಪು ಅಲ್ಲ ಮತ್ತು ಅದರಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದು, ತಾವು ಸರಿಪಡಿಸುವುದಕ್ಕೆ ಆದರೆ ಪರಿಶೀಲನೆ ಮಾಡಿ ಎಂದು ಹೇಳಿದೆ. ಈ ವಿಧೇಯಕದಲ್ಲಿ ಇವರು ಏನು ಹೇಳುತ್ತಾರೆಯೆಂದರೆ, ನಿರ್ದೇಶನವನ್ನು ಕೊಟ್ಟಿದೆ. ಯಾವುದೇ ಮಧ್ಯಂತರ ಆಜ್ಞೆಯಲ್ಲಿ ಯಾವುದೇ ನ್ಯಾಯಾಲಯ ನಿರ್ದೇಶನವನ್ನು ಕೊಡುವುದಕ್ಕೆ, ಅಂತಿಮ ಆದೇಶವನ್ನು ಮಧ್ಯಂತರ ಆಜ್ಞೆಯಲ್ಲಿ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಈ ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಕೆಲಸ ಈ ವಿಧೇಯಕದಲ್ಲಿ ಮಾಡುತ್ತಿದ್ದಾರೆ. ನಿರ್ದೇಶನವನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಮಧ್ಯಂತರ ಆಜ್ಞೆಯಲ್ಲಿ ಯಾವುದೇ ನ್ಯಾಯಾಲಯ, ಯಾವುದೇ ಸರ್ಕಾರಕ್ಕೂ ಈ ಒಂದು ಕಾಯ್ದೆ ಬಗ್ಗೆ ಅಂತಿಮ ತೀರ್ಪಿನಲ್ಲಿ ಮಾತ್ರ ನಿರ್ದೇಶನವನ್ನು ಕೊಡುವುದಕ್ಕೆ ಸಾಧ್ಯ ಇದೆ. ಮಧ್ಯಂತರ ಆದೇಶದಲ್ಲಿ ಕೊಡುವುದಕ್ಕೆ ಸಾಧ್ಯ ಇಲ್ಲ. ಕಾನೂನಿನಲ್ಲಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಅವಕಾಶ ಇದೆ. ಇದಕ್ಕೆ ರಿಟ್ ಅಪೀಲ್ ಹೋಗಬಹುದಿತ್ತು. ಆದರೆ ಹೋಗಲಿಲ್ಲ ಅಥವಾ ಅದೇ ನ್ಯಾಯಾಲಯದ ಮುಂದೆ, ಅದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಧೀಶರ ಮುಂದೆ ಅಂತಿಮ ಆದೇಶವನ್ನು ಮಾಡಿಸಿಕೊಂಡು, ಏಕೆಂದರೆ, ಮಧ್ಯಂತರ ಆಜ್ಞೆಗೂ ಅಂತಿಮ ಆದೇಶದ ತೀರ್ಪಿಗೂ ವ್ಯತ್ಯಾಸವಾಗಬಹುದಲ್ಲವೇ, ಅಂತಿಮ ಆದೇಶವನ್ನು ಮಾಡಿಸಿಕೊಂಡು ಅಂತಿಮ ತೀರ್ಮಾನವನ್ನು ನ್ಯಾಯಾಲಯದಿಂದ ತೆಗೆದುಕೊಂಡು ನಂತರ ಈ ವಿಧೇಯಕವನ್ನು ತರಬಹುದಿತ್ತಲ್ಲವೇ, ಆದರೆ ಅದನ್ನು ಮಾಡಲಿಲ್ಲ. ಇದರಲ್ಲಿ ಮತ್ತೊಂದು ವಿಚಾರ ಹೇಳಬೇಕೆಂದರೆ, ನ್ಯಾಯಾಲಯ ಈ ಮಧ್ಯಂತರ ಆಜ್ಞೆಯಲ್ಲಿ ಇನ್ನೊಂದು ಅಂಶವನ್ನು ಹೇಳಿದೆ. ಕಲಂ 79 ಎ ಮತ್ತು 79ಬಿ ನಲ್ಲಿ ಎಷ್ಟು ಪ್ರಕರಣಗಳು ತಮ್ಮ ಅಧಿಕಾರಿಗಳ ಮುಂದೆ ಮತ್ತು ಎ.ಸಿ.ಗಳ ಮುಂದೆ ಬಂದಿವೆ. ಈ ಪ್ರಕರಣಗಳಲ್ಲಿ ಸರ್ಕಾರ ಆ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗಿತ್ತು. ಇದುವರೆಗೂ ಮುಟ್ಟುಗೋಲು ಹಾಕಿಕೊಳ್ಳದೇ ಇರುವಂತಹದ್ದು ತಮ್ಮ ತಪ್ಪು ಎಂದು ಹೇಳಿದೆ. ಮಧ್ಯಂತರ ಆದೇಶದ ಪ್ರಕಾರ ಆ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗಿತ್ತಲ್ಲವೇ, ಯಾವುದೇ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡಿಲ್ಲ. 18 ಸಾವಿರ ಪ್ರಕರಣಗಳು ಇದ್ದು, ಈ 18 ಸಾವಿರ ಪ್ರಕರಣಗಳಿಂದ ಎಷ್ಟು ಸಾವಿರ ಎಕರೆ ಜಮೀನು ಇರಬಹುದು. ಆ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಿಜನ-ಗಿರಿಜನರಿಗೆ, ಭೂರಹಿತರಿಗೆ ಹಂಚಬಹುತ್ತಿಲ್ಲವೇ, ಆ ರೀತಿಯ ಕೆಲಸ ಮಾಡಲಿಲ್ಲ. ಇವರು ಏನು ಮಾಡಿದ್ದಾರೆಯೆಂದರೆ, ಆ 18 ಸಾವಿರ ಪ್ರಕರಣಗಳಿಗೂ ಕೂಡ ಎಲ್ಲಾ ಕಾನೂನಿಗೆ ವಿರೋಧವಾಗಿ ಯಾರು ಮಾಡಿಕೊಂಡಿದ್ದರೋ, ಈ ಸುಗ್ರೀವಾಜ್ಞೆಯಿಂದ ಅವರೆಲ್ಲರ ಜಮೀನನ್ನು ಸಕ್ರಮ ಮಾಡಿದರು. ಭಾರತ ದೇಶ ಮಾತ್ರವಲ್ಲದೇ, ಇಡೀ ವಿಶ್ವವೇ ಈ ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಜೀವ ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇವತ್ತಿನ ದಿವಸ ಭಾರತ ದೇಶ ಮಾತ್ರವಲ್ಲ. ಇಡೀ ಪ್ರಪಂಚದಲ್ಲಿ ಇಂತಹ ಸಂದರ್ಭದಲ್ಲಿ ಸುಗ್ರೀವಾಜ್ಞೆಯನ್ನು ಜಾರಿಗೆ ತಂದು ರೈತರ ಕತ್ತು ಹಿಸುಕುವಂತಹ ಕೆಲಸ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸುಗ್ರೀವಾಜ್ಞೆ ತರುವುದಕ್ಕೆ ಜನಪರವಾಗಿ ಕೆಲಸ ಮಾಡಿದಂತಹ ಸರ್ಕಾರಗಳು ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಇಂತಹ ಸುಗ್ರೀವಾಜ್ಞೆಗಳನ್ನು ತಂದು ಮಾಡುವಂತಹ urgency ಏನಿತ್ತು? ಇವರು ಬಂಡವಾಳಶಾಹಿಗಳ ಪರವಾಗಿಲ್ಲ ಎಂದು ಈ ವಿಧೇಯಕದಲ್ಲಿ ಹೇಳುತ್ತಾರೆಯಲ್ಲವೇ, ಇದು ಯಾರಿಗೋಸ್ಕರ, ಈ ಸಣ್ಣ ರೈತರನ್ನು ಉಳಿಸುವುದಕ್ಕೋಸ್ಕರ ಸುಗ್ರೀವಾಜ್ಞೆಯಲ್ಲಿ ಈ ವಿಧೇಯಕವನ್ನು ತರಬೇಕಾಗಿತ್ತೆ? ಈ ವಿಧೇಯಕದಲ್ಲಿ ಸಣ್ಣ ರೈತರು ಯಾರಾದರೂ ಉಳಿಯುತ್ತಾರೆಯೇ, ಸರ್ಕಾರಕ್ಕೆ ಸುಗ್ರೀವಾಜ್ಞೆಯನ್ನು ತರುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ ಎಂದು ಇಡೀ ವಿಶ್ವವೇ ಜೀವ ಉಳಿಸಿಕೊಳ್ಳುವುದಕ್ಕೆ ಆಗದೇ ಇರುವಂತಹ ಈ ಸಂಕಷ್ಟ ಪರಿಸ್ಥಿತಿಯಲ್ಲಿ ಎರಡು ಬಾರಿ ಸುಗ್ರೀವಾಜ್ಞೆಯನ್ನು ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾರತ ದೇಶದಲ್ಲಿ ಇದುವರೆಗೂ ಕೂಡ ನಮ್ಮ ಸರ್ಕಾರಗಳು ರೈತರನ್ನು ಕೇವಲ ಉತ್ಪಾದಕರಾಗಿ ನೋಡಿದ್ದಾರೆಯೇ ವಿನಃ, ಖಂಡಿತವಾಗಿಯೂ ಬಳಕೆದಾರರಾಗಿ ಯಾವುದೇ ಸರ್ಕಾರಗಳು ನೋಡಲಿಲ್ಲ. ಇದು ಬಹಳ ಅತ್ಯಂತ ದುರ್ದೈವವಾದಂತಹ ಸಂಗತಿಯಾಗಿದೆ. ಇವತ್ತಿನ ದಿವಸ ಬೆವರು ಸುರಿಸಿ ದುಡಿಯುವಂತಹ ರೈತನಿಗೂ ಕೂಡ ಫ್ಯಾನ್, ಫೋನ್, ಫ್ರಿಡ್ಜ್ ಬೇಕು. ಅವನಿಗೂ ಕೂಡ ಬದುಕುವುದಕ್ಕೆ ಜೀವನ ಅವಶ್ಯಕತೆಯಾಗಿರುವಂತಹ ಕೆಲವು ವಸ್ತುಗಳನ್ನು ಖರೀದಿ ಮಾಡುತ್ತಾನೆ. ಅವನು ಕೂಡ ಬಳಕೆದಾರ ಎನ್ನುವಂತಹದ್ದನ್ನು ಎಲ್ಲಾ ಸರ್ಕಾರಗಳು ಮರೆತುಬಿಟ್ಟಿವೆ. ಇದರ ಬಗ್ಗೆ ಪೂರ್ಣಚಂದ್ರ ತೇಜಸ್ವಿಯವರು ಒಂದು ಕಡೆ ಬರೆಯುತ್ತಾರೆ. ಇದುವರೆಗೂ ಕೂಡ ರೈತ ಚಳುವಳಿ ಸಂಬಂಧ, ಯಾವುದೇ ಸರ್ಕಾರಗಳು ಇದುವರೆಗೂ ಕೂಡ ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ರೈತರನ್ನು ಉತ್ಪಾದಕರನ್ನಾಗಿ ಮಾಡಿದ್ದಾರೆಯೇ ವಿನಃ ಬಳಕೆದಾರರಾಗಿ ನೋಡಲಿಲ್ಲ. ಅದೇ ಇಂದಿಗೂ ಕೂಡ ನಡೆಯುತ್ತಿದೆ. ಇದು ಬಹಳ ಅತ್ಯಂತ ನೋವಿನ ಸಂಗತಿಯಾಗಿದೆ. ಭಾರತ ದೇಶದಾದ್ಯಂತ ಕೇಂದ್ರ ಸರ್ಕಾರ ತಂದಿರುವಂತಹ ಮೂರು ವಿಧೇಯಕದ ಬಗ್ಗೆ ಮತ್ತು ನಮ್ಮ ರಾಜ್ಯದಲ್ಲಿರುವಂತಹ ಈ ಮೂರು ವಿಧೇಯಕದ ಬಗ್ಗೆ ಸಂಬಂಧಿಸಿದಂತೆ ಇವತ್ತಿನ ದಿವಸ ದೇಶವ್ಯಾಪಿ ದೊಡ್ಡ ರೈತ ಚಳುವಳಿ ನಡೆಯುತ್ತಿದೆ. ಇವತ್ತಿನ ದಿವಸ ಇದರ ಬಗ್ಗೆ ಆರನೇ ಸುತ್ತಿನ ಮಾತುಕತೆಗೆ ಪ್ರಧಾನ ಮಂತ್ರಿಗಳು ಮತ್ತು ಗೃಹ ಸಚಿವರು ಮುಂದಾಗಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ದೇಶದಲ್ಲಿ ಚಳುವಳಿಯ ಮೂಲಕ, ಸತ್ಯಾಗ್ರಹದ ಮೂಲಕ ನಾವು ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆಯೋ, ಅಂತಹ ಬ್ರಿಟಿಷರ ಕಾಲದ ಸ್ವತಂತ್ರ ಸಂಗ್ರಾಮದಲ್ಲಿಯೂ ಕೂಡ ಎಲ್ಲಿಯೂ ಚಳುವಳಿಗಾರರನ್ನು ಅಡ್ಡಗಟ್ಟುವುದಕ್ಕೆ ಸರ್ಕಾರ ಹೊಂಡಗಳನ್ನು ಮಾಡಿಸುವುದನ್ನು ನೋಡಲಿಲ್ಲ. ಚಳುವಳಿಯಲ್ಲಿರುವ ಹೆಣ್ಣು ಮಕ್ಕಳಿಗೆ ಕೊರೆಯುವ ಚಳಿಯಲ್ಲಿ ನೀರಿನ ಪ್ರವಾಹವನ್ನು ತೋರಿಸುವಂತಹದ್ದನ್ನು ನಾನು ನೋಡಲಿಲ್ಲ. ಆದರೆ ಈ ಸರ್ಕಾರಗಳು ಮಾಡುತ್ತಿದೆ. ದೆಹಲಿಯಲ್ಲಿ ಕೊರೆಯುವಂತಹ ಚಳಿಯಲ್ಲಿ ಬಂದಿರುವಂತಹ ಹೆಣ್ಣು ಮಕ್ಕಳ ಮೇಲೆಲ್ಲಾ ಇವತ್ತಿನ ದಿವಸ ಕೊರೆಯುವ ಚಳಿಯಲ್ಲಿ ನೀರಿನ ಪ್ರವಾಹವನ್ನು ಮಾಡುತ್ತಾರೆ. ಸರ್ಕಾರವೇ ರಸ್ತೆಗಳಲ್ಲಿ ಹೊಂಡ ಹೊಡೆದು ಚಳುವಳಿಗಾರರು ಯಾರೂ ಕೂಡ ದೆಹಲಿ ಕಡೆಗೆ ಬರಬಾರದೆಂದು ಮಾಡುತ್ತಾರೆ. ಒಂದು ಕಡೆ 6ನೇ ಸುತ್ತಿನ ಮಾತುಕತೆಗೆ ಬನ್ನಿ ಎಂದು ಕರೆಯುತ್ತಾರೆ. ಇವತ್ತಿನ ದಿವಸ ಈ ಜಗತ್ತಿನಲ್ಲಿ ಪ್ರತಿಯೊಬ್ಬ ಜೀವಿ ಕೂಡ ಅನ್ನದಾತನನ್ನು ಮರೆತರೆ ಖಂಡಿತವಾಗಿಯೂ ಯಾರೂ ಕೂಡ ಜೀವ ಉಳಿಸಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ನಾನು ಈ ಹಿಂದೆಯೂ ಕೂಡ ಪ್ರೊಫೆಸರ್ ನಂಜುಂಡಸ್ವಾಮಿಯವರು ಮತ್ತು ಸುಂದರೇಶ್ ಎಂಬುವವರು ರೈತ ಚಳುವಳಿಯನ್ನು ಮಾಡುವಾಗ ಅವರ ಕೆಲವು ಮಾತುಗಳನ್ನು ಕೇಳಿದ್ದೆ. ಆಗ ನಾನು ಚಿಕ್ಕ ಬಾಲಕ. ಆದರೂ ಕೂಡ ಆ ಚಳುವಳಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡುತ್ತಿರುವಂತಹ ಮಾತುಗಳನ್ನು ಕೇಳಿ, ಏಕೆ ಈ ರೀತಿ ಮಾತನಾಡುತ್ತಾರೆ ಎಂದು ನಾನು ಅಂದುಕೊಳ್ಳುತ್ತಿದ್ದೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ಮತ್ತು ಸುಂದರೇಶ್ ಎಂಬುವವರು ಇದೇ ಕಬ್ಬನ್‌ಪಾರ್ಕ್‌ನಲ್ಲಿ, ನೋಡಿ, ಈ ಸರ್ಕಾರಗಳು ಇವತ್ತಿನ ದಿವಸ ರೈತರಲ್ಲಾ ಸಾಲಗಾರರು, ಸರ್ಕಾರವೇ ರೈತರ ಸಾಲ, ಸರ್ಕಾರವೇ ರೈತರಿಂದ ಸಾಲ ತೆಗೆದುಕೊಂಡಿದೆ. ರೈತರ ಬಾಕಿದಾರರು ಸರ್ಕಾರವೇ ಎನ್ನುವಂತಹ ಮಾತುಗಳನ್ನು ಭಾಷಣದಲ್ಲಿ ಹೇಳುತ್ತಿದ್ದರು. ಇವತ್ತಿನ ದಿವಸ ಆ ಮಾತು ಸತ್ಯವಾಗುತ್ತಿದೆ. ಇವತ್ತು ಶಾಸನ ಸಭೆಯಲ್ಲಿ ನಿಂತು ಮಾತನಾಡಬೇಕಾದರೆ, ನಾನು ಒಬ್ಬ ಸಾಮಾನ್ಯ ರೈತನ ಮಗ. ನಾನು 8ನೇ ತರಗತಿಯವರೆಗೂ ಹರಿದುಹೋಗಿರುವ ಚಡ್ಡಿ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದೆ. ರೈತರ ಕಷ್ಟ ಏನು ಎಂಬುದು ನನಗೂ ಗೊತ್ತು. ಮಾನ್ಯ ಮುಖ್ಯಮಂತ್ರಿಯವರು ಕೂಡ ರೈತರ ಮಗ. ಹಾಗೆಯೇ ಇವತ್ತಿನ ದಿವಸ ಶಾಸನ ಸಭೆಯಲ್ಲಿ ಆರಿಸಿ ಬರುವಂತಹವರು ಶೇಕಡಾ 80 ರಷ್ಟು ಭಾಗ ರೈತರ ಮಕ್ಕಳು ಆಗಿದ್ದಾರೆ. ಆದರೆ ಈ ರೈತರ ಬಗ್ಗೆ ನಿರ್ದಿಷ್ಟವಾದಂತಹ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ಹಾಗೆ ರೈತರ ಬದುಕಿಗೆ, ರೈತರ ಬದುಕನ್ನು ಸುಧಾರಣೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೊಡುವಂತಹದರಲ್ಲಿ ಎಲ್ಲಾ ಸರ್ಕಾರಗಳು ಕೂಡ ವಿಫಲವಾಗಿದೆ.

(ಮುಂದು)

**(1000) 12:00 ಎಸ್‌ಪಿಆರ್/ಜಿಆರ್ 08/12/2020**
**ಶ್ರೀ ಮರಿತಿಬ್ಬೇಗೌಡ(ಮುಂದು)**

ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿರವರು ಪ್ರಸ್ತಾಪಿಸಿದಂತೆ, ರೈತರ ಬದುಕನ್ನು ಸುಧಾರಣೆ ಮಾಡುವ ಕಾರ್ಯಕ್ರಮವನ್ನು ನಿರ್ದಿಷ್ಟವಾಗಿ ಮಾಡುವಲ್ಲಿ ಎಲ್ಲಾ ಸರ್ಕಾರಗಳು ವಿಫಲವಾಗಿವೆ. ನಾನು ಯಾವುದೇ ಒಂದು ಸರ್ಕಾರ ಎಂದು ನಿರ್ದಿಷ್ಟವಾಗಿ ಹೇಳುವುದಿಲ್ಲ. ರಾಷ್ಟ್ರಕವಿ ಕುವೆಂಪುರವರು ರೈತಗೀತೆಯನ್ನು ರಚನೆ ಮಾಡಿ, ಅದರಲ್ಲಿ 'ರೈತರ ನೇಗಿಲ ಕುಲದೊಳಗಿಡಿದೆ ಧರ್ಮ' ಎಂಬುದಾಗಿ ಹೇಳುತ್ತಾರೆ. ಅದರಲ್ಲಿ ರೈತರನ್ನು ಒಬ್ಬ ಭವ್ಯ ಪರಂಪರೆಯಲ್ಲಿನ ಸ್ವಾಮೀಜಿಯವರೊಂದಿಗೆ ಹೋಲಿಸುತ್ತಾರೆ. ರೈತ ಇಲ್ಲದೇ ಹೋದರೆ, ಈ ದೇಶದಲ್ಲಿ ಯಾರೂ ಕೂಡ ಬದುಕುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಸರ್ಕಾರದ ಎಲ್ಲಾ ರೀತಿಯ ಕಾರ್ಯಕ್ರಮ, ಸಮಾರಂಭಗಳಲ್ಲಿ ನಾವು ರೈತಗೀತೆಯನ್ನು ಕೇಳುತ್ತೇವೆ. ಆದರೆ ಅದು ಸರ್ಕಾರದ ಕಾರ್ಯಕ್ರಮಗಳಲ್ಲಿ ಜಾರಿಯಾಗಿಲ್ಲ. ಸ್ವಾಮಿ ವಿವೇಕಾನಂದರವರೂ ಸಹ ಒಂದು ಕಡೆ ರೈತರ ಬಗ್ಗೆ ಹೇಳುತ್ತಾರೆ. ಅಂದಿನ ಪರಿಸ್ಥಿತಿಯಲ್ಲಿ ಬರಗಾಲ ಬಂದು, ಉತ್ತರ ಭಾರತದಲ್ಲಿ ಚಳಿಯಲ್ಲಿ ಜನರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತತ್ತರಿಸುತ್ತಾ, ತಮ್ಮ ಜೀವನವನ್ನು ಕಳೆದುಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಗೋಶಾಲೆಗಳನ್ನು ಕಟ್ಟಿಕೊಂಡ ಕೆಲವು ಮುಖಂಡರು ಸ್ವಾಮಿ ವಿವೇಕಾನಂದರವರನ್ನು ಭೇಟಿ ಮಾಡಿ ಮಾತನಾಡುತ್ತಾರೆ. ತಾವು ಗೋಶಾಲೆಗಳನ್ನು ನಿರ್ಮಿಸುವುದರ ಮೂಲಕ ಗೋವುಗಳನ್ನು ರಕ್ಷಣೆ ಮಾಡುತ್ತಿರುವುದಾಗಿ ತಿಳಿಸುತ್ತಾ, ಅವರ ಸಹಾಯ ಮತ್ತು ಸಹಕಾರವನ್ನು ಕೇಳುತ್ತಾರೆ. ಆಗ ಸ್ವಾಮಿ ವಿವೇಕಾನಂದರವರು ನನಗೂ ಸಹ ಗೋವುಗಳ ಬಗ್ಗೆ ಬಹಳ ಅನುಕಂಪವಿದೆ, ಗೋವಿನ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳುತ್ತಾರೆ. ಅವರು ಮುಂದುವರೆದು, ದಯಮಾಡಿ ತಾವು ತಮ್ಮ ಗೋಶಾಲೆ ಕಾರ್ಯಕ್ರಮವನ್ನು ಕೆಲ ಸಮಯದವರೆಗೆ ಬದಿಗೊತ್ತಿ, ಅದಕ್ಕೂ ಮೊದಲು ಸಾಯುವ ಸ್ಥಿತಿಯಲ್ಲಿರುವ ರೈತರನ್ನು ಬದುಕಿಸುವ ಹಾಗೂ ಆತನಿಗೆ ನೆರವು ನೀಡುವ ಕೆಲಸಗಳನ್ನು ನಾವೆಲ್ಲರೂ ಸೇರಿ ಮಾಡೋಣ, ಬನ್ನಿ ಎಂಬುದಾಗಿ ಹೇಳುತ್ತಾರೆ. ಇವತ್ತಿನ ದಿವಸ ದೇಶದಾದ್ಯಂತ ಮೈ ಕೊರೆಯುವ ಚಳಿಯಲ್ಲಿ ರೈತ ಸಮುದಾಯವರು ಹಾಲಿ ಜಾರಿಗೆ ತರಲಿಚ್ಛಿಸುವ ಕಾಯ್ದೆಯ ವಿರುದ್ಧ ಚಳುವಳಿಗಳನ್ನು ಮಾಡುತ್ತಿದ್ದಾರೆ. ಇವರು ಯಾವ ಕಾರಣಕ್ಕಾಗಿ ಚಳುವಳಿ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಚಿಂತನೆ ಮಾಡಿ, ಇದನ್ನು ಪುನರ್ ಪರಿಶೀಲನೆ ಮಾಡೋಣ ಎನ್ನುವ ದಿಟ್ಟ ನಿಲುವನ್ನು ಸರ್ಕಾರಗಳು ತೆಗೆದುಕೊಳ್ಳದಿದ್ದರೆ, ರೈತರು ಉಳಿಯುವುದಿಲ್ಲ; ದೇಶವು ಅಭಿವೃದ್ಧಿ ಹೊಂದುವುದಿಲ್ಲ. ಈ ವಿಚಾರದಲ್ಲಿ ಸರ್ಕಾರಕ್ಕೆ ಏನಾದರೂ ಚಿಂತನೆ ಇದೆಯೇ?

ಮುಂದುವರೆದು, ಈ ಕಾಯ್ದೆಯಲ್ಲಿ 'ಎ-ವರ್ಗದ ನೀರಾವರಿ ಭೂಮಿಯು ಕೃಷಿ ಉದ್ದೇಶಕ್ಕಾಗಿ ಮಾತ್ರ ಮಾರಾಟ ಮಾಡಲು' ಎಂಬುದಾಗಿ ತಿಳಿಸಲಾಗಿದೆ. ಈ ಅಂಶವನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಕೆರೆ, ಪಂಪ್‌ಸೆಟ್, ಕೆನಾಲ್ ಮತ್ತು ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳಿವೆ. ಅಲ್ಲಿನ ಗ್ರಾಮ ಲೆಕ್ಕಿಗ ಹಣವನ್ನು ಪಡೆದುಕೊಂಡು, ತರಿ ಇದ್ದರೂ ಸಹ ಖುಷ್ಕಿ ಎಂದು ತಪ್ಪಾಗಿ ಬರೆಯುತ್ತಾರೆ. ವಾಸ್ತವವಾಗಿ ಅಲ್ಲಿ ಕಬ್ಬು ಬೆಳೆಯುತ್ತಿದ್ದರೂ ಸಹ ಬೆಳೆ ಆಧಾರಿತ ಬೆಳೆಯನ್ನು ಬೆಳೆಯುತ್ತಿರುವುದಾಗಿ ಲಿಖಿತವಾಗಿ ತಿಳಿಸುತ್ತಾರೆ. ನಂತರದಲ್ಲಿ ಆ ದಾಖಲೆಯ ಆಧಾರದ ಮೇಲೆ, ಮಳೆ ಆಧಾರಿತ, ಕೃಷಿ ಆಧಾರಿತ ಎಂದು ಹೇಳುತ್ತಾರೆ. ನಮ್ಮ ಭಾಗದ ಪ್ರದೇಶದಲ್ಲಿ ತರಿ, ಖುಷ್ಕಿ ಎಂಬುದಾಗಿ ಬರೆಯುತ್ತಾರೆ. ತರಿ ಎಂದರೆ ನೀರಾವರಿ ಹಾಗೂ ಖುಷ್ಕಿ ಎಂದರೆ ಮಳೆ ಆಧಾರಿತ. ಇದರಲ್ಲಿ ಪಂಪ್‌ಸೆಟ್, ಕೆರೆ ಅಚ್ಚುಕಟ್ಟು ಇತ್ಯಾದಿ ಯಾವುದೇ ನೀರಿನ ಮೂಲ ಇರಬಹುದು. ಈ ರೀತಿಯಾಗಿ ಗ್ರಾಮ ಲೆಕ್ಕಿಗರಿಂದ ಬರೆಸಿಕೊಂಡು ಹೋಗುತ್ತಾರೆ. ಅದರ ಆಧಾರದ ಮೇಲೆ ತಮಗೆ ಅನುಕೂಲವಾಗುವಂತೆ ಜಿಲ್ಲಾಧಿಕಾರಿ ಹಾಗೂ ಇತರೆ ಕಛೇರಿಗಳಲ್ಲಿ ಭೂಮಿ ಪರಿವರ್ತನೆ ಮತ್ತಿತರೆ ಕೆಲಸಗಳಾಗುತ್ತವೆ. ಆದರೆ ಈ ನಿರ್ಬಂಧವು ಕೇವಲ ಕಾಯ್ದೆಯಲ್ಲಿ ಮಾತ್ರವೇ ಇರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ದೊಡ್ಡ ದೊಡ್ಡ ಕಂಪೆನಿಗಳು ಪ್ರಸ್ತುತ ಕಾಯ್ದೆಯು ಜಾರಿಗೆ ಬರುವ ಮುನ್ನವೇ ಸಾವಿರಾರು ಎಕರೆ ಪ್ರದೇಶಗಳನ್ನು ಪಡೆದುಕೊಂಡಿವೆ. ಸದರಿ ಕಂಪೆನಿಗಳು ಯಾವ ಕೃಷಿಯನ್ನು ಮಾಡುತ್ತಿವೆ, ಕೃಷಿ ಉತ್ಪನ್ನ ಹಾಗೂ ಅವರ ಪಾಲು ಎಷ್ಟು ಎನ್ನುವ ಮಾಹಿತಿಯುಳ್ಳ ಪಟ್ಟಿಯನ್ನು ಈ ಸದನಕ್ಕೆ ಸಲ್ಲಿಸಿದರೆ ಸಾಕು. ಆದರೆ ವಾಸ್ತವವಾಗಿ ಸದರಿ ಕಂಪೆನಿಗಳು ತಾವು ಪಡೆದುಕೊಂಡ ಜಮೀನಿಗೆ ಬೇಲಿಯನ್ನು ಹಾಕಿಕೊಂಡು ಅದರೊಳಗೆ ಅಚ್ಚುಕಟ್ಟಾದ ಬಂಗ್ಲೆಯೊಂದನ್ನು ನಿರ್ಮಿಸಿ, ಅದಕ್ಕೆ ಕಾವಲುಗಾರರೊಬ್ಬರನ್ನು ನೇಮಿಸಿ, ಐಷಾರಾಮಿ ಜೀವನವನ್ನು ನಡೆಸುತ್ತಾ, ದೇಶ-ವಿದೇಶಗಳಲ್ಲಿ ತಿರುಗಾಡುತ್ತಿದ್ದಾರೆ. ಇಂತಹ ವ್ಯಕ್ತಿಗಳಿಂದ ನಾವು ಕೃಷಿಯನ್ನು ಮಾಡಿಸಲಿಕ್ಕೆ ಸಾಧ್ಯವೇ? ಯುವಕರು ಮತ್ತು ಹೊಸಬರು ಕೃಷಿ ಮಾಡುವ ಆಸಕ್ತಿ ಉಳ್ಳವರು ಇಲ್ಲಿ ಬರಬೇಕು ಮತ್ತು ಅದರಿಂದ ಕೃಷಿ ಉತ್ಪಾದನೆಯಾಗುತ್ತದೆ ಎಂದು ಸಚಿವರು ವಿವರಣೆ ಕೊಡುವ ಸಂದರ್ಭದಲ್ಲಿ ಹೇಳಿದರು. ಆದರೆ ವಾಸ್ತವವಾಗಿ ಈಗಿನ ಯುವಕರು ಕೃಷಿಯಿಂದ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ, ಬೆಂಗಳೂರು ನಗರ ಪ್ರದೇಶವನ್ನು ಸೇರಿಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಕೇವಲ ಎಸ್.ಎಸ್.ಎಲ್.ಸಿ. ಯನ್ನು ಮಾತ್ರವೇ ಓದಿಕೊಂಡವರೂ ಸಹ ಕೃಷಿ ಮಾಡುತ್ತಿಲ್ಲ. ಇವತ್ತಿನ ದಿವಸ ½, 1 ಮತ್ತು 2 ಎಕರೆ ಜಮೀನನ್ನು ಹೊಂದಿದವರು ಅಲ್ಲ ಕೇವಲ 10-20 ಗುಂಟೆ ಜಮೀನು ಹೊಂದಿದ ರೈತ ಕಾರ್ಮಿಕ ಮಹಿಳೆಯು ವಾಸ್ತವವಾಗಿ ಕೃಷಿಯನ್ನು ಮಾಡುತ್ತಿದ್ದಾಳೆ ಹಾಗೂ ಶೇಕಡಾ 50 ರಷ್ಟು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾಳೆ. ಇರುವ ಸ್ವಲ್ಪ ಪ್ರಮಾಣದ ಭೂಮಿಯಲ್ಲಿ ಹುಲ್ಲು ಬೆಳೆದುಕೊಂಡು, ಹಸು ಸಾಕಿಕೊಂಡು, ಹಾಲು ಮಾರಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ. ಒಂದು ವೇಳೆ ಪ್ರಸ್ತುತ ಕಾಯ್ದೆಯು ಜಾರಿಗೆ ಬಂದರೆ ಮುಂದಿನ ಐದು ವರ್ಷಗಳಲ್ಲಿ ಇವುಗಳನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕೃಷಿ ಮಾಡುವ ಮಹಿಳೆ, ಅವಳ ಕುಟುಂಬವು ಎಲ್ಲಿಗೆ ಹೋಗಬೇಕು? ಕೇವಲ ಹಣದ ಆಸೆಗಾಗಿ ತಮ್ಮ ಭೂಮಿಯನ್ನು ಮಾರುತ್ತಿದ್ದಾರೆ. ಇವತ್ತಿನ ದಿವಸ ಐದು ಎಕರೆ ಭೂಮಿಯನ್ನು ಹೊಂದಿದವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಹೆಚ್ಚಿನ ಜನರು ಕೇವಲ 2-4 ಎಕರೆ, 10 ಗುಂಟೆ ಭೂಮಿಯನ್ನು ಮಾತ್ರವೇ ಹೊಂದಿದ್ದಾರೆ. ಅಂದರೆ ಸಣ್ಣ ಹಾಗೂ ಅತೀ ಸಣ್ಣ ಹಿಡುವಳಿದಾರರೇ ಜಾಸ್ತಿಯಿದ್ದಾರೆ. ಕೃಷಿಯಿಂದ ಬಹುತೇಕ ಹೆಣ್ಣುಮಕ್ಕಳು ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದಾರೆ. ಈ ಕಾಯ್ದೆಯು ಜಾರಿಗೆ ಬಂದ ಮೇಲೆ, ರೈತನಿಗೆ ನೆರವಾಗುವ ಹಾಗೂ ಅವನ ಸ್ನೇಹಮಯಿಯಾದ ಪ್ರಾಣಿಗಳಾದ ಹಸು, ಕೋಳಿ, ಕುರಿ, ಬೆಕ್ಕು ಮತ್ತು ನಾಯಿ ಇತ್ಯಾದಿಗಳು ಯಾವುದೂ ಸಹ ಇರುವುದಿಲ್ಲ. ಗೋಹತ್ಯೆ ಪ್ರತ್ಯೇಕವಾಗಿ ಮಾಡುವುದು ಬೇಡ, ಈ ಕಾಯ್ದೆ ಜಾರಿಗೆ ಬಂದ ಮೇಲೆ ಕೇವಲ ಒಂದು ಗೋವೂ ಸಹ ಇರುವುದಿಲ್ಲ, ಅವುಗಳು ತನ್ನಿಂದ ತಾನೇ ಹತವಾಗುತ್ತವೆ. ಇದರಂತೆ ಇನ್ನಿತರೆ ಪ್ರಾಣಿಗಳೂ ಸಹ ಸಾಯುತ್ತವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೋವಿಗೆ ಹಾಕಲು ಮೇವೂ ಸಹ ಇರುವುದಿಲ್ಲ. ಸಾವಿರಾರು ಎಕರೆ ಪ್ರದೇಶಗಳನ್ನು ಹೊಂದಿದ ದೇಶ-ವಿದೇಶಗಳಲ್ಲಿ ಇರುವವರು ತಮ್ಮ ಜಮೀನಿನ ಸುತ್ತಮುತ್ತ ಬೇಲಿಯನ್ನು ಹಾಕಿಕೊಳ್ಳುತ್ತಾರೆ. ಹಾಗೆ ಬೇಲಿ ಹಾಕಿಕೊಂಡ ಪ್ರದೇಶದಲ್ಲಿ ಮೇಯಿಸುವುದಕ್ಕಾಗಿ ರೈತ ಮಹಿಳೆಯು ತನ್ನ ಹಸುವನ್ನು ಕರೆದುಕೊಂಡು ಹೋಗುವುದಕ್ಕಾಗುತ್ತದೆಯೇ? ಅಲ್ಲಿ ಅವಕಾಶವನ್ನು ನೀಡುತ್ತಾರೆಯೇ? ಕಾವಲುಗಾರರನ್ನು ಬಿಟ್ಟು ರೈತರನ್ನು ಹೊಡೆಸುತ್ತಾರೆ. ರೈತರು ತಮ್ಮ ಬಳಿ ಇದ್ದ ಅಲ್ಪ ಸ್ವಲ್ಪ ಜಮೀನನ್ನೂ ಸಹ ಮಾರಾಟ ಮಾಡಿದ್ದಾರೆ. ಕೋಳಿ, ಹಂದಿ ಸಾಕಣೆ ಮಾಡುವುದಕ್ಕೂ ಸಹ ಅಲ್ಪ ಪ್ರಮಾಣದ ಜಾಗದ ಅವಶ್ಯಕತೆ ಇದೆ. ಜಮೀನು ಇದ್ದರೆ ಏನನ್ನಾದರೂ ಮಾಡಬಹುದು. ಈ ಕಾಯ್ದೆಯು ಜಾರಿಗೆ ಬಂದರೆ, ಇಂತಹ ಹಲವಾರು ಕಸುಬುಗಳೂ ಸಹ ನಾಶವಾಗುತ್ತವೆ. ಇವತ್ತಿನ ಪರಿಸ್ಥಿತಿಯು ಬಹಳ ಮಟ್ಟದಲ್ಲಿ ಬದಲಾವಣೆಯಾಗಿದ್ದು, ಅದು ರೈತ ಸಮುದಾಯದ ಕತ್ತು ಹಿಸುಕುವಂತಾಗಿದೆ. ಕಳೆದ ಎಂಟು ತಿಂಗಳುಗಳಿಂದ ನಾಡಿನ ರೈತರು ನಿರಂತರವಾಗಿ ಚಳುವಳಿಯನ್ನು ಮಾಡುತ್ತಿದ್ದಾರೆ. ರೈತ ಅಥವಾ ಬೇರೆ ಇನ್ನಾವುದೇ ಸಂಘಟನೆಗಳಿರಬಹುದು. ಇದರಲ್ಲಿ ನ್ಯಾಯಾಧೀಶರು, ನ್ಯಾಯವಾದಿಗಳು, ಚಲನಚಿತ್ರ ನಟರು, ಸಾಹಿತಿಗಳು ಎಲ್ಲರೂ ಸಹ ಭೂ ಸುಧಾರಣೆ ಕಾಯ್ದೆಯ ವಿರುದ್ಧ ವ್ಯಾಪಕವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ಬಾರಿ ಅವರೊಂದಿಗೆ ಮಾತನಾಡಿರುವುದನ್ನು ಹೊರತುಪಡಿಸಿದರೆ, ಮತ್ತೆ ಇನ್ನೊಮ್ಮೆ ಮಾತನಾಡಿರುವುದಿಲ್ಲ. ಭೂ ಸುಧಾರಣೆ ಹಾಗೂ ಎ.ಪಿ.ಎಂ.ಸಿ. ಕಾಯ್ದೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿರುವ ಸಂಘಟನೆಯ ಪದಾಧಿಕಾರಿಗಳನ್ನು ಮುಖ್ಯಮಂತ್ರಿಗಳ ಕಛೇರಿಗೆ ಕರೆದು, ಅವರೊಂದಿಗೆ ಸಮಾಲೋಚನೆಯನ್ನು ನಡೆಸಿ, ಅವರುಗಳು ನೀಡುವ ಒಳ್ಳೆಯ ಸಲಹೆಗಳನ್ನು ಸ್ವೀಕರಿಸಬೇಕು. ಈ ಹಿಂದೆ ಇದ್ದ ಗರಿಷ್ಠ 250 ಎಕರೆ ಜಮೀನಿನ ಬದಲಾಗಿ 108 ಎಕರೆ ಜಮೀನನ್ನು ಇಟ್ಟುಕೊಳ್ಳಬೇಕು ಎಂಬಂತಹ ಕೇವಲ ಒಂದು ತಿದ್ದುಪಡಿಯನ್ನು ಮಾತ್ರವೇ ಮಾಡಿದ್ದಾರೆ. ಸರ್ಕಾರದ ಈ ಕ್ರಮವು ಪರಿಹಾರವಾಗುವುದಿಲ್ಲ. ಸಂಘಟನೆಯ ಪದಾಧಿಕಾರಿಗಳನ್ನು ಕರೆದು ಇನ್ನೂ ಒಂದೆರೆಡು ಬಾರಿ ಮಾತನಾಡಿ, ರೈತರಿಗೆಲ್ಲರಿಗೂ ಅನುಕೂಲವಾಗುವ ಮಸೂದೆಯನ್ನು ಜಾರಿಗೆ ತರಬೇಕು. ಇದು ಜನಪರ ಹಾಗೂ ನಾಗರೀಕ ಪರವಾದ ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸುತ್ತೇನೆ. ಬಡ ಜನರು, ಅವರ ಕಲ್ಯಾಣಕ್ಕೋಸ್ಕರ ಹಾಗೂ ಅನ್ನದಾತನಿಗೋಸ್ಕರ ನಾವು ಇವತ್ತಿನ ದಿವಸ ಕಾಯ್ದೆಯನ್ನು ಜಾರಿಗೆ ತರುತ್ತಿರುವ ಸಂದರ್ಭದಲ್ಲಿ ದೊಡ್ಡ ವಿರೋಧದ ಕೂಗು ಇದೆ. ಇದನ್ನು ಸರ್ಕಾರವು ಆಲಿಸಬೇಕು. ಇದರಲ್ಲಿ ಸೂಕ್ತವಾದದನ್ನು ಜಾರಿಗೆ ತರುವುದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಇದು ದೊಡ್ಡ ರಾಜಕೀಯ ನೀತಿ ಎಂದು ನಾನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವಿಸುತ್ತೇನೆ. ಇಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಲಿಲ್ಲ. ಇದು ನನಗೆ ಅತ್ಯಂತ ಬೇಸರದ ಸಂಗತಿಯಾಗಿದೆ. ಪರಿಶಿಷ್ಟ ಜಾತಿ...

**ಸಭಾಪತಿಯವರು:-** ಇನ್ನು ಎಷ್ಟು ಕಾಲಾವಕಾಶ ಬೇಕು?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಅರ್ಧ ಗಂಟೆಗಳ ಕಾಲಾವಕಾಶ ಬೇಕು.

**(ಮುಂದು)**

(1001)08-12-2020(12-10)ಬಿಎಸ್‌ಡಿ- ಜಿಆರ್

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ಅಂಶವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿಲ್ಲ ಎಂಬ ಕಾರಣದಿಂದ ನಾನು ಹೇಳುತ್ತಿದ್ದೇನೆ. ಈ ಅಂಶವನ್ನು ಅವರು ಬಿಟ್ಟುಬಿಟ್ಟರೆ cut ಆದಂತೆ ಆಗುತ್ತದೆ. ಕರ್ನಾಟಕ ಉಚ್ಚ ನ್ಯಾಯಾಲಯವು (Writ Petition No.16199/2019) Interim Order ನಲ್ಲಿ ಏನು ಹೇಳಿದೆ ಎಂಬುದನ್ನು ಓದುತ್ತೇನೆ: *"(ii) therefore, the Principal Secretary of the State who is present before the Court shall look into all these matters and come back to this Court..."* ಅವರು ಯಾವ ರೀತಿ ಹೇಳಿದ್ದಾರೆಂದರೆ, ತಲೆಯಲ್ಲಿ ಕೂದಲು ಜಾಸ್ತಿ ಇರುವುದರಿಂದ ಮತ್ತು ಕೂದಲಿನಲ್ಲಿ ಸಮಸ್ಯೆ ಇರುವುದರಿಂದ clean ಆಗಿ cutting ಮಾಡಿಕೊಂಡು, makeup ಮಾಡಿಕೊಂಡು ಬನ್ನಿ ಎಂದು ಹೇಳಿದ್ದಾರೆ. ಆದರೆ ಇವರು ಕತ್ತನ್ನೇ ತೆಗೆಯುವುದಕ್ಕೆ ಹೊರಟ್ಟಿದ್ದಾರೆ. ಇದನ್ನು ನಾನು ಓದುತ್ತೇನೆ,. The Interim Order further reads: *"....come back to this Court with a plan of action that he would take to regulate the aforesaid proceedings and also to ensure grievances of the people are addressed in a systematic process where the intervention of the official for extraneous consideration is removed. Further he shall also ensure action as initiated for not recovering lands where Section 79A and 79B orders are passed in favour of the State in confiscation of the*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*said land to the State."* ಯಾವ್ಯಾವುದನ್ನು Section 79A and 79B ನಲ್ಲಿ ಟಚಿಟಿಫ ತೆಗೆದುಕೊಂಡಿಲ್ಲ, ಅದನ್ನು ಏಕೆ recover ಮಾಡಲಿಲ್ಲ ಎಂದು ಈ ಅಂಶಗಳನ್ನು ಅವರು note ತೆಗೆದುಕೊಂಡು Interim Order ಕೊಟ್ಟ ಆಧಾರದ ಮೇಲೆ ಇದನ್ನು ಅಲ್ಲಿಯೇ ಪಟ್ಟಿ ಮಾಡಿಕೊಂಡು ಆ Officer ಗಳಿಗೆ ಏನೇನು punishment ಕೊಟ್ಟಿದ್ದೀರಾ, ತೆಗೆದುಕೊಳ್ಳಲಿಲ್ಲ, ಅದನ್ನೆಲ್ಲಾ ಪಟ್ಟಿ ಮಾಡಿಕೊಂಡು ಮತ್ತೆ ನಮ್ಮ Court ಗೆ ಬನ್ನಿ ಎಂದು Interim Order ಕೊಟ್ಟಿದ್ದಾರೆ. ಆದರೆ ಇವರು ತಲೆಯನ್ನೇ ತೆಗೆದುಬಿಟ್ಟಿದ್ದಾರೆ!. ಇದು ಇತ್ಯರ್ಥ ಆಗಬೇಕೆಂದರೆ ಸುಮ್ಮನೆ ಕರೆದುಕೊಂಡು ಹೋಗುವುದು, ನಾನು ಹೋಗುವುದು, Court ನಲ್ಲಿ ನಿಂತುಕೊಂಡರೆ ಆಗುತ್ತದೆಯೇ? ಆದ್ದರಿಂದ F Section 79A or Section 79ಃ ಯಾವುದೂ ಬೇಡ ಎಂದು ತೆಗೆದುಬಿಟ್ಟರು. ಇಂತಹ ದೊಡ್ಡ ತಪ್ಪನ್ನು ಸರ್ಕಾರ ಮಾಡಿದ್ದಾರೆ. ಈ ತಪ್ಪಿನಿಂದ Court ನವರು ನಾಳೆ observation ಹಾಕುತ್ತಾರೆ. ಆದ್ದರಿಂದ ಇದನ್ನು ತೆಗೆಯದೇ ನಿಲ್ಲಿಸಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ರಾಜ್ಯದಲ್ಲಿ Form No.50, 53 ಎಂದಿರುವುದು ತಮಗೆ ಗೊತ್ತಿದೆ. ಈ ಅರ್ಜಿಗಳು ಕಳೆದ 20-30 ವರ್ಷಗಳಿಂದ ಇತ್ಯರ್ಥವಾಗದೇ ಹಾಗೆಯೇ ಉಳಿದಿವೆ. ಈ ಅರ್ಜಿಗಳ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಕೆಲವು ಅರಣ್ಯ ಪ್ರದೇಶಗಳಲ್ಲಿ ವಾಸ ಮಾಡುವ ಗಿರಿಜನ, ದಲಿತರು ಇತ್ಯಾದಿಯವರಿಗೆ ಜಮೀನು ಕೊಟ್ಟಿದ್ದು, ಇನ್ನೂ ಅವರ ಹೆಸರಿಗೆ ದಾಖಲೆಗಳಾಗಿಲ್ಲ. ಇವೆಲ್ಲವನ್ನೂ ವಾಪಸ್ಸು ತೆಗೆದುಕೊಂಡು ಮಾಡಬೇಕೆಂದು ಹೇಳುತ್ತಾ, ಅಲ್ಲಿನ ಶ್ರೀಮಂತರು ಜಮೀನುಗಳನ್ನು ಒತ್ತುವರಿ ಮಾಡಿರುವುದನ್ನು ಬಿಡಿಸಿಕೊಳ್ಳಲು ಆಗದ ಪರಿಸ್ಥಿತಿ ಇದೆ. ಇದೆಲ್ಲವನ್ನು ಸಕ್ರಮ ಮಾಡದೇ ಇಂತಹ ಕಾಯ್ದೆ ತರುವುದು ಸರಿಯೇ? ಮಾನ್ಯ ಸಭಾಪತಿಯವರೇ, ಇವತ್ತು ಉದಾಹರಣೆಗೆ ರಾಜ್ಯದಲ್ಲಿ KIADB ಇರಬಹುದು, ಇನ್ನಿತರ ಕೈಗಾರಿಕಾ ವಲಯಗಳು ಇರಬಹುದು, ಇವೆಲ್ಲವೂ ಉದ್ಯೋಗಗಳನ್ನು create ಮಾಡುತ್ತೇವೆ ಎಂದು acquisition ಮಾಡಿದ ಸಾವಿರಾರು ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಆ ಜಮೀನುಗಳನ್ನು develop ಮಾಡುತ್ತಿಲ್ಲ. ಎಲ್ಲವನ್ನೂ ಹಾಗೆ ಬಿಟ್ಟಕೊಂಡಿದ್ದಾರೆ. ಅಲ್ಲಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ಇಲ್ಲ, ಏನೂ ಇಲ್ಲ. ಇಂತಹ ಸಾವಿರಾರು ಎಕರೆಗಳನ್ನು ಘನ ಉದ್ದೇಶಕ್ಕೆ ಸರ್ಕಾರವು acquire ಮಾಡಿಕೊಂಡಿದೆ. ಅಲ್ಲಿ ಕೂಡ ಶ್ರೀಮಂತರಿಗೆ Red-carpet ಹಾಸಿಕೊಟ್ಟಂತೆ ಈ ಕಾಯ್ದೆ ಬಹಳ ಉಪಯೋಗಕ್ಕೆ ಬರುತ್ತಿದೆ. ವಚನಕಾರರು "ವಕ್ಕಲಿಗ ಒಕ್ಕದಿರೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಕ್ಕುವುದು ಜಗವೆಲ್ಲಾ" ಎಂದು ಹೇಳಿದ್ದು, ಕೃಷಿ ಕಾಯಕ ಮಾಡುವ ನೇಗಿಲ ಯೋಗಿ ದುಡಿಯದಿದ್ದರೆ ಜಗತ್ತು ಅಳುತ್ತದೆ, ಪ್ರಾಣ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಕುವೆಂಪುರವರು ರೈತನನ್ನು ಯೋಗಿ ಎಂದು ಕರೆದಿದ್ದಾರೆ. ಇಂತಹವರಲ್ಲಿ ಸಣ್ಣ ಅತಿ ಸಣ್ಣ ಹಿಡುವಳಿದಾರರು, ಮಹಿಳೆಯರು, ಕೂಲಿಕಾರರು ಶೇಕಡ 60% ಇದ್ದು, ಭಾರತ ದೇಶದ ಆದಾಯವನ್ನು ತಂದು ಕೊಡುತ್ತಿದ್ದಾರೆ. ಇವತ್ತಿನವರೆಗೂ ಕೈಗಾರಿಕೆಗಳು ಏನೇ ಮಾಡಿದರೂ ಮೇಲಕ್ಕೆ ಬರುತ್ತಿಲ್ಲ. ಅನೇಕ ವೈಫಲ್ಯತೆಗಳನ್ನು ಕಾಣುತ್ತಿವೆ. ಇಂತಹ ಆರ್ಥಿಕ ಸಂಪತ್ತನ್ನು ತುಂಬುವ ರೈತರ ಸಮುದಾಯಕ್ಕೆ ಇಂತಹ ವಿಧೇಯಕಗಳಿಂದ ಬದುಕಿ, ಉಳಿಯಲು ಸಾಧ್ಯವಿಲ್ಲ. ಈ ಕಾಯ್ದೆಯಿಂದ ಬೆಂಗಳೂರು, ದೊಡ್ಡ ದೊಡ್ಡ ನಗರಗಳು ಮತ್ತು ವಿದೇಶದಲ್ಲಿರುವವರು 500–1000 ಎಕರೆ ಜಮೀನನ್ನು ಮಾಡಿಕೊಂಡು ಆನಂದವಾಗಿ ಮನೆ ಕಟ್ಟಿಕೊಂಡು ಇರುತ್ತಾರೆ. ಜಮೀನು ಮಾರಿಕೊಂಡವರು ಬೆಂಗಳೂರಿನಂತಹ ದೊಡ್ಡ ದೊಡ್ಡ ನಗರಗಳಿಗೆ ಬಂದು ಕೂಲಿ–ನಾಲಿ ಮಾಡುವ ಕೆಲಸ ಮಾಡುತ್ತಾರೆ. ಈಗಾಗಲೇ ಜಮೀನ್ದಾರರು ಎಂದು ಜಮೀನು ಹೊಂದಿರುವವರು ಇನ್ನು 5 ವರ್ಷಗಳಲ್ಲಿ ಬೆಂಗಳೂರಿನಂತಹ ನಗರದಲ್ಲಿ ಕೂಲಿ–ನಾಲಿ ಮಾಡಿಕೊಂಡು, guard ಆಗಿಯೋ, ಹೆಂಗಸರು ಮುಸುರೆ ತಿಕ್ಕುವ ಕೆಲಸವನ್ನು ಮಾಡುವಂತೆ ಆಗುತ್ತದೆ. ಇಂತಹ ಕೆಲಸ ಈ ಸರ್ಕಾರದಿಂದ ಮಾಡಬಾರದು. ಈ ಸರ್ಕಾರದ ಬಗ್ಗೆ ಜನರು ಅಪಾರ ವಿಶ್ವಾಸ ಇಟ್ಟುಕೊಂಡು ಬದುಕುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರ ಬಗ್ಗೆ ರೈತ ಸಮುದಾಯಕ್ಕೆ ಅಪಾರ ವಿಶ್ವಾಸ, ಅದಕ್ಕಾಗಿಯೇ ರೈತ ಸಮುದಾಯದವರು ಎಲ್ಲಾ ಚುನಾವಣೆಗಳಲ್ಲಿ ಶ್ರೀ ಯಡಿಯೂರಪ್ಪನವರ ನಾಯಕತ್ವವನ್ನು ಕೈ ಹಿಡಿದಿದೆ. ಆದರೆ ಅವರು ಈ ರೀತಿ ವಿಧೇಯಕ ತರುವುದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಬೇಕು.

ಇನ್ನು ಒಂದು ಗುಟ್ಟಿನ ವಿಚಾರವನ್ನು ಹೇಳಬಯಸುತ್ತೇನೆ. ಈ ವಿಧೇಯಕಗಳ ಬಗ್ಗೆ ಎಲ್ಲಾ ಪಕ್ಷಗಳಲ್ಲಿಯೂ ಜಿಜ್ಞಾಸೆ ಇದೆ. ಇದರ ಬಗ್ಗೆ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳಲ್ಲಿ ಕೆಲವರು ವಿಧೇಯಕದ ಪರವಾಗಿದ್ದಾರೆ. ಆದರೆ ಬಹುತೇಕ ಮಂದಿ ವಿಧೇಯಕಕ್ಕೆ ವಿರೋಧವಾಗಿದ್ದಾರೆ. ಈ ಸತ್ಯಸಂಗತಿಯನ್ನು ನಾನು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ಬಿಜೆಪಿ ಪಕ್ಷದಲ್ಲಿರುವ ಬಹುತೇಕ ಮಂದಿ ಈ ವಿಧೇಯಕಕ್ಕೆ ವಿರೋಧವಾಗಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದಲ್ಲಿರುವವರು ವಿರೋಧವಾಗಿದ್ದಾರೆ. ಆದರೆ ಎಲ್ಲಾ ಕೆಲವೇ ಮಂದಿ ಎಲ್ಲಾ party ಗಳಲ್ಲಿ ಈ ವಿಧೇಯಕ ಬರಲಿ ಎನ್ನುವವರೂ ಇದ್ದಾರೆ. ಇದು ಜನರ ಹೋರಾಟ ಮತ್ತು ಕೂಗಿಗೆ ಸರ್ಕಾರವು ಮನ್ನಣೆ ಕೊಡಬೇಕು. ಕೆಲವೇ ವ್ಯಕ್ತಿಗಳ ಮಾತಿಗೆ ಮನ್ನಣೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬಾರದು. ಈ ಕಾಯ್ದೆಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಕುಟುಂಬಕ್ಕೂ effect ಆಗುವಂತಹದ್ದಾಗಿದೆ.

ಮಾನ್ಯ ಸಭಾಪತಿಯವರೇ, ಪ್ರೊ: ನಂಜುಂಡಸ್ವಾಮಿಯವರು ಭಾಷಣದಲ್ಲಿ ಒಂದು ಮಾತನ್ನು ಹೇಳುತ್ತಿದ್ದರು. ಅಧಿಕಾರಿಗಳು ತನಿಖೆ ಮಾಡಲು ಯಾವುದೋ ಊರಿಗೆ ಹೋದರೆ 'ನೋಡಪ್ಪಾ, ನೀನು ಹಾಕಿರುವ ಬಟ್ಟೆ ನಮ್ಮದು, ಅದನ್ನು ಇಲ್ಲಿ ಬಿಚ್ಚಿ ಮಡಗಿಬಿಡು, ನೀನು ತಂದಿರುವ ಕಾರಿಗೆ ಹಾಕಿರುವ petrol ನಮ್ಮದು,' ಎಂದು ಹೇಳುತ್ತಿದ್ದರು. ಬಟ್ಟೆ, ಕಾರು petrol ಎಲ್ಲವೂ ನಮ್ಮದಾಗಿರುವುದರಿಂದ ಊರಿನ ಒಳಗೆ ಬರಬೇಡ ಎಂದು ಹೇಳುತ್ತಿದ್ದರು. ಊರಿನ ಒಳಗೆ ಹೇಗೆ ಬರುತ್ತೇಯಾ ಎನ್ನುತ್ತಿದ್ದರು. ಆವತ್ತು ನಾನು ಬಾಲಕನಾಗಿ ಮಾನ್ಯ ನಂಜುಂಡಸ್ವಾಮಿಯವರು ಇದೆಲ್ಲಾ ಮಾತನಾಡುತ್ತಾರೆ, ಯಾಕಪ್ಪಾ ಎಂದು ಯೋಚಿಸುತ್ತಿದ್ದೆ. ಆದರೆ ಅವರ ಹೋರಾಟದಲ್ಲಿ ಎಷ್ಟು ಸತ್ಯ ಇದೆ, ರೈತರು ಎಂತಹ ಸಂಕಷ್ಟದಲ್ಲಿದ್ದಾರೆ, ರೈತರ ಬದುಕು ಏನು ಎಂಬ ಬಗ್ಗೆ ಇವತ್ತು ನನಗೆ ನೆನಪಾಗುತ್ತಿದೆ. ಆ ಸಂಕಷ್ಟದಲ್ಲಿರುವ ರೈತರನ್ನು ಉಳಿಸುವ ಕೆಲಸ ಸರ್ಕಾರದ ಮೊದಲನೆಯ ಆದ್ಯತೆಯಾಗಬೇಕು. 2006ರಲ್ಲಿ ಮಾನ್ಯ ಸ್ವಾಮಿನಾಥನ್ ರವರು ವರದಿಯನ್ನು ನೀಡಿದ್ದು, ಆ ವರದಿಯನ್ನು ಜಾರಿಗೆ ತಂದುಬಿಡಲಿ. ಅವರು ರೈತರಿಗೆ ಏನೂ ಕೊಡುವುದು ಏನೂ ಬೇಡ, ಆ ವರದಿಯಲ್ಲಿರುವಂತೆ ಕ್ರಮ ತೆಗೆದುಕೊಳ್ಳಲಿ. ರೈತರಿಗೆ ಯಾವ ಸವಲತ್ತು ಕೊಡುವುದು ಬೇಡ, ವರದಿಯನ್ನು ಜಾರಿಗೆ ತರಲಿ. ಮಾನ್ಯ ಇಟಗಿ ರವರು ರೈತರಿಗೆ ಏನೆಲ್ಲಾ ಸವಲತ್ತು ಕೊಡಬೇಕೆಂದು ಹೇಳಿದರು. ಅದಕ್ಕೆ ಏನಾದರೂ ಇದೆಯೇ? ರೈತರಿಗೆ ಯಾವ ರೀತಿ ಪರಿಹಾರ ಕೊಡುತ್ತಾರೆಂದರೆ, ಸುಮ್ಮನೆ ಏನೋ ಕೊಟ್ಟಂತೆ ನಮ್ಮ ಹಳ್ಳಿ ಕಡೆ ಯಾರಾದರೂ ಕಾಸು ಕೊಟ್ಟರೆ "ಇದು ಉಪ್ಪು-ಮೆಣಸಿನಕಾಯಿಗೆ ಆಗುತ್ತದೆಯೇ?" ಎಂದು ಹೇಳುತ್ತಾರೆ. ಆ ರೀತಿ ರೈತರಿಗೆ ಸರ್ಕಾರಗಳು ಪರಿಹಾರವನ್ನು ಕೊಡುತ್ತವೆ. ಮೂಲಭೂತವಾಗಿ ರೈತನ ಸುಧಾರಣೆಗೆ ಆಗಬೇಕಾದ ಪರಿಹಾರಗಳನ್ನು ಕೊಡುತ್ತಿಲ್ಲ. ಈ ಕಾಯ್ದೆ ತರುವುದರಿಂದ ನಿಜಕ್ಕೂ ನನಗೆ ಬೇಸರವಾಗುತ್ತಿದೆ. Court ಏನು ಹೇಳಿದೆ ಎಂದರೆ, ಕಾಯ್ದೆಯನ್ನು ಉಲ್ಲಂಘಿಸಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಅವರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಇದರ ಬಗ್ಗೆ ಒಂದು ವರದಿ ಕೊಟ್ಟು, ಹೊಸ ಚಿಂತನೆ ಮಾಡುವುದಿದ್ದರೆ ಮಾಡಿ ಎಂದು ಮಧ್ಯಂತರ ಆಜ್ಞೆಯಲ್ಲಿ ಹೇಳಿದೆ. ಆದರೆ ಇವರು ರೈತರ ಗೆಡ್ಡೆಯನ್ನೇ ಕತ್ತರಿಸಿಬಿಟ್ಟರು. ರೈತ ಉಳಿಯುವಂತಿಯೇ ಇಲ್ಲ!.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1002)/08.12.2020/12.20/ಹೆಚ್‌ವಿಃಎಂಡಿ

**ಶ್ರೀ ಮರಿತಿಬ್ಬೇಗೌಡ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಮಧ್ಯಂತರ ತೀರ್ಪಿನಲ್ಲಿ ಹೇಳಿರುವುದೇ ಒಂದು, ಇವರು ಮಾಡಿರುವುದೇ ಒಂದು. ಮಧ್ಯಂತರ ತೀರ್ಮಾನವನ್ನು ಪ್ರಶ್ನಿಸದೇ ಇರುವಂತಹ ರಾಜ್ಯ ಸರ್ಕಾರದ ಲೋಪದೋಷಗಳನ್ನು ಬಹಳ ಕಠಿಣವಾಗಿ ವಿರೋಧಿಸಬೇಕಾಗುತ್ತದೆ. ಈ ಮಧ್ಯಂತರ ತೀರ್ಪಿನ ಮೇಲೆ ಸರ್ಕಾರ ರಿಟ್ ಅಪೀಲ್ ಹೋಗದೇ ಇರುವುದು ಖಂಡನೀಯ ಮತ್ತು ಘೋರ ಅಪರಾಧವಾಗಿದೆ. ಕೋರ್ಟಿನ ಮಧ್ಯಂತರ ತೀರ್ಮಾನದ ಪ್ರಕಾರ ಕ್ರಮ ತೆಗೆದುಕೊಳ್ಳದೇ ಯಾರ್‍ಯಾರು ಕಾನೂನು ಉಲ್ಲಂಘನೆ ಮಾಡಿದ್ದಾರೆಯೋ ಅವರೆಲ್ಲರಿಗೂ ಸರ್ಕಾರ ಪರಿಹಾರ ಕೊಟ್ಟಿರುವುದು ಅಪರಾಧವಾಗಿದೆ, ಇದನ್ನು ನಾನು ಖಂಡಿಸುತ್ತೇನೆ. ಇಂತಹ ಕರಾಳವಾದ ಮತ್ತು ರೈತ ವಿರೋಧಿಯಾಗಿರುವ ಈ ವಿಧೇಯಕ ನಾನು ಶಾಸಕನಾಗಿರುವ ಸಮಯದಲ್ಲಿಯೇ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಬರುತ್ತದೆಂದು ನಾನು ಎಂದೂ ತಿಳಿದುಕೊಂಡಿರಲಿಲ್ಲ. ಈ ಕರಾಳ ಶಾಸನ ರೈತ, ರೈತ ಮಹಿಳೆಯರ, ಕೂಲಿ ಕಾರ್ಮಿಕರ ಜೀವ ತೆಗೆಯುವಂತಹ ಶಾಸನವಾಗಿದೆ. ಈ ಕಾಯಿದೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಕೋರ್ಟಿನ ಮಧ್ಯಂತರ ಆದೇಶವನ್ನು ನೆಪ ಮಾಡಿಕೊಂಡು, ಕೋರ್ಟಿನ ತೀರ್ಮಾನಕ್ಕೆ ತದ್ವಿರುದ್ಧವಾಗಿ ರೈತರನ್ನು ಮಟ್ಟ ಹಾಕುವಂತಹ ಕಾಯಿದೆಯನ್ನು ಸರ್ಕಾರವೇ ತಂದರೆ; ರೈತರು, ಜನ ಸಾಮಾನ್ಯರು ಮತ್ತು ಬಡವರು ಉಳಿಯುವುದಕ್ಕೆ ಸಾಧ್ಯವಿದೆಯೇ? ನ್ಯಾಯಾಲಯದ ಆದೇಶವನ್ನೇ ತಿರುಚಿ ಸರ್ಕಾರ ಕಾನೂನು ಮಾಡಿದರೆ ಯಾವ ರಾಜ್ಯ ಉಳಿಯುವುದಕ್ಕೆ ಸಾಧ್ಯವಿದೆ? ಇದರಿಂದ ರೈತರ, ಬಡವರ ಕೂಲಿ ಕಾರ್ಮಿಕರ ರಕ್ಷಣೆ ಆಗುವುದಕ್ಕೆ ಸಾಧ್ಯವಿದೆಯೇ? ಹಿಂದೆ ಮೊದಲನೆಯ ಬಾರಿ ಈ ವಿಧೇಯಕದ ಮೇಲೆ ಮಾತನಾಡಿದ ಸಂದರ್ಭದಲ್ಲಿ ನಾನು ಈ ವಿಧೇಯಕವನ್ನು ಓದಿರಲಿಲ್ಲ. ಈಗ ಸಂಪೂರ್ಣವಾಗಿ ಓದಿಕೊಂಡು ಬಂದಿದ್ದೇನೆ. ಮಧ್ಯಂತರ ತೀರ್ಪಿನ ಮೇಲೆ ಅಪೀಲ್ ಹೋಗದೆ ಇರುವುದು ಸರ್ಕಾರದ ದೊಡ್ಡ ಷಡ್ಯಂತರವಾಗಿದೆ. ಸರ್ಕಾರ ಬಂಡವಾಳಶಾಹಿಗಳ ಪರವಾಗಿ ಈ ವಿಧೇಯಕವನ್ನು ತಂದಿದೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಈ ಕಾಯಿದೆ ರೈತರ, ಕೂಲಿಕಾರ್ಮಿಕರ, ಬಡವರ, ಅತೀ ಬಡವರು ಮತ್ತು ರೈತ ಮಹಿಳೆಯರ ಪರವಾಗಿಲ್ಲ. ಕೋರ್ಟ್ ಆದೇಶವನ್ನು ತಿರುಚಿ, ತೆಗೆದುಕೊಳ್ಳಬೇಕಾಗಿರುವ ಕ್ರಮವನ್ನು ತೆಗೆದುಕೊಳ್ಳದೇ, ನ್ಯಾಯಾಲಯಕ್ಕೆ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಡದೇ ಸರ್ಕಾರ ಈ ಕಾಯಿದೆಯನ್ನು ತಂದಿದೆ. ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ಕಾಯಿದೆ ಯಾವ ರೀತಿ ಇದೆಯೆಂದರೆ, ಒಂದು ನಗರದ ಬಸ್ ನಿಲ್ದಾಣದಲ್ಲಿ ಒಬ್ಬ ಮಹಿಳೆ ತನ್ನ ಪತಿಯೊಂದಿಗೆ ಒಬ್ಬ ಪೂಜಾರಿಯನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭೇಟಿಯಾಗುತ್ತಾಳೆ. ಈ ಪೂಜಾರಿ ಜ್ಯೋತಿಷ್ಯವನ್ನು ಸಹ ಹೇಳುತ್ತಾನೆ. ಈ ಮಹಿಳೆ ಆ ಪೂಜಾರಿಯ ಮನೆಗೆ ಹೋಗಿ, 'ಸ್ವಾಮಿ, ಮದುವೆಯಾಗಿ ನಾಲ್ಕು ವರ್ಷಗಳಾಗಿವೆ ಮಕ್ಕಳಾಗಿಲ್ಲ. ಇದಕ್ಕೆ ಪರಿಹಾರವೇನು' ಎಂದು ಕೇಳುತ್ತಾಳೆ. ಅದಕ್ಕೆ ಆ ಪೂಜಾರಿ 'ಇಂತಹ ಪೂಜೆಗಳನ್ನು ಮಾಡಿ, ನಿಮಗೆ ಸಂತಾನ ಪ್ರಾಪ್ತವಾಗುತ್ತದೆ' ಎಂದು ಹೇಳಿ ಕಳುಹಿಸುತ್ತಾನೆ. ಆ ದಂಪತಿಗಳು ಅದೇ ರೀತಿ ಪೂಜೆಗಳನ್ನು ಮಾಡುತ್ತಾರೆ, ಆದರೆ ಮಕ್ಕಳಾಗುವುದಿಲ್ಲ. ಕೆಲವು ವರ್ಷಗಳ ನಂತರ ಆ ಪೂಜಾರಿ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವಾಗ ಈ ದಂಪತಿಗಳು ಅಡ್ಡ ಸಿಗುತ್ತಾರೆ. ಆಗ ಪೂಜಾರಿ, 'ಬಹಳ ಅಪರೂಪವಾಯಿತು ತಮ್ಮ ಭೇಟಿ, ಮನೆ ಕಡೆ ಬರಲಿಲ್ಲ. ಎಲ್ಲರೂ ಚೆನ್ನಾಗಿದ್ದೀರಾ, ಎಷ್ಟು ಮಕ್ಕಳು?' ಎಂದು ಕೇಳುತ್ತಾರೆ. ಆಗ ಆ ದಂಪತಿಗಳು, ' ಇಲ್ಲ ಸ್ವಾಮಿ, ತಾವು ಹೇಳಿದಂತೆ ಪೂಜೆ ಎಲ್ಲ ಮಾಡಿದೆವು ಆದರೆ, ಮಕ್ಕಳೇ ಆಗಲಿಲ್ಲ' ಎಂದು ಹೇಳುತ್ತಾರೆ. 'ಸರಿ ನಾನು ನಾಳೆ ತಿರುಪತಿಗೆ ಹೋಗುತ್ತಿದ್ದೇನೆ. ತಿರುಪತಿಯಲ್ಲಿ ಒಂದು ದೀಪವನ್ನು ಹಚ್ಚಿ ಬರುತ್ತೇನೆ. ಆಗ ನಿಮಗೆ ಖಂಡಿತವಾಗಿ ಮಕ್ಕಳಾಗುತ್ತವೆ. ಸಮಾಧಾನದಿಂದ ಇರಿ' ಎಂದು ಪೂಜಾರಿ ಹೇಳಿ ಹೋಗುತ್ತಾನೆ. ಪುನಃ ಎರಡು ವರ್ಷಗಳಾದ ಮೇಲೆ ಪೂಜಾರಿ ಮತ್ತು ಆ ಮಹಿಳೆಯ ಭೇಟಿಯಾಗುತ್ತದೆ. ಆಗ ಪುನಃ ಪೂಜಾರಿ, 'ಎಲ್ಲರೂ ಚೆನ್ನಾಗಿದ್ದೀರಾ, ಮಕ್ಕಳು ಎಷ್ಟು?' ಎಂದು ಕೇಳುತ್ತಾನೆ. ಆಗ ಆ ಮಹಿಳೆ, 'ನೀವು ತಿರುಪತಿಗೆ ಹೋಗಿ, ದೀಪ ಹಚ್ಚಿದ ಮೇಲೆ ಎರಡು ವರ್ಷದಲ್ಲಿ ಮೊದಲನೆಯ ವರ್ಷ ಅವಳಿ-ಜವಳಿ ಮಕ್ಕಳಾದವು. ಈಗ ತ್ರಿವಳಿ ಮಕ್ಕಳ ಜನನವಾಗಿದೆ. ಒಟ್ಟು ಎರಡು ವರ್ಷಗಳಲ್ಲಿ ಐದು ಮಕ್ಕಳ ಜನನವಾಗಿದೆ. ನೀವು ತಿರುಪತಿಗೆ ಹೋಗಿ ದೀಪ ಹಚ್ಚಿದ ಮೇಲೆ ಐದು ಮಕ್ಕಳಾಗಿವೆ' ಎಂದು ಹೇಳುತ್ತಾಳೆ. ಆಗ ಪೂಜಾರಿ, 'ನಿನ್ನ ಪತಿ ಎಲ್ಲಿ?' ಎಂದು ಕೇಳಿದಾಗ, 'ಸ್ವಾಮಿ, ತಿರುಪತಿಗೆ ಹೋಗಿ ದೀಪ ಆರಿಸಿ ಬನ್ನಿ ಎಂದು ನನ್ನ ಗಂಡನನ್ನು ಕಳುಹಿಸಿದ್ದೇನೆ' ಎಂದು ಹೇಳುತ್ತಾಳೆ. ಈ ತರಹ ಪೂಜಾರಿ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಕೋರ್ಟಿಗೆ ಸುಳ್ಳು ಹೇಳಿ ಈ ಕಾಯಿದೆಯನ್ನು ತಂದು, ಆ ಮೂಲಕ ರೈತರ ಕುತ್ತಿಗೆ ಹಿಸುಕುವ ಕೆಲಸವನ್ನು ಮಾಡುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ರೈತರ ಬಗ್ಗೆ ಬದ್ಧತೆ ಇದ್ದರೆ ಈ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಈ ಕಾಯಿದೆಯ ಬಗ್ಗೆ ಮಾತ್ರವಲ್ಲ, ಕೇಂದ್ರ ಸರ್ಕಾರ ತರುತ್ತಿರುವ ಮೂರೂ ಕಾಯಿದೆಗಳ ಬಗ್ಗೆ ಇಡೀ ರಾಷ್ಟ್ರದಲ್ಲಿಯೇ ವಿರೋಧ ವ್ಯಕ್ತವಾಗುತ್ತಿದೆ. ನಮ್ಮ ರಾಜ್ಯದಲ್ಲಿ ಎಲ್ಲ ಸಂಘಟನೆಗಳು, ವಕೀಲರು ಇದರ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ನಿವೃತ್ತ ನ್ಯಾಯಾಧೀಶರು ಸಹ ಇದರ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲ ರಂಗದಲ್ಲಿರುವ ಜನರು ರೈತರಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ ಮತ್ತು ಭೂ ಸುಧಾರಣಾ ಕಾಯಿದೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮನಗಂಡು ಸದರಿ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆನ್ನುವುದು ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಾಯವಾಗಿದೆ. ತರಾತುರಿಯಲ್ಲಿ ಈ ಕಾಯಿದೆಯನ್ನು ತರುವುದಕ್ಕೆ ಬದಲಾಗಿ ಸಂಘಟನೆಗಳ ಜೊತೆಗೆ ಮತ್ತು ರೈತ ನಾಯಕರುಗಳ ಜೊತೆಗೆ ಚರ್ಚೆ ಮಾಡಿ, ಈ ಕಾಯಿದೆಯಲ್ಲಿ ಸುಧಾರಣೆಯನ್ನು ತರಬೇಕೆನ್ನುವುದು ನನ್ನ ಸಲಹೆಯಾಗಿದೆ. ಮೊನ್ನೆ ಮಾನ್ಯ ಕಂದಾಯ ಸಚಿವರು ಮಾತನಾಡುತ್ತಾ, 'ಕೃಷಿ ಭೂಮಿಯಿಂದಲ್ಲದೇ ಇತರ ಮೂಲಗಳಿಂದ ಯಾರೇ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಅವಿಭಕ್ತ ಕುಟುಂಬಕ್ಕೆ ಬರುವಂತಹ ವರಮಾನದ ಮಿತಿಯನ್ನು 2 ಲಕ್ಷ ರೂಪಾಯಿಗಳಿಂದ 25 ಲಕ್ಷ ರೂಪಾಯಿಗಳಿಗೆ ಕಾಂಗ್ರೆಸ್ ಸರ್ಕಾರದವರು ಏರಿಸಿದರು' ಎನ್ನುವ ಮಾತನ್ನು ಹೇಳಿದರು. ಈ ಸರ್ಕಾರ ಆ ಮಿತಿಯನ್ನು 30 ಲಕ್ಷ ರೂಪಾಯಿಗಳಿಗೆ ಏರಿಸಿದರೆ, ನಮ್ಮ ಅಭ್ಯಂತರವೇನೂ ಇಲ್ಲ. ಇದನ್ನು ಪರಿಷ್ಕರಣೆ ಮಾಡುವುದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತೊಂದರೆಯಾಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪ್ರಕರಣ 79(ಎ) ಮತ್ತು 79(ಬಿ) ಈ ಎರಡನ್ನೂ ಸಂಪೂರ್ಣವಾಗಿ ಕೈಬಿಡುತ್ತಿರುವುದರಿಂದ ಯಾವ ರೈತರು ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸರ್ಕಾರ ರೈತರನ್ನು ಉಳಿಸುವಂತಹ ಕೆಲಸ ಮಾಡಬೇಕಾಗುತ್ತದೆ. ರೈತ ಉಳಿದರೆ ಈ ದೇಶ ಉಳಿಯುತ್ತದೆ. ರೈತ ಉಳಿದರೆ, ಈ ಸಂಸತ್ತು, ಈ ಸದನ ಎಲ್ಲ ಉಳಿಯುತ್ತದೆ. ಆದ್ದರಿಂದ ಈ ಸರ್ಕಾರ ರೈತರನ್ನು, ರೈತ ಹೆಣ್ಣುಮಕ್ಕಳನ್ನು, ಕೃಷಿ ಕೂಲಿ ಕಾರ್ಮಿಕರನ್ನು ಕಾಪಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಏತಕ್ಕೋಸ್ಕರ ಎಲ್ಲರಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿರೋಧ ವ್ಯಕ್ತವಾಗುತ್ತಿದೆ ಎನ್ನುವ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕಾಗಿದೆ ಮತ್ತು ಇದನ್ನು ಪುನರ್ ಪರಿಶೀಲಿಸಬೇಕಾಗಿದೆ. ಈ ವಿಧೇಯಕ ರೈತ ವಿರೋಧಿ ವಿಧೇಯಕವಾಗಿದೆ. ರೈತರಿಗೆ ಮರಣ ಶಾಸನವಾಗಿದೆ. ಆದ್ದರಿಂದ ಈ ವಿಧೇಯಕಕ್ಕೆ ನನ್ನ ಸಂಪೂರ್ಣವಾದ ವಿರೋಧವನ್ನು ವ್ಯಕ್ತಪಡಿಸುತ್ತೇನೆ ಮತ್ತು ಯಾವುದೇ ಕಾರಣಕ್ಕೂ ನಾನು ಈ ವಿಧೇಯಕವನ್ನು ಬೆಂಬಲಿಸುವುದಿಲ್ಲ ಎಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮಾತನಾಡುತ್ತಿದ್ದ ವಿಚಾರವನ್ನು ನಾನು ಗಮನಿಸುತ್ತಿದ್ದೆ. ಪ್ರಕರಣ 79(ಎ) ಮತ್ತು 79(ಬಿ) ಅಡಿಯಲ್ಲಿ ಇರುವಂತಹ ನಿರ್ಬಂಧಗಳು ದೇಶದ ಅನೇಕ ರಾಜ್ಯಗಳಲ್ಲಿ ಇಲ್ಲ. ವಿಶೇಷವಾಗಿ ದಕ್ಷಿಣ ಭಾರತದ ಇತರೆ ರಾಜ್ಯಗಳಲ್ಲಿ ಕೃಷಿಕ ಅಲ್ಲದವನು ಕೃಷಿ ಭೂಮಿಯನ್ನು ಖರೀದಿ ಮಾಡುವುದಕ್ಕೆ ಅವಕಾಶವಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗೆ ಹೇಳಬೇಕಾದರೆ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಂತಹ ರಾಜ್ಯಗಳಲ್ಲಿ ಇಂತಹ ನಿರ್ಬಂಧವಿಲ್ಲ. ಎರಡನೆಯ ಅಂಶವೆಂದರೆ, ನಾವು ಈಗಾಗಲೇ ಸ್ಪಷ್ಟಪಡಿಸಿರುವಂತೆ, ನೀರಾವರಿ ಭೂಮಿಯನ್ನು ಕೊಂಡುಕೊಂಡರೆ, ಅಲ್ಲಿ ನೀರಾವರಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿದೆಯೇ ಹೊರತು, ಬೇರೆ ಉದ್ದೇಶಗಳಿಗೆ ಬಳಕೆ ಮಾಡಬಾರದು ಎನ್ನುವ ನಿಬಂಧನೆಯನ್ನು ಸಹ ವಿಧಿಸಿದ್ದೇವೆ. ಈ ವಿಧೇಯಕವನ್ನು ತರುವುದಕ್ಕೂ ಮೊದಲು ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಬಂದಿದ್ದೇವೆ. ನಮ್ಮ ರಾಜ್ಯದಲ್ಲಿನ ಅನೇಕ ಜನರು ನಮ್ಮ ಪಕ್ಕದ ರಾಜ್ಯಗಳಿಗೆ ಹೋಗಿ ಜಮೀನು ಕೊಂಡುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ಹೊಸೂರಿಗೆ ಹೋಗಿ ಜಮೀನು ಖರೀದಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ರೈತ ವಿರೋಧಿ ಕೆಲಸವನ್ನು ನಾನಾಗಲೀ, ನಮ್ಮ ದೇಶದ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರಾಗಲೀ ಇಷ್ಟಪಡುವುದಿಲ್ಲ, ಮಾಡುವುದಕ್ಕೂ ಸಾಧ್ಯವಿಲ್ಲ. ಈ ಕೆಲಸ ನನ್ನಿಂದ ಸಾಧ್ಯವೇ ಇಲ್ಲ.

(ಮುಂದುವರಿದಿದೆ)

(1003) 8.12.2020 12.30 ಪಿಕೆ:ಎಂಡಿ

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಂದುವರೆದಿದೆ)**

ಎಲ್ಲವನ್ನೂ ಸ್ಪಡಿ ಮಾಡಿದ್ದೇವೆ. ಈಗ ರೈತರು ಮೊದಲಿನ ಹಾಗೆ ಇಲ್ಲ. ಜಾಗೃತರಾಗಿದ್ದಾರೆ, ಬುದ್ಧಿವಂತರಾಗಿದ್ದಾರೆ. ಯಾವುದನ್ನು ಮಾಡಬೇಕು ಯಾವುದನ್ನು ಮಾಡಬಾರದು ಎನ್ನುವುದು ಅವರಿಗೆ ಗೊತ್ತಿದೆ. ಕೇಳಿದ ತಕ್ಷಣ ಅವರು ತಮ್ಮ ಜಮೀನನ್ನು ಮಾರಾಟ ಮಾಡಿಬಿಡುತ್ತಾರೆಯೇ? ಕಷ್ಟದಲ್ಲಿರುವವರಿಗೆ ಅನುಕೂಲವಾಗಬೇಕು ಮತ್ತು ಕೃಷಿ ಮಾಡುವವರಿಗೆ ಅನುಕೂಲ ಆಗಬೇಕು, ಯುವಕರು ಮುಂದೆ ಬರಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ನಾನು ಪದೇ ಪದೇ ಹೇಳಿದ್ದೇನೆ. ಇದುವರೆಗೂ ರೈತರ ಶೇಕಡ 2 ರಷ್ಟು ಜಮೀನನ್ನು ಕೈಗಾರಿಕೆಯ ಉದ್ದೇಶಕ್ಕೆಂದು ಉಪಯೋಗ ಮಾಡಿಲ್ಲ. ಕೈಗಾರಿಕೆಗಳೂ ಕೂಡ ಬೆಳೆಯಬೇಕು ಅಲ್ಲವೇ? ದೊಡ್ಡ ಪ್ರಮಾಣದಲ್ಲಿ ನೀರಾವರಿ ಇಲ್ಲದಿರುವಂತಹ ಕೃಷಿ ಭೂಮಿ ಇದೆ. ಅವರೆಲ್ಲರಿಗೂ ಇದರ ಅನುಕೂಲ ಆಗಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆಯೇ ಹೊರತು, ರೈತರಿಗೆ ಕಷ್ಟ ಕೊಡುವಂತಹ, ರೈತರನ್ನು ಸಂಕಷ್ಟಕ್ಕೆ ಸಿಲುಕಿಸುವಂತಹ ಉದ್ದೇಶ ನಮ್ಮಲ್ಲಿ ಇಲ್ಲ. ನೀವೂ ಇದರ ಬಗ್ಗೆ ಸ್ಟಡಿ ಮಾಡಿ. ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ, ತೆಲ್ಲಂಗಾಣ ರಾಜ್ಯಗಳಲ್ಲೂ ಈ ಒಂದು ಕಾನೂನು ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡಿ ತಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಭಿಪ್ರಾಯಗಳನ್ನು ಕೊಡುವುದು ಅದು ಬೇರೆ ವಿಷಯ. ಆದರೆ ವಾಸ್ತವಿಕತೆಯ ಇನ್ನೊಂದು ಮುಖ ಏನಿದೆ ಎನ್ನುವುದರ ಬಗ್ಗೆ ನಿಮ್ಮ ಗಮನ ಸೆಳೆಯುವ ಪ್ರಯತ್ನ ಮಾಡಿದ್ದೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭೆಯಿಂದ ಆಯ್ಕೆಯಾದವರು):**-ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಭೂ ಸುಧಾರಣೆಗಳ (ಎರಡನೆ ತಿದ್ದುಪಡಿ)ವಿಧೇಯಕ, 2020 ಇದರಲ್ಲಿ, ಅಧಿನಿಯಮ 1961ಕ್ಕೆ ತಿದ್ದುಪಡಿ ತರುವುದಕ್ಕೆ ಹೊರಟಿದ್ದಾರೆ. ಮಾನ್ಯ ಸಭಾಪತಿಯವರೇ, ಹೋದ ಅಧಿವೇಶನದಲ್ಲಿ ಈ ಒಂದು ವಿಧೇಯಕ ಬಂದಾಗ ಸುದೀರ್ಘವಾಗಿ ಚರ್ಚೆಯಾಗಿತ್ತು. ಅದಾದ ನಂತರ ಇನ್ನೂ ಮಾತನಾಡುವವರು ಬಹಳಷ್ಟು ಜನ ಇದ್ದರು. ಆಗ ಸದನವನ್ನು ಮುಂದೂಡಲಾಗಿತ್ತು.

**ಸಭಾಪತಿಯವರು:**- ಕಳೆದ ಸಲ ಸುದೀರ್ಘವಾದ ಚರ್ಚೆ ಏನೂ ಆಗಿಲ್ಲ. ಮೂರು ಜನ ಸದಸ್ಯರು ಮಾತ್ರ ಮಾತನಾಡಿದ್ದರು.

**ಶ್ರೀ ಹೆಚ್.ಎಂ.ರಮೇಶಗೌಡ:**-ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಕಲಂ 79 (ಎ) ಮತ್ತು 79 (ಬಿ) ಏನಿದೆ ಇದು ಬೇರೆ ರಾಜ್ಯಗಳಲ್ಲಿ ಇರಲಿಲ್ಲ. ನಮ್ಮ ರಾಜ್ಯದಲ್ಲಿ ಕಲಂ 79 (ಎ) ಮತ್ತು 79 (ಬಿ) ಏನಿತ್ತೋ ಅದರ ಬಗ್ಗೆ ನಾವು ಸಾಕಷ್ಟು ಬಾರೀ ಹಿಂದೆ ಇದ್ದ ಸಚಿವರುಗಳಿಗೆ ಮತ್ತು ಹಿಂದಿನ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಇದನ್ನು ತೆಗೆದು ಹಾಕಬೇಕು ಎಂದು ತಿಳಿಸಿದ್ದೆವು. ಕಲಂ 79 (ಎ) ಮತ್ತು 79 (ಬಿ) ಇವುಗಳನ್ನು ತೆಗೆದು ಹಾಕಬೇಕೆಂದು ಒತ್ತಾಯ ಮಾಡಿದ್ದೆವು. Village Accountant, ತಹಸೀಲ್ದಾರರು ಮತ್ತು Assistant Commissioner ಗಳು ಇದನ್ನು ಹಣ ಮಾಡಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಿದ್ದರು. ಇದರಿಂದ ಯಾರಿಗೂ ಸಹ ಅನುಕೂಲ ಆಗಿರಲಿಲ್ಲ. ಇದರಿಂದ ಕೇವಲ ಅಧಿಕಾರಿಗಳಿಗೆ ಮಾತ್ರ ಅನುಕೂಲವಾಗುತ್ತಿತ್ತು. ರಾಜ್ಯದ ಯಾರೊಬ್ಬರಿಗೂ ಅನುಕೂಲವಾಗಿರಲಿಲ್ಲ; ಅನಾನುಕೂಲವೇ ಆಗಿತ್ತು. ಇವತ್ತೇನು ಕಲಂ 79 (ಎ) ಮತ್ತು 79 (ಬಿ) ಯನ್ನು ತೆಗೆದು ಹಾಕಿದ್ದಾರೋ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೆಯೇ, ನಾನು ಇನ್ನೊಂದು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇಂತಹ ಒಂದು ದೊಡ್ಡ ವಿಧೇಯಕವನ್ನು ತರಬೇಕಾದರೆ ಸುದೀರ್ಘವಾಗಿ ಚರ್ಚೆ ಆಗಬೇಕಾಗುತ್ತದೆ. ಸುಗ್ರೀವಾಜ್ಞೆ ಮೂಲಕ ಕಾಯಿದೆಗಳನ್ನು ತೆಗೆದುಕೊಂಡು ಬಂದರೆ, ರೈತರಿರಬಹುದು ಅಥವಾ ನಾಡಿನ ಜನ ಇರಬಹುದು, ಅವರಲ್ಲಿ ಸಹಜವಾಗಿ ತಪ್ಪು ಕಲ್ಪನೆ ಬರುತ್ತದೆ. ಈಗಾಗಲೇ ನವದೆಹಲಿಯಲ್ಲಿ ಬಹಳಷ್ಟು ಜನ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಮೊನ್ನೆ ಇಟಗಿಯವರು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಬೇಕಾದರೆ, ಆಂಧ್ರದ ಒಂದು ಕಂಪನಿಯವರು ನಮ್ಮ ರಾಜ್ಯದ ಸುಮಾರು 500 ಎಕರೆಗೂ ಹೆಚ್ಚು ಭೂಮಿಯನ್ನು ಖರೀದಿ ಮಾಡಿದ್ದಾರೆ ಎಂದು ಹೇಳಿದರು. ಕಲಂ 79 (ಎ) ಮತ್ತು 79 (ಬಿ) ಈ ಕಾಯಿದೆ ಇದ್ದಂಥ ಸಂದರ್ಭದಲ್ಲೂ, ಯಾರೋ ಒಬ್ಬರು ಬಂದು 500 ಎಕರೆ ಜಾಗವನ್ನು ಖರೀದಿ ಮಾಡಿದರು ಎಂದರೆ ಅವರು ಯಾವರೀತಿ ಖರೀದಿ ಮಾಡಿರಬಹುದು? ಹಾಗಾದರೆ ಆ ಕಾಯಿದೆಗೆ ಬೆಲೆಯೇ ಇರಲಿಲ್ಲವೇ? ಆ ಕಾಯಿದೆ ಇದ್ದರೂ, ಹಲ್ಲು ಕಿತ್ತ ಹಾವಿನಂತೆ ಇತ್ತೇ? ಯಾರು ಪ್ರಭಾವಿಗಳು ಇದ್ದರೋ ಅವರಿಗೆ, ಈ ಕಾಯಿದೆ ಇದ್ದರೂ ನೂರಾರು ಎಕರೆ, ಸಾವಿರಾರು ಎಕರೆ ಜಾಗವನ್ನು ತೆಗೆದುಕೊಂಡರೂ ಸದರಿ ಕಾಯಿದೆ ಅಪ್ಲೆ ಆಗುತ್ತಿರಲಿಲ್ಲವೇ? ಇಂತಹ ಪ್ರಕರಣಗಳನ್ನು ನಾವು ನೋಡಿದ್ದೇವೆ. ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಸುಗ್ರೀವಾಜ್ಞೆ ಮೂಲಕ APMC (Agricultural Produce Market Committee) Act, Essential Commodities (Amendment) Act, Contract Farming Act ಕಾಯಿದೆಗಳನ್ನು ತಂದಿದ್ದಾರೆ. ಸಂಸತ್ತಿನಲ್ಲಿ ಚರ್ಚೆಯಾಗದೇ ಕಾಯಿದೆಗಳನ್ನು ತಂದಾಗ ಅದು ಎಲ್ಲೋ ಒಂದು ಕಡೆ ರೈತರಿಗೆ ಇದರಿಂದ ಅನ್ಯಾಯವಾಗುತ್ತದೆ, ಮೋಸ ಆಗುತ್ತದೆ ಎಂದು ಭಾವಿಸಿ ಲಕ್ಷಾಂತರ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಸದನದಲ್ಲಿರುವ ನಾವೆಲ್ಲರೂ ರೈತ ಕುಟುಂಬದಿಂದಲೇ ಬಂದಿದ್ದೇವೆ. ಇವತ್ತಿನ ದಿವಸ ಇಡೀ ದೇಶದ ರೈತರ ಪರವಾಗಿ ಏನು ರಾಜ್ಯದಲ್ಲಿ ಪ್ರತಿಭಟನೆ ನಡೆಯುತ್ತಿದ್ದೇಯೋ ಅದಕ್ಕೆ ನಮ್ಮ ಬೆಂಬಲವನ್ನು ಸೂಚಿಸಿದ್ದೇವೆ. ಮಾನ್ಯ ಸಚಿವರಲ್ಲಿ ನಾನು ಇನ್ನೊಂದು ಛಿಟಚಿಡುಜಿಚಿಛಿಚಿಣುಣಟಿ ಬಯಸುತ್ತೇನೆ. ಒಂದು ಕುಟುಂಬಕ್ಕೆ 54 ಎಕರೆ ಎಂದು ತಂದಿದ್ದೀರಿ. ಅದೇರೀತಿ ಒಂದು ಕಂಪನಿಗೆ 40 ಯುನಿಟ್ಸ್ ಎಂದು ತಂದಿದ್ದೀರಿ. ಆದರೆ, ಒಬ್ಬರು ಎಷ್ಟು ಕಂಪನಿ ಬೇಕಾದರೂ ಮಾಡಬಹುದೇ? ಆ ಕಂಪನಿಯಲ್ಲಿ ಒಬ್ಬರಿಗೆ 40 ಯುನಿಟ್‌ಗಳೆಂದು ಮಾಡಿದ್ದಾರೆ. ಒಬ್ಬರು ಒಂದೇ ಹೆಸರಿನಲ್ಲಿ ನಾಲ್ಕೈದು ಕಂಪನಿಗಳನ್ನು ಮಾಡುತ್ತಾರೆ; ಅವರು ಎಷ್ಟು ತೆಗೆದುಕೊಳ್ಳಬಹುದು? 40 ಯುನಿಟ್ ಎಂದರೆ 208 ಎಕರೆ ಆಗುತ್ತದೆ. ಒಬ್ಬ ವ್ಯಕ್ತಿ ನಾಲ್ಕೈದು ಕಂಪನಿಗಳನ್ನು ಮಾಡಬಹುದೇ? ಇದರ ಬಗ್ಗೆ ಯಾವುದೂ clarification ಇಲ್ಲ. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು. ಮಾನ್ಯ ಸಭಾಪತಿಯವರೇ, ದಿಕ್ಕಿಲ್ಲದವರು ಅಥವಾ ಅನಾಥರಿಗೆ ಒಂದಷ್ಟು ಜಮೀನಿದ್ದು, ಅವರನ್ನು ಯಾರೋ ಒಬ್ಬರು misguide ಮಾಡಿ, ಮಠ–ಮಾನ್ಯಗಳಿಗೆ ಜಾಗ ಕೊಡಬೇಕೆಂದು ಹೇಳುವಂತಹ ಪ್ರಸಂಗ ಬರಬಾರದು. ಇಂಥದ್ದಕ್ಕೆ ಯಾವರೀತಿ ಕಡಿವಾಣ ಹಾಕುತ್ತೀರಿ ಎಂಬ ಬಗ್ಗೆ ಉತ್ತರ ಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಈ ಕಾಯಿದೆಯನ್ನು ಅನುಮೋದಿಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವಾಗಿ ಮಾತನಾಡುವುದಕ್ಕೆ ಮೊದಲು, ನಿನ್ನೆ ಮಾನ್ಯ ಸಭಾನಾಯಕರು ಹೇಳಿದ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ನೀಡಬಯಸುತ್ತೇನೆ. ಹೋದ ಸಲ, ಭೂ ಸುಧಾರಣೆ ವಿಧೇಯಕನ್ನು ನಾವೇ ಕೆಡವಿದೆವು ಎನ್ನುವ ಮಟ್ಟದಲ್ಲಿ ನಿನ್ನೆ ಭಾಷಣ ಮಾಡಿದರು. ನಾವು ಆವತ್ತು ಸುಮಾರು ರಾತ್ರಿ 12 ಗಂಟೆಯಾಗಿದ್ದರೂ ನಿಶಬ್ದವಾಗಿ ಕೇಳುತ್ತಿದ್ದೆವು. ಮಾನ್ಯ ಮರಿತಿಬ್ಬೇಗೌಡರು ಮಾತನಾಡುವಾಗ ಆ ಕಡೆಯಿಂದ ಗದ್ದಲವಾದ ಕಾರಣ ತಾವು ಅನಿರ್ದಿಷ್ಟಾವಧಿವರೆಗೆ ಸದನವನ್ನು ಮುಂದೂಡಬೇಕಾಯಿತು.

ನಾವು ವಿದ್ಯಾರ್ಥಿಗಳಿದ್ದಾಗ ವಿಧಾನ ಪರಿಷತ್ತನ್ನು ನೋಡುವುದಕ್ಕೆ ಬರುತ್ತಿದ್ದೆವು. ಮಾನ್ಯ ಎ.ಕೆ.ಸುಬ್ಬಯ್ಯ, ಮಾನ್ಯ ಗುಂಡಯ್ಯ ಶೆಟ್ಟಿ ಇವರೆಲ್ಲ ಬಿಜೆಪಿಯಲ್ಲಿ ಇದ್ದವರು. ಇವರ ಭಾಷಣಗಳನ್ನು ಕೇಳುವುದಕ್ಕೆ ಬರುತ್ತಿದ್ದೆವು. ಆಗ ಒಂದು ಸಂಪ್ರದಾಯ ಇತ್ತು. ಸಭಾಪತಿಗಳು, ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಮುಖ್ಯಮಂತ್ರಿಗಳು ಮಾತನಾಡುವಾಗ ಬೇರೆಯವರು ಮಧ್ಯದಲ್ಲಿ ಮಾತನಾಡುವ ಹಾಗಿರಲಿಲ್ಲವಾದ್ದರಿಂದ ಎಲ್ಲರೂ ನಿಶಬ್ದವಾಗಿ ಕೇಳುತ್ತಿದ್ದರು. ಈಗ ಆ ಪರಂಪರೆ ಇಲ್ಲ. ಸದನದ ದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಆ ಪರಂಪರೆಯನ್ನು ತರಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಭೂಸುಧಾರಣೆ ಕಾನೂನು ಬಂದಮೇಲೂ ರೈತರು ನೆಮ್ಮದಿಯಾಗಿ ಇರಲಿಲ್ಲ. ಲಕ್ಷಾಂತರ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ ಸಹ ಇರುವುದರಲ್ಲಿ ಅವರು ನೆಮ್ಮದಿ ಜೀವನ ನಡೆಸಿಕೊಂಡು ಹೋಗುತ್ತಿದ್ದರು. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೃಷಿ ಕಾನೂನಿನಿಂದ ಅವರ ನೆಮ್ಮದಿಗೆ ಕೊಳ್ಳಿ ಇಟ್ಟ ಹಾಗಾಗಿದೆ. ತುತ್ತು ಕೊಟ್ಟ ತಾಯಿಗೆ, ಅನ್ನ ಕೊಟ್ಟ ರೈತನಿಗೆ ಯಾರೂ ಸಹ ನೋಯಿಸಬಾರದು ಎನ್ನುವ ಸಂಪ್ರದಾಯವನ್ನು ನಾವು ಮುರಿದಿದ್ದೇವೆ. ಮಾನ್ಯ ಮರಿತಿಬ್ಬೇಗೌಡರು ಮಾತನಾಡುತ್ತಾ ಹೇಳಿದ ಹಾಗೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ರೂಲ್ಸ್ ಪುಸ್ತಕವನ್ನು ಮತ್ತು ತಾವು ಕೊಟ್ಟಿರುವ ಟಿಪ್ಪಣಿಯಲ್ಲೂ ಸಹ ನೋಡಿದ ಹಾಗೆ, ಕೋರ್ಟ್‌ನಲ್ಲಿ ಮಧ್ಯಂತರ ಆದೇಶವಿದ್ದರೆ, ... ಪಾರ್ಲಿಮೆಂಟ್‌ನಲ್ಲಾಗಿದ್ದರೆ, ಇಂತಹ ಪ್ರಕರಣಗಳು ಕೋರ್ಟ್‌ನಲ್ಲಿದ್ದಾಗ ಅದನ್ನು sub-judice ಎಂದು ನಾವು ಚರ್ಚೆ ಮಾಡುತ್ತಿರಲಿಲ್ಲ. ನಮ್ಮ ರೂಲ್ಸ್ 72 ಮತ್ತು 73ರನ್ನು ನೋಡಿದಾಗ, ಇಂತಹ ವಿಚಾರವಾಗಿ ಏನೂ ಬಂದಿಲ್ಲ. ಮಧ್ಯಂತರ ಆದೇಶವಿದ್ದಾಗ ಕೋರ್ಟ್‌ನಿಂದ ಅಂತಿಮ ತೀರ್ಪು ಬರುವವರೆಗೂ ನಾವು

ಕಾಯಬಹುದಿತ್ತು. Ordinance overrules this. ಆದರೆ ನಾಳೆ ಯಾರಾದರೂ ಹೈಕೋರ್ಟ್‌ಗೆ ಹೋದಾಗ, ಪುನಃ ಇದೇ ವಿಚಾರವಾಗಿ ಏನು ಮಾಡಬೇಕು ಎನ್ನುವ ಪ್ರಶ್ನೆ ಬರುತ್ತದೆ.

(ಮುಂದು)

(1004) 8–12–2020 12.40 ಡಿಎಸ್–ಎಕೆ

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಮೂಲಭೂತ ಪ್ರಶ್ನೆ ಇದೆ. ‘If any matter is pending before any court or a quasi-judicial authority, such matter cannot be taken up in this House and the Chairman of the House should not allow for discussion’ ಎಂದು ಇದೆ ಎಂದು ಅವರು ಹೇಳುತ್ತಿದ್ದಾರೆ. ಅವರು ಮೂಲಭೂತ ಪ್ರಶ್ನೆಯನ್ನೇ ಮಾಡಿದ್ದಾರೆ. ನ್ಯಾಯಾಲಯದಲ್ಲಿ ಪೆಂಡಿಂಗ್ ಇದ್ದಾಗ ಈ ಕಾಯ್ದೆಯನ್ನು ಮಾಡುವುದಕ್ಕೆ ಅಧಿಕಾರ ಏನಿದೆ? ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದಾಗ, ಇದನ್ನು ತರುವಂತಹ ಅವಶ್ಯಕತೆ ಏನಿದೆ? ಅದನ್ನು ಇಲ್ಲಿ ಹೇಳುವವರು ಯಾರು? ಮಾನ್ಯ ಸಭಾನಾಯಕರೇ, ಇದರ ಬಗ್ಗೆ ತಾವು ಏನು ಹೇಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಉತ್ತರ ಕೊಡುವಾಗ ಅದರ ಬಗ್ಗೆ ಹೇಳುತ್ತಾರೆ.

**Sri S.R. PATIL:** This is a very valid point. He has questioned the basic norm of this very enactment. ಅವರು ಏನು ಹೇಳುತ್ತಾರೆಂದರೆ, ಈ ವಿಷಯವೇ ಉಚ್ಚ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಮಾನ್ಯ ಮರಿತಿಬ್ಬೇಗೌಡರು ಸಭಾಪೀಠವನ್ನಲಂಕರಿಸಿದರು)**

ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ರಾಜ್ಯಸಭೆಯಲ್ಲಿ ಸಾಕಷ್ಟು ಅನುಭವ ಹೊಂದಿರುವಂಥವರು, ಈ ದೇಶದ ಅತ್ಯುನ್ನತವಾದಂತಹ ಶಕ್ತಿಸ್ಥಳದಲ್ಲಿ ರಾಜ್ಯಸಭೆಯಲ್ಲಿ ಬಹಳಷ್ಟು ಪ್ರೊಸೀಡಿಂಗ್ಸ್‌ನಲ್ಲಿ ಭಾಗವಹಿಸಿ ರಾಷ್ಟ್ರದ ಉದ್ದಗಲಕ್ಕೂ ನಾವೆಲ್ಲರೂ ಅವರ ಮಾತುಗಳನ್ನು ಕೇಳಿದ್ದೇವೆ. ನಾವು ಮಾಡಿಕೊಂಡಿರುವ ನಿಯಮದಲ್ಲೇ ಇದೆ. ಅವರು ಏನು ಹೇಳುತ್ತಾರೆಂದರೆ, ‘if any matter is pending before a court or a quasi-judicial authority, such matter should not be taken up for

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

discussion'. ಮಾನ್ಯ ಸಭಾಪತಿಯವರೇ, ಅದಕ್ಕೆ ತಾವು ಅವಕಾಶವನ್ನೇ ಕೊಡುವುದಕ್ಕೆ ಬರುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಅದರ ಬಗ್ಗೆ ಈಗ ಸರ್ಕಾರ ಹೇಳಬೇಕಲ್ಲವೇ?

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ಮೂಲಭೂತವಾಗಿ ಅದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಡುತ್ತಾರೆ. ಇವತ್ತು ನ್ಯಾಯಾಲಯದಲ್ಲಿರುವ ವಿಷಯದ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಹೋಗಿಲ್ಲ. Subject matter ಏನು, ಯಾರು ಚಾಲೆಂಜ್ ಮಾಡಿದರು, ಯಾವ ವಿಷಯದ ಮೇಲೆ ಚಾಲೆಂಜ್ ಮಾಡಿದರು, ಮಧ್ಯದಲ್ಲಿ ಮಧ್ಯಂತರ ಆದೇಶ ಕೂಡ ಇದೆ. ಮಧ್ಯಂತರ ಆದೇಶವಾದ ಮೇಲೂ ಈ ವಿಧೇಯಕವನ್ನು ತರುವಂತಹ ಕೆಲಸ ಆಗಿದೆ. ಏಕೆಂದರೆ, ಆ ಮಧ್ಯಂತರ ಆದೇಶದ ಮೇಲೆಯೇ depend ಆಗಿರುವಂಥದ್ದು. ಅದರ ಬಗ್ಗೆಯೂ ಸಾಕಷ್ಟು ಸದಸ್ಯರು ಚರ್ಚೆ ಮಾಡಿದ್ದಾರೆ. ಮಧ್ಯಂತರ ಆದೇಶವಾಗಿದೆ, ಏನು observation ಆಗಿದೆ, ಅದರ ಮೇಲೆ ನೀವು ಏಕೆ ಮಾಡಿದಿರಿ, ಒಂದು ಅಂತಿಮ ಆದೇಶವಾಗಬೇಕಾಗಿತ್ತು ಎನ್ನುವುದರ ಬಗ್ಗೆಯೂ ಚರ್ಚೆಯಾಯಿತು. ಅದಕ್ಕೆ ನಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಹೇಳುತ್ತೇನೆಂದರೆ, ನಿಮ್ಮದೇನು contention ಇದೆ, ನಿಮ್ಮದೇನು ವಾದ ಇದೆ ಅವೆಲ್ಲವನ್ನು ಹೇಳಿ. ಮಾನ್ಯ ಕಂದಾಯ ಮಂತ್ರಿಗಳು ಪ್ರತಿಯೊಂದು ಪಾಯಿಂಟ್‌ಗೂ, ನೀವೇನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆಲ್ಲಾ ಉತ್ತರ ಕೊಡುತ್ತಾರೆ. ಅದಕ್ಕೆ ಸಮಾಧಾನವಾಗದಿದ್ದಾಗ we will decide the matter. ಇದು ಈಗಿರುವಂತಹ ಪರಿಸ್ಥಿತಿ. ಈಗ ಅದು sub-judice ಆಗುತ್ತದೆಂದರೆ, ನೀವು ವಿಶೇಷವಾಗಿ ತರಬೇಕಾಗಿತ್ತಲ್ಲವೇ? ಈಗ ವಿಧಾನಸಭೆಯಲ್ಲಿ ಚರ್ಚೆಯಾಗಿ ಪಾಸ್ ಆದ ಮೇಲೆ ಈಗ ಈ ವಿಧೇಯಕ ಇಲ್ಲಿಗೆ ಬಂದಿದೆ. ಹಾಗಾಗಿ ವಿಧಾನಸಭೆಯಲ್ಲಿ ಯಾರು ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಇಲ್ಲಿ ಪ್ರಸ್ತಾಪ ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಅದೇ ವಿಷಯದ ಮೇಲೆ ನಾವು ಇಲ್ಲಿ ವಿಧೇಯಕಗಳನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ ಎನ್ನುವಂಥದ್ದಲ್ಲ. ಆ ಪಾಯಿಂಟ್‌ಗೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನಾನು ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುವುದೇನೆಂದರೆ, ಈಗ ನೀವು ಮಾತನಾಡುವುದಕ್ಕೆ ಅವಕಾಶ ಇದೆ, ಮಾತನಾಡಿ. ನೀವು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೀರಿ, ನಮ್ಮ ಕಡೆಯಿಂದಲೂ ನಾವು ಮಧ್ಯ ಪ್ರವೇಶಿಸುವುದಿಲ್ಲವೆಂದು ಹೇಳಿದ್ದೇವೆ. ನೀವೇನು ಹೇಳುತ್ತೀರೋ ಹೇಳಿ. ಆದರೆ, ಪ್ರತಿಯೊಂದಕ್ಕೂ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ. ದಯವಿಟ್ಟು ಅಲ್ಲಿಯವರೆವಿಗೂ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಅವಕಾಶ ಕೊಡಬೇಡಿ ಎಂದು ಹೇಳಲಿಲ್ಲ. He has raised a very valid point. ಅವರು ಈ ರಾಜ್ಯದ ಚುಕ್ಕಾಣಿ ಹಿಡಿದು, ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂಥವರು, ಅವರ ಬಗ್ಗೆ ನಮಗೆ ಗೌರವವಿದೆ. ಅವರು ನಮ್ಮ ಭಾಗದಿಂದ ಬಂದಂಥವರು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆಯೂ ನಮಗೆ ಗೌರವವಿದೆ. ಆ ಪ್ರಶ್ನೆ ಇಲ್ಲ. ಅವರು ಕೂಡ ಬಾಗಲಕೋಟೆ ಜಿಲ್ಲೆಯಿಂದ ಬಂದಿರುವಂಥವರು. ನಾವು, ಅವರು ಅಲ್ಲಿಂದ ಬಂದಿರುವಂಥವರು. ಇವತ್ತು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ. ಹಕ್ಕು ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ನಿಮ್ಮ ಗೃಹ ಮಂತ್ರಿಗಳು ಕೂಡ ನಮ್ಮ ಜಿಲ್ಲೆಯವರು.

**ಶ್ರೀ ಜಗದೀಶ್ ಶೆಟ್ಟರ್:-** ನೀವು ವಿಷಯ ಪ್ರಸ್ತಾಪ ಮಾಡಿ, ಅದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಅವರೇನು ಹೇಳಿದ್ದಾರೆ ಅಂತಹ ಪಾಯಿಂಟ್ಸ್ ಬಂದಾಗ with due respect to your Chair...

**ಶ್ರೀ ಜಗದೀಶ್ ಶೆಟ್ಟರ್:-** ನಿಮಗೆ ಸಮಾಧಾನಕರವಾದ ರೀತಿಯಲ್ಲಿ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಅದರ ಬಗ್ಗೆ ಚರ್ಚೆಯೇ ಮಾಡಬಾರದು ಎಂದು ಇದೆ.

**ಶ್ರೀ ಜಗದೀಶ್ ಶೆಟ್ಟರ್:-** ಚರ್ಚೆಯೇ ಮಾಡಬಾರದು ಎಂದೇನೂ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಕಂದಾಯ ಸಚಿವರೇ, ಮಾನ್ಯ ಹರಿಪ್ರಸಾದ್‌ರವರು ಏನು ಹೇಳಿದ್ದಾರೆಂದರೆ, 'the matter is pending before the court. When the matter is pending before the court or any quasi-judicial authority, such matter should not be taken up for discussion and the Hon.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Chairman of this House should not allow for discussion' ಎಂದು ನಮ್ಮ ನಿಯಮದಲ್ಲಿದೆ.

**ಶ್ರೀ ಜಗದೀಶ್ ಶೆಟ್ಟರ್:-** ಯಾವ ರೀತಿ contradiction ಆಗುತ್ತದೆ ಎಂಬುದರ ಬಗ್ಗೆ ವಿವರವಾಗಿ ಹೇಳಿ. ಆಮೇಲೆ ನಮ್ಮ ಸರ್ಕಾರದ ಕಡೆಯಿಂದ ಏನು ಉತ್ತರ ಹೇಳಬೇಕೋ ಅದನ್ನು ಹೇಳುತ್ತೇವೆ. Counter ಆಗಲಿ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಹಿರಿಯ ಕಾನೂನು ತಜ್ಞರ ಜೊತೆ, ನಮ್ಮ ಅಡ್ವೊಕೇಟ್ ಜನರಲ್ ರವರ ಜೊತೆ ಚರ್ಚೆ ಮಾಡಿ ತಂದಿದ್ದೇವೆ. ಯಾವುದೇ ರೀತಿಯ ಸಮಸ್ಯೆ ಬರುವುದಿಲ್ಲ. ಅದಕ್ಕೇನಾದರೂ ವಿರೋಧ ಮಾಡುವುದಿದ್ದರೆ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. ಎಷ್ಟು ಬೇಕಾದರೂ ವಿರೋಧವಾಗಿ ಹೇಳಿ. ಅದನ್ನು ಕೇಳುವುದಕ್ಕೆ ನಾವು ತಯಾರಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಅಡ್ವೊಕೇಟ್ ಜನರಲ್ ರವರು ಇದ್ದಾರೆ, ಕಾನೂನು ತಜ್ಞರು ಇದ್ದಾರೆ.

**ಶ್ರೀ ಆರ್.ಅಶೋಕ್:-** ನಾವು ಅವರೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾನೂನು ಇಲಾಖೆ ಇದೆ, ಕಾನೂನು ಕಾರ್ಯದರ್ಶಿಯವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರಲ್ಲಾ, ಅವರು ಒಂದು valid point raise ಮಾಡಿದಾಗ ಉಳಿದಿರುವುದಕ್ಕೆ ಉತ್ತರ ಕೊಡಿ ಎಂದು ನಾನು ಹೇಳುವುದಿಲ್ಲ. ಅವರು ಉತ್ತರ ಕೊಡುವಾಗ ಹೇಳಲಿ. This is a very valid point. ಇಂತಹ ಸಂದರ್ಭದಲ್ಲಿ ಚರ್ಚೆಗೂ ಕೂಡ ಅವಕಾಶ ಕೊಡಬಾರದೆನ್ನುವ ಮಹತ್ವದ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಚರ್ಚೆ ಮಾಡಿರಬಹುದು, ಅದರ ಬಗ್ಗೆ ನಮಗೆ ಗೊತ್ತಿಲ್ಲ. It will be a discussion between you and the Law Department. ಏನು ಚರ್ಚೆಯಾಯಿತು, ಅದರ outcome ಏನಾಯಿತು, ಏಕೆಂದರೆ ಚರ್ಚೆ ಮಾಡುವುದಕ್ಕೆ ತೊಂದರೆಯಾಗುವಂತಹ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಪತಿಯವರು ಕೂಡ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ನ್ಯಾಯಾಲಯದಲ್ಲಿ ಯಾವುದೇ ವಿಷಯ ಪೆಂಡಿಂಗ್ ಇದ್ದಾಗ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಪತಿಯವರು ಅವಕಾಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡಬಾರದು ಎಂದು ಇದೆ. ನಾವು ಮಾಡಿಕೊಂಡಿರುವಂತಹ ನಿಯಮದಲ್ಲಿದೆ. ಉಳಿದಿರುವುದಕ್ಕೆ ಅವರೇನು ಉತ್ತರ ಕೊಡುತ್ತಾರೆಯೋ ಕೊಡಲಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇವೆಲ್ಲಾ ಈ ರೀತಿ sub-judice ಆಗುತ್ತದೆ ಎನ್ನುವುದನ್ನು bill introduction ಮಾಡುವಾಗಲೇ ಆಕ್ಷೇಪ ಮಾಡಬೇಕಾಗಿತ್ತು. Bill introduction ಆಗಿ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಪತಿಯವರು ಅವಕಾಶ ಕೊಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಆಗ ಮಾಡಲಿಲ್ಲವೆಂದರೆ ಈಗ ಮಾಡಬಾರದು ಎಂದೇನೂ ಇಲ್ಲ.

**Sri S.R. PATIL:** We can raise at any time.

**ಶ್ರೀ ಜಗದೀಶ್ ಶೆಟ್ಟರ್:-** ನಿಮಗೆ ಆ ರೀತಿ ಇದ್ದರೆ ಮೊದಲೇ ಪ್ರಸ್ತಾಪ ಮಾಡಬೇಕಾಗಿತ್ತು. Bill introduction ಗೆ ಅವಕಾಶ ಕೊಟ್ಟಿದ್ದಾರೆ, ಚರ್ಚೆ ಮುಂದುವರೆಸಿದ್ದಾರೆ. ಈಗ ನಿಮ್ಮ ವಾದವನ್ನು ಹೇಳಿ, ನಮ್ಮ ಉತ್ತರವನ್ನು ಹೇಳುತ್ತೇವೆ. Sub-judice ಆಗುವುದು ಯಾವಾಗ ಎಂದರೆ, 'Point of Order' ಎಂದು ಹೇಳುತ್ತಿರುತ್ತಾರೆ, ನೀವು introduction ಮಾಡುವಾಗ Point of Order ನ್ನು ಎತ್ತಬೇಕಾಗಿತ್ತು.

**ಶ್ರೀ ಎಂ.ನಾರಾಯಣಸ್ವಾಮಿ:-** ಆಗ ಹೇಳಲಿಲ್ಲ, ಈಗ ಹೇಳುತ್ತೇವೆ.

**Sri S.R. PATIL:** It is a valid point. ಪ್ರಾರಂಭದಲ್ಲಿ ಮಾಡಲಿಲ್ಲವೆಂದರೆ, ಮಧ್ಯದಲ್ಲಿ, ಕೊನೆಯಲ್ಲಿ ಮಾಡಬಾರದು ಎಂದೇನೂ ಇಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ. ನಮ್ಮ ಸರ್ಕಾರಕ್ಕೆ ಕಾನೂನು ಹೇಳುವಂಥವರು ಅಡ್ವೊಕೇಟ್ ಜನರಲ್. ಅವರು ಒಪ್ಪಿಗೆ ಕೊಟ್ಟ ಮೇಲೆ, ಸರ್ಕಾರ ಅವರ ಅಭಿಪ್ರಾಯದ ಮೇಲೆಯೇ ನಡೆಯುವಂಥದ್ದು. ಅವರು ಕೋರ್ಟ್‌ನಲ್ಲಿ ಏನು ಹೇಳುತ್ತಾರೆಯೋ ಅದನ್ನು ಮಾಡುತ್ತಾರೆ. ವಿಧಾನಸಭೆಯಲ್ಲಿ ಈಗಾಗಲೇ ಇದರ ಬಗ್ಗೆ ಎರಡು ದಿನ ಸುದೀರ್ಘವಾಗಿ ಚರ್ಚೆಯಾಗಿದೆ. ಇದು ಅಂತಿಮ. ಮೊದಲು ವಿಧೇಯಕವನ್ನು ತೆಗೆದುಕೊಂಡಾಗ ರಾತ್ರಿ ಒಂದೂವರೆ ಗಂಟೆಯಾದ ಮೇಲೆ ಸಡನ್ ಆಗಿ ಮುಂದಕ್ಕೆ ಹೋಯಿತು. ನಿನ್ನೆ ವಿಧೇಯಕ ಚರ್ಚೆಗೆ ಬಂತು ಮತ್ತೆ ಅವರೆಲ್ಲಾ ಹೋಗಿಬಿಟ್ಟರು.

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಅದೇ ಪರಿಪಾಠ ಬೇಡ. ವಿರೋಧ ಮಾಡುವುದಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ, ವಿರೋಧ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಸದನ ಮುಂದೂಡಿದ ಮೇಲೆ ನಾವು ಹೋಗಿದ್ದೇವೆ. ಮಧ್ಯದಲ್ಲಿ ನಾವು ಹೋಗಿಲ್ಲ. ಸದನ ಮುಂದೂಡಿದ ಮೇಲೆ ನಾವು ಇಲ್ಲಿಯೇ ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಕಂದಾಯ ಸಚಿವರೇ ತಾವು ಹೊರಗಡೆ ಇದ್ದಿರಿ. ಕಳೆದ ಬಾರಿ 12 ಗಂಟೆಗೆ ಸದನವನ್ನು ಮುಂದೂಡಿ ಹೊರಟು ಹೋದಿರಿ ಎಂದು ಹೇಳಿದಿರಿ. ನಾವು ಹೋಗಲಿಲ್ಲ. ಮಾನ್ಯ ಮರಿತಿಬ್ಬೇಗೌಡರು ಮಾತನಾಡುವಾಗ ನಿಮ್ಮ ಕಡೆಯವರು ಗಲಾಟೆ ಮಾಡಿದ್ದಕ್ಕೆ ಸದನವನ್ನು ಮುಂದೂಡಲಾಯಿತು.

**ಶ್ರೀ ಎಂ.ನಾರಾಯಣಸ್ವಾಮಿ:-** ರಾತ್ರಿ ಒಂದು ಗಂಟೆಯಾದ ಸಮಯದಲ್ಲಿ ನಿಮ್ಮ ಸದಸ್ಯರುಗಳು 26ನೇ ತಾರೀಖಿನವರೆಗೆ ಸದನ ನಡೆಯಬೇಕಾಗಿದೆ, 27ನೇ ತಾರೀಖು ಬಂದರೂ ಇನ್ನು ಸದನವನ್ನು ನಡೆಸುತ್ತಿದ್ದೀರಿ ಎಂದು ನಿಮ್ಮ ಸದಸ್ಯರು ಹೇಳಿದ್ದಕ್ಕೆ ಸದನದ ಕಲಾಪ ಮುಂದಕ್ಕೆ ಹೋಗಿರುವಂಥದ್ದು. ನಾವು ಮುಂದೂಡಿರುವಂಥದ್ದಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕಾನೂನಿದ್ದಲ್ಲ. Advocate General ಮತ್ತು ಅವರೆಲ್ಲರೂ ಸಾಕಷ್ಟು ಮೇಧಾವಿಗಳಾಗಿದ್ದಾರೆ. ನಾನು ಅದರ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಈ ಸದನದ ವ್ಯವಸ್ಥೆಯನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಕಾನೂನು ಮಾಡತಕ್ಕಂಥವರು We are law makers. ಅವರು ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದಂಥವರು. ಈ ರೂಲ್ ಪುಸ್ತಕದಲ್ಲಿ it is silent. ನಿಯಮ 72-73 ಅನ್ನು ನೋಡಿದಾಗ it is silent. ಅದಕ್ಕೋಸ್ಕರ ಸದನದಲ್ಲೇನಾದರೂ ಪರಂಪರೆ ಇದೆಯೇ ಎಂದು ಕೇಳುವುದಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆಯೇ ಹೊರತು, ಅವರು ಅಡ್ವೋಕೇಟ್ ಜನರಲ್ ಅಥವಾ ಕಾನೂನು ಮಾಡತಕ್ಕಂಥ ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಭೂ ಸುಧಾರಣಾ ಕಾನೂನನ್ನು ಅವರು ತಂದಿದ್ದಾರೆ. 'History repeats' ಎಂದು ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. 'But history should not repeat with vengeance' ಎಂದು ಅದಕ್ಕೆ ಸೇರಿಸುತ್ತಾರೆ. 1917ನೇ ಇಸವಿಯಲ್ಲೂ ಕೂಡ ಶ್ರೀ ಮಹಾತ್ಮ ಗಾಂಧೀಜಿಯವರು ಪಶ್ಚಿಮ ಚಂಪಾರ್‌ನಲ್ಲಿ ರೈತರ ಆಂದೋಲನವನ್ನು ಪ್ರಾರಂಭ ಮಾಡಿದಾಗ ಇದೇ ರೀತಿಯ ಕಾನೂನುಗಳನ್ನು ಬ್ರಿಟಿಷ್ ರಾಜ್ಯದವರು ತಂದಾಗ ಆ ರೈತರ ಪರ ಮೊದಲಿನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋರಾಟ ಪ್ರಾರಂಭವಾಯಿತು. ಆ ಒಂದು ಹೋರಾಟದ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಬಹಳಷ್ಟು ಶಕ್ತಿ ಸಿಕ್ಕಿ ಬ್ರಿಟಿಷರನ್ನು ನಾವು ಹೊರಗಡೆ ಕಳುಹಿಸುವಂತಹ ಪ್ರಸಂಗವನ್ನು ನಾವೆಲ್ಲಾ ನೋಡಿದ್ದೇವೆ. ಇದು ಇತಿಹಾಸದಲ್ಲಿ ಇದೆ. ಈ ಭೂಮಿ ಎನ್ನತಕ್ಕಂಥ ವಸ್ತು ಏನಿದೆ, ಅದರಲ್ಲಿ ಸಾಕಷ್ಟು ಯುದ್ಧಗಳಾಗಿವೆ, ಸಾಕಷ್ಟು ಇತಿಹಾಸಗಳನ್ನು ಸೃಷ್ಟಿ ಮಾಡಿದೆ.

(ಮುಂದು)

**(1005) 08.12.2020 12.50 ಎಸ್‌ವಿ-ಎಕೆ** (ವೈಸ್ ಛೇರ್ಮನ್ ಶ್ರೀ ಮರಿತಿಬ್ಬೇಗೌಡರವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):**

ಆ ರೀತಿ ತಾವು ಸಹ ಒಂದು ಇತಿಹಾಸವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಎಲ್ಲಿಯವರೆಗೆ ತಾವು ಅದರಲ್ಲಿ ಯಶಸ್ವಿಯಾಗುತ್ತೀರಿ ಎಂಬುದನ್ನು ನಾವು ನೋಡಬೇಕಾಗಿದೆ. ರೈತರ ವಿಷಯದಲ್ಲಿ ಕೈ ಹಾಕಿದಂತಹ ಬಹಳಷ್ಟು ದೊಡ್ಡ ದೊಡ್ಡ ಸಂಸ್ಥಾನಗಳು, ಸರ್ಕಾರಗಳು ಉರುಳಿ ಹೋಗಿವೆ. 1983ರಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ನವಲಗುಂದ, ನರಗುಂದದಲ್ಲಿ ಆಗಿದ್ದಂತಹ ರೈತ ಹೋರಾಟದಿಂದಾಗಿ ಸರ್ಕಾರ ಬೀಳುವಂತಹ ಪರಿಸ್ಥಿತಿ ಬಂದಿತು ಎಂಬುದು ಮಾನ್ಯ ಹೆಚ್.ವಿಶ್ವನಾಥ್‌ರವರಿಗೂ ತಿಳಿದಿದೆ. ಇಡೀ ಭೂಮಂಡಲವನ್ನು ತೆಗೆದುಕೊಂಡರೆ ಶೇ.70 ರಷ್ಟು ಭಾಗ ಜಲಾವೃತವಾಗಿದೆ. ಶೇ.10 ಭಾಗದಷ್ಟು ಬೆಟ್ಟ, ಗುಡ್ಡ, ಮರುಭೂಮಿಗಳಿಂದ ಆವರಿಸಿದೆ. ಶೇ.20 ಭಾಗದಷ್ಟು ಮಾತ್ರ ಭೂಭಾಗವಿರುವುದು ನಮಗೆಲ್ಲಾ ತಿಳಿದಿದೆ. ಮೊದಲು ಈ ರಾಷ್ಟ್ರದ ವ್ಯವಸ್ಥೆ ಏನಿತ್ತು? ನಮ್ಮ ರಾಷ್ಟ್ರದ ವ್ಯವಸ್ಥೆಯಲ್ಲಿ ಮಹಾರಾಜರು ಇದ್ದರು. ಮಹಾರಾಜರ ಕೆಳಗೆ ದಿವಾನರು, ದಿವಾನರ ಕೆಳಗೆ ಜಮೀನ್ದಾರರು, ಜಮೀನ್ದಾರರ ಕೆಳಗೆ ಪಾಳೇಗಾರರು ಇದ್ದರು. ನಾವು ಅವರಿಗೆ ಗುಲಾಮರಾಗಿದ್ದೆವು. ನಮ್ಮ ರಾಷ್ಟ್ರದಲ್ಲಿ 540 ಸಂಸ್ಥಾನಗಳಿದ್ದವು. ಸ್ವಾತಂತ್ರ್ಯ ಹೋರಾಟದ ಮೂಲಕ ಎಲ್ಲಾ ಸಂಸ್ಥಾನಗಳನ್ನು ಒಂದು ಮಾಡಲಾಯಿತು. ಕೃಷಿ ಕ್ಷೇತ್ರಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿರುವುದನ್ನು ನಾವು ಸಂವಿಧಾನದಲ್ಲಿಯೂ ಕಾಣಬಹುದು. ಕೃಷಿ ವಿಚಾರದಲ್ಲಿ ಚಿಂತನೆ ಮಾಡುವವರಿಗೆ, ರೈತಾಪಿ ಮಕ್ಕಳಿಗೆ ಈ ವಿಚಾರದಲ್ಲಿ ಹೆಚ್ಚು ಅರಿವು ಇರುತ್ತದೆ.

ಭಾರತೀಯ ಜನತಾಪಕ್ಷದ ಕೇಂದ್ರದಲ್ಲಿರುವಂತಹ ಸರ್ಕಾರವಿರಬಹುದು ಅಥವಾ ರಾಜ್ಯದಲ್ಲಿರುವ ಸರ್ಕಾರವಿರಬಹುದು, ಈಗ ತಂದಿರುವಂತಹ ಕಾನೂನು ಯಾವ ರೀತಿಯಾಗಿದೆ? ಬ್ರಿಟಿಷರು 1894ನೇ ಇಸವಿಯಲ್ಲಿ ತಂದಂತಹ ಭೂಸ್ವಾಧೀನ ಕಾಯಿದೆಯಲ್ಲಿ ಭೂಮಾಲೀಕರ ಇಚ್ಛೆಗೆ ವಿರುದ್ಧವಾಗಿ ಸರ್ಕಾರ ತನ್ನ ಸಾರ್ವಭೌಮತ್ವವನ್ನು ಚಲಾಯಿಸಿ ಬಲವಂತದಿಂದ ಭೂಮಿಯನ್ನು ವಶಪಡಿಸಿಕೊಳ್ಳಬಹುದಾಗಿತ್ತು. ಆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯಲ್ಲಿ ಜಮೀನ್ದಾರರಿದ್ದರು, ಜಹಗೀರುದಾರರು ಇದ್ದರು, ಜೋಡಿದಾರರು ಇದ್ದರು, ಇನಾಂದಾರರು ಇದ್ದರು, ಗೇಣಿದಾರರು ಇದ್ದರು. ಇಂತಹ ಪದ್ಧತಿಗಳನ್ನು ರದ್ದು ಮಾಡಿ ಉಳುವವನೇ ಭೂಮಿಯ ಒಡೆಯ ಎನ್ನುವ ಉದ್ದೇಶದಿಂದ 1961ರಲ್ಲಿ ಭೂ ಸುಧಾರಣಾ ಕಾನೂನನ್ನು ಜಾರಿಗೆ ತರಲಾಯಿತು. ಪ್ರಮುಖವಾಗಿ ದಿನಾಂಕ 01ನೇ ಮಾರ್ಚ್ 1974ರಂದು ಭೂ ಸುಧಾರಣಾ ಕಾನೂನಿನ ಮೂಲಕ ಉಳುವವನೇ ಭೂಮಿಯ ಒಡೆಯ ಎಂದು ಹೇಳಲಾಯಿತು.

ಮಾನ್ಯ ಸಭಾಪತಿಯವರೇ, ತಮಗೂ ಸಹ ತಿಳಿದಿದೆ. ಇಷ್ಟೆಲ್ಲಾ ಕಾನೂನು ಮಾಡಿದರೂ ಸಹ ರೈತರನ್ನು ಸಮಾಧಾನ ಮಾಡುವುದಕ್ಕೆ ಆಗಲಿಲ್ಲ. ಅವರ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸಲಿಕ್ಕೆ ಆಗಲಿಲ್ಲ. ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಸಹ ಸೆಕ್ಷನ್ 79ಎ, ಸೆಕ್ಷನ್ 79ಬಿ ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಆದರೆ ನನಗೆ ಇರುವ ಸಣ್ಣ ಅನುಭವದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯವು ಒಂದು ಮಾದರಿ ರಾಜ್ಯವಾಗಿ ಇಡೀ ರಾಷ್ಟ್ರದಲ್ಲಿ ಮತ್ತು ಪ್ರಪಂಚದಲ್ಲಿ ಕಾಣುತ್ತದೆ. ಕರ್ನಾಟಕ ರಾಜ್ಯದಲ್ಲಿ ಶ್ರೀ ದೇವರಾಜ ಅರಸುರವರು ಭೂ ಸುಧಾರಣೆ ಕಾಯಿಯನ್ನು ಅನುಷ್ಠಾನಕ್ಕೆ ತಂದಾಗ ರಕ್ತ ರಹಿತ ಕ್ರಾಂತಿ ಆಗಿರುವುದನ್ನು ನಾವು ನೋಡಿದ್ದೇವೆ. ಆದರೆ ಇನ್ನಾವುದೇ ರಾಜ್ಯದಲ್ಲಿ ಇಷ್ಟು ಸುಲಲಿತವಾಗಿ, ಅಚ್ಚುಕಟ್ಟಾಗಿ ಭೂಸುಧಾರಣೆ ಕಾನೂನು ಅನುಷ್ಠಾನಕ್ಕೆ ಬಂದಿರುವುದಿಲ್ಲ. ಈ ಮಸೂದೆ ಕೆಟ್ಟದಾಗಿದ್ದರೆ ಅಷ್ಟು ಸುಲಭವಾಗುತ್ತಿರಲಿಲ್ಲ ಎಂಬುದು ಅದರರ್ಥ. ಆಗ ಒಂದು ಪ್ರಬಲ ಕೋಮಿಗೆ ಸೇರಿದವರಾದ ಶ್ರೀ ಸುಬ್ಬಯ್ಯ ಶೆಟ್ಟರು ಈ ಒಂದು ಕಾನೂನನ್ನು ಅನುಷ್ಠಾನಕ್ಕೆ ತಂದಾಗ ಎಲ್ಲಿಯೂ ಯಾವುದೇ ರೀತಿಯ ಗೊಂದಲವಿರಲಿಲ್ಲ. ಇಡೀ ದೇಶದಲ್ಲಿ ಎಲ್ಲರೂ ಏಕೆ ಇಷ್ಟು ಗೊಂದಲದಲ್ಲಿದ್ದಾರೆ ಎಂಬುದು ಇಲ್ಲಿ ಪ್ರಶ್ನೆ. ನಾವೇನು ಭೂಮಾಲೀಕರಾಗುವುದಿಲ್ಲ ಅಥವಾ ನಾವೇನು ಭೂಹೀನರಾಗುವುದಿಲ್ಲ. ಪ್ರಶ್ನೆ ಇರುವುದೇನೆಂದರೆ 1947ರಲ್ಲಿ ಸ್ವಾತಂತ್ರ್ಯ ಬಂದಾಗ ಈ ದೇಶದಲ್ಲಿ 50 ಮಿಲಿಯನ್ ಟನ್‌ಗಳು ಮಾತ್ರ ಆಹಾರ ಉತ್ಪಾದನೆ ಇತ್ತು. ಜನಸಂಖ್ಯೆ ಹೆಚ್ಚಾದಂತೆಲ್ಲಾ ದೇಶದ ಜನರು ಸ್ವಾವಲಂಬಿಗಳಾಗಬೇಕೆಂದು ಹೇಳಿ ಶ್ರೀ ಎಂ.ಎಸ್.ಸ್ವಾಮಿನಾಥನ್ ಅವರ ನೇತೃತ್ವದಲ್ಲಿ ದಿ. ಶ್ರೀಮತಿ ಇಂದಿರಾಗಾಂಧಿಯವರು ಹಸಿರು ಕ್ರಾಂತಿಯನ್ನು ಮಾಡಿದರು. ಆಗಲೂ ಸಹ ಅದು ಪೂರ್ಣವಾಗಲಿಲ್ಲ. 70 ವರ್ಷಗಳಿಂದ ಕಾಂಗ್ರೆಸ್‌ನವರು ಏನೂ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಅದರ ಎಬಿಠಿಟಿ ಆಗಿದ್ದಾರೆ. ಅವರು ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಿದರು. ವಿರೋಧಪಕ್ಷದಲ್ಲಿದ್ದೇವೆಂದು ಎಲ್ಲವನ್ನೂ ವಿರೋಧ ಮಾಡಲಿಕ್ಕೆ ಸಾಧ್ಯವಿಲ್ಲ. 70 ವರ್ಷಗಳಲ್ಲಿ ನಾವೇನೂ ಸಾಧನೆಯನ್ನು ಮಾಡಿರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಕಾಲದಲ್ಲಿ ಅಮೇರಿಕಾದಿಂದ ಪಿ–4 ಗೋಧಿ ಬರುತ್ತಿತ್ತು. ಅವರು ನಮಗೆ ದಾನ ಕೊಡುತ್ತಿದ್ದರು. ಇದು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಮತ್ತು ಮಾನ್ಯ ಹೆಚ್.ವಿಶ್ವನಾಥ್ ಅವರಿಗೂ ತಿಳಿದಿದೆ. ಮಕ್ಕಳಿಗೆ ಪೌಷ್ಠಿಕಾಂಶವಿಲ್ಲವೆಂದು ಡೆನ್ಮಾರ್ಕ್‌ನಿಂದ ಹಾಲು ಆಮದು ಮಾಡಿಕೊಳ್ಳಲಾಗುತ್ತಿತ್ತು. ಒಂದು ಹೊತ್ತಿನ ಊಟ ಸಿಗುವುದು ಸಹ ಕಷ್ಟವಿತ್ತು. ಆದರೆ ಅಬ್ದುಲ್ ಕಲಾಂ ಅವರು ಒಂದು ಮಾತನ್ನು ಹೇಳುತ್ತಾರೆ. 70 ವರ್ಷಗಳಲ್ಲಿ ನಾವು ಮಾಡಿರುವ ಸಾಧನೆಯೇನೆಂದರೆ ಬೇರೆ ರಾಷ್ಟ್ರದಿಂದ ನಾವು ಅನ್ನವನ್ನು ತೆಗೆದುಕೊಳ್ಳುತ್ತಿದ್ದೆವು. ಸ್ವಾವಲಂಬಿಗಳಾಗಬೇಕೆನ್ನುವ ಉದ್ದೇಶದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇಂದು ಇಡೀ ಪ್ರಪಂಚದಲ್ಲಿ ಅಕ್ಕಿ ಉತ್ಪಾದನೆಯಲ್ಲಿ ಭಾರತ ಮೊದಲನೆಯ ಸ್ಥಾನದಲ್ಲಿದೆ ಎಂದು ಹೆಮ್ಮೆಯಿಂದ ನಾವು ಹೇಳಿಕೊಳ್ಳಬಹುದು. ಅದೇ ರೀತಿ ಗೋಧಿ ಉತ್ಪಾದನೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದೇವೆಂದು ಹೇಳಿಕೊಳ್ಳಬಹುದು. ಹಣ್ಣು–ಹಂಪಲು ಉತ್ಪಾದನೆಯಲ್ಲಿ ಚೈನಾ, ಬ್ರೆಜಿಲ್ ನಂತರ ನಾವು ಮೂರನೆಯ ಸ್ಥಾನದಲ್ಲಿದ್ದೇವೆಂದು ಹೇಳಿಕೊಳ್ಳಬಹುದು. ಈ ಎಲ್ಲಾ ಸಾಧನೆಗಳು ಸರಿಯಾದ ಕಾರ್ಯಕ್ರಮ ಇಲ್ಲದಿದ್ದರೆ ಬರುತ್ತಿರಲಿಲ್ಲ. ಅದರಿಂದಾಗಿ ನೆಮ್ಮದಿಯ ಬದುಕನ್ನು ಮಾಡುತ್ತಿದ್ದೇವೆ.

ರಾಜ್ಯದ ಕಾನೂನು ಬೇರೆ, ರಾಷ್ಟ್ರದ ಕಾನೂನು ಬೇರೆ ಎಂದು ಮಾನ್ಯ ಅಶೋಕ್ ಅವರು ಹೇಳಬಹುದು. ರಾಷ್ಟ್ರದ ಕಾನೂನನ್ನು ನಾವು ಒಪ್ಪಿಕೊಳ್ಳುವುದಿಲ್ಲ ಎಂದು ಮಾನ್ಯ ಅಶೋಕ್ ಅವರು ಹೇಳಿಬಿಟ್ಟರೆ, ನಾನು ಈಗಲೇ ಕುಳಿತುಕೊಳ್ಳುತ್ತೇನೆ. The question trickles down to the State. ಕಲಂ ಸಂಖ್ಯೆ 79 ಎ, ಬಿ ಪ್ರಶ್ನೆ. ನೀವು 25 ಲಕ್ಷ ಮಾಡಿದ್ದೀರಿ, ನಾವೇನೂ ಮಾಡಿರುವುದಿಲ್ಲ ಎಂದು ನಮ್ಮ ಸಭಾನಾಯಕರು ಹೇಳಿದರು. ಅದೇ ಇಲ್ಲಿ ಬಂದಿರತಕ್ಕಂತಹ ಪ್ರಶ್ನೆ. ಈ ದೇಶದಲ್ಲಿರುವ ಶೇ.86ರಷ್ಟು ಜನ ಸಣ್ಣ ಹಿಡುವಳಿದಾರರು. ಅವರ ಭಾಷಣದಲ್ಲಿಯೇ ಹೇಳಿದಂತೆ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದೋ ಅಥವಾ ಕುಟುಂಬದವರನ್ನು ಆಸ್ಪತ್ರೆಗೆ ದಾಖಲಿಸಬೇಕೆಂದೋ ಒಂದು ಎಕರೆ, ಅರ್ಧ ಎಕರೆ ಜಮೀನು ಮಾರಾಟ ಮಾಡಿರುವುದನ್ನು ನಾವು ಸಾಕಷ್ಟು ನೋಡಿದ್ದೇವೆ. ಅವನು ಅದನ್ನು ಪುನಃ ತೆಗೆದುಕೊಳ್ಳಬೇಕೆಂದರೆ ಅದು ಸಾಧ್ಯವೇ ಇರುವುದಿಲ್ಲ. ಈ ಮಸೂದೆಯಲ್ಲಿ ಗುತ್ತಿಗೆದಾರರು ಜಮೀನಿನ ಮೇಲೆ ಸಾಲವನ್ನು ತೆಗೆದುಕೊಳ್ಳಬಹುದು ಅಥವಾ ವಿಮೆ ಮಾಡಿಕೊಳ್ಳಬಹುದು. ಸಾಲವನ್ನು ತೆಗೆದುಕೊಂಡು ಓಡಿಹೋಗಿಬಿಟ್ಟರೆ ಏನು ಮಾಡುತ್ತಾರೆ? ನಗರ/ಪಟ್ಟಣಗಳಲ್ಲಿ ಕಾರ್ಖಾನೆಗಳು ವ್ಯಾಪಾರ ಮಾಡುವ ಸಲುವಾಗಿ ಕೋಟ್ಯಂತರ ರೂಪಾಯಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಸಿಕ್ಕಿಹಾಕಿಕೊಳ್ಳುವವರು ಸಿಕ್ಕಿ ಹಾಕಿಕೊಳ್ಳುತ್ತಾರೆ. ಬಹಳ ಬುದ್ಧಿವಂತರು insolvency ತೆಗೆಯುತ್ತಾರೆ. ಇದುವರೆವಿಗೂ ಯಾರಾದರೂ ರೈತರು ಪಾಪರ್ ಚೀಟಿ ತೆಗೆದಿರುವುದನ್ನು ನೋಡಿದ್ದೀರಾ? ಯಾರೂ ಸಹ ರೈತರು ಪಾಪರ್ ಚೀಟಿಯನ್ನು ತೆಗೆದಿರುವುದಿಲ್ಲ. ಅವರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿರುವುದೂ ಇಲ್ಲ. ಪಾಪರ್ ಚೀಟಿ ತೆಗೆದುಕೊಳ್ಳುವುದು ಎಂದರೆ ಈ ದೇಶಕ್ಕೆ ನಾವು ಮಾಡುವ ದ್ರೋಹ ಎನ್ನುವ ಭಾವನೆಯನ್ನು ನಮ್ಮ ರೈತರು ಹೊಂದಿರುತ್ತಾರೆ. ಆದರೆ ಈ ಪರಿಸ್ಥಿತಿಯಲ್ಲಿ corporate sector ಗಳನ್ನು ಸರ್ಕಾರ ಫ್ರೀ ಬಿಟ್ಟರೆ ಹೇಗೆ? ಒಂದು ದೊಡ್ಡ ಕಂಪನಿ, ಅದರ ಹೆಸರನ್ನು ನಾನು ಹೇಳಬಯಸುವುದಿಲ್ಲ. ಆ ಕಂಪನಿಯು ಜಾರ್ಖಂಡ್‌ನಲ್ಲಿ ಬ್ರಿಟಿಷರ ಕಾಲದಲ್ಲಿಯೇ 200 ವರ್ಷಗಳಿಗೆ mining license ಗೆ ಅನುಮತಿಯನ್ನು ಪಡೆದುಕೊಂಡಿದೆ. ಅದರ ಹತ್ತು ಭಾಗದಷ್ಟು ಸಹ mining ಆಗುತ್ತಿಲ್ಲ. ಆದರೆ ಭೂಮಿ ಅವರ ಕೈಯಲ್ಲಿದೆ. ಇದರಿಂದಾಗಿ ಆ ಭಾಗಗಳಲ್ಲಿ ನಕ್ಸಲ್ ಪ್ರಭಾವ ಹೆಚ್ಚಾಗುತ್ತಿದೆ.

ಮಾನ್ಯ ಸಭಾಪತಿಯವರೇ, ಕೃಷಿ, ಕೈಗಾರಿಕೆ ಮತ್ತು service sector ಎನ್ನುವ ಮೂರು ರೀತಿಯ ವೃತ್ತಿಗಳು. Service sector ಇಲ್ಲದಿದ್ದರೆ ಈ ದೇಶದಲ್ಲಿ ಏನೂ ಆಗುವುದಿಲ್ಲ. ಕೈಗಾರಿಕೆ ಇಲ್ಲದಿದ್ದರೂ ಏನೂ ಆಗುವುದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕೈಗಾರಿಕೆ ಎನ್ನುವುದು ಈ ದೇಶದಲ್ಲಿ ಇರಲಿಲ್ಲ. ಆದರೆ ಪ್ರಾಥಮಿಕ ಉದ್ಯೋಗ ಕೃಷಿ ಇಲ್ಲದಿದ್ದರೆ ಯಾರೂ ಬದುಕುವುದಕ್ಕಾಗುವುದಿಲ್ಲ. ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಮನುಷ್ಯರು ಬದುಕುವುದಿರಲಿ, ಸರ್ಕಾರ 'Prevention of Cow Slaughter Bill' ಅನ್ನು ತರುವುದೇ ಬೇಡ. ಯಾರೂ ಬದುಕುವುದಕ್ಕಾಗುವುದಿಲ್ಲ. ಸರ್ಕಾರ ಅದರ ಬುಡಕ್ಕೆ ಕತ್ತರಿಯನ್ನು ಹಾಕಿದೆ. ಈ ಒಂದು ಮಸೂದೆಯು ರೈತರ ಬುಡವನ್ನೇ ಅಲುಗಾಡಿಸುತ್ತಿದ್ದು, ಅದರ ವಿರುದ್ಧ ನಾವು ಇದ್ದೇವೆ.

ಮತ್ತೊಂದು ಗಂಭೀರವಾದ ವಿಚಾರವೇನೆಂದರೆ, corporate sector ನವರು ಬರುತ್ತಾರೆ. Most of them are in service sector. The contribution of service sector to our GDP is almost 53-54%. ನಮ್ಮ ಬೆಂಗಳೂರು ಬೊಕ್ಕಸ ಅಥವಾ ದೆಹಲಿ ಬೊಕ್ಕಸವನ್ನು 53-54%ನಷ್ಟು ತುಂಬುತ್ತಾರೆ. ಅವರು 9-10% ಗಿಂತ ಹೆಚ್ಚಿಗೆ ಉದ್ಯೋಗವನ್ನು ಸೃಷ್ಟಿ ಮಾಡಲಿಕ್ಕೆ ಸಾಧ್ಯವಿಲ್ಲ. ಕೃಷಿ ಕ್ಷೇತ್ರದಲ್ಲಿ ಅವರು 18-20% ಮಾತ್ರ ಜಿಡಿಪಿಯನ್ನು ಕೊಡಬಹುದು. ಉದ್ಯೋಗ ಕ್ಷೇತ್ರದಲ್ಲಿ ಶೇ.56ರಷ್ಟು ಉದ್ಯೋಗವನ್ನು ಸೃಷ್ಟಿ ಮಾಡುವುದು ಕೃಷಿ ಕ್ಷೇತ್ರ.

(...ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1006) 08.12.2020 1.00 ಕೆಜಿ–ವಿಕೆ

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):**

ಮುಂದೆ Corporate Sector ಗೆ ಅನುಕೂಲವಾಗುವಂತಹ ಈ ಮಸೂದೆ ಬಂದಾಗ ಸಣ್ಣ ಹಿಡುವಳಿದಾರರು ಭೂಮಿಯನ್ನು ಮಾರಾಟ ಮಾಡಿ ಏನು ಮಾಡುತ್ತಾರೆ ಹೇಳಿ? ಇವರು ಸಹ ಕೆಲವು ಕಾನೂನುಗಳನ್ನು ತಂದಿದ್ದರು. ಬಡವರ ವಿರೋಧಿ ಕಾನೂನುಗಳು. ಯಾವುದೇ ಪುನರ್ವಸತಿ ಕಲ್ಪಿಸದೆ ಏಕಾಏಕಿ ತೀರ್ಮಾನಗಳನ್ನು ತೆಗೆದುಕೊಂಡರು. ಅವರೆಲ್ಲರೂ ಡಾಬಾಗಳಲ್ಲಿ ಇಲ್ಲವೆಂದರೆ ಹೋಟೆಲ್‌ಗಳಲ್ಲಿ ಕೆಲಸ ಮಾಡುವುದು, ಪಾನಿಪುರಿ ಮಾರಾಟ ಮಾಡುವುದು ಇಲ್ಲವೆಂದರೆ, ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ ಆಟೋರಿಕ್ಷಾವನ್ನು ಓಡಿಸುವುದು ಮಾಡುತ್ತಾರೆ. ಇವರೆಲ್ಲರೂ ಬಹಳ ಕಷ್ಟಕರವಾದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಈ ದೃಷ್ಟಿಯಿಂದ ಕೇವಲ ಭೂಮಾಲೀಕತ್ವದ ಪ್ರಶ್ನೆ ಅಲ್ಲ. ಇಲ್ಲಿ ಉದ್ಯೋಗದ ಪ್ರಶ್ನೆಯು ಸಹ ಇದೆ. ಕೋವಿಡ್ ಬಂದ ನಂತರ ನಮ್ಮ ಇತಿಹಾಸದಲ್ಲಿ ಮೊಟ್ಟಮೊದಲನೇ ಬಾರಿಗೆ 43% ರಷ್ಟು ನಿರುದ್ಯೋಗ ಸಮಸ್ಯೆ ನಮ್ಮ ದೇಶವನ್ನು ಕಾಡುತ್ತಿದೆ. ಸದನದಲ್ಲಿ ಮಾನ್ಯ ಗೃಹ ಸಚಿವರು ಇಲ್ಲ. ಈಗ ಪೊಲೀಸ್ ಆಯುಕ್ತರು ಬಹಳ ಒಳ್ಳೆಯವರು ಬಂದಿದ್ದಾರೆ. ಹಾಗಾಗಿ, policing ನಡೆಯುತ್ತಿದೆ. ಇವರು ಬರುವುದಕ್ಕಿಂತ ಮುಂಚೆ ಯಾರು ಸಹ ರಾತ್ರಿ 8 ಗಂಟೆಯ ಮೇಲೆ ರಸ್ತೆಗಳಲ್ಲಿ ಓಡಾಡುವುದಕ್ಕೆ ಆಗುತ್ತಿರಲಿಲ್ಲ. ರಸ್ತೆಗಳಲ್ಲಿ ಓಡಾಡುತ್ತಿದ್ದರೆ ಮೊಬೈಲ್‌ಗಳನ್ನು ಕಿತ್ತುಕೊಂಡು ಹೋಗುತ್ತಿದ್ದರು. ಮನೆಗಳಿಗೆ ನುಗ್ಗಿ ತಲೆಗಳನ್ನು ಹೊಡೆಯುತ್ತಿದ್ದರು. Crime rate ಜಾಸ್ತಿಯಾಗಿದೆ ಎಂದು ನೋಡಿ. ಈಗ policing ಸರಿಯಾಗಿ ನಡೆಯುತ್ತಿರುವುದರಿಂದ ಸ್ವಲ್ಪ ಹಿಡಿತದಲ್ಲಿದೆ. ಆದ್ದರಿಂದ, ನಾವು ಕೇವಲ ಜಮೀನು ಕೊಡುತ್ತೇವೆ, ಇದರಿಂದ ಉದ್ಯೋಗ ಸೃಷ್ಟಿಯಾಗಿಬಿಡುತ್ತದೆ ಎಂದರೆ, ಏನು ಸೃಷ್ಟಿ ಆಗುವುದಿಲ್ಲ. ಬಂಡವಾಳ ಶಾಹಿಗಳು..

ಮಾನ್ಯ ಸಭಾಪತಿಯವರೇ, ಇದು ಯಾವ ರೀತಿ ಎಂದರೆ, Corporate Sector ದ್ದು ಒಂದು Cell phone SIM card ಅನ್ನು ಕೊಟ್ಟರು. ನಾನು ಅದರ ಹೆಸರನ್ನು ಹೇಳುವುದಕ್ಕೆ ಹಿಂಜರಿಯುವುದಿಲ್ಲ. Jio SIM card ಅನ್ನು ಉಚಿತವಾಗಿ ಕೊಟ್ಟರು. ಬಿ.ಎಸ್.ಎನ್.ಎಲ್., ಹಾಗೆಯೇ ಮುಳುಗಿ ಹೋಯಿತು. ಮೂರು ತಿಂಗಳ ಕಾಲ ಉಚಿತವಾಗಿ ಬರುತ್ತದೆ ಎಂದು ಎಲ್ಲರೂ ಅದನ್ನು ತೆಗೆದುಕೊಂಡರು. ಅದು broadband ಯಾವುದು ಇಲ್ಲ. ಆ ರೀತಿ ಬರುತ್ತಿತ್ತು. ಮೂರು ತಿಂಗಳು ಆದಮೇಲೆ ಹಣ ಕಟ್ಟಿ ಎಂದು ಹೇಳಿದರು. ಈ ವಿಧೇಯಕಯದ್ದು ಅದೇ ಕಥೆ. ರೂ.25 ಲಕ್ಷ ರೂಪಾಯಿಗಳ ಮಿತಿಯನ್ನು ತೆಗೆದಾಗ ಬಡ ರೈತರು ತೆಗೆದುಕೊಳ್ಳುತ್ತಾರೆಯೇ? ಮಾನ್ಯ ಭೈರತಿ ಬಸವರಾಜುರವರು ಸದನದಲ್ಲಿ ಇದ್ದಾರೆ. ಬೆಂಗಳೂರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಗರದ ಮೊದಲನೆ toll gate ಎಲ್ಲಿ ಇತ್ತು ಗೊತ್ತೇ? Tata Institute ಪಕ್ಕದಲ್ಲಿ ಇತ್ತು. ಆಗ ಮಾನ್ಯ ಅಶೋಕ್‌ರವರು ಇನ್ನೂ ಚಿಕ್ಕವರಾಗಿದ್ದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಂತಹ ಸಂದರ್ಭದಲ್ಲಿ ಅದು 1981ನೇ ಇಸವಿಯಲ್ಲಿ 30 ಕಿಲೋಮೀಟರ್‌ನಿಂದಾಚೆಗೆ ನೆಲಮಂಗಲಕ್ಕೆ ಹೋಯಿತು. ಆ ಕಾಲದಲ್ಲಿ ಹೊಸಕೋಟೆಗೆ ಹೋಗುತ್ತಾರೆಂದರೆ, ಆಗ ಅದು ಹಳ್ಳಿ. ಇವತ್ತು ಹೊಸಕೋಟೆ Gurgaon ವನ್ನು ಮೀರಿಸುವ ಮಟ್ಟಕ್ಕೆ ಹೋಗಿದೆ. ನಗರ ಪಟ್ಟಣಗಳಲ್ಲಿ ಬೇರೆ ಪ್ರಶ್ನೆ. ಹಳ್ಳಿಗಳಲ್ಲಿ ನೆಮ್ಮದಿಯ ಜೀವನ ಮಾಡಿಕೊಂಡಿರುವವರಿಗೆ ಇದು ಒಂದು ರೀತಿಯಲ್ಲಿ ಕೊಳ್ಳಿ ಇಟ್ಟಂತಾಗಿದೆ. ಈ ಸಮಸ್ಯೆ ಆದ್ದರಿಂದ, ಕರ್ನಾಟಕ ರಾಜ್ಯದಲ್ಲಿ 69,30,000 ಕುಟುಂಬಗಳು ಭೂಮಿಯನ್ನು ಹೊಂದಿರುತ್ತವೆ. ಈಗ ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ. ದಕ್ಷಿಣ ಕನ್ನಡದಲ್ಲಿ ನಮ್ಮ ಕುಟುಂಬದವರಿಗೆ "ಉಳುವವನೆ ಭೂಮಿಯ ಒಡೆಯ" ಎಂದಾಗ, ಬಹಳಷ್ಟು ಜನರಿಗೆ ಭೂಮಿ ಸಿಕ್ಕಿದೆ. ಆದರೆ, ಈಗ ಯಾವ ಪರಿಸ್ಥಿತಿ ಬಂದಿದೆ ಎಂದರೆ, ಅವರೆಲ್ಲರನ್ನೂ ಬೇರೆ ಕಡೆಗೆ ಕಳುಹಿಸಿಬಿಟ್ಟಿದ್ದಾರೆ. ನೀವು ಜೀವನ ಮಾಡುವುದು ಬೇಕಾಗಿಲ್ಲ, ಧರ್ಮವನ್ನು ಇಟ್ಟುಕೊಂಡು ಹೋಗಿ ಎಂದು ಎಲ್ಲರೂ ಜೈಲುಗಳಿಗೆ ಹೋಗಿಬಿಟ್ಟಿದ್ದಾರೆ. ಕಾನೂನನ್ನು ತರುವುದಕ್ಕೆ ನಿಮಗೆ ಹಕ್ಕಿದೆ. ಆದ್ದರಿಂದ, ತರುತ್ತೀರಿ. ಆದರೆ, ಜನಗಳ ಹಿತದೃಷ್ಟಿಯನ್ನು ನೋಡಿಕೊಂಡು ಕಾನೂನನ್ನು ತರುವುದು ಬಹಳ ಮುಖ್ಯ. Laws are made, laws are overflowing. Laws are made only to bypassed. Laws are passed only to be bypassed. The Laws are overflowing in the Parliament or in the Assemblies. ಆದ್ದರಿಂದ, ಈ ದೇಶದಲ್ಲಿ ಕಾನೂನು ಕಡಿಮೆ ಇಲ್ಲ.

ಮಾನ್ಯ ಸಭಾಪತಿಯವರೇ, ಹಿಂದಿನ ಕಾಲದಲ್ಲಿ ಜಮೀನ್ದಾರಿ ವ್ಯವಸ್ಥೆ, ಪಾಳೆಗಾರರ ವ್ಯವಸ್ಥೆ, ಶಾನುಭೋಗರ ಮತ್ತು ಪಟೇಲರ ವ್ಯವಸ್ಥೆ ಇತ್ತು. ಆಗ ನಮಗೆ ಯಾರಿಗೂ ಕೆಲಸವೇ ಇರುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರಿಗೆ, ಶ್ರೀ ಬಸವರಾಜ ಹೊರಟ್ಟಿಯವರಿಗೆ ಮತ್ತು ಶ್ರೀ ಪಾಟೀಲ್‌ರವರು ಜಮೀನ್ದಾರರಾಗಿರುತ್ತಾರೆ. ಅಲ್ಲಿ ಪಟ್ಟ ಬರೆದುಕೊಡುವುದಕ್ಕೆ ಶಾನುಭೋಗರು ಇರುತ್ತಾರೆ. ನಾವೆಲ್ಲರೂ ಅವರಿಗೆ ಗುಲಾಮರಾಗಬೇಕು. ಇದನ್ನು regressive method, ವಾಪಸ್ಸು ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ, ದಯವಿಟ್ಟು ತಾವು ಯೋಚನೆ ಮಾಡಬೇಕಾಗುತ್ತದೆ. ಇದರ ಪರಿಣಾಮ ಏನಾಗುತ್ತದೆಂದು ತಿಳಿಸುತ್ತೇನೆ. ಈ ಕಾಯಿದೆ ಜಾರಿಗೆ ಬಂದರೆ ಕೃಷಿ ಭೂಮಿಯನ್ನು Corporate Company ಗಳು ತಮಗೆ ಇಷ್ಟವಾದಂತಹ ಬೆಳೆಗಳನ್ನು ಬೆಳೆಯಬಹುದು. ಅದನ್ನು ಅವರ ಇಷ್ಟದಂತೆ ಬಳಸಬಹುದು. ಅಂದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತ ಕೋಳಿ ಸಾಕುತ್ತಾನೆ, ಹಸು ಸಾಕುತ್ತಾನೆ, ಆತನಿಗೆ ಬೇಕಾದ್ದನ್ನು ಬೆಳೆದುಕೊಳ್ಳುತ್ತಾನೆ. ಬರಿ ಉಪ್ಪು, ಸೀಮೆ ಎಣ್ಣೆ ಮತ್ತು ಬೆಂಕಿಪೊಟ್ಟಣ ತೆಗೆದುಕೊಳ್ಳುವುದಕ್ಕೆ ಮಾತ್ರ ಪೇಟೆಗೆ ಹೋಗುತ್ತಾರೆ. ಆದರೆ, ಇದನ್ನು ಮಾಡಿದಾಗ "ರೈತರು Corporate Sector ಗೆ ಗುಲಾಮರಾಗಿ ಇರಬೇಕಾಗುತ್ತದೆ. ಈ ಭೂಮಿಯ ಒಡೆತನ ರೈತರ ಕೈಯಲ್ಲಿ ಉಳಿದರೂ ಕೃಷಿ ಚಟುವಟಿಕೆಗಳ ಮೇಲೆ ಯಾವುದೇ ನಿಯಂತ್ರಣ ಇರುವುದಿಲ್ಲ. ಗುತ್ತಿಗೆದಾರ ಕಂಪನಿ ಕೆಳಗೆ ರೈತ ತನ್ನ ಜಮೀನಿನಲ್ಲಿ ಕೃಷಿ ಕಾರ್ಮಿಕನಾಗಿ ದುಡಿಯಬೇಕಾಗುತ್ತದೆ. ರೈತರ ಮತ್ತು ಹಳ್ಳಿಗಳ ಸ್ವರೂಪ ಬದಲಾಗುತ್ತದೆ". ಅದನ್ನು ಬದಲಾವಣೆ ಮಾಡುವಂತಿದ್ದರೆ ಬಹಳ ಸಂತೋಷ. ಏಕೆಂದರೆ, ಅದು ಮಾನ್ಯ ಸಚಿವರಾದ ಶ್ರೀ ಜಗದೀಶ ಶೆಟ್ಟರ್‌ರವರಿಗೆ ಗೊತ್ತಿರುತ್ತದೆ. The wave model for Bharatiya Janata Party is Gujarat model. ಈಗಾಗಲೇ 60% urbanisation ಆಗಿದೆ. ಅಲ್ಲಿರುವಂತಹ ಬೆಳೆಗಳು ಸಹ ಶೇಂಗಾ ಎಲ್ಲ commercial crops ಆಗಿಹೋಗಿದೆ. ಕರ್ನಾಟಕದಲ್ಲಿ ಆಗಿಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ ಕ್ಷಾಮ ಬಂದಿತ್ತು. ಆಗ ನಾವು ಬಾಗಲಕೋಟೆ ಮತ್ತು ಮುಧೋಳಕ್ಕೆ ಹೋಗುತ್ತಿದ್ದೆವು. ಅಲ್ಲಿ ಆಗ ದೂರ ದೂರಕ್ಕೆ ಮರಗಿಡಗಳು ಕಾಣಿಸುತ್ತಿರಲಿಲ್ಲ. ಒಂದು ಕೃಷಿ ನೀತಿ, ನೀರಾವರಿ ನೀತಿ ಬಗ್ಗೆ ನಮ್ಮ ಪಕ್ಷ ಮತ್ತು ಜನತಾ ಪಕ್ಷದವರು ಒಂದು ತೀರ್ಮಾನವನ್ನು ತೆಗೆದುಕೊಂಡ ನಂತರ ಇವತ್ತು ಎಲ್ಲಿಯೂ ಖಾಲಿ ಜಾಗ ಕಾಣುತ್ತಿಲ್ಲ, ಎಲ್ಲಾ ಕಡೆಯೂ ಹಸಿರಾಗಿ ಕಾಣುತ್ತಿದೆ. ಆದ್ದರಿಂದ, ಅಂತಹ ಕಾರ್ಯಕ್ರಮಗಳನ್ನು, ಅಂತಹ ಯೋಜನೆಗಳನ್ನು ಜಾರಿಗೆ ತಂದರೆ ಯಾರು ಸಹ ಅಡ್ಡಿ ಮಾಡುವುದಿಲ್ಲ. ಕೇವಲ ಭೂ ಸಂಬಂಧಗಳಿಗೆ ಸುಧಾರಣೆಗಳನ್ನು ತಂದರೆ ಸಾಲದು. ಭೂಮಿಯ ಸುಧಾರಣೆ ಸಹ ಆಗಬೇಕು. ಕೃಷಿ ಉತ್ಪನ್ನದ ವೆಚ್ಚವನ್ನು ಕಡಿಮೆ ಮಾಡಿ ರೈತರ ಮತ್ತು ಗ್ರಾಹಕರ ಹಿತವನ್ನು ಕಾಪಾಡಬೇಕು. ದೇಶದ ಅಭಿವೃದ್ಧಿ ಎಂದರೆ, ಕೇವಲ 10% ರಷ್ಟು ಜನರ ಅಭಿವೃದ್ಧಿ ಮಾತ್ರವಲ್ಲ. ಎಲ್ಲರನ್ನು ಒಳಗೊಂಡಂತಹ ಅಭಿವೃದ್ಧಿಯ ಕಡೆಗೆ ಗಮನಹರಿಸಬೇಕು.

ಮಾನ್ಯ ಸಭಾಪತಿಯವರೇ, ತಮಗೆ ಇನ್ನೊಂದು statistics ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಯು.ಪಿ.ಎ., ಸರ್ಕಾರ ಇದ್ದಾಗ, ಈ ದೇಶದ 58% ರಷ್ಟು ಸಂಪತ್ತು 1% ರಷ್ಟು ಭಾಗದ ಜನರ ಹಿಡಿತದಲ್ಲಿತ್ತು. ಎನ್.ಡಿ.ಎ., ಸರ್ಕಾರ ಬಂದ ಮೇಲೆ 58% ರಿಂದ 68% ರಷ್ಟು ಸಂಪತ್ತು ಕೇವಲ 1% ಭಾಗದಷ್ಟು ಜನರ ಹಿಡಿತಲ್ಲಿದೆ. ಅಂದರೆ, ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಸಂಪತ್ತನ್ನು ಸಹ ಆ 1% ಗೆ ಹೋಗುವಂತಹ ಮಸೂದೆಯನ್ನು ಬಿಜೆಪಿಯವರು ತಂದಿದ್ದಾರೆ. ಅದಲ್ಲದೆ ಎಲ್ಲಾ ರೀತಿಯ ಅಸಮಾನತೆಯನ್ನು, ಶೋಷಣೆಯನ್ನು ಮತ್ತು ಅನ್ಯಾಯವನ್ನು ನಿಲ್ಲಿಸಿ ಸಂವಿಧಾನದ ಆಶಯವಾದ ಸಮಾಜಿಕ ನ್ಯಾಯವನ್ನು

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾರಿಗೊಳಿಸಬೇಕಾಗುತ್ತದೆ. ಸಂವಿಧಾನದಲ್ಲಿ ಈಗಲೂ ಸಹ ಮಾನ್ಯ ಪ್ರಧಾನ ಮಂತ್ರಿಗಳು Mann Ki Baat ಬಗ್ಗೆ ಬಹಳಷ್ಟು ಮಾತನಾಡುತ್ತಿರುತ್ತಾರೆ. ಮಾನ್ಯ ಪ್ರಧಾನ ಮಂತ್ರಿಗಳು ಯಾವುದಾದರೊಂದು Mann Ki Baat ನಲ್ಲಿ ರೈತರ ಬಗ್ಗೆ ಮತ್ತು ರೈತರ ಆತ್ಮಹತ್ಯೆ ಬಗ್ಗೆ ಮಾತನಾಡಿದ್ದಾರೆಯೇ? ಮಾತನಾಡಿಲ್ಲ. ಆದ್ದರಿಂದ, ರೈತರನ್ನು ಸಹ ಅಷ್ಟು ಕಡೆಗಣಿಸುವುದು ತಪ್ಪಾಗುತ್ತದೆ. ನಾವು ರೈತರಿಗೆ ಎಷ್ಟು ಸಹಾಯ ಮಾಡಬೇಕಾಗುತ್ತದೆ, ಅಷ್ಟು ಸಹಾಯವನ್ನು ಮಾಡಬೇಕಾಗುತ್ತದೆ. ರೈತರು ಸ್ವತಂತ್ರರಾಗಿ, ಸ್ವಾವಲಂಬಿಗಳಾಗಿ ಮತ್ತು ಘನತೆಯಿಂದ ಬದುಕುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂತಿದ್ದರೆ, ದಯವಿಟ್ಟು, ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ಪ್ರಧಾನ ಮಂತ್ರಿಗಳು ರೈತರ ಬಗ್ಗೆ ಮತ್ತು ರೈತರ ಆತಹತ್ಯೆ ಬಗ್ಗೆ ಒಂದು ಬಾರಿಯೂ ಸಹ Mann Ki Baat ನಲ್ಲಿ ಮಾತನಾಡಿಲ್ಲವೆಂದು ಹೇಳಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಮಾನ್ಯ ಪ್ರಧಾನ ಮಂತ್ರಿಗಳು ರೈತರ ಬಗ್ಗೆ ಸಾಕಷ್ಟು ಬಾರಿ ಚರ್ಚೆ ಮಾಡಿದ್ದಾರೆ. ರೈತರಿಗೆ ಸಾಕಷ್ಟು ಸಂದೇಶಗಳನ್ನು ಕೊಟ್ಟಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿ ಯಾವ ರೀತಿಯಲ್ಲಿ ಸುಧಾರಣೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಮತ್ತೆ "ಆತ್ಮನಿರ್ಭರ ಭಾರತ" ಯೋಜನೆಯಲ್ಲಿ ರೈತರ ಸಲುವಾಗಿಯೇ ವಿಶೇಷವಾದಂತಹ package ಅನ್ನು ಘೋಷಣೆ ಮಾಡಿದ್ದಾರೆ. ಎಲ್ಲವನ್ನು ಸಹ ಬಹಿರಂಗವಾಗಿಯೇ ಹೇಳಿಕೆಯನ್ನು ಕೊಟ್ಟಿದ್ದಾರೆ. Mann Ki Baat ನಲ್ಲಿಯೂ ಸಹ ಸಾಕಷ್ಟು ಚರ್ಚೆಯಾಗಿದೆ. ಈ ಸದನದ ಮೂಲಕ ತಪ್ಪು ಸಂದೇಶ ಹೋಗಬಾರದು ಎಂಬ ಉದ್ದೇಶದಿಂದ ದಾಖಲೆಯನ್ನು ಸರಿ ಮಾಡುವುದಕ್ಕಾಗಿ ನಾನು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆಂದು ಹೇಳಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದರೆ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಮಾನ್ಯ ಸಚಿವರು "ಆತ್ಮನಿರ್ಭರ ಭಾರತ" ಎಂದು ಹೇಳಿದ್ದಾರೆ. ಅದು ಹಿಂದಿ ಭಾಷೆಯಲ್ಲಿ Athmanirbhar Bharat, ಅದು ಆಂಗ್ಲ ಭಾಷೆಯಲ್ಲಿ Make in India. "ಆತ್ಮನಿರ್ಭರ ಭಾರತ" ಎನ್ನುವ ಪದ ಕನ್ನಡದಲ್ಲಿ ಏನಾಗುತ್ತದೆ ಎಂದು ಮಾನ್ಯ ಸದಸ್ಯರುಗಳಾದ ಶ್ರೀ ವಿಶ್ವನಾಥ್, ಮತ್ತು ಡಾ||ತೇಜಸ್ವಿನಿಗೌಡರವರು ಹೇಳಬೇಕು. ಏಕೆಂದರೆ, ಅವರೆಲ್ಲರೂ ಸಾಹಿತಿಗಳು ಮತ್ತು ಪತ್ರಕರ್ತರಾಗಿದ್ದಾರೆ. ಈ ನಕಲಿ ಸಿಂಹ ಇದೆ ನೋಡಿ. ಅದನ್ನು nut, bolt ಹಾಕಿ ಸಿಂಹವನ್ನು ಮಾಡಿದ್ದಾರೆ. ಅದರ ಕಥೆ ಏನಾಯಿತು ಎಂದು ಆಮೇಲೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಡೋಣ. ಈಗ Athmanirbhar ವಿಚಾರಕ್ಕೆ ಬರೋಣ. Make in India ದ್ದು alternative ಈ Athmanirbhar. ನಾನು ಇನ್ನೂ ಬಹಳಷ್ಟು ಹೇಳಬಹುದು. ಏಕೆಂದರೆ, ಬದಲಾವಣೆಗಳು ಆಗುತ್ತಿರುತ್ತವೆ; ಹೇಳಿಕೆಗಳು ಬದಲಾವಣೆ ಆಗುತ್ತಿರುತ್ತವೆ. ನಾನು ದೆಹಲಿಯ ಚಳಿಯನ್ನು 25 ವರ್ಷಗಳಿಂದ ನೋಡಿದ್ದೇನೆ.

**ಡಾ||ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, "ಆತ್ಮನಿರ್ಭರ ಭಾರತ" ಎಂದರೆ ಕನ್ನಡದಲ್ಲಿ "ಸ್ವಾವಲಂಬಿ ಭಾರತ" ಎಂದಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು "ಆತ್ಮನಿರ್ಭರ ಭಾರತ" ಎನ್ನುವ ಹಿಂದಿಯ ಪದಕ್ಕೆ ಕನ್ನಡ ಪದವನ್ನು ಹೇಳಿದ್ದಾರೆ. ಅದಕ್ಕೆ ಬಹಳ ಸಂತೋಷ. ಏಕೆಂದರೆ, ನನ್ನ ಮಾತೃ ಭಾಷೆ ಕನ್ನಡ ಅಲ್ಲ. ನನ್ನ ಮಾತೃ ಭಾಷೆ ತುಳು.

**(ಮುಂದು. . .)**

(1007)08-12-2020(1-10)ಎಂವಿ-ವಿಕೆ

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು...):**

ನಾವು ಕನ್ನಡವನ್ನು ದೊಡ್ಡಣ್ಣ ಎಂದುಕೊಂಡಿದ್ದೇವೆ. ಆದರೆ, ತುಳು ಭಾಷೆಯನ್ನು ಮುಗಿಸುವುದಕ್ಕೆ ಹೋಗಿಬಿಟ್ಟಿದ್ದಾರೆ. ಮರಾಠಿ ಭಾಷೆಗೆ ಮಾತ್ರ ಅನುದಾನ ಕೊಟ್ಟಿದ್ದಾರೆ. ತುಳು ಭಾಷೆಗೆ ಏಕೆ ಕೊಡಲಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗಿತ್ತು. ಅವರು ದಯವಿಟ್ಟು ಅದನ್ನು ಕೇಳಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ತುಳು ಅಭಿವೃದ್ಧಿ ಮಂಡಳಿ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತುಳು ಮತ್ತು ಕೊಡವ ಭಾಷೆ ಕನ್ನಡ ಸಾಹಿತ್ಯ ಮತ್ತು ಕಲೆಗೆ ಬಹಳಷ್ಟು ದೊಡ್ಡ ಕೊಡುಗೆ ಕೊಟ್ಟಿವೆ. ಕರ್ನಾಟಕ ರಾಜ್ಯವನ್ನು ಬೆಳೆಸಿರತಕ್ಕಂಥವರು ಕೇವಲ ಆಡಳಿತ ಪಕ್ಷದವರೇ ಅಲ್ಲ. ಈಗ ಇರತಕ್ಕಂಥ ಬ್ಯಾಂಕುಗಳೆಲ್ಲಾ ತುಳು ಮತ್ತು ಕೊಡವರು ಮಾಡಿರುವಂತಹವುಗಳು. ಈ ದೇಶದ ಏಕತೆಗೋಸ್ಕರ ಶಕ್ತಿಯನ್ನು ತುಂಬಿದವರು ಜನರಲ್ ಕಾರಿಯಪ್ಪ ಮತ್ತು ಜನರಲ್ ತಿಮ್ಮಯ್ಯ. ಇದೆಲ್ಲವನ್ನು ಬೇರೆ ಯಾರಿಗಾದರೂ ಹೇಳಿ. ಆದರೆ, ದಯವಿಟ್ಟು ಅದನ್ನು ನನ್ನ ಹತ್ತಿರ ಹೇಳುವುದು ಬೇಡ. ಈಗ soldiers ಗಳ ಕಥೆ ಬೇಡ. ಒಂದು ರಾಜ್ಯದಲ್ಲಿ soldiers ಗಳೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶ ಭಕ್ತಿ ಮತ್ತು ರಾಷ್ಟ್ರ ಭಕ್ತಿ ಬಗ್ಗೆ ಮಾತನಾಡುತ್ತಾರೆ. ಆದರೆ ಮಧ್ಯದಲ್ಲಿ ಮಾತನಾಡಿದರು, ನಾನು ಏನೋ ಮಾತನಾಡುತ್ತಿದ್ದೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 'ಆತ್ಮ ನಿರ್ಭರ' ಬಗ್ಗೆ ಮಾತನಾಡುತ್ತಿದ್ದರು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಘೋಷಣೆಗಳಿಗೆ ಏನೂ ತೊಂದರೆ ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಳು ಭಾಷೆಯ ಬಗ್ಗೆ ಏನೊ ಹೇಳುತ್ತಿದ್ದರು. Miss World ನಿಂದ Underworld ವರೆಗೂ ನಾವೇ ಇರುವುದು ಎಂದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಹೆಚ್.ಎಂ.ಟಿ. ಯೂನಿಯನ್‌ಗೆ ಹೋಗುವಾಗ ಮಾನ್ಯ ಆರ್.ಅಶೋಕ್‌ರವರು ಇನ್ನು ಮಕ್ಕಳಾಗಿದ್ದರು. ಆಗ ಇನ್ನು ಜಾಲಹಳ್ಳಿಯಲ್ಲಿ ಹೊಲಗಳು ಇದ್ದವು. ಇವತ್ತು ಆ ಹೊಲಗಳ ಕಥೆ ಏನಾಗಿದೆ? ಆದುದರಿಂದ ವಿಧೇಯಕದಲ್ಲಿ 79 'ಎ' ಮತ್ತು 'ಬಿ' ಏನಿದೆ ಅದು ಯಥಾಸ್ಥಿತಿಯಲ್ಲಿ ಇರುವುದು ಬಹಳ ಒಳ್ಳೆಯದು. ಏಕೆಂದರೆ, ಇವತ್ತು ಆ ವಿಧೇಯಕದ ಮೂಲಕ ಏನು ಕಾನೂನನ್ನು ತರುತ್ತಿದ್ದಾರೆ. ಕಲಂ 79-ಎ ಪ್ರಕಾರ 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವಾರ್ಷಿಕ ವರಮಾನ ಇರುವವರು ಕೃಷಿ ಭೂಮಿ ಖರೀದಿಸುವುದನ್ನು ನಿರ್ಬಂಧಿಸಿತ್ತು. ಆದರೆ, ಈ ಕಾಯಿದೆಯಲ್ಲಿ ಯಾರೇ ಆಗಲಿ, ಯಾವುದೇ ಮೂಲದ ವರಮಾನ ಇರುವವರು ಮತ್ತು ಎಷ್ಟೇ ವರಮಾನ ಇರುವವರು ಕೃಷಿ ಭೂಮಿಯನ್ನು ಖರೀದಿಸಬಹುದು. ಮಾನ್ಯ ಮರಿತಿಬ್ಬೇಗೌಡರು ಬಹಳ ಚೆನ್ನಾಗಿ ಹೇಳಿದರು. ಹೇಗೆ ಇದ್ದರೂ ಸಹ ಭೂಮಿಗೆ ಬೆಲೆ ಇದ್ದೆ ಇರುತ್ತದೆ. ಈಗ 50 ಎಕರೆ ಜಮೀನು ತೆಗೆದುಕೊಂಡು, ಬೇಲಿ ಹಾಕಿ ಅಲ್ಲಿ ನಾಯಿ ಇಟ್ಟುಕೊಂಡು. ಅಲ್ಲಿ ಕಿಚನ್ ಗಾರ್ಡನ್ ಮಾಡುತ್ತಾರೆ. ಆದುದರಿಂದ ರೈತ ಅಲ್ಲದೆ ಬೇರೆ ಯಾರಿಗಾದರೂ ಜಮೀನು ತೆಗೆದುಕೊಳ್ಳುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಾಗ, ರೈತರು ಯಾರು ರೈತರಾಗಿ ಉಳಿಯುವುದಿಲ್ಲ. ಅವರನ್ನು ಕೂಲಿ ಕಾರ್ಮಿಕರಾಗಿ ಮಾಡುತ್ತಾರೆ. ಆದುದರಿಂದ, ಕಲಂ 79 'ಎ' ಮತ್ತು 'ಬಿ' ಅನ್ನು ಪುನಃ ಯಾವ ಸ್ಥಿತಿಯಲ್ಲಿ ಇತ್ತೋ ಆ ರೀತಿಯಲ್ಲಿ ಇಡುವುದು ಬಹಳ ಉತ್ತಮ. ಮತ್ತೆ ಕಲಂ 63ರಲ್ಲಿ ಭೂ ಒಡೆತನಕ್ಕೆ ಮಿತಿಯನ್ನು ವಿಧಿಸಲಾಗಿತ್ತು. ಅಂದರೆ, ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ಹತ್ತು ಯೂನಿಟ್ ಭೂಮಿಯನ್ನು ಹೊಂದಬಹುದಾಗಿತ್ತು. ಹತ್ತು ಯೂನಿಟ್ ಎಂದರೆ, 10 ರಿಂದ 13 ಎಕರೆ ತೋಟ 12 ಎಕರೆ ನೀರಾವರಿ ಮತ್ತು 54 ಎಕರೆ ಖುಷ್ಕಿ ಒಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿ. ಈ ಕಲಂ ಅನ್ನು ತೆಗೆದುಹಾಕಿದ್ದಾರೆ. ಈಗ ಐದು ಜನರಿರುವ ಕುಟುಂಬ 20 ಯೂನಿಟ್, ಅದರಂತೆ ಹೆಚ್ಚು ಜನರಿದ್ದರೆ 40 ಯೂನಿಟ್‌ಗಳಿಗೆ ಹೆಚ್ಚುತ್ತದೆ. ಅಂದರೆ, 216 ಎಕರೆ ಖುಷ್ಕಿ ಜಮೀನನ್ನು ಹೊಂದಬಹುದು. ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲು ಈ ದೇಶದಲ್ಲಿ ಜಮೀನುಗಳಿಗೆ ಯುದ್ಧವಾಗುತ್ತಿತ್ತು ಎಂದು ನಾನು ಈಗಾಗಲೇ ಹೇಳಿದ್ದೇನೆ. ಅಂದರೆ, ಹೆಣ್ಣು, ಹೊನ್ನು ಮತ್ತು ಮಣ್ಣು. ಈ ಹಿಂದೆ ಜಮೀನಿಗೋಸ್ಕರ ನಡೆದಂತಹ ಯುದ್ಧಗಳು ಈಗ ಪುನರಾವರ್ತನೆಯಾಗುವುದು ಬೇಡ. ಆದುದರಿಂದ ದಯವಿಟ್ಟು ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿ ಒಂದು ಮಾದರಿಯಾದ ರಾಜ್ಯವಾಗಿದೆ. ರೈತರು ನೆಮ್ಮದಿಯಿಂದ ಇದ್ದಂತಹವರು. ಅದಕ್ಕೋಸ್ಕರ ಈ ಕಾನೂನನ್ನು ವಾಪಸ್ಸು ತೆಗೆದುಕೊಳ್ಳುವುದು ಬಹಳ ಮುಖ್ಯ. ನನಗೆ ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರ ಅದೃಷ್ಟ ಏನಿದೆ ಎಂದು ಗೊತ್ತಿಲ್ಲ. ಅವರು ರೈತರ ಬಗ್ಗೆ ಬಹಳಷ್ಟು ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ಅವರು ಮುಖ್ಯಮಂತ್ರಿಗಳಾದಾಗ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಹಾವೇರಿ ಜಿಲ್ಲೆಯಲ್ಲಿ ರಸಗೊಬ್ಬರವನ್ನು ಕೇಳುವುದಕ್ಕೆ ಹೋದಾಗ firing ನಲ್ಲಿ ಆರು ಜನರು ಸತ್ತರು. ಈ ಭೂ ಮಸೂದೆ ಕಾನೂನನ್ನು ತಂದು ಇರತಕ್ಕಂಥ ಭೂ ಮಾಲೀಕರನ್ನೆಲ್ಲಾ ನಿಜವಾದ ರೈತರನ್ನು...

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಆರು ಜನರು ಅಲ್ಲ, ಒಬ್ಬರು ಮಾತ್ರ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಆರು ಜನರ ಹೆಸರನ್ನು ಹೇಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಯಾವುದೋ ಒಂದು Enquiry Committee ಮಾಡಿ ಅವರುಗಳನ್ನೆಲ್ಲಾ ಗೂಂಡಾ ಎಂದು ಕರೆದುಬಿಟ್ಟರು. ಅದು ಅವರಿಗೆ ಗೊತ್ತೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಆರು ಜನರು ಎಂದ ಮೇಲೆ ಅವರುಗಳ ಹೆಸರನ್ನು ಹೇಳಬೇಕು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು argue ಮಾಡುವುದಾದರೆ ಮಾಡಲಿ, ಅದರಿಂದ ನನಗೆ ಯಾವುದೇ ರೀತಿಯ ತೊಂದರೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಕೆ.ಪ್ರಾಣೇಶ್ ಅವರು ಒಬ್ಬರು ಮಾತ್ರ ಸತ್ತರು ಎಂದು ಹೇಳಿದರು. ಬಹಳ ಸಂತೋಷ. ಅಂದರೆ ಅವರ ಪ್ರಕಾರ ಒಂದು ಜೀವಕ್ಕೆ ಬೆಲೆ ಇಲ್ಲವೆಂದು ಅವರು ಹೇಳುವುದು.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಒಂದು ಮತ್ತು ಆರಕ್ಕೆ ಬೆಲೆ ಇಲ್ಲವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಹೇಳುತ್ತೇನೆ. ಈಗ ಅಲ್ಲಿ ಆರು ಜನ ಸತ್ತಿಲ್ಲವೆಂದರೆ ನಾನು ರಾಜಕೀಯ ಬಿಟ್ಟು ಬಿಡುತ್ತೇನೆ. ಆದುದರಿಂದ ಇದು ಒಂದು ಕರಾಳ ಕಾನೂನು. ಹಿಂದೆ ಬಾಬಾ ರಾಮದೇವ್ ಮತ್ತೆ ಕೆಲವರು ಗಲಾಟೆ ಮಾಡಿದಾಗ, ನಮ್ಮವರೇ ಅವರನ್ನು ಭೇಟಿ ಮಾಡುವುದಕ್ಕೆ ಹೋಗಿಬಿಟ್ಟರು. ಆಗ ನಮಗೂ ಸ್ವಲ್ಪ ಬುದ್ಧಿ ಇರಲಿಲ್ಲ. ಆಗ ಸರ್ಕಾರ ಕಳೆದುಕೊಳ್ಳಬೇಕಾಯಿತು. ಆದರೆ, ಈಗ ರೈತರು ಚಳುವಳಿಯಲ್ಲಿ ಕುಳಿತಿದ್ದಾರೆ. ಅಲ್ಲಿಗೆ ಮಂತ್ರಿಗಳು ಯಾರೂ ಸಹ ಹೋಗುತ್ತಿಲ್ಲ. ವಿಜ್ಞಾನ ಭವನ ಎಂದು ಇದೆ. ಅದು ಬಹಳ ಸುಸಜ್ಜಿತವಾದ ಮತ್ತು ಬಹಳ ಸೊಗಸಾದ ಮಂದಿರ. ಅಲ್ಲಿ ಹವಾನಿಯಂತ್ರಣದ ಒಂದು ದೊಡ್ಡ ಹಾಲ್ ಇದೆ. ಅಲ್ಲಿಗೆ ಅವರನ್ನು ಕರೆಯಿಸಿ ಮಾತನಾಡುತ್ತಿದ್ದಾರೆ. ಅಂದರೆ, ಆ ರೈತರು ಯಾವುದಕ್ಕೂ ಬಗ್ಗದೆ ಅವರ ಮುಖಕ್ಕೆ ಮಂಗಳಾರತಿ ಮಾಡಿದ್ದಾರೆ. ರೈತರಿಗೆ Lunch and Dinner ಕೊಟ್ಟರೆ. ಅದನ್ನು ತೆಗೆದುಕೊಳ್ಳದೆ ಅವರೇ ಮಾಡಿಕೊಂಡಿದ್ದಾರೆ. ಅಲ್ಲದೆ ರೈತರ ಹೋರಾಟಕ್ಕೆ ಅವಮಾನ ಮಾಡುವುದು ಸರಿಯಲ್ಲ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಂದ ಬಂದಂತಹ ರೈತರಿಗೆ ಖಲಿಸ್ತಾನಿ ಹೋರಾಟಗಾರರು ಎಂದು ಬಿಟ್ಟರು. ಈ ಸರ್ಕಾರದ ವಿರುದ್ಧ ಯಾರು ಹೋಗುತ್ತಾರೆ ಅವರು ಖಲಿಸ್ತಾನಿಗಳು. ಸಿ.ಐ.ಐ. ಮತ್ತು ಎನ್.ಆರ್.ಸಿ. ಬಗ್ಗೆ ಮಾತನಾಡಿದರೆ ಅಂತಹವರು ಪಾಕಿಸ್ತಾನಿಗಳು. ರೈತರು ತಮ್ಮ ಹಕ್ಕನ್ನು ಕೇಳಿ ಮತ್ತು ಪ್ರಧಾನ ಮಂತ್ರಿಗಳ ಬಗ್ಗೆ ಹೇಳಿದರೆ ಅವರು ದೇಶದ್ರೋಹಿಗಳು ಎಂದು ಪಟ್ಟಿ ಹೇಳುವುದನ್ನು ಬಿಟ್ಟು ಬಿಡಲಿ. ರೈತರು ಈ ದೇಶದ ಬೆನ್ನೆಲುಬು. ಅವರಿಗೆ ಗೌರವ ಕೊಡುವಂತಹ ಕೆಲಸವನ್ನು ಮಾಡಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಧ್ಯದಲ್ಲಿ intervene ಆಗುತ್ತೇನೆ. ಸನ್ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮತ್ತು ನಾನು ಒಟ್ಟಿಗೆ ರಾಜ್ಯಸಭೆಯಲ್ಲಿ ಇದ್ದೆವು. ಈಗ ಅವರು ನನ್ನ ಹಾಗೆಯೇ ಇಲ್ಲಿಗೆ ಬಂದಿದ್ದಾರೆ. ಆದರೆ, ಅವರು ಇನ್ನು ದೆಹಲಿ ಗುಂಗಿನಿಂದ ಹೊರಗೆ ಬಂದಿಲ್ಲ. ಅವರು ಇನ್ನು ದೆಹಲಿ ಗುಂಗಿನಲ್ಲೇ ಇದ್ದಾರೆ. ಅವರು ಪಾರ್ಲಿಮೆಂಟ್‌ನಲ್ಲಿ ಭಾಷಣ ಮಾಡಬೇಕಾಗಿತ್ತು. ಆದರೆ, ಅವರು ಇಲ್ಲಿ ನಮಗೆ ಏಕೆ ಹಿಂಸೆ ಮಾಡುತ್ತಿದ್ದಾರೆ. You tell your leaders. ಅವರು ಕರ್ನಾಟಕದ ರೈತರ ಬಗ್ಗೆ ಮಾತನಾಡಿದರೆ ನಾವು ತಾಳ್ಮೆಯಿಂದ ಕೇಳುವುದಕ್ಕೆ ತಯಾರಿದ್ದೇವೆ. ನೀವು ದೆಹಲಿಯ ಇತಿಹಾಸ ಮತ್ತು ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಏನು ಹೇಳಿದರು ಎಂದರೆ, ಅದಕ್ಕೆ ನಾವು ಮಾನ್ಯ ರಾಹುಲ್ ಗಾಂಧಿಯವರು ಏನು ಹೇಳಿದರು ಎಂದು ಸಹ ಹೇಳಬೇಕಾಗುತ್ತದೆ. That is not good. ಈ ಸದನದ ಇತಿಮಿತಿಯೊಳಗೆ ಏನು ಮಾತನಾಡಬೇಕೋ ಅದನ್ನು ಮಾತನಾಡುವುದಕ್ಕೆ ನಮ್ಮ ಪೂರ್ತಿ ಸಹಕಾರವಿದೆ. ಆದುದರಿಂದ ಅದನ್ನು ಸಹನೆಯಿಂದ ಕೇಳುತ್ತೇವೆ. ನಿಜ ಅವರಿಗೆ ಪ್ರಪಂಚ ಮತ್ತು ದೇಶ ಗೊತ್ತಿದೆ. ಅದನ್ನೆಲ್ಲಾ ತಂದು ಇಲ್ಲಿ ಸುರಿಯುತ್ತಾರೆಯೇ? ಇದು **XXXXX** ಅಲ್ಲ. ಇದು ಶಾಸನ ಸಭೆ. ರಾಜ್ಯಕ್ಕೆ ಸಂಬಂಧಪಟ್ಟಂತೆ ಮಾತನಾಡಿದರೆ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ನಮ್ಮ ಪೂರ್ತಿ ಬೆಂಬಲ ಇದೆ. ಹಾಗಾಗಿ ದಯಮಾಡಿ ಅದನ್ನು limit ಮಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು limit ಮಾಡುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಈ ರೀತಿಯ ಮನಸ್ಥಿತಿ ಇರುವುದರಿಂದಲೇ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಏನು ಜಿ.ಎಸ್.ಟಿ. ಹಣ ಬರಬೇಕಾಗಿತ್ತು ಅದು ಬರುತ್ತಿಲ್ಲ. ನಾವು ಕೇಂದ್ರ ಸರ್ಕಾರದ ಕಿವಿ ಹಿಂಡುವಂತಹ ಕೆಲಸವನ್ನು ಮಾಡಬೇಕು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅಲ್ಲಿ ನಮ್ಮ ಮತ್ತು ವಿರೋಧ ಪಕ್ಷದ ಎಂ.ಪಿ.ಗಳು ಇದ್ದಾರೆ.

---

**XXXXX ಮಾನ್ಯ ವೈಸ್ ಛೇರ್ಮನ್‌ರವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಏನೇನು ಬರಬೇಕು ಅದರ ಬಗ್ಗೆ ಮಾತನಾಡಬೇಕಾಗುತ್ತದೆ. ಅದರ ಬಗ್ಗೆ ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್ ಅವರಷ್ಟು ಬುದ್ಧಿವಂತನಲ್ಲ. ಕರ್ನಾಟಕ ರಾಜ್ಯ ಸಹ ಈ ಭಾರತ ದೇಶದ ಒಕ್ಕೂಟದಲ್ಲಿ ಇರುವಂಥದ್ದು. ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಮಾತನಾಡುವುದಕ್ಕೆ ವಿರೋಧ ಪಕ್ಷ ಇಲ್ಲದೇ ಇರುವಾಗ ಈ ಕಾನೂನನ್ನು ಜಾರಿಗೆ ತಂದು ಬಿಟ್ಟರು. ಅಂತಹ ಸಮಯದಲ್ಲಿ ಯಾರು ಮಾತನಾಡುತ್ತಾರೆ. ಈಗಲೂ ಸಹ ಮಾತನಾಡುತ್ತಾರೆ ಅವರಿಗೆ ಧೈರ್ಯವಿದ್ದರೆ ಪಾರ್ಲಿಮೆಂಟ್ ಕರೆಯಲಿ. ಅದನ್ನು ಬಿಟ್ಟು ದೇಶದ ಬಗ್ಗೆ ಇಲ್ಲಿ ಹೇಳಬೇಡಿ ಎಂದರೆ, Karnataka is a part of India.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ,...

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಶಿವಮೊಗ್ಗ ಜಿಲ್ಲೆಯ ಕಾಗೋಡು ಜಾಗದಿಂದ ಬಂದಿರುವಂತಹವರು. ಅವರ ಈ ನಿಲುವು ಅವರಿಗೆ ಮತ್ತು ಈ ಸದನಕ್ಕೆ ಶೋಭೆ ತರುವಂಥದಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾವು ರೈತರ ಪರವಾಗಿ ಇದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಸದನ **XXXXX** ಅಲ್ಲವೆಂದು ಹೇಳಿದರು. ಹಾಗಾದರೆ ಮಾನ್ಯ ಪ್ರಧಾನ ಮಂತ್ರಿಗಳು ಏನು ಮಾಡಿದ್ದಾರೆ. ಅವರು ಪಾರ್ಲಿಮೆಂಟ್ ಅನ್ನು **XXXXX** ಮಾಡಿದ್ದಾರೆ. ಅದಕ್ಕೆ ಮಾನ್ಯ ಸದಸ್ಯರು ಏನು ಉತ್ತರ ಕೊಡುತ್ತಾರೆ.

---

**XXXXX ಮಾನ್ಯ ವೈಸ್ ಛೇರ್ಮನ್‌ರವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1008)-08.12.2020-01.20-LL-BNS

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದುವರೆದಿದ್ದು...)**

ಅವರು ಪಾರ್ಲಿಮೆಂಟ್‌ಗೆ ಗೌರವ ಕೊಟ್ಟಿದ್ದಾರೆಯೇ ಅಥವಾ ಪಾರ್ಲಿಮೆಂಟಿನಲ್ಲಿರುವಂತಹ ಸಂವಿಧಾನಕ್ಕೆ ಗೌರವ ಕೊಟ್ಟಿದ್ದಾರೆಯೇ? **(ಗೊಂದಲ)** ಮಾನ್ಯ ಸದಸ್ಯರು ಸಹ ಪಾರ್ಲಿಮೆಂಟ್‌ನಲ್ಲಿ ಸದಸ್ಯರಾಗಿದ್ದರಿಂದ, ಈ ಸದನಕ್ಕೆ **XXXXX** ಎನ್ನುವ ಪದ ಬಳಕೆ ಮಾಡಬಾರದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಯವರು ಪಾರ್ಲಿಮೆಂಟ್ ಅನ್ನು **XXXXX** ಮಾಡಿರುವುದಿಲ್ಲ. ನಿಮ್ಮ ನಾಯಕರನ್ನು **XXXXX** ಗೆ ಹಾಕಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, **XXXXX** ಎನ್ನುವ ಪದವನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ಶ್ರೀ ಹಣಮಂತ ರುದ್ರಪ್ಪ ನಿರಾಣಿ:-** ಮಾನ್ಯ ಸಭಾಪತಿಯವರೇ, ಅವರು **XXXXX** ಮಾಡಿರುವುದಿಲ್ಲ. ದೇವಾಲಯದ ರೀತಿ ಮಾಡಿ ಪೂಜೆ ಮಾಡಿದ್ದಾರೆ. **(ಗೊಂದಲ)** ದಯಮಾಡಿ ಆ ಶಬ್ದವನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಕಂದಾಯ ಸಚಿವರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

---

**XXXXX ಮಾನ್ಯ ವೈಸ್ ಛೇರ್ಮನ್‌ರವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕಲಂ 79(ಎ)(ಬಿ) ಬಗ್ಗೆ ವಿಧೇಯಕದ ಮೇಲೆ ಚರ್ಚೆಗೆ ತರಲಾಗಿರುತ್ತದೆ. ದಯಮಾಡಿ, ಮಾನ್ಯ ಸದಸ್ಯರು ಅಷ್ಟಕ್ಕೆ ಸೀಮಿತವಾಗಿ ಮಾತನಾಡಲಿ. ಏಕೆಂದರೆ, 3 ದಿನ ಆಯಿತು. ಸದರಿ ವಿಧೇಯಕದ ಬಗ್ಗೆ ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ವಿಧೇಯಕದ ಮೇಲಿನ ಚರ್ಚೆಯನ್ನು ಮುಂದೂಡಬೇಕು ಎನ್ನುವುದು ಬೇಡ. ಏನೇ ಚರ್ಚೆ ಇದ್ದರೂ ಮಾತನಾಡೋಣ. ಹಾಗಾಗಿ, ಚರ್ಚೆ ಬೇರೆಡೆಗೆ ಹೋಗುವುದು ಬೇಡ, ಇರುವಂತಹ ವಿಷಯದ ಬಗ್ಗೆ ಮಾತನಾಡಲಿ, ಅದಕ್ಕೆ ನಾವು ಉತ್ತರ ನೀಡುತ್ತೇವೆ.

**(ಗೊಂದಲ)**

**ವೈಸ್ ಚೇರ್ಮನ್:-** ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಈ ಸದನದ ಬಗ್ಗೆ **XXXXX** ಎಂದು ಹೇಳಿರುವುದನ್ನು **ಕಡತದಿಂದ ತೆಗೆದು ಹಾಕಿದೆ.**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ಹಾಗಾಗಿ, ಈ ಸದನದಲ್ಲಿ ಚರ್ಚೆ ಆಗಬಾರದೆಂದು ಎಲ್ಲಿಯೂ ಇರುವುದಿಲ್ಲ. ವಿಧಾನಸಭೆಯಲ್ಲಿ ಆಗಿರುವುದೇ ಅಂತಿಮ ತೀರ್ಮಾನ ಎನ್ನುವುದಾದರೆ, ಈ ಸದನವನ್ನು ಮುಚ್ಚಲಿ. ಈ ಸದನ ಏತಕ್ಕೆ ಬೇಕಾಗಿದೆ? ಚಿಂತಕರ ಛಾವಡಿ ಎಂದು ಹೇಳುವಂತಹ ಸದನದಲ್ಲಿ ವಿಚಾರಧಾರೆಗಳನ್ನು ಮಾತನಾಡಲಿಲ್ಲವೆಂದರೆ, ಕಲಂ 79(ಎ)(ಬಿ) ಎಲ್ಲಾ ಭೂಮಿ ಕೃಷಿಗೆ ಸಂಬಂಧಪಟ್ಟಿರುವುದಾಗಿದೆ. ನಾನು ಮಾತನಾಡಿರುವಂತಹ ಎಲ್ಲಾ ವಿಚಾರ ಈ ಕಾನೂನಿಗೆ ಸಂಬಂಧಪಟ್ಟಿರುವುದಾಗಿದೆ. **(ಗೊಂದಲ)** ಆದುದರಿಂದ, ಆಡಳಿತ ಪಕ್ಷದವರು ಕಾನೂನನ್ನು ಮೀರಿಸುತ್ತೇವೆಂದು ಹೇಳುತ್ತಾರಲ್ಲವೇ..?

**ಶ್ರೀ ಆರ್. ಅಶೋಕ್:-** ಮಾನ್ಯ ಹರಿಪ್ರಸಾದ್‌ರವರೇ, ದಯಮಾಡಿ ವಿಷಯಕ್ಕೆ ಬನ್ನಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದಕ್ಕೆ ಉತ್ತರ ನೀಡಬೇಕಲ್ಲವೇ? ಶ್ರೀ ರಾಜೀವ್‌ಗಾಂಧಿಯವರು ಗ್ರಾಮ ಸ್ವರಾಜ್ ಬಗ್ಗೆ ಸಂವಿಧಾನದ 73 ಮತ್ತು 74 ತಿದ್ದುಪಡಿ ಮಾಡಿದ ನಂತರ ಆ ಕಾನೂನನ್ನು ರಾಜ್ಯಸಭೆಯಲ್ಲಿ ಕೆಡವಿದವರು ಯಾರು ಸ್ವಾಮಿ? ರಾತ್ರಿ 12-00 ಗಂಟೆಗೆ ನಾವು

---

**XXXXX ಮಾನ್ಯ ವೈಸ್ ಛೇರ್ಮನ್‌ರವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾತಂತ್ರ್ಯ ಕೊಟ್ಟೆವು ಎಂದು ಹೇಳಿ, ರಾತ್ರಿ 12–00 ಗಂಟೆಗೆ ಜಿ.ಎಸ್.ಟಿ. ಜಾರಿಗೆ ತಂದರಲ್ಲಾ ಅದರ ಕಥೆ ಏನಾಯಿತು ಹೇಳಿ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಏನಾಯಿತು?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಏನಾಯಿತೆಂದರೆ, 43% ಬಂದಿದೆಯಲ್ಲ. ಜಿ.ಡಿ.ಪಿ. –27% ಬಂದಿರುತ್ತದೆ.

**(ಗೊಂದಲ)**

**ವೈಸ್ ಚೇರ್ಮನ್:–** ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್‌ಸಿಂಗ್‌ರವರು ಯಾವ ಭಾಷೆಯಲ್ಲಿ ಮಾತನಾಡುತ್ತಾರೋ ಆ ಭಾಷೆಯಲ್ಲಿಯೇ ನಾನು ಮಾತನಾಡುತ್ತೇನೆ.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಲಹರ್‌ಸಿಂಗ್‌ರವರೇ ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಲಹರ್‌ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅನುಕೂಲವಾಗುವ ಭಾಷೆಯಲ್ಲಿಯೇ ಮಾತನಾಡಲಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ವ್ಯಾಪಾರಸ್ಥರ ಪಕ್ಷ ಅಲ್ಲ. ವ್ಯಾಪಾರಸ್ಥರ ಪಕ್ಷದವರು ಅಧಿಕಾರಕ್ಕೆ ಬಂದರೆ ಆಗುವುದು ಇದೇ. ಆದುದರಿಂದ, ಈ ಕರಾಳ ಕಾನೂನನ್ನು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಆಯನೂರು ಮಂಜುನಾಥ್‌ರವರು ಆಗಲೇ ಈ ಸದನವನ್ನು **XXXXX** ಎಂದು ಹೇಳಿದ್ದಾರೆ, ಅದರಲ್ಲಿ ಹಾಕುವುದಕ್ಕೂ ಯೋಗ್ಯವಲ್ಲ ಈ ಕಾನೂನು. ಇದನ್ನು ತೆಗೆದು ಚರಂಡಿಯಲ್ಲಿ ಹಾಕುವುದು ಬಹಳ ಉತ್ತಮವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೂ ಮತ್ತು ನಮ್ಮ ನಾಯಕರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ವೈಸ್ ಚೇರ್ಮನ್:-** ಮುಂದೆ ಯಾರು ಮಾತನಾಡುತ್ತಾರೆ? ಈಗ ಶ್ರೀ ಎಂ. ನಾರಾಯಣಸ್ವಾಮಿಯವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ನಾನು ಉತ್ತರ ಕೊಡುತ್ತೇನೆ. ಆ ನಂತರ ಅವರು ಮಾತನಾಡಲಿ. ಈಗಾಗಲೇ ಸಾಕಷ್ಟು ಸದಸ್ಯರು ವಿಧೇಯಕದ ಮೇಲೆ ಚರ್ಚೆ ಮಾಡಿದ್ದಾರೆ. ಶ್ರೀ ಎಂ. ನಾರಾಯಣಸ್ವಾಮಿಯವರು ಸಹ ಮಾತನಾಡಿದ್ದಾರೆ. **(ಗೊಂದಲ)** ಎರಡೆರಡು ಬಾರಿ ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಈ ಸದನವನ್ನು ಬಹಳ ಸುದೀರ್ಘವಾಗಿ ನೋಡಿದ್ದೀರಿ. ಹಾಗಾಗಿ, ಈ ಪೀಠದ ಬಗ್ಗೆ ಬಹಳ ಅನುಭವವುಳ್ಳರಾಗಿದ್ದು, ಎಲ್ಲಾ ವಿಚಾರಗಳನ್ನು ತಾವು ಅರ್ಥ ಮಾಡಿಕೊಳ್ಳುತ್ತೀರಿ. ಈ ಸದನದ ಸತ್ಸಂಪ್ರದಾಯಗಳು ಏನೆಂದು ಗೊತ್ತಿರುವವರು ತಾವು. ಈ ವಿಧೇಯಕ ಎಷ್ಟು ಬಾರಿ ಸದನಕ್ಕೆ ಬಂದಿದೆಯೆಂಬುದನ್ನು ತಾವು ಅರ್ಥ ಮಾಡಿಕೊಂಡವರು. ತಮ್ಮ ಅನುಭವದ ಆಧಾರದಲ್ಲಿ ಯಾವುದಾದರೂ ಒಂದು ವಿಧೇಯಕಕ್ಕೆ ಇಷ್ಟೊಂದು ಸತಾಯಿಸಿದ ಮತ್ತೊಂದು ಉದಾಹರಣೆ ಇದೆಯೇ? ಆ ಬಗ್ಗೆ ತಿಳಿಸಿ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಎಲ್ಲರಿಗೂ ನ್ಯಾಯ ಕೊಡುವಂತಹ ಸ್ಥಾನದಲ್ಲಿ ಕುಳಿತಿದ್ದೀರಿ.

**(ಗೊಂದಲ)**

---

**XXXXX ಮಾನ್ಯ ವೈಸ್ ಛೇರ್ಮನ್‌ರವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ...

**ವೈಸ್ ಚೇರ್ಮನ್:-** ಮಾನ್ಯ ನಾರಾಯಣಸ್ವಾಮಿಯವರೇ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಭಾಪತಿ ಸ್ಥಾನದಲ್ಲಿರುವ ತಾವು ತಕ್ಷಣವೇ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಾಗಿದೆ. ಸರ್ಕಾರದ ಉತ್ತರ ಕೊಟ್ಟ ನಂತರ ಪ್ರತಿಪಕ್ಷದವರು ಪ್ರಶ್ನೆ ಕೇಳಲಿ. ತಾವು ಏನು ಮಾಡುತ್ತೀರೋ ಅದನ್ನು ಮಾಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಈ ವಿಧೇಯಕದ ಮೇಲೆ ಚರ್ಚೆ ಮಾಡಬಾರದೆಂದು ಹೇಳುತ್ತಾರೆಯೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಅವರು ಎಷ್ಟು ದಿನದಿಂದ ಚರ್ಚೆ ಮಾಡಿದ್ದಾರೆ?

**(ಗೊಂದಲ)**

**ವೈಸ್ ಚೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಚರ್ಚೆ ಮಾಡಿರುವುದಿಲ್ಲ. ಆಡಳಿತ ಪಕ್ಷದವರು ಈ ವಿಧೇಯಕದ ಮೇಲೆ, why are they hurrying.

**(ಗೊಂದಲ)**

**ವೈಸ್ ಚೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ತಾವು ಯಾವ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಾವು ಯೋಚನೆ ಮಾಡಬಹುದು. ಆದರೆ, ಇಷ್ಟೊಂದು ಪ್ರಮಾಣದಲ್ಲಿ ವಿಧೇಯಕದ ಮೇಲೆ ಚರ್ಚೆ ಮಾಡುವುದು ಸರಿಯಲ್ಲ. ಈ ವಿಧೇಯಕದ ಮೇಲೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, what is their intention? ವಿಧೇಯಕದ ಮೇಲೆ ಚರ್ಚೆ ಮಾಡಬಾರದೆಂದರೆ, ಈ ಸದನ ಏತಕ್ಕೆ ಇರಬೇಕು? Every Member deserves to speak.

**ವೈಸ್ ಚೇರ್ಮನ್:-** ದಯಮಾಡಿ, ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಜೊತೆಗೆ, ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮತ್ತು ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿದ್ದಾರೆ. ಬಹುಶಃ ಇತ್ತೀಚಿನ ವರ್ಷಗಳಲ್ಲಿ ಯಾವುದೇ ವಿಧೇಯಕದ ಮೇಲೆ ಇಷ್ಟು ಸುದೀರ್ಘವಾದಂತಹ ಚರ್ಚೆ ನಡೆದಿರುವುದಿಲ್ಲ. ಅಷ್ಟಾದರೂ ಕೂಡ ತಾವು ಹೇಳಿರುವುದನ್ನು ಒಪ್ಪಿಕೊಂಡಿದ್ದೇವೆ. ಆದಾಗ್ಯೂ ನಮ್ಮ ವಿನಂತಿ ಏನೆಂದರೆ, ಈ ಬಗ್ಗೆ ತಾವು ತಕ್ಷಣವೇ ಒಂದು ತೀರ್ಮಾನ ತೆಗೆದುಕೊಂಡು, ಸರ್ಕಾರ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಆ ನಂತರ ತಾವು ಯಾವ ತೀರ್ಮಾನವಾದರೂ ತೆಗೆದುಕೊಳ್ಳಿ. ಇದು ಯಾವ ನ್ಯಾಯ. ಇಲ್ಲಿಯವರೆಗೂ ತಾವು ಈ ಸದನದ ಸಂಪ್ರದಾಯವನ್ನು ನೋಡಿದ್ದೀರಿ. ಆ ಪೀಠದ ಎಲ್ಲಾ ನಿರ್ಧಾರಗಳನ್ನು ತಾವು ಗಮನಿಸಿದ್ದೀರಿ. ಸಾಕಷ್ಟು ವರ್ಷಗಳ ಕಾಲ ತಾವು ಆ ಪೀಠದಲ್ಲಿದಲ್ಲಿದ್ದೀರಿ. ಹಾಗಾಗಿ, ಈ ಬಗ್ಗೆ ತಾವು ಒಂದು ನಿರ್ಧಾರ ತೆಗೆದುಕೊಳ್ಳಿ. ಅದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಾಗಿದೆ. ನಿನ್ನೆಯ ದಿವಸ 7-30 ಗಂಟೆಯವರೆಗೂ ವಿಧೇಯಕದ ಮೇಲೆ ಚರ್ಚೆ ಮಾಡಲಾಗಿರುತ್ತದೆ. ಆ ಸಂದರ್ಭದಲ್ಲಿ ಚರ್ಚೆ ಮಾಡಬಹುದೆಂದು ನಾವು ಹೇಳಿದ್ದೆವು. ಆದರೆ, ಆ ರೀತಿ ಆಗದೇ ಸಭೆಯನ್ನು ಮುಂದೂಡಬೇಕಾಯಿತು. ಅದಕ್ಕೆ ಅವರು ಕಾರಣ ಅಲ್ಲದೇ ಇರಬಹುದು, ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೀಠದ ನಿರ್ಧಾರ. ಇವೊತ್ತಿನ ದಿವಸ ನಾವು ಸರ್ಕಾರದ ಪರವಾಗಿ ವಿನಂತಿ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳು ಉತ್ತರ ನೀಡುವುದಕ್ಕೆ ಎದ್ದು ನಿಂತಿದ್ದಾರೆ. ಅವರಿಗೆ ಉತ್ತರ ನೀಡುವುದಕ್ಕೆ ಅವಕಾಶ ಮಾಡಿಕೊಡಿ. ನಂತರ, ತಾವು ಏನು ತೀರ್ಮಾನ ಮಾಡುತ್ತೀರೋ ಅದನ್ನು ಮಾಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ...

**ವೈಸ್ ಚೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಕೂರಬೇಕು? ಮಾನ್ಯ ಸಭಾ ನಾಯಕರು ಮಾತನಾಡಿರುವುದಕ್ಕೆ ನಾನು ಉತ್ತರ ನೀಡಬಾರದೇ? ಇದು ವಿಧೇಯಕ. ಇಂತಹ ವಿಧೇಯಕದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕು. ಅಲ್ಲದೇ, ಈ ವಿಧೇಯಕ ಕೃಷಿಗೆ ಮತ್ತು ಕೃಷಿಕರಿಗೆ ಸಂಬಂಧಿಸಿರುವುದಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಈ ಸದನದಲ್ಲಿರುವಂತಹ ಬಹುತೇಕ ಸದಸ್ಯರು ಅಂದರೆ, ನೂರಕ್ಕೆ ತೊಂಬತ್ತರಷ್ಟು ಸದಸ್ಯರು ಕೃಷಿ ಕುಟುಂಬದಿಂದ ಬಂದಿದವರಾಗಿದ್ದಾರೆ. ಕೃಷಿಕರಿಗೆ ಆಗತಕ್ಕಂತಹ ಅನ್ಯಾಯದ ಬಗ್ಗೆ ಈ ಸದನದಲ್ಲಿ ಹೇಳದೇ, ಯಾವುದಾದರೂ ಬಜಾರಿನಲ್ಲಿ ಅಥವಾ ಬೀದಿಯಲ್ಲಿ ಹೇಳಬೇಕೇ? ಹಾಗಾಗಿ, ಈ ವಿಧೇಯಕದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಯಾವ್ಯಾವ ಸದಸ್ಯರು ಆಸಕ್ತಿ ಹೊಂದಿದ್ದಾರೆ ಅವರೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಅಧಿನಿಯಮದಲ್ಲಿ ಕೇಳಲಾದ ನಿರ್ಬಂಧಗಳನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ಎಂದು ಇದೆ. ಅದರಂತೆ, ಆ ಸಮುದಾಯಕ್ಕೆ ಸೇರಿದವರು ಅವರ ನೋವನ್ನು ಹೇಳಲಿಲ್ಲವೆಂದರೆ ಈ ವಿಧೇಯಕಕ್ಕೆ ಅರ್ಥ ಏನಿದೆ? ಆ ಬಗ್ಗೆ ಮಾತನಾಡುವುದಕ್ಕೆ ಬಿಡಲಿಲ್ಲವೆಂದರೆ ಹೇಗೆ?

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ನೀಡಿಲ್ಲವೆಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಹಿಂದಿನ ಅಧಿವೇಶನದಲ್ಲಿ ಹಾಗೂ ಈಗ ಚರ್ಚೆಯಾಗಿರುತ್ತದೆ. ಒಂದು ವಿಧೇಯಕದ ಬಗ್ಗೆ ಎರಡೆರಡು ಬಾರಿ ಮಾತನಾಡುವುದು ಬೇಡ. ಹಾಗಾಗಿ, ಈ ಹಿಂದೆ ಮಾತನಾಡಿದಂತಹವರಿಗೆ ತಾವು ದಯಮಾಡಿ ಅವಕಾಶ ನೀಡಬೇಡಿ. ಅದರ ಬದಲಾಗಿ, ಮಾತನಾಡಿದವರಿಗೆ 3–4 ಬಾರಿ ಅವಕಾಶ ನೀಡಿದರೆ ಅರ್ಥವೇ ಇರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, 2 ಬಾರಿ ಅಥವಾ 4 ಬಾರಿ ಯಾರು ಮಾತನಾಡಿದ್ದಾರೆಂದು ತಿಳಿಸಿ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ರೆಕಾರ್ಡ್ ತೆಗೆಸಿ ನೋಡಿದರೆ ಯಾರ್‍ಯಾರು ಮಾತನಾಡಿದ್ದಾರೆಂದು ಗೊತ್ತಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮಾತನಾಡಿರುವುದಿಲ್ಲ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಆದರೆ, ಶ್ರೀ ಮರಿತಿಬ್ಬೇಗೌಡರವರು ಹಿಂದೆಯೂ ಮಾತನಾಡಿದ್ದು, ಈಗಲೂ ಮಾತನಾಡಿರುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ದಿನ ಮಾನ್ಯ ಮರಿತಿಬ್ಬೇಗೌಡರವರು ವಿಧೇಯಕದ ಮೇಲೆ ಅರ್ಧ ಚರ್ಚೆ ಮಾಡಿದ್ದರು. **(ಗೊಂದಲ)** ಆಗ ಸದನ ಮುಂದೂಡಲಾಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ತಮಗೆ ಗೊತ್ತಿರುತ್ತದೆ. ಹಾಗಾಗಿ, ವಿಧೇಯಕದ ಮೇಲೆ ವಿನಾಕಾರಣ ಚರ್ಚೆ ಮುಂದುವರೆಸಿಕೊಂಡು ಹೋಗಬೇಕೆಂದು ತಾವು ಆದೇಶ ಕೊಟ್ಟರೆ ನಾವು ಅದನ್ನು ಪ್ರಶ್ನೆ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇಂತಹ ಕಾನೂನುಗಳು ಬೇಡವೆಂದು ಇವೊತ್ತಿನ ದಿವಸ ಇಡೀ ದೇಶದಲ್ಲಿಯೇ ಹೋರಾಟ ನಡೆಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ವಿಧೇಯಕದ ಮೇಲೆ ಮಾತನಾಡಬೇಡಿ ಎಂದು ಹೇಳುವುದು ಕೇಳಿದರೆ ನನಗೆ ಆಶ್ಚರ್ಯವಾಗುತ್ತದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಮರಿತಿಬ್ಬೇಗೌಡರವರು ಮತ್ತು ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮಾತನಾಡಿದ್ದಾರೆ. ಚರ್ಚೆ ಮಾಡುವುದೇ ಉದ್ದೇಶವೆಂಬ ರೀತಿಯಲ್ಲಿ ಚರ್ಚೆ ಮಾಡುವುದನ್ನು ತಾವು ಪೀಠದಲ್ಲಿ ಕುಳಿತುಕೊಂಡು ಒಪ್ಪಿಕೊಳ್ಳುವುದಾದರೆ ನಾವು ಅದನ್ನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ವಿಧೇಯಕದ ಮೇಲೆ ಮಾತನಾಡಬಾರದು, ಎಷ್ಟು ಮಾತನಾಡಬೇಕು, ಎಲ್ಲಿಯವರೆಗೂ ಮಾತನಾಡಬೇಕೆಂದು ಕೇಳಿರುವುದು ಇದೇ ಮೊದಲನೇ ಬಾರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಮೂಲಕ ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಸದನವನ್ನು ಊಟಕ್ಕಾಗಿ ಮುಂದೂಡುವ ಮೊದಲು... ದಯಮಾಡಿ ಈ ವಿಧೇಯಕ ಮೇಲೆ ಚರ್ಚೆಗೆ ಇಂತಿಷ್ಟು ಸಮಯ ಎಂದು ನಿಗದಿ ಮಾಡಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ 15ನೇ ತಾರೀಖಿನವರೆಗೂ ಅಂದರೆ, ಸದನ ಮುಗಿಯುವವರೆಗೂ ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ಸಮಯ ನಿಗದಿ ಇರುವುದಿಲ್ಲ. 15ನೇ ತಾರೀಖಿನವರೆಗೂ ನಾವು ವಿಧೇಯಕದ ಮೇಲೆ ಮಾತನಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ರೀತಿ 15ನೇ ತಾರೀಖಿನವರೆಗೂ ಚರ್ಚೆ ಮಾಡುತ್ತೇವೆಂದು ಹೇಳುವುದು ತಮಗೆ ಸರಿ ಅನ್ನಿಸುತ್ತದೆಯೇ? ವಿರೋಧ ಪಕ್ಷದ ನಾಯಕರು ಒಂದು ಜವಾಬ್ದಾರಿ ಸ್ಥಾನದಲ್ಲಿದ್ದು, ನಾವು ವಿಧೇಯಕದ ಮೇಲೆ 15ನೇ ತಾರೀಖಿನವರೆಗೂ ಚರ್ಚೆ ಮಾಡುತ್ತೇವೆ ಅವಕಾಶ ಕೊಡಬೇಕೆಂದು ಹೇಳುತ್ತಾರೆ. ಅದನ್ನು ಪೀಠ ಒಪ್ಪುತ್ತದೆಯೇ? **(ಗೊಂದಲ)** ಹಾಗಾಗಿ, ದಯಮಾಡಿ ಊಟದ ಸಮಯದೊಳಗೆ ಇದಕ್ಕೆ ಒಂದು ಸಮಯ ನಿಗದಿ ಮಾಡಿ, ನಮ್ಮ ಸರ್ಕಾರಕ್ಕೆ ಉತ್ತರ ನೀಡುವುದಕ್ಕೆ ಅವಕಾಶ ಕೊಡಿ. ಆ ನಂತರ ತಾವು ಏನು ನಿರ್ಧಾರ ಮಾಡುತ್ತೀರಿ ಅದನ್ನು ತಿಳಿಸಬೇಕೆಂದು ಕೋರುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ತಮಗೆ ಡಿಕ್ಟೇಟ್ ಮಾಡಬಹುದೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತಮಗೆ ಡಿಕ್ಟೇಟ್ ಮಾಡುತ್ತಿಲ್ಲ. ನಾನು ನ್ಯಾಯ ಕೇಳುತ್ತಿದ್ದೇನೆ. **(ಗೊಂದಲ)** ಸಭಾನಾಯಕರಿಗೆ ನಿರ್ಬಂಧ ಹೇಳುವಂತಹ ಅಧಿಕಾರ ಇಲ್ಲ. ಆದರೆ, ನ್ಯಾಯ ಕೇಳುವಂತಹ ಅಧಿಕಾರ ಇದೆ. ಪೀಠಕ್ಕೆ ಮನವರಿಕೆ ಮಾಡುವಂತಹ ಅಧಿಕಾರ ಇದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈ ಸದನಕ್ಕೆ ಬಂದು 23 ವರ್ಷ ಕಳೆದಿದೆ. ವಿಧೇಯಕದ ಮೇಲೆ ಮಾತನಾಡಬಾರದು, ಇಷ್ಟೇ ಜನ ಮಾತನಾಡಬೇಕು, ಇಂತಹ ಸದಸ್ಯರೇ ಮಾತನಾಡಬೇಕೆಂದು, ಇವರು ಮಾತನಾಡಬಾರದೆಂದು ಹೇಳಿದ್ದನ್ನು ನಾನು ಇದೇ ಮೊದಲನೇ ಸಲ ಕೇಳಿದ್ದು.

**(ಗೊಂದಲ)**

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1009)08.12.2020/1.30/ವೈಎಲ್-ಬಿಎನ್ಎಸ್ (ಮಾನ್ಯ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ ಮಾತನಾಡಬೇಡಿ ಎಂದು ಹೇಳಿಲ್ಲ. ಊಟದ ಸಮಯ ಬರುವ ಮುಂಚೆ ತಾವು ಸಮಯವನ್ನು ನಿಗದಿ ಮಾಡಿ, ಈ ವಿಧೇಯಕವನ್ನು ಅನುಮೋದಿಸಿ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಯಾರ್ಯಾರಿಗೆ ಈ ವಿಷಯದ ಮೇಲೆ ಮಾತನಾಡಲು ಆಸಕ್ತಿ ಇದೆ ಅವರು ಮಾತನಾಡಲು ಅನುವು ಮಾಡಿಕೊಡಬೇಕು. ರೈತ ಕುಟುಂಬದಿಂದ ಬಂದಂಥ ಪ್ರತಿಯೊಬ್ಬ ಸದಸ್ಯರು ಇಲ್ಲಿ ವಿಚಾರವನ್ನು ವ್ಯಕ್ತಪಡಿಸುವ ಹಕ್ಕು ಇದೆ. It is an inherent right of every Member of this August House.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠ ಮಾತಿಗೆ ಅನುವು ಮಾಡಿಕೊಟ್ಟ ಮೇಲೆ ನಾವು ಮಾತನಾಡಿದ್ದೇವೆ. ಅದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ನಿಯಮವಾಗಿದೆ. ಆದ್ದರಿಂದ ತಮ್ಮ ಪೀಠಕ್ಕೆ ಮನವಿ ಮಾಡುವುದೇನೆಂದರೆ, ದಯವಿಟ್ಟು ಮಧ್ಯಾಹ್ನ ಊಟದ ಸಮಯದೊಳಗೆ ಈ ವಿಧೇಯಕವನ್ನು ಯಾವ ರೀತಿ ತೀರ್ಮಾನ ಮಾಡುತ್ತೀರೋ ಆ ರೀತಿ ಮಾಡಿಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಊಟ ಮುಗಿಸಿಕೊಂಡು ಬಂದ ಮೇಲೆ ಮಾತನಾಡಲಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ವರ್ಷಗಳಿಂದಲೂ ನೋಡಿದ ಹಾಗೆ ಬಹಳಷ್ಟು ಕಾಯ್ದೆಗಳು ಚರ್ಚೆ ಇಲ್ಲದೇ ಅನುಮೋದನೆಯಾಗಿರುವ ನಿದರ್ಶನವನ್ನು ನಾವೆಲ್ಲರೂ ನೋಡಿದ್ದೇವೆ. ಈ ವಿಧೇಯಕದ ಮೇಲೆಯೂ ತುಂಬಾ ಚರ್ಚೆಯಾಗಿದೆ. ಈಗಾಗಲೇ ಬಹಳಷ್ಟು ಸದಸ್ಯರು ಮಾತನಾಡಿದ್ದು, ಇನ್ನೂ ಬಹಳಷ್ಟು ಸದಸ್ಯರು ಈ ವಿಧೇಯಕದ ಮೇಲೆ ಮಾತನಾಡಬೇಕೆಂದು ಇದ್ದಾರೆ, ನಾನು ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ, ಅದಕ್ಕೆ ನಿಗದಿತ ಸಮಯ ಇರಬೇಕಲ್ಲವೇ? 3, 4, 5 ದಿವಸಗಳವರೆಗೂ ಈ ವಿಧೇಯಕದ ಮೇಲೆಯೇ ಚರ್ಚೆ ಮಾಡುತ್ತಾರೆಯೇ?

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರು ದಿನಾಂಕ: 26.09.2020 ರಂದು 12.35 ರಿಂದ 12.50 ಅಂದರೆ 15 ನಿಮಿಷಗಳ ಕಾಲ ಮಾತನಾಡಿದರು. ಹಾಗಾಗಿ ಬ್ರೇಕ್ ಆಗಿರುವುದರಿಂದ ಮತ್ತೆ ಮಾತನಾಡಲು ಅವಕಾಶ ನೀಡಲಾಗಿದೆಯೇ ಹೊರತು ಯಾರಿಗೂ ಎರಡೆರಡು ಸಲ ಮಾತನಾಡಲು ಅವಕಾಶ ನೀಡಿಲ್ಲ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳುತ್ತಿಲ್ಲ. ನಾನು ಹೇಳುವುದೇನೆಂದರೆ, ಮಾನ್ಯ ಸಚಿವರಿಗೆ ಮಾತನಾಡಲು ಅವಕಾಶ ಕಲ್ಪಿಸಿ. ಮಾನ್ಯ ಸಚಿವರು ಏನೆಂದು ಹೇಳಬೇಕೆಂದು ಇದ್ದಾರೆ, ಅದನ್ನು ಹೇಳಲು ಅವಕಾಶ ಕಲ್ಪಿಸಿ ಎಂದು ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ನಮಗೆ ಇಷ್ಟೇ ಮಾತನಾಡಬೇಕು, ಹೀಗೇ ಮಾತನಾಡಬೇಕು ಎಂದು ಹೇಳಬಾರದು.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಸ್ಥಳೀಯ ಸಂಸ್ಥೆಗಳಿಂದ ಬಂದವರಾಗಿದ್ದು, ಎಲ್ಲರೂ ಕೂಡ ಪ್ರತಿನಿಧಿಸುತ್ತಿದ್ದೇವೆ. ಎಲ್ಲರಿಗೂ ಸಮಾನವಾದ ಅವಕಾಶ ನೀಡಿ. ಮಾನ್ಯ ಪುಟ್ಟಣ್ಣನವರು ಶಿಕ್ಷಕರ ಬಗ್ಗೆ ಮಾತನಾಡಿದಾಗ ನಾವೇನಾದರೂ ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಿದ್ದೇವೆಯೇ? ಇದು ರೈತರಿಗೆ ಸಂಬಂಧಿಸಿದ್ದು, ಜಮೀನಿನ ವಿಚಾರವಾಗಿದ್ದು ನಿಗದಿತ ಸಮಯದೊಳಗೆ ಮಾತನ್ನು ಮುಗಿಸಿ ಎಂದು ಹೇಳಿದರೆ ಹೇಗೆ? ಅವರು ಶಿಕ್ಷಕರ ಬಗ್ಗೆ ಮಾತನಾಡುವಾಗ ನಾವು ಸಹಕಾರ ನೀಡಿಲ್ಲವೇ?

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಡಿ ಎಂದು ಹೇಳಲಿಲ್ಲ. ಮಾನ್ಯ ಸಚಿವರು ಮಾತನಾಡಿದ ತಕ್ಷಣವೇ ಮಾತನಾಡಿ ಎಂದು ಹೇಳುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಮಾತನಾಡಲು ಅವಕಾಶ ನೀಡಿ ಎಂದು ಹೇಳುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಷ್ಟೊತ್ತಿಗೆ ಮಾತನಾಡಿ ಮುಗಿಸಬಹುದಾಗಿತ್ತು. ಊಟದ ವಿರಾಮದ ನಂತರ ಅವರು ಮಾತನಾಡಲಿ. ಸುಮ್ಮನೆ ಸಮಯ ಹಾಳಾಯಿತು.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದವರು ಮಾತನಾಡಲು ಆಕ್ಷೇಪಣೆ ಮಾಡುವುದಿಲ್ಲ, ಎಲ್ಲರೂ ಮಾತನಾಡಲಿ. ಆದರೆ, ಸಮಯವನ್ನು ನಿಗದಿಗೊಳಿಸಿ. ನಮಗೂ ವಿಧಾನಸಭೆಯಲ್ಲಿ ಬೇರೆ-ಬೇರೆ ಕಲಾಪಗಳಿವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ಎಲ್ಲವನ್ನೂ ಮುಗಿಸಿಕೊಂಡು ಬರಲಿ.

**ಶ್ರೀ ಆರ್.ಅಶೋಕ್:-** ಆ ರೀತಿ ಆಗುವುದಿಲ್ಲ. ದಯವಿಟ್ಟು ಸಮಯ ನಿಗದಿಗೊಳಿಸಿ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ 15 ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ದೇಶದ ಜ್ವಲಂತ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದೇವೆ. ದಯವಿಟ್ಟು ಸಮಯ ನಿಗದಿ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷಿಗೆ ಸಂಬಂಧಿಸಿದ ವಿಷಯದ ಬಗ್ಗೆ ಸಮಯ ನಿಗದಿ ಮಾಡುವುದು ಸೂಕ್ತವಲ್ಲ. ನಾವೆಲ್ಲರೂ ಕೃಷಿ ಕುಟುಂಬದಿಂದ ಬಂದವರು. ನಮ್ಮದು ಕೃಷಿ ಪ್ರಧಾನವಾದ ದೇಶ. ಈ ದೇಶದ ಅನ್ನದಾತನಿಗೆ ಹಾಗೂ ಆತನ ಜಮೀನಿಗೆ ಅನ್ಯಾಯವಾಗಿರುವ ವಿಚಾರದ ಬಗ್ಗೆ ಮಾತನಾಡುವುದು ಬಿಟ್ಟು ಮಾತನಾಡಲು ಇನ್ಯಾವ ವಿಚಾರ ಇದೆ?

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ ಬೇಡವೆಂದು ಹೇಳುತ್ತಿಲ್ಲ. ನಾನು 2 ಗಂಟೆ 30 ನಿಮಿಷಕ್ಕಾದರೂ ಉತ್ತರ ನೀಡಬಹುದೇ ಎಂಬುದನ್ನು ಹೇಳಿದರೆ ಸಾಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಮಾತು ಮುಗಿದ ತಕ್ಷಣವೇ ಉತ್ತರ ನೀಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಿನ್ನೆಯಿಂದಲೂ ಈ ವಿಧೇಯಕದ ಮೇಲೆ ಚರ್ಚೆ ಆಗುತ್ತಿದೆ. ಮಾತನಾಡಿದ ವಿಚಾರವನ್ನೇ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೆ, you cannot dictate us. ಹೇಳಿದ ವಿಚಾರವನ್ನೇ ಮತ್ತೊಮ್ಮೆ ಹೇಳಿದರೆ, ಮಾನ್ಯ ಸಭಾಪತಿಯವರು ಹೇಳಿದ ವಿಚಾರವೇ ಹೇಳಬೇಡಿ ಎಂದು ನಿರ್ಣಯ ಕೈಗೊಳ್ಳುತ್ತಾರೆ. ನಾವಾಗಲಿ, ನೀವಾಗಲಿ ನಿರ್ಣಯ ಕೈಗೊಳ್ಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿರುವವರೆಲ್ಲರ ಅಭಿಪ್ರಾಯದ ಮೇರೆಗೆ ನಾನು ಹೇಳುವುದೇನೆಂದರೆ, ದಯವಿಟ್ಟು ಲಂಚ್ ಬ್ರೇಕ್ ಮಾಡಿ. ನಂತರ ಚರ್ಚೆ ಮಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ನನಗೆ ಬೇರೆ-ಬೇರೆ ಕೆಲಸ ಇದೆ ಎಂದು ಹೇಳಿದರು. ಇದಕ್ಕಿಂತ ಮುಖ್ಯವಾದ ಕೆಲಸ ಏನಿದ್ದರೂ ಅದನ್ನು ಮುಗಿಸಿಕೊಂಡು ಬರಲಿ. ಆಮೇಲೆ ಚರ್ಚೆ ಪ್ರಾರಂಭ ಮಾಡೋಣ. ಈ ದೇಶದ ಜ್ವಲಂತ ಸಮಸ್ಯೆಯಾಗಿದೆ. ಬೆಂಕಿ ಹತ್ತಿಕೊಂಡು ಇಡೀ ದೇಶವೇ ಉರಿಯುತ್ತಿದೆ. ಅದರ ಮೇಲೆ ಚರ್ಚೆ ಮಾಡುವ ವಿಚಾರ ಬಿಟ್ಟು, ಬೇರೆ ಯಾವ ಕೆಲಸ ಇದೆ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು ಇಡೀ ದೇಶವೇ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ನಿರೀಕ್ಷೆ ಮಾಡಿದಷ್ಟು ಎತ್ತರದಲ್ಲಿ ಬೆಂಕಿ ಏರುತ್ತಿಲ್ಲ. ದಯವಿಟ್ಟು ಅವರು ಬೆಂಕಿ ಹಚ್ಚುವುದು ಬೇಡ. ನಾವಲ್ಲ ಬೆಂಕಿ ಹಚ್ಚಿರುವುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟೇ ಬೆಂಕಿ ಹಚ್ಚಿದರೂ ಅದು ಉರಿಯುವುದಿಲ್ಲ. ದಯವಿಟ್ಟು ಬೆಂಕಿ ಹಚ್ಚುವುದು ಬೇಡ. ಅವರು ಬೆಂಕಿ ಉರಿಯಬೇಕೆಂದು ಬಹಳ ಹೋರಾಟ ಮಾಡುತ್ತಿದ್ದಾರೆ. ಆದರೆ, ಅದು ಉರಿಯುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ ತಾವು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ವಂದಿಸುತ್ತಾ, ಇವತ್ತು ಮಾನ್ಯ ಕಂದಾಯ ಸಚಿವರು 'ಕರ್ನಾಟಕ ಭೂ ಸುಧಾರಣೆ ವಿಧೇಯಕವನ್ನು ಮಂಡಿಸುತ್ತಿದ್ದಾರೆ ಅದಕ್ಕೆ ಸಂಪೂರ್ಣವಾಗಿ ಈ ಕರಾಳ ಶಾಸನವನ್ನು ವಿರೋಧಿಸಿ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಬೆಳಗಾಗೊ ತನಕ, ಗೌಡರ ಮನೆ ತನಕ ಎಂದು ಮಾಡುವುದಕ್ಕೆ ಹೋಗುವುದು ಬೇಡ. ಬೇಗ ಮುಗಿಸಲಿ.

**ಶ್ರೀ ಎಸ್.ಆರ್.ಪಾಟೀಲ್:-** We have got a very good intention. ಈ ವಿಧೇಯಕ ಮಹತ್ವದ ವಿಧೇಯಕವಾಗಿದೆ. ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಅಷ್ಟೇ. ನಮಗೇನು ಇದನ್ನು pull on ಮಾಡಬೇಕೆಂಬ ಭಾವನೆ ಏನಿಲ್ಲ. ಅವರು ಸಹ ಗೌಡರು, ಕೃಷಿ ಕುಟುಂಬದಿಂದ ಬಂದವರು. ಅವರು ನಮಗೆ ಇನ್ನಷ್ಟು ಮಾತನಾಡಿ ಎಂದು ಅವಕಾಶ ಮಾಡಿಕೊಡಬೇಕು.

**ಶ್ರೀ ಸಿ.ಸಿ.ಪಾಟೀಲ್:-** ಈ ವಿಧೇಯಕವನ್ನು ಪಾಸ್ ಮಾಡಿಕೊಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಹಿಂದಿನ ಅಧಿವೇಶನದಲ್ಲಿ ತಂದಿದ್ದು, ಬಹಳ ಸುದೀರ್ಘ ಚರ್ಚೆಗಳಾಗಿತ್ತು. ಆದರೆ, ಚರ್ಚೆ ಅಪೂರ್ಣಗೊಂಡ ಕಾರಣದಿಂದ ಈ ಸದನವನ್ನು ಮುಂದೂಡಲಾಗಿತ್ತು. ತದನಂತರ 6 ತಿಂಗಳೊಳಗೆ ಮತ್ತೆ Ordinance ತರಬೇಕೆಂದು ಮಾಡಲಾಗಿತ್ತು. ಹಾಗಾಗಿ ಹೊಸದಾಗಿ Ordinance ತಂದು ಮತ್ತೆ ಈ ವಿಧೇಯಕವನ್ನು introduce ಮಾಡಿದ್ದಾರೆ. ನಾನು ಸಹ ಆಶ್ಚರ್ಯದಿಂದ ಮಾನ್ಯ ಸಚಿವರಿಗೆ ಏತಕ್ಕೆ ಇಷ್ಟು ಬೇಗ ಈ ವಿಧೇಯಕವನ್ನು ತರಲು ಆಸಕ್ತಿ ತೋರಿಸುತ್ತಿದ್ದಾರೆ ಎಂಬುದನ್ನು ಕೇಳಲು ಇಚ್ಛಿಸುತ್ತೇನೆ. ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಠಕ್ಕೆ ಬಿದ್ದ ಹಾಗೆ ಈ ವಿಧೇಯಕವನ್ನು ಪಾಸ್ ಮಾಡಲೇಬೇಕು ಎನ್ನುವ ರೀತಿಯಲ್ಲಿ ಇಷ್ಟು ಬೇಗ ಮಾಡುತ್ತಿದ್ದಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಮತ್ತು ಮಾನ್ಯ ನಾರಾಯಣಸ್ವಾಮಿಯವರು ಏತಕ್ಕೆ ಆತುರವಾಗಿ ಈ ವಿಧೇಯಕವನ್ನು ತಂದಿದ್ದಾರೆ ಎಂದು ಕೇಳುತ್ತಿದ್ದಾರೆ. ಏತಕ್ಕಾಗಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂಬ ವಿಚಾರವನ್ನು ಮೊದಲು ಹೇಳಿ ಬಿಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಸಚಿವರು ಸಂಪೂರ್ಣವಾಗಿ ಉತ್ತರ ನೀಡಲಿ. ನಾನು yield ಆಗಿಲ್ಲ. ನಾನು ಬೇಡ ಎಂದು ಹೇಳುತ್ತಿಲ್ಲ.

(ಗೊಂದಲ)

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನನ್ನ ಆತ್ಮೀಯ ಸ್ನೇಹಿತರಾದ ಮಾನ್ಯ ನಾರಾಯಣಸ್ವಾಮಿಯವರು ಏತಕ್ಕೆ ಆತುರವಾಗಿ ಈ ವಿಧೇಯಕವನ್ನು ತಂದಿದ್ದೀರಿ ಎಂದು ಕೇಳುತ್ತಿದ್ದಾರೆ. ಈಗಾಗಲೇ ಈ ವಿಧೇಯಕದ ಮೇಲೆ ವಿಧಾನಸಭೆಯಲ್ಲಿ ಚರ್ಚೆಯಾಗಿತ್ತು. ಚರ್ಚೆಯಾಗುವಂಥ ಸಂದರ್ಭದಲ್ಲಿ ಬಹಳ ಪ್ರಮುಖವಾದ ವ್ಯಕ್ತಿ ಹಾಗೂ ಈ ರಾಜ್ಯದಲ್ಲಿ ದೊಡ್ಡ ಸ್ಥಾನದಲ್ಲಿರುವಂಥವರು, ನನಗೂ ಸಹ ಅವರು ಸ್ನೇಹಿತರು. 6 ಬಾರಿ ಎಂ.ಎಲ್.ಎ. ಆಗಿ ಬಂದಿರುವಂಥವರು.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಅವರ ಹೆಸರು ಹೇಳಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರ ಹೆಸರನ್ನು ಸಹ ಹೇಳುತ್ತೇನೆ. ಅವರು ಏನು ಹೇಳಿದ್ದಾರೆಂದರೆ, "I have a different opinion on this. Globalisation ಏನು ಎನ್ನುವುದು ನನಗೆ ಗೊತ್ತಿದೆ. ಇದು ಕೇವಲ ಅಧಿಕಾರಿಗಳು ಎ.ಸಿ. ಗಳಿಗೆ, ತಹಸೀಲ್ದಾರ್‌ಗಳಿಗೆ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ದುಡ್ಡು ಮಾಡಲು ಮಾಡಿರುವಂಥ ಕಾನೂನು. I am very clear. ಇದು ಲಂಚ ಪಡೆಯುವಂಥವರಿಗೆ ತಂದಿರುವಂಥ ಕಾನೂನಾಗಿದೆ. ಹಾಗೆಯೇ ಅವರ ನೆಂಟರು ಜೊತೆಗೆ ಸದಸ್ಯರು ಆಗಿದ್ದರು. ಅವರು ಈ ರೀತಿ ಹೇಳಿದ್ದಾರೆ; ಕಲಂ 79ಎ, 79ಬಿ, ಸಲುವಾಗಿ ಒಂದು ಕಾನೂನು ಜಾರಿಗೆ ತಂದಿದ್ದು, ಅದನ್ನು ಕಿತ್ತು ಹಾಕಿ. ಕಲಂ 79ಎ, 79ಬಿ ನಲ್ಲಿ ಇರತಕ್ಕಂಥ ಕಾನೂನು ಓಬಿರಾಯನ ಕಾಲದ್ದು. ಕಲಂ 79ಎ, 79ಬಿ ಕಾನೂನು ಇರುವವರೆಗೂ ರಾಜ್ಯದಲ್ಲಿ 3 ಲಕ್ಷ ಪ್ರಕರಣಗಳು ದಾಖಲಾಗಿದೆ. ಅದರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಾರಂ 50, 54 forfeit ಆಗಿರುವಂಥದ್ದು ಯಾವುದು ಇಲ್ಲ. ಈ ಮಾತನ್ನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ **XXX** ರವರು ಹೇಳಿದ್ದಾರೆ.

(ಮುಂದು)

(1010)08.12.2020/1.40/ಎಸ್‌ಕೆ-ಜಿಆರ್

**ಶ್ರೀ ಆರ್. ಅಶೋಕ್ (ಮುಂದು):-**

ಮಾನ್ಯ ರವಿಯವರು ಹೇಳಿರುವಂತಹ ...(ಗೊಂದಲ) ದಾಖಲೆ ಸಮೇತ ಹೇಳಿದ್ದೇನೆ. **(ಗೊಂದಲ)** ನಿಯಮ 109 ರ ಅಡಿಯಲ್ಲಿ ಚರ್ಚೆಯಾದಾಗ....

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, I am on a point of order. ಯಾರು ಈ ಸದನದ ಸದಸ್ಯರಲ್ಲವೋ ಅವರ ಬಗ್ಗೆ ಚರ್ಚೆ ಮಾಡತಕ್ಕದ್ದು ಅಪ್ರಸ್ತುತ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) :-** ಮಾನ್ಯ **XXX** ರವರು ಏನು ಬೇಕಾದರೂ ಹೇಳುತ್ತಾರೆ. ತಾವು ಅದನ್ನೆಲ್ಲಾ ತೆಗೆದುಕೊಂಡು ಬರುತ್ತೀರಾ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ನಾರಾಯಣಸ್ವಾಮಿಯವರೇ, ನಮ್ಮ ಅಧ್ಯಕ್ಷರು ಏನೇನು ಹೇಳಿದ್ದಾರೋ, ಅದನ್ನು ತೆಗೆದುಕೊಂಡು ಹೋಗಿ ಮುಖ್ಯಮಂತ್ರಿಯವರಿಗೆ ಹೇಳಲಿ. ಮಾನ್ಯ **XXX** ರವರು ಹೇಳಿರುವುದಾದರೆ,...

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ **XXX** ರವರು ಹೇಳಿರುವುದು ಅವರ ವೈಯಕ್ತಿಕವಾದ ಅಭಿಪ್ರಾಯ.

**(ಗೊಂದಲ)**

**ಸಭಾಪತಿಯವರು:-** **ಕೆಳಮನೆಯ ಸದಸ್ಯರ ಹೆಸರನ್ನು ಕಡತದಿಂದ ತೆಗೆದು ಹಾಕಲಾಗಿದೆ.**

**(ಗೊಂದಲ)**

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಸದನದ ಸಮಯ ವ್ಯರ್ಥವಾಗುತ್ತಿದೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಕಾಯಿದೆಯನ್ನು ತೆಗೆದು ಹಾಕಿ ಎಂದು ಇದೇ ಸದನದಲ್ಲಿ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಆರ್. ಅಶೋಕ (ಕಂದಾಯ ಸಚಿವರು):-** ಈ ಬಿಲ್‌ನ್ನು ಏಕೆ ತಂದಿದ್ದೇವೆಂದು ಮಾನ್ಯ ಎಂ.ನಾರಾಯಣಸ್ವಾಮಿಯವರು ಕೇಳಿದರು. ಅದಕ್ಕೆ ಉತ್ತರವನ್ನು ಹೇಳಿದ್ದೇನೆ. ಈಗ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಈ ಬಿಲ್‌ನ್ನು ಏತಕ್ಕೆ ತಂದಿದ್ದಾರೆಂದು ತಾವು ಉತ್ತರ ಹೇಳಬೇಕಲ್ಲ.

**(ಗೊಂದಲ)**

**ಸಭಾಪತಿಯವರು:-** ಇಲ್ಲಿ ಆ ವಿಷಯವನ್ನು ಹೇಳಬೇಡಿ.

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಇಲ್ಲಿ ಅವರು ಬಂದು ಉತ್ತರವನ್ನು ಹೇಳಲಿ. ಇದರ ಬಗ್ಗೆ ಚರ್ಚೆಯಾಗಬೇಕಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–**ಈಗ ಬೇರೇನೂ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ ಮಾತನಾಡಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, 79ಎ, 79ಬಿ ಮತ್ತು 79ಸಿ ಎನ್ನುವುದು ಇದೆ.

**(ಗೊಂದಲ)**

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸದಸ್ಯರು ಗಲಾಟೆ ಮಾಡಿದರೆ, ಸದನದ ಸಮಯ ಹಾಳಾಗುತ್ತಿದೆ. ದಯವಿಟ್ಟು, ನಮಗೆ ಊಟಕ್ಕೆ ಬ್ರೇಕ್ ಮಾಡಿ. ಆನಂತರ ಮಾತನಾಡಲಿ.

**(ಗೊಂದಲ)**

**ಸಭಾಪತಿಯವರು:–** ಇಲ್ಲ ಇಲ್ಲ.

**(ಗೊಂದಲ)**

**ಡಾ. ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರು ಹೇಳಿರುವುದಕ್ಕೆ clarity ಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಮಗೆ ತುರ್ತು ಇದ್ದರೆ, ಊಟಕ್ಕೆ ಹೋಗಿ ಬನ್ನಿ. ಊಟಕ್ಕೆ ವಿರಾಮ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ಪೂರ್ತಿ ಮಾಡೋಣ.

**(ಗೊಂದಲ)**

**ಶ್ರೀ ಎಸ್.ಎಲ್ ಭೋಜೇಗೌಡ:–** ಇದು ಎಲ್ಲರ ಅಭಿಪ್ರಾಯವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರ ಅಭಿಪ್ರಾಯ ಎನ್ನುವುದಾದರೆ, ನಾಳೆ ಇದು ಆಗುವುದಿಲ್ಲ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಕೇಳಿದಾಗ, ಆದಷ್ಟು ಬೇಗ ಮಧ್ಯಾಹ್ನದೊಳಗೆ ಮುಗಿಸಿ, ಪ್ರಶ್ನಾವಳಿಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಿದ ಮೇಲೆ, ಆದರೆ ಯಾರನ್ನು ನಂಬಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ ಮಾತನಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಪ್ರಾಣೇಶ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ತಾವು ಇನ್ನೂ ಮಾತನಾಡುತ್ತಿದ್ದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ ಮಾತನಾಡಿ.

**ಶ್ರೀ ಎಂ. ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಇದು ಪೂರ್ವನಿಯೋಜಿತ. ಇದು ಏಕೆ ಎಂದು ಹೇಳಿದರೆ, ಬಿಲ್‌ನ್ನು ಏಕೆ ಪಾಸ್ ಮಾಡುತ್ತೀರಿ? ನಾವು ಬಿಲ್‌ನ್ನು ಪಾಸ್ ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಈಗ ನೋಡಿದರೆ, **(ಗೊಂದಲ)** ಇದು ಸತ್ಯ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:-** ನಾವು ಯಾವುದೇ ಪಕ್ಷ ಭೇದ ಕೆಲಸ ಮಾಡುವುದಿಲ್ಲ. ತಾವು ಹೇಳಿರುವಂತಹ ಮಾತಿದೆಯೆಲ್ಲಾ,...

**(ಗೊಂದಲ)**

**ಸಭಾಪತಿಯವರು:-** ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ನಾವು ತಮ್ಮಿಂದ ಮಾತನಾಡುವುದನ್ನು ಕಲಿಯಬೇಕು ಅಷ್ಟೆ.

ಮಾನ್ಯ ಸಭಾಪತಿಯವರೇ, ಹೊಸ ವಿಧೇಯಕವನ್ನು ಏನು ಮಂಡಿಸುತ್ತಿದ್ದಾರೋ, ಇದು ರೈತರಿಗೆ ಮಾರಕವಾಗಿರತಕ್ಕಂತಹದ್ದು. ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಈ ದೇಶದಲ್ಲಿರುವ ರೈತರು ಈ ವಿಧೇಯಕವನ್ನು ತನ್ನಿ ಎಂದು ಯಾರಾದರೂ ಸರ್ಕಾರದವರನ್ನು ಕೇಳಿದ್ದರೇನು? ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಯಾವುದೇ ರೈತ ಸಂಘದವರಾಗಿರಲಿ, ಈ ವಿಧೇಯಕಕ್ಕೆ ಕಾನೂನನ್ನು ತನ್ನಿ ಎಂದು ಯಾರಾದರೂ ಕೇಳಿದ್ದರೇನು? ಈ ಕಾನೂನನ್ನು ಏತಕ್ಕೋಸ್ಕರ ತರುತ್ತಿದ್ದೀರಿ? ಇದರಿಂದ ಯಾರಿಗೆ ಅನುಕೂಲ? ರೈತರಿಗೆ ಅನುಕೂಲವಾಗುತ್ತಿದೆಯೇ ಅಥವಾ ಬೇರೆಯವರಿಗೆ ಅನುಕೂಲವಾಗುತ್ತಿದೆಯೇ ಎಂಬುದನ್ನು ತಾವೇ ಹೇಳಿ. ಮಾನ್ಯ ಸಭಾಪತಿಯವರಿಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರು ನಗರದಲ್ಲಿ ಕಲಂ 79ಎ ಹಾಗೂ 79ಬಿ ಗೆ ಸಂಬಂಧಿಸಿದಂತೆ ಸುಮಾರು ಹದಿಮೂರು ಸಾವಿರ ಕೇಸ್‌ಗಳಿವೆ. ಈ ಕೇಸ್‌ಗಳು ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಈಗ ಕಾನ್ನೂನು ಜಾರಿಯಾಯಿತು ಎಂದರೆ, ಆ ಕೇಸ್‌ಗಳೆಲ್ಲಾ ತಟಸ್ಥ ಆಗಿ ಹೋಗುತ್ತದೆ. ಇದರ ಹಿಂದೆ ಯಾರ್‍ಯಾರ ಕೈಯಿದೆ ಎಂದರೆ, ಯಾರು real estate ಮಾಡುವಂತಹವರು, Corporate Companies, businessmen, industrialists ಗಳು ಇವರೆಲ್ಲರೂ ತೆಗೆದುಕೊಂಡಿರುವುದರ ಬಗ್ಗೆ ಕಲಂ 79ಎ ಹಾಗೂ 79ಬಿ ಅಡಿಯಲ್ಲಿನ ಕೇಸ್ ಬಾಕಿ ಉಳಿದುಕೊಂಡಿವೆ. ಈ ವಿಧೇಯಕ ಪಾಸ್ ಆದರೆ ಎಲ್ಲವೂ ವಜಾ ಆಗುತ್ತದೆ. ಇದರ ಹಿಂದೆ ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ಇದೆ ಎನ್ನುವಂತಹ ಗುಮಾನಿ ನಮಗೆ ಇದೆ. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ನಾನು ಮಾತನಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಹೋರಾಟ ಮಾಡಿ ಬಂದಂತಹ ಒಬ್ಬ ವ್ಯಕ್ತಿ. ರೈತರ ಬಗ್ಗೆ ಬಹಳ ಕಾಳಜಿಯನ್ನಿಟ್ಟುಕೊಂಡಿರುವಂತಹ ಒಬ್ಬ ಮಾನ್ಯ ಮುಖ್ಯಮಂತ್ರಿ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯವರು ಪ್ರಮಾಣ ವಚನ ಸ್ವೀಕಾರ ಮಾಡಬೇಕಾದರೆ, ಅವರು ಹಸಿರು ಶಾಲನ್ನು ಹಾಕಿಕೊಂಡು, ರೈತರ ಮೇಲೆ ಪ್ರಮಾಣ ಮಾಡಿ, ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಮುಖ್ಯಮಂತ್ರಿ ಕುರ್ಚಿಯ ಮೇಲೆ ಕುಳಿತುಕೊಂಡರು. ಇಂತಹ ರೈತ ವಿರೋಧಿಯ ಕಾನೂನನ್ನು ತಂದು, ಇದು ಇವರ ಕಾಲದಲ್ಲಿ ಆಗುತ್ತಿದೆ ಎಂದು ಹೇಳಿದರೆ, ಎಲ್ಲೋ ಒಂದು ಕಡೆ ನೋವಾಗುತ್ತಿದೆ. ನಾವು ರೈತರ ಪರವಾಗಿದ್ದೇವೆಂದು ಹೇಳಿಕೊಂಡು, ರೈತರ ವಿರೋಧವಾಗಿ ಕಾನೂನನ್ನು ಇವರು ತರುವುದಕ್ಕೆ ಹೊರಟಿದ್ದಾರಲ್ಲ. ಮಾನ್ಯ ಸಚಿವರು ನನ್ನ ಮಾತನ್ನು ಕೇಳಿಸಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಒಲ್ಲದ ಮನಸ್ಸಿನಲ್ಲಿ ಈ ಬಿಲ್ ಪಾಸ್ ಮಾಡುವುದಕ್ಕೆ ಒಪ್ಪುತ್ತಿಲ್ಲ. ಯಾರದೋ ಒತ್ತಡದ ಮೇಲೆ ಇವತ್ತಿನ ದಿವಸ ಈ ಬಿಲ್‌ನ್ನು ಪಾಸ್ ಮಾಡುವುದಕ್ಕೆ ಹೊರಟಿದ್ದಾರೆ. ಯಾರಾದರೂ ಕೂಡ ಕಾಂಗ್ರೆಸ್, ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ., ಆಗಿರಬಹುದು. ಆತ್ಮಸಾಕ್ಷಿಯಾಗಿ ಮಾತನಾಡುವುದಾದರೆ, ಈ ಬಿಲ್ ಅವ್ಯವಹಾರದಿಂದ ಕೂಡಿದೆ. ರೈತ ವಿರೋಧಿ ಕಾನೂನು ಎಂದು ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳುತ್ತಿದ್ದಾರೆ. ಯಾರದೋ ಒತ್ತಡಕ್ಕೆ ಮಣಿದು, ಇವರು ಇವತ್ತಿನ ದಿವಸ ಕಾನೂನನ್ನು ತರುವುದಕ್ಕೆ ಹೊರಟಿದ್ದಾರೆ. ದಯವಿಟ್ಟು, ಮಾನ್ಯ ಸಭಾಪತಿಯವರೇ,

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಮಾನ್ಯ ಸದಸ್ಯರ ಮಾತನ್ನು ಕೇಳಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಇವತ್ತು ಇದರ ವಿರುದ್ಧವಾಗಿ ದೆಹಲಿಯಲ್ಲಿ ಸುಮಾರು ಹತ್ತು ದಿನಗಳ ಕಾಲ ರೈತರು ಹೋರಾಟವನ್ನು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಮಾತನ್ನು ಕೇಳಿಸಿಕೊಳ್ಳಬೇಕು. ಮಾನ್ಯ ಸಚಿವರು ಬೇರೆಯವರ ಜೊತೆ ಮಾತನಾಡುತ್ತಿದ್ದರೆ, ನಾವು ಯಾರಿಗೆ ಹೇಳಬೇಕೆಂಬುದು ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** **(ಗೊಂದಲ)** ಮಾನ್ಯ ಸಚಿವರೇ, ಇಲ್ಲಿ ಚರ್ಚೆಯಾಗುತ್ತಿರಬೇಕಾದರೆ,...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ ಮಾತನಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತು 'ಈ ದೇಶದ ಬೆನ್ನೆಲುಬು ಅನ್ನದಾತ' ಎಂದು ರೈತರಿಗೆ ಏನೆಲ್ಲಾ ಟೈಟಲ್ ಕೊಡುತ್ತೇವೆ. ರೈತರಿಗೆ ಬೇಡವಾಗಿರುವಂತಹ ಈ ಕಾನೂನನ್ನು ಒತ್ತಾಯ ಪೂರ್ವಕವಾಗಿ ತರುವಂತಹದ್ದು ಏನಿದೆ? ಪಂಜಾಬ್ ಹರಿಯಾಣದಿಂದ ಲಕ್ಷಾಂತರ ಜನ ರೈತರು ಇವತ್ತು ದೆಹಲಿ ಚಳುವಳಿಗೆ ಬರುತ್ತಿದ್ದಾರೆ. ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಯಾರು ಹೋರಾಟ ಮಾಡುತ್ತಾರೋ, ಅವರನ್ನು ಹತ್ತಿಕ್ಕುವಂತಹ ಕೆಲಸ ಯಾವತ್ತೂ ಕೂಡ ಆಗಿಲ್ಲ. ಇವತ್ತು ನ್ಯಾಷನಲ್ ಹೈವೆಯಲ್ಲಿ ಟ್ರಾಕ್ಟರ್‌ನಲ್ಲಿ ಸಾಕಷ್ಟು ಜನ ರೈತರು ಸಹ ಬರುತ್ತಿದ್ದಾರೆ. ಅವರು ಬಾಡಿಗೆ ರೈತರಲ್ಲ. ಗೂಂಡಾ ರೈತರಲ್ಲ. ಅವರು ನಿಜವಾದ ಕೃಷಿಕರು. ಇಪ್ಪತ್ತೈದು ವರ್ಷಗಳಿಂದ ಹಿಡಿದು ಎಂಭತ್ತೈದು ವರ್ಷದ ತನಕ ಹಾಗೂ ವಯಸ್ಸು ಆಗಿರುವಂತಹ ರೈತರು ಸಹ ಬರುತ್ತಿದ್ದಾರೆ. ಉತ್ತರ ಭಾರತದಲ್ಲಿ ಕೊರೆಯುವ ಚಳಿಯಿದೆ. ಆ ಚಳಿಯಲ್ಲಿ ಲಕ್ಷಾಂತರ ಜನ ರೈತ ಮಹಿಳೆಯರು ಮತ್ತು ರೈತರು ಬರುತ್ತಿದ್ದಾರೆ. ನ್ಯಾಷನಲ್ ಹೈವೆಯಲ್ಲಿ ಅಗೆದು ಹಾಕಿ ಹಾಗೂ ಆ ಟ್ರಾಕ್ಟರ್‌ಗಳು ಮುಂದಕ್ಕೆ ಹೋಗಬಾರದೆಂದು ಹೇಳಿ ತಂತಿ ಬೇಲಿಗಳು ದೊಡ್ಡ ದೊಡ್ಡ ಕಾಂಕ್ರೀಟ್ ಬ್ಲಾಕ್‌ಗಳನ್ನು ಹಾಕಿ, ತಡೆ ಒಡ್ಡುತ್ತಿದ್ದಾರೆ. ಇಂಡಿಯಾ ಮತ್ತು ಪಾಕಿಸ್ತಾನ ಬಾರ್ಡರ್‌ನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ಅಡ್ಡ ಹಾಕಿ, ರೈತರನ್ನು ದೆಹಲಿಯಲ್ಲಿ ಬಿಟ್ಟುಕೊಳ್ಳುವುದಕ್ಕೆ ತಯಾರಿಲ್ಲ.

**ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರ):–** ಅವರು ಕಲಂ 79ಎ ಹಾಗೂ 79ಬಿ ರದ್ದಾಗಲಿ ಎಂದು ಬರುತ್ತಿದ್ದಾರೆಯೇ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಅವರು ಕಲಂ 79ಎ ಹಾಗೂ 79ಬಿ ಬಗ್ಗೆ ಬರುತ್ತಿದ್ದಾರೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ರೈತರ ಬಗ್ಗೆ ಮಾತನಾಡುತ್ತಿದ್ದೇನೆ. ಇಡೀ ದೇಶದುದ್ದಕ್ಕೂ ರೈತರು ಹೋರಾಟ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕಲಂ 79ಎ ಹಾಗೂ 79ಬಿ ಇಲ್ಲ. ಅಲ್ಲಿ ಚರ್ಚೆ ನಡೆಯುತ್ತಿರುವುದು ಬೇರೆ ವಿಷಯಕ್ಕೆ. ನಮ್ಮ ಸದನದಲ್ಲಿ ಚರ್ಚಿಸುತ್ತಿರುವ ವಿಷಯ ಬೇರೆ.

**(ಮುಂದು)**

(1011) 08.12.2020 1.50 ಟಿಸಿಹೆಚ್-ಜಿಆರ್

**ಶ್ರೀ ಆಯನೂರು ಮಂಜುನಾಥ್(ಮುಂದು)**

ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರಗಳಲ್ಲಿ ಕಲಂ 79(ಎ) ಮತ್ತು 79 (ಬಿ) ಇಲ್ಲ. ಅಲ್ಲಿ ಚರ್ಚೆ ನಡೆಯುತ್ತಿರುವುದು ಬೇರೆ ವಿಷಯಕ್ಕೆ. ಆ ಕಾರಣಕ್ಕಾಗಿ ಕಲಂ 79(ಎ) ಮತ್ತು 79 (ಬಿ)ಗೆ ಸಂಬಂಧಪಟ್ಟಂತೆ ಬೆಳಕು ಚೆಲ್ಲಿದರೆ ಸರ್ಕಾರ ತಿದ್ದುಪಡಿ ಮಾಡುವುದಾದರೆ ಮಾಡುತ್ತದೆ, ಉತ್ತರ ಕೊಡಬೇಕಾದರೆ ಕೊಡುತ್ತದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಅವರು ಮಧ್ಯೆ interruption ಮಾಡಿದರು. ಮತ್ತೆ ಸಮಯವಾಗುತ್ತದೆ. ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಿ ಸಮಯ ಹಾಳು ಮಾಡುತ್ತಿದ್ದಾರೆ. ನೀವು ನಮಗೆ ಬೇಗ ಮಾತನಾಡಿ ಮುಗಿಸಿ ಎಂದು ಹೇಳಿಬಿಡುತ್ತೀರಿ. ಕೇಂದ್ರದಲ್ಲಿ ನಡೆಯುತ್ತಿರುವ ರೈತರ ಧರಣಿ ಬಗ್ಗೆ ಇಲ್ಲಿ ರೆಫರೆನ್ಸ್ ಮಾಡಿದರು. ರೈತರು ಮತ್ತು ಕೇಂದ್ರ ಸರ್ಕಾರದ ಮಧ್ಯೆ ಸಂಧಾನ ನಡೆಯುತ್ತಿದೆಯೆಂದು ಹಾಗೂ ಎರಡನೇ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಿದೆ ಎಂದು ಹೇಳಿದರು ಏನು ತಪ್ಪಿದೆ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಇವತ್ತು ಇಲ್ಲಿ ಆಗತಕ್ಕಂಥ ಚರ್ಚೆಯೆ ಬೇರೆ ಮತ್ತು ಕೇಂದ್ರ ಸರ್ಕಾರದಲ್ಲಿ ಆಗತಕ್ಕಂಥ ಚರ್ಚೆಯೆ ಬೇರೆ ಎಂದು ಹೇಳುತ್ತಿದ್ದಾರಲ್ಲಾ, ಸನ್ಮಾನ್ಯ ಹಿರಿಯ ಸದಸ್ಯರಾದಂತಹ ಮಾನ್ಯ ಆಯನೂರು ಮಂಜುನಾಥ್‌ನವರು ದೆಹಲಿಯಲ್ಲಿ ಏನು ನಡೆಯುತ್ತಿದೆಯೆಂದು ಈ ಸದನಕ್ಕೆ ಹೇಳಿಬಿಡಲಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ರಾಮಾಯಣ ಮತ್ತು ಮಹಾಭಾರತ ಬಿಟ್ಟರೆ ನಿಮ್ಮ ಹತ್ತಿರ ಬೇರೆ ಏನೂ ಇಲ್ಲ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇವತ್ತು ಇಲ್ಲಿ ಆಗುತ್ತಿರತಕ್ಕಂಥ ಚರ್ಚೆಯೆ ಬೇರೆ ಮತ್ತು ಕೇಂದ್ರದಲ್ಲಿ ರೈತರ ಬಗ್ಗೆ ಆಗುತ್ತಿರುವ ಚರ್ಚೆ ಬೇರೆಯೆಂದು ಹೇಳುತ್ತಿದ್ದಾರಲ್ಲಾ ಅಲ್ಲಿ ಏನು ಚರ್ಚೆ ಆಗುತ್ತಿದೆ ಹೇಳಿ ನೋಡೋಣ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಈಗ ಈ ವಿಷಯವನ್ನು ತೆಗೆದುಕೊಳ್ಳುವುದು ಬೇಡ. ಆ ವಿಷಯ ಮಂಡನೆ ಮಾಡಿದಾಗ ಸದನದಲ್ಲಿ ಮಾತನಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ:–** ಇವತ್ತು ಈ ದೇಶದ ಬೆನ್ನೆಲುಬು ಆಗಿರತಕ್ಕಂಥ ರೈತರ ಜ್ವಲಂತ ಸಮಸ್ಯೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲಾ ಒಂದೇ ರೀತಿ ಇದೆ, ಬೇರೆ ಏನೂ ಅಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ವಿಷಯವನ್ನು ತೆಗೆದುಕೊಂಡು ಬನ್ನಿ, ಅದರಲ್ಲಿ ನಾವು ಮಾತನಾಡೋಣ. (ಗೊಂದಲ) ನೀವು ಹೇಳಿದಂತೆ ಈ ಸದನವನ್ನು guide ಮಾಡುವುದಕ್ಕಾಗುವುದಿಲ್ಲ. ಸದನವನ್ನು ನೀವು ಬೇಕಾದಂತೆ ತೆಗೆದುಕೊಂಡು ಹೋಗುವಂತಿಲ್ಲ. ಸದನದಲ್ಲಿರತಕ್ಕಂಥ ಅಜೆಂಡಾ ಮೊನ್ನೆಯಿಂದಲೂ ನಡೆಯುತ್ತಿದೆ. ಅಜೆಂಡಾದಲ್ಲಿ ಇರುವುದು ಬಿಟ್ಟು, ಬೇರೆ ಮಾತನಾಡುತ್ತಿದ್ದೀರಿ. ಸಂಬಂಧಪಟ್ಟ ಮಾನ್ಯ ಸಚಿವರು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದಾರೆ. ವಿಷಯ ಬಿಟ್ಟು ಬೇರೆ ಮಾತನಾಡಬಾರದು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಡಳಿತ ಪಕ್ಷದಲ್ಲಿ ಅನಗತ್ಯವಾಗಿ ಹೇಳುವುದನ್ನು ಕಡಿಮೆ ಮಾಡಿದರೆ ಎಲ್ಲಾ ಬೇಗ ಮುಗಿಯುತ್ತದೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು ಕೂಡ ಈ ಬಿಲ್‌ಗೆ ಫುಲ್ ವಿರೋಧ ಇದ್ದಾರೆ. ಅದಕ್ಕೋಸ್ಕರ ಇಷ್ಟೊಂದು ಅಡಚಣೆ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದಲ್ಲಿ ಪ್ರಾಮಾಣಿಕವಾಗಿ ಕೆಲವು ಸದಸ್ಯರುಗಳು ಈ ಬಿಲ್‌ನ ಪರ ಇಲ್ಲ. ಮೇಲಿನ ಹೈಕಮಾಂಡ್ ಆದೇಶವಾಗಿದೆ ಅದಕ್ಕೆ ಈ ಬಿಲ್‌ನ್ನು ತರುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾರೋ ಒಬ್ಬರ ಒತ್ತಾಯಕ್ಕೆ ಮಣಿದು ಈ ರೀತಿ ಕಾನೂನು ಮಾಡಲು ಹೊರಟಿದ್ದಾರೆ. ಒಳ್ಳೆಯ ಮನಸ್ಸು ಇಲ್ಲದಿದ್ದರೂ ಕೂಡ ಕಂದಾಯ ಸಚಿವರು ಕೂಡ ಒಂದು ರೈತ ಕುಟುಂಬದಿಂದ ಬಂದವರು. ಅವರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಿದರೂ ಕೂಡ ಈ ಕಾನೂನನ್ನು ಒಲ್ಲದ ಮನಸ್ಸಿನಿಂದ ತಂದಿದ್ದೇವೆಂದು ಹೇಳತಕ್ಕಂಥ ಪರಿಸ್ಥಿತಿ ಇದೆ. ಇದು ನಿಜ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಅವರು ರೈತ ಕುಟುಂಬದಿಂದ ಬಂದವರೆ. ನಾನು ಕೂಡ ರೈತ ಕುಟುಂಬದಿಂದ ಬಂದವರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಕೇಳಿಸಿಕೊಳ್ಳುತ್ತಿದ್ದೇನೆ, ನನಗೂ ಕೂಡ ವಯಸ್ಸಾಗಿದೆ. ಆದರೆ ತೀರಾ ಏನು ವಯಸ್ಸಾಗಿಲ್ಲ. ವಯಸ್ಸಾದ ಮೇಲೆ ಮಕ್ಕಳಂತೆ ಎಂದು ಎಲ್ಲರೂ ಹೇಳುತ್ತಿದ್ದರು. ಹಾಗಾಗಿ, ತಾವು ದಯಮಾಡಿ ಅನಗತ್ಯವಾಗಿ ಮಾತನಾಡುವುದನ್ನು ಕಡಿಮೆ ಮಾಡಿಸಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕಲಂ 79(ಎ) ಮತ್ತು 79 (ಬಿ) ಯನ್ನು ಯಾವ ಕಾಲದಲ್ಲಿ ತಂದಿದ್ದು? ಆ ಕಾಲದಿಂದ ಇವತ್ತಿಗೂ ಕೂಡ ಕರ್ನಾಟಕ ರಾಜ್ಯದಲ್ಲಿ ಬಹಳ ಯಶಸ್ವಿಯಾಗಿ ಜಾರಿಯಲ್ಲಿತ್ತು. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಆಗಲೇ ಮಾತನಾಡುವಾಗ ದಕ್ಷಿಣ ಭಾರತದ ಯಾವ ರಾಜ್ಯದಲ್ಲೂ ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಕಾನೂನು ಇಲ್ಲವೆಂದು ಹೇಳಿದರು. ಆದರೆ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ ಕರ್ನಾಟಕ ರಾಜ್ಯವು ಒಂದು ಮಾದರಿ ರಾಜ್ಯವಾಗಿತ್ತು. ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಮಾನ್ಯ ದೇವರಾಜ್ ಅರಸ್ ಅವರು 'ಉಳುವವನೇ ಭೂಮಿಯ ಒಡೆಯ' ಎಂದು ಒಂದು ಕಾನೂನನ್ನು ಜಾರಿಗೆ ತಂದಿದ್ದರಿಂದ ಎಷ್ಟೋ ಜನ ರೈತರು, ಭೂಮಿ ಇಲ್ಲದೇ ಇರತಕ್ಕಂಥವರು, ಭೂ ಮಾಲೀಕರಾಗಿದ್ದರು. ಇವತ್ತು ಕೂಡ ಅವರು ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರು 100ಕ್ಕೆ ಶೇ.10 ರಷ್ಟು ದೊಡ್ಡ ದೊಡ್ಡ ರೈತ ಸಮುದಾಯದವರು ಇದ್ದಾರೆ. ಆದರೆ 100ಕ್ಕೆ 80 ರಿಂದ 90 ರಷ್ಟು ಮಧ್ಯಮ ವರ್ಗದ, ಕೆಳ ಹಂತದ ರೈತರು ಇದ್ದಾರೆ. ಕೇವಲ 2 ರಿಂದ 5 ಎಕರೆ ಜಮೀನನ್ನು ಇಟ್ಟುಕೊಂಡಿರುವ ರೈತರು ಕೂಡ ಇದ್ದಾರೆ. ಇವತ್ತಿನ ದಿವಸ ಕಲಂ 79ಎ ಮತ್ತು 79ಬಿಯನ್ನು ತೆಗೆದುಹಾಕಿದರೆ ಯಾರು ಬೇಕಾದರೂ ಬಂದು ಜಮೀನನ್ನು ಕೊಂಡುಕೊಳ್ಳಬಹುದು. ಇವತ್ತಿನ ದಿವಸ ನೀವೇನು ಕಾನೂನು ಮಾಡುವುದಕ್ಕೆ ಹೊರಟಿದ್ದೀರಿ, ಯಾವ ಇಂಡಸ್ಟ್ರಿಯಲಿಸ್ಟ್ ಇರಬಹುದು, ಕಾರ್ಪೊರೇಟ್ ಕಂಪನಿಗಳು ಇರಬಹುದು, ಯಾವುದೇ businessman ಇರಬಹುದು. ಜಮೀನನ್ನು ಕೊಂಡುಕೊಂಡರೆ ನಮ್ಮ ರೈತರು ಬೀದಿಪಾಲು ಆಗುತ್ತಾರೆ ಎಂದು ತಾವು ಒಂದು ಬಾರಿ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಇವತ್ತಿನ ದಿವಸ ನಾವು ಜಮೀನನ್ನು ಮಾರಾಟ ಮಾಡಿಬಿಡುತ್ತೇವೆ. ಇವತ್ತು 54 ಎಕರೆ ಇರತಕ್ಕಂಥದ್ದನ್ನು 108 ಎಕರೆ ಎಂದು ಮಾಡಿದ್ದೀರಿ. ಈಗ ಮತ್ತೆ 50 ಎಕರೆಗೆ ಸೀಲಿಂಗ್ ಲಿಮಿಟ್ ತಂದಿದ್ದೀರಿ. ಉದಾಹರಣೆಗೆ ಈಗಾಗಲೇ ಎಲ್ಲೆಲ್ಲಿ ನಮ್ಮ ಬಾರ್ಡ್‌ರ್‌ಗಳಿವೆಯೋ ಅಲ್ಲಿ ನಮ್ಮ ರೈತರಿಗೆ ಬೇರೆ ಬೇರೆ ರಾಜ್ಯಗಳಿಂದ ಬಂದಿರತಕ್ಕಂಥವರು ಯಾರು ಹಣವಂತರು ಇದ್ದಾರೋ ಅವರು ಬೇನಾಮಿ ಹೆಸರುಗಳಲ್ಲಿ ನೂರಾರು ಎಕರೆ ಜಮೀನನ್ನು ತೆಗೆದುಕೊಳ್ಳುತ್ತಿರುತ್ತಾರೆ. ಆ ಜಮೀನನ್ನು ತೆಗೆದುಕೊಂಡು ಯಾರು 5 ಎಕರೆ, 6 ಎಕರೆ, 7 ಎಕರೆ ಮತ್ತು 8 ಎಕರೆ ಜಮೀನು ಇಟ್ಟುಕೊಂಡಿದ್ದಾರೋ ಮಾನ್ಯ ಮರಿತಿಬ್ಬೇಗೌಡರವರು ಮಾತನಾಡುತ್ತಾ ಹೇಳಿದರು. ಅವರ ಮನೆಯಲ್ಲಿ ಒಂದು ಮಗುವನ್ನು ಹೈಯರ್ ಎಜುಕೇಷನ್‌ಗೆ ಸೇರಿಸಬೇಕಾದರೆ, ಅವರ ಮನೆಯಲ್ಲಿ ಮದುವೆ ಏನಾದರೂ ಆಗಬೇಕಾದರೆ ಒಂದೆರಡು ಗುಂಟೆ ಅಥವಾ ಅರ್ಧ ಎಕರೆ ಜಮೀನನ್ನು ಮಾರಾಟ ಮಾಡಿ ಜೀವನವನ್ನು ಸಾಗಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಆದರೆ ಇವತ್ತು ಈ ಕಾರ್ಪೊರೇಟ್ ಕಂಪನಿಗಳು ಬಂದು, ಇರತಕ್ಕಂಥ ಜಮೀನನ್ನು ತೆಗೆದುಕೊಂಡು ಹೋದ ಮೇಲೆ ಪರಿಸ್ಥಿತಿ ಏನಾಗುತ್ತದೆ? ನಾವು ಕೊನೆಗೆ ಯಾರು ಜಮೀನಿನ ಮಾಲೀಕನಾಗಿದ್ದನೋ, ಹಣ ಉಳ್ಳವನು ಜಮೀನನ್ನು ಕೊಂಡುಕೊಳ್ಳುತ್ತಾನೊ ಅವನ ಹತ್ತಿರವೇ ಹೋಗಿ ಕೂಲಿ ಕಾರ್ಮಿಕನಾಗಿ ಕೆಲಸ ಮಾಡತಕ್ಕಂಥ ಸಂದರ್ಭ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ ನರಸಾಪುರದಲ್ಲಿ ಇಂಡಸ್ಟ್ರಿಯಲ್ ಏರಿಯಾ ಇದೆ. ನಾನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆ.ಐ.ಎ.ಡಿ.ಬಿ., ಯಿಂದ ಪ್ರಾರಂಭ ಮಾಡಿದರು. ಕೆ.ಐ.ಎ.ಡಿ.ಬಿ., ಯವರು ಭೂಸ್ವಾಧೀನ ಮಾಡಿಕೊಳ್ಳುತ್ತಾರೆ. ವ್ಯವಸಾಯಕ್ಕೆ ಉತ್ತಮವಾದಂತಹ ನೂರಾರು ಎಕರೆ ಜಮೀನನ್ನು ಒತ್ತಾಯಪೂರ್ವಕವಾಗಿ ಭೂಸ್ವಾಧೀನ ಮಾಡಿಕೊಂಡು ತೆಗೆದುಕೊಂಡುಬಿಟ್ಟರು. ಒಂದು ಎಕರೆ ಜಮೀನಿಗೆ ಇಷ್ಟು ಹಣವೆಂದು ನಿಗದಿ ಮಾಡಿದರು. ಅದು ಸಾಕಾಗುವುದಿಲ್ಲವೆಂದು ಮಾಜಿ ಸಚಿವರಾದ ಶ್ರೀ ಕೃಷ್ಣಭೈರೇಗೌಡರವರು ಒಂದು ಹೋರಾಟ ಮಾಡಿ ಅವರಿಗೆ ಹೆಚ್ಚು ದುಡ್ಡನ್ನು ಕೊಡುವ ರೀತಿಯಲ್ಲಿ ಮಾಡಿದರು. ಇವತ್ತಿನ ದಿವಸ ಅಲ್ಲಿ ಅಂತರರಾಷ್ಟ್ರೀಯ ಕಾರ್ಖಾನೆಗಳು ಇವೆ. ಅಲ್ಲಿ ಇವತ್ತಿನ ದಿವಸ ಅಂತರರಾಷ್ಟ್ರೀಯ ಕಾರ್ಖಾನೆಗಳು ಬಂದಿವೆ. ಆ ಕಾರ್ಖಾನೆಗೆ ಜಮೀನು ಮಾರಾಟ ಮಾಡಿಕೊಂಡು ಬೀದಿ ಪಾಲು ಆಗಿದ್ದಾರೋ ಅವರ ಕುಟುಂಬಕ್ಕೆ ಒಂದು ಒಳ್ಳೆಯ ಉದ್ಯೋಗ ಕೊಡಿ ಎಂದು ಕೇಳಿದರೆ ಕೊಡುತ್ತಿಲ್ಲ. ಅವರು ಎಷ್ಟೋ ಜನ ಪದವಿ ಮಾಡಿದ್ದಾರೆ, ಇಂಜಿನಿಯರಿಂಗ್ ಮಾಡಿದ್ದಾರೆ, ಡಿಪ್ಲೊಮಾ ಮಾಡಿದ್ದಾರೆ. ಅವರ್ಯಾರನ್ನೂ ಕೂಡ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ನಮಗೆ ಮೆರಿಟ್ ಬೇಕು ಎಂದು ಹೇಳಿದರು. ಇವತ್ತಿನ ದಿವಸ ಯಾರು ಜಮೀನನ್ನು ಮಾರಾಟ ಮಾಡಿದ್ದರೋ ಆ ಜಮೀನಿನಲ್ಲಿ ಯಾವ ಕಾರ್ಖಾನೆಗಳು ಬಂದಿವೆಯೋ ಆ ಕಾರ್ಖಾನೆಯಲ್ಲಿಯೇ ಕಸ ಗುಡಿಸುವಂತಹ ಕೆಲಸವನ್ನು ನಮ್ಮ ಮಾಜಿ ಭೂ ಮಾಲಿಕರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಗಾರ್ಡನ್‌ಗಳಲ್ಲಿ ನೀರು ಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಶೌಚಾಲಯಗಳನ್ನು ಶುಚಿಗೊಳಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ನಾಳೆ ದಿವಸ ಇಡೀ ಕರ್ನಾಟಕ ರಾಜ್ಯಕ್ಕೆ ಬರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಇವತ್ತು ನೀವು ಆಗಲೇ ಮಾತನಾಡುವಾಗ ಹೇಳಿದಿರಿ. ಕಲಂ 79(ಎ) ಮತ್ತು 79 (ಬಿ) ಯಿಂದ ಎ.ಸಿ.,ಯವರು ದುಡ್ಡು ಹೊಡೆಯುತ್ತಿದ್ದಾರೆ. ಹೌದು, ನಾವು ಇಲ್ಲವೆಂದು ಹೇಳುವುದಿಲ್ಲ. ಎಲ್ಲೋ ಒಂದು ಕಡೆ ತೊಂದರೆಯಾಗುತ್ತಿದೆ. ಈ ಒಂದು ಕೇಸ್‌ಗಳನ್ನು ಹಾಕಿಸಿಕೊಂಡು ಅವರೇ ರೈತರಿಗೆ ಹೇಳಿಕೊಟ್ಟು ಕಲಂ 79(ಎ) ಮತ್ತು 79 (ಬಿ)ಯಲ್ಲಿ ಅರ್ಜಿ ಹಾಕಿ, ನಾನು ಅದಕ್ಕೆ ಏನಾದರೂ ನಿಮ್ಮಗೆ ಸಹಾಯ ಮಾಡುವಂತಹ ರೀತಿಯಲ್ಲಿ ಮಾಡುತ್ತೇವೆಂದು ಹೇಳಿ, ಅವರಿಂದ ಹಣ ಲೂಟಿ ಹೊಡೆಯುತ್ತಿದ್ದಾರೆ, ಆ ರೀತಿ ಲೂಟಿ ಹೊಡೆಯುತ್ತಿರುವುದಕ್ಕೆ ನೀವು ಒಂದು ಕಾನೂನನ್ನು ಜಾರಿಗೆ ತನ್ನಿ. ಹಸುವಿಗೆ ಜ್ವರ ಬಂದರೆ, ಎಮ್ಮೆಗೆ ಬರೆ ಎಳೆದರೆ ಹೇಗೆ? ಯಾರೋ ಎ.ಸಿ.,ಗಳು ಲಂಚ ತೆಗೆದುಕೊಳ್ಳುತ್ತಿರುವುದಕ್ಕೆ ಇಡೀ ಕಾನೂನನ್ನೇ ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇದು ಯಾವ ನ್ಯಾಯ. ಇವತ್ತು ನಾವು ನೀವು ಆತ್ಮಾವಲೋಕನವನ್ನು ಮಾಡಿಕೊಳ್ಳೋಣ. ಕೇವಲ ನಿಮ್ಮ Department ನಲ್ಲಿ ಲಂಚ ತೆಗೆದುಕೊಳ್ಳುತ್ತಿದ್ದಾರಾ? ಪೊಲೀಸ್ ಇಲಾಖೆಯಲ್ಲಿ ಲಂಚ ತೆಗೆದುಕೊಳ್ಳುತ್ತಿಲ್ಲವೇ? ಅದಕ್ಕಾಗಿ ಪೊಲೀಸ್ ಇಲಾಖೆಯ ಪೂರ್ತಿ ಕಾನೂನನ್ನು ಬದಲಾವಣೆ ಮಾಡಿಬಿಡುತ್ತೀರಾ? ಆಹಾರ ಮತ್ತು ನಾಗರೀಕ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಬರಾಜು ಇಲಾಖೆಯಲ್ಲಿ ಲಂಚ ತೆಗೆದುಕೊಳ್ಳುತ್ತಿಲ್ಲವೇ? ಅದನ್ನು ನೀವು ಹಾಗೆಯೇ ಬಿಟ್ಟುಬಿಡುತ್ತೀರಾ? ಕೇವಲ ಎ.ಸಿ.,ಗಳು ಲಂಚ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಒಂದೇ ಕಾರಣಕ್ಕೋಸ್ಕರವಾಗಿ ಇಡೀ ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಿ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಎಂ.ನಾರಾಯಣಸ್ವಾಮಿಯವರೇ, ನಾವಲ್ಲ, **XXX** ರವರು ಮಾಡಿರುವುದು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಡಿ ಯಾರೂ ಒಬ್ಬರನ್ನು ವೈಯಕ್ತಿಕವಾಗಿ ಬಲಿಪಶು ಮಾಡುವುದು ಬೇಕಾಗಿಲ್ಲ. ಹಾಗಾದರೆ, ನಿಮಗೆ ಬುದ್ಧಿ ಇಲ್ಲವೇ? (ಗೊಂದಲ) ಹೌದು, ಸ್ವಾಮಿ ಅವೊತ್ತು ನಾವು ತಪ್ಪು ಮಾಡಿದ್ದೇವೆ. (ಗೊಂದಲ)

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನಿಮ್ಮ ಗುರು **XXX** ಕಾಂಗ್ರೆಸ್‌ನ ಅಧ್ಯಕ್ಷರು ಮಾಡಿರುವುದು. (ಗೊಂದಲ) ನನಗೆ ಏನು ಬೇಜಾರು ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಹೌದು, ಬಿ.ಜೆ.ಪಿ., ಪಕ್ಷದವರು ಸತ್ಯ ಹರಿಶ್ಚಂದ್ರರು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, **XXX** ರವರು he is not a Member of this House. His name should not be taken here, because he cannot defend himself here. ಈ ಸದನದ ಸದಸ್ಯರಲ್ಲದವರ ಹೆಸರನ್ನು ಕಾನೂನಿನಲ್ಲಿ ನಾವು ರಚಿಸಿಕೊಂಡಿರತಕ್ಕಂಥ . . .

**ಸಭಾಪತಿಯವರು:–** ಸದನದ ಸದಸ್ಯರಲ್ಲದವರ ಹೆಸರನ್ನು ದಾಖಲಾತಿಯಿಂದ ತೆಗೆದುಬಿಡಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಯಾವುದೇ ದುರುದೇಶದಿಂದ ಹೇಳಿದ್ದಲ್ಲ. ಅವರು ಆ ರೀತಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ವಿರೋಧ ಪಕ್ಷದವರು. . .

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ನಮ್ಮ ಅಭಿಪ್ರಾಯವೇ ಬೇರೆ. ನಿಮ್ಮ ಅಭಿಪ್ರಾಯ ಬೇರೆ.. . (ಗೊಂದಲ) ಇದರಲ್ಲಿ ದುರುದ್ದೇಶ ಮತ್ತು ರಾಜಕೀಯ ಉದ್ದೇಶವಿದೆ. 15 ಜನ ತೆಗೆದುಕೊಂಡು ಸರ್ಕಾರ ರಚನೆ ಮಾಡಿದ್ದೀರಿ. ನೀವು ಸಂತೋಷವಾಗಿರಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಮ್ಮ ಮುಖಂಡರೂ ಹೀಗೆ ಹೇಳಿದ್ದಾರೆ, ನೀವೇ ಯೋಚನೆ ಮಾಡಿ ಎಂದು ಹೇಳಿದರು.

(ಗೊಂದಲ)

**ಸಭಾಪತಿಯವರು:–** ಈಗ ನೀವು ಅರ್ಥನ್ನು ಮಾಡಿಕೊಂಡು ಬನ್ನಿ.

(ಗೊಂದಲ)

(ಮುಂದು..)

(1012)8.12.2020/2.00/ಎಂ.ಎಂ–ಎಂ.ಡಿ

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ನಮ್ಮ ಅಭಿಪ್ರಾಯ ಬೇರೆ, ನಿಮ್ಮ ಅಭಿಪ್ರಾಯ ಬೇರೆ ಇರುತ್ತದೆ. ಅಭಿಪ್ರಾಯಗಳನ್ನು ಹಂಚಿಕೊಳ್ಳೋಣ. ಸರಿ ನಾವು ತಪ್ಪು ಮಾಡಿದ್ದೇವೆ, ನೀವು ಬುದ್ಧಿವಂತರು ಏಕೆ ಈ ಕಾನೂನನ್ನು ತರುತ್ತೀರಿ?

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಮತ್ತು ಹಲವರು ನಮ್ಮ ಅಧ್ಯಕ್ಷರ ಹೇಳಿಕೆಯನ್ನು quote ಮಾಡಿದ್ದಾರೆ ಆದರೆ ನಮ್ಮ ಪಕ್ಷದ ನಿರ್ಧಾರ ಈ ಮಸೂದೆಯನ್ನು ನಾವು ವಿರೋಧ ಮಾಡಬೇಕು, ಇದನ್ನು ಸೋಲಿಸಬೇಕೆಂದು ನಮ್ಮ ಉದ್ದೇಶ ಇದೆ ಅದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರವಾಗಿ ಮಾಡುತ್ತಿದ್ದಾರೆ. This is the stand of a party. ನೀವು ಯಾರೂ ನಮ್ಮ ಅಧ್ಯಕ್ಷರನ್ನು quote ಮಾಡುವುದಾಗಲೀ, ಯಾರೇ quote ಮಾಡುವುದಾಗಲೀ ಯಾವ ಸಂದರ್ಭದಲ್ಲಿ ಹೇಳಿದ್ದಾರೆ ಅದು ಇರಬಹುದು. ಆದರೆ ಇವತ್ತು ನಮ್ಮ ಪಾರ್ಟಿಯ ನಿಲುವು ಏನೆಂದರೆ ನಾವು ಈ ಮಸೂದೆಯನ್ನು ವಿರೋಧ ಮಾಡಬೇಕು, ಈ ಮಸೂದೆಗೆ ವಿರುದ್ಧವಾಗಿದ್ದೇವೆ.

**ಶ್ರೀ ಆಯನೂರು ಮಂಜುನಾಥ್:-** ಪಾರ್ಟಿ ಅವರ ವಿರುದ್ಧ ಇದೆಯೆಂದು ನಮಗೆ ಗೊತ್ತಿರಲಿಲ್ಲ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮದು ಮಾತನಾಡಿ ಆಯಿತೇ?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನಿನ್ನೂ ಪ್ರಾರಂಭ ಮಾಡುತ್ತಿದ್ದೇನೆ. ಮಾನ್ಯ ಸಚಿವರು ನಿಮ್ಮ ನಾಯಕರೇ ಹೇಳಿದ್ದಾರೆ ಎಂದು ಹೇಳಿದರು. ಇವತ್ತು ಅದೇ ನಾಯಕರು ಈ ಮಸೂದೆಯನ್ನು ಸೋಲಿಸಬೇಕೆಂದು ಹೇಳುತ್ತಿದ್ದಾರೆ. ಅಭಿಪ್ರಾಯಗಳು ನಮಗೂ ನಿಮಗೂ ಬೇರೆ ಇರುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ಇದು double standard ಅಷ್ಟೇ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದಂತಹ ಪ್ರಶ್ನೆಯಾಗಿದೆ. ಕೇವಲ ನಮ್ಮ ತೀಟೆಗಾಗಿ ಮಾತನಾಡುತ್ತಿಲ್ಲ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಒಂದು ಉದಾಹರಣೆ ಕೊಡುತ್ತೇನೆ. ಈ ಕಾನೂನನ್ನು ಬದಲಾವಣೆ ಮಾಡಿದರೆ ಏನಾಗುತ್ತದೆ ಎಂದರೆ, ಯಾರು ಕಪ್ಪು ಹಣವನ್ನಿಟ್ಟುಕೊಂಡಿದ್ದಾರೆ ಅವರು ಜಮೀನನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಇವತ್ತು ಒಂದು ಎಕರೆ ಜಮೀನಿಗೆ guidance value ಒಂದು ಲಕ್ಷ ರೂಪಾಯಿ ಎಂದು ಇಟ್ಟುಕೊಳ್ಳೋಣ ಆದರೆ, ಮಾರುಕಟ್ಟೆ ಬೆಲೆ 10 ಲಕ್ಷ, 20 ಲಕ್ಷ ರೂಪಾಯಿ ಇರುತ್ತದೆ. ದುಡ್ಡಿರುವವನು ಬಂದು ಸಬ್‌ರಿಜಿಸ್ಟ್ರಾರ್ ಆಫೀಸ್‌ಗೆ ಹೋಗಿ ಒಂದು ಲಕ್ಷ ರೂಪಾಯಿಗಳನ್ನು stamp duty ಕಟ್ಟಿ ಅವನ ಹೆಸರಿಗೆ ಜಮೀನನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾನೆ. Difference amount ಅನ್ನು ಕಪ್ಪು ಹಣ ಕಟ್ಟಿರುತ್ತಾನೆ. ಅವನ ಹತ್ತಿರ ಇದ್ದ ಕಪ್ಪು ಹಣ white money ಆಯಿತು. ನಾಳೆ ದಿವಸ ಬೇರೆಯವರ ಹೆಸರಿನಲ್ಲಿ 500 ಎಕರೆ ತೆಗೆದುಕೊಂಡಿರುತ್ತಾನೋ ಅಲ್ಲಿ ವ್ಯವಸಾಯ ಮಾಡುತ್ತಾನೋ, ಏನು ಮಾಡುತ್ತಾನೋ ಗೊತ್ತಿಲ್ಲ. ಆದರೆ 54 ಎಕರೆ ಜಮೀನಿನಲ್ಲಿ ಏನು ಬೆಳೆಯುತ್ತಾರೋ ಅದಕ್ಕೆ income tax rebate ಸಿಗುತ್ತದೆ. ಅದರಲ್ಲೂ ಕೂಡ ಸರ್ಕಾರಕ್ಕೆ ತೆರಿಗೆ ಕಟ್ಟುವಲ್ಲಿ ವಂಚನೆ ಮಾಡುತ್ತಾನೆ. ಇದರಿಂದ ಎಲ್ಲಿಗೆ ಹೋಗಿ ಮುಟ್ಟುತ್ತೇವೆ ಎಂದು ಯೋಚನೆ ಮಾಡಬೇಕು. ನಾವು ವಿರೋಧಪಕ್ಷದಲ್ಲಿ ಕುಳಿತಿದ್ದೇವೆ ಅದಕ್ಕೋಸ್ಕರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಮಾಡುತ್ತಿಲ್ಲ. ನಿಜವಾದ ಕಾಳಜಿಯಿಂದ ಮಾತನಾಡುತ್ತಿದ್ದೇವೆ. ನೀವು ಕೂಡ ರೈತ ಕುಟುಂಬದಿಂದ ಬಂದವರು. ನಾಳೆ ಏನಾಗುತ್ತದೆಂಬ ಆಲೋಚನೆ ನಮ್ಮಲ್ಲಿ ಇರಬೇಕಾಗುತ್ತದೆ. ಈ ಕಾನೂನನ್ನು ಜರೂರಾಗಿ ತರುವಲ್ಲಿ ಬಹಳಷ್ಟು ಹಟಕ್ಕೆ ಬಿದ್ದು ತರುತ್ತಿದ್ದೀರಿ ಸ್ವಲ್ಪ ಯೋಚನೆ ಮಾಡಿ ನೋಡಿ. ಇದರ positive and negative impacts ಏನೆಂದು ದಯಮಾಡಿ ಯೋಚನೆ ಮಾಡಿ. ಯಾರು ಇವತ್ತು ಉಳ್ಳವರು, ದುಡ್ಡಿರುವವರು, ಕಪ್ಪು ಹಣ ಮಾಡಿ ಇಟ್ಟುಕೊಂಡಿರುವವರು ಜಮೀನನ್ನು ತೆಗೆದುಕೊಂಡು ಹೋಗುತ್ತಾರೆ ಅದು ಎಲ್ಲಿಗೆ ಹೋಗಿ ಮುಟ್ಟುತ್ತದೆ? ಯಾರಾದರೂ ಒಬ್ಬ 500 ಎಕರೆ, 600 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಾನೆ. ಒಂದೊಂದು ಕಡೆ ಒಂದೊಂದು ರೀತಿ ಮಾಡಿಕೊಂಡು ಹೋಗುತ್ತಾನೆ. ಇವತ್ತು ನೀರಾವರಿ ಯೋಜನೆಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ನಾಳೆ ದಿವಸ 500 ಎಕರೆ ಜಮೀನಿಟ್ಟುಕೊಂಡಿರುವವನು ಆ ಕಡೆ ಹೋಗುತ್ತಿರುವ ನೀರಾವರಿ ಕೆನಾಲ್ ಅನ್ನು ನಮ್ಮ ಜಮೀನಿನ ಕಡೆಗೆ ತಿರುಗಿಸಿ ಎಂದು ಹೇಳುತ್ತಾನೆ, ನೀರಿಗೂ ಕೂಡ ಅವನು ಅಡ್ಡ ಬರುತ್ತಾನೆ. ನಾಳೆ ಈ ನಾಡಿನ ಜಲ ಮತ್ತು ನೆಲದ ಬಗ್ಗೆ ತೊಂದರೆಯಾಗುತ್ತದೆ. ಕರ್ನಾಟಕ ರಾಜ್ಯದ ರೈತರು ಕಡೆಗೆ ಬೀದಿ ಪಾಲಾಗಿ ಬೇರೆ ಊರಿನಿಂದ ಬಂದು ಜಮೀನನ್ನು ತೆಗೆದುಕೊಂಡವನ ಪರ ಆಗಬೇಕಾಗುತ್ತದೆ. ನಾವು ಕೂಲಿಯಾಳಾಗಿ ಕೆಲಸ ಮಾಡಬೇಕಾದ ಪರಿಸ್ಥಿತಿ, ದುಸ್ಥಿತಿ ಬರುತ್ತದೆ. ಅದಕ್ಕೋಸ್ಕರ ನಾವು ಇವತ್ತಿನ ದಿವಸ ಹೆಚ್ಚು ಕಾಳಜಿಯಿಂದ ಮಾತನಾಡುತ್ತಿದ್ದೇವೆ. ಇಲ್ಲಿ ಕುಳಿತಿರುವ ಬಹುಸಂಖ್ಯಾತ ಶಾಸಕರುಗಳು ರೈತ ಕುಟುಂಬದಿಂದ ಮೂಲ ಕೃಷಿಕರಾಗಿ ಬಂದಿರುವಂತಹವರು. ಯೋಚನೆ ಮಾಡಿ. ಯಾರು ಇದರ ಮೇಲೆ ಒತ್ತಡ ಹಾಕಿ ಇದನ್ನು ತರಬೇಕೆಂದು ಹೇಳುತ್ತಿದ್ದಾರೋ ಅವರಿಗೆ ಮನದಟ್ಟು ಮಾಡಿಕೊಡುವುದಕ್ಕೆ ಪ್ರಯತ್ನ ಪಡಿ. ಒಂದು ವೇಳೆ all party meeting ಮಾಡಿ ಕೇಂದ್ರಕ್ಕೆ delegation ಹೋಗೋಣ. ನಾವು ಕೂಡ ದೆಹಲಿಗೆ ಬರುತ್ತೇವೆ, ಮುಕ್ತವಾಗಿ ಚರ್ಚೆ ಮಾಡೋಣ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಈ ದೇಶದ ಯಾವ ರೈತನೂ ಇದು ಬೇಕೆಂದು ಕೇಳುತ್ತಿಲ್ಲ. ಏತಕ್ಕಾಗಿ ಹಟಕ್ಕೆ ಬಿದ್ದು ಈ ಕಾನೂನನ್ನು ತರುತ್ತಿದ್ದೀರಿ? Educate ಮಾಡಿ ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಯಾರೋ Industrialists or Real Estate business ಮಾಡುವವರಿಗೆ ಅನುಕೂಲವಾಗಬಹುದು. ಆದರೆ ರೈತರಿಗೆ ಬಹಳಷ್ಟು ಅನಾನುಕೂಲವಾಗುತ್ತದೆ. ದಯಮಾಡಿ ಅರ್ಥ ಮಾಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಒಬ್ಬ ಸಚಿವ ಸಂಪುಟದ ಸಚಿವನಾಗಿ ಇಂತಹ ಕಾನೂನನ್ನು ಪಾಸ್ ಮಾಡಿಕೊಡಬೇಕೆಂದು ಕೇಳುತ್ತಿರುವ ಅವರ ಕಾಳಜಿಯನ್ನು ಒಪ್ಪುತ್ತೇನೆ. ನಿಮಗೆ majority ಇರಬಹುದು ಪಾಸ್ ಮಾಡಿಕೊಳ್ಳಿ ನಾವು ಬೇಡವೆಂದು ಹೇಳುವುದಿಲ್ಲ. ಆದರೆ ನಮ್ಮ ಕಾಳಜಿ ಏನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧಪಕ್ಷದಲ್ಲಿದ್ದೇವೆ ನಮ್ಮ ಮಾತನ್ನು ಕೇಳಿ. ಅದೇ ರೀತಿ ಯಾರು ಉತ್ತಮವಾದಂತಹ ವಾಗ್ಮಿಗಳು, ಹಿರಿಯರು, ಅನುಭವವಿರುವವರು ಇದ್ದಾರೆ ಅವರನ್ನು ಕೂಡ ಕರೆದು ಚರ್ಚೆಗೆ ಕುಳಿತುಕೊಳ್ಳಿ. ಅದರ ಸಾಧಕ ಬಾಧಕಗಳೇನೆಂದು ಕೇಳಿಕೊಳ್ಳಿ. ಆಮೇಲೆ ಈ ಕಾನೂನನನ್ನು ತೆಗೆದುಕೊಂಡು ಬನ್ನಿ ಯಾರೂ ಕೂಡ ಬೇಡವೆಂದು ಹೇಳುವುದಿಲ್ಲ. ಕಲಂ 79ಎ, 79ಬಿ ಯನ್ನು ತಂದು ಈ ರಾಜ್ಯದಲ್ಲಿ ಇವತ್ತು ಕೂಡ ಬೇಕಾಬಿಟ್ಟಿಯಾಗಿ ಮಾರಾಟ ಮಾಡುವುದಕ್ಕಾಗುವುದಿಲ್ಲ. ಏನು ಕಡಿವಾಣ ಹಾಕಿತ್ತು ಆ ಕಡಿವಾಣ ತೆಗೆದರೆ ನಾಳೆಯಿಂದ ಇಡೀ ಊರುಗಳಲ್ಲಿ Real Estate Agent ಗಳು ನಿಮಗೆ ಜಮೀನು ಬೇಕೇ ಎಂದು ಹುಟ್ಟಿಕೊಳ್ಳುತ್ತಾರೆ. ಯಾರು ಬಂಡವಾಳಶಾಹಿಗಳಿದ್ದಾರೆ ಅವರ ಹತ್ತಿರ ಹೋಗಿ ನಿಮಗೆ 100 ಎಕರೆ, 200 ಎಕರೆ ಮಾಡಿಕೊಡುತ್ತೇವೆ ಬನ್ನಿ ಎಂದು ಕರೆಯುತ್ತಾರೆ ಅಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇವತ್ತು ಅದಾನಿ, ಅಂಬಾನಿ, ನೀರವ್ ಮೋದಿ ಇಂತಹ ಕೈಗಾರಿಕೋದ್ಯಮಿಗಳು, ದುಡ್ಡಿರುವಂತಹವರು ನಾಳೆ ದಿವಸ ನಮ್ಮ ರಾಜ್ಯಕ್ಕೆ ಬಂದು ಇರುವ ಜಮೀನುಗಳನ್ನು ರೈತರನ್ನು ಒಕ್ಕಲೆಬ್ಬಿಸಿ ನೂರಾರು ಕೋಟಿ ರೂಪಾಯಿಗಳನ್ನು ಮಾಡಿಕೊಳ್ಳುವುದಕ್ಕೆ ಹೋದಾಗ ಅವರು ಅವರಲ್ಲಿರುವಂತಹ ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಮಾಡಿಕೊಳ್ಳುವುದಕ್ಕೋಸ್ಕರವಾಗಿ ಹೊರಟಾಗ ರೈತರಿಗೆ ತೊಂದರೆಯಾಗುವುದಿಲ್ಲವೇ? ಒಂದು ಉದಾಹರಣೆ ಹೇಳುತ್ತೇನೆ. ನಾವು ಸಣ್ಣ ಹುಡುಗರಾಗಿದ್ದಾಗ ಒಂದು ರೂಪಾಯಿಗೆ, ಎರಡು ರೂಪಾಯಿಗೆ ಕ್ರಷ್, ಸೋಡಾ, ಟೊರಿನೋ ಇಂತಹ ಪಾನೀಯಗಳು ಬಾಟಲಿಯಲ್ಲಿ ಸಿಗುತ್ತಿತ್ತು. ಆದರೆ ಈಗ ಕೋಕಾಕೋಲಾ, ಪೆಪ್ಸಿಯಂತಹ Multinational Companies ಯಾವತ್ತು ಕಾಲಿಟ್ಟಿತೋ ಆಗ ಈ ಸಣ್ಣ ಸಣ್ಣ ಪಾನೀಯಗಳ ಕಂಪನಿಗಳು ಕಂಗಾಲಾದವು. ಕೊನೆಗೆ ಯಾವುದೂ ಉಳಿಯಲಿಲ್ಲ. ಉಳಿದಿದ್ದು ಬಹುರಾಷ್ಟ್ರೀಯ ಕಂಪನಿಗಳು. ಇವತ್ತು ಅವರು ಹೇಳಿದ ರೇಟಿಗೆ ಮಾರಾಟವಾಗುತ್ತಿದೆ, ಅದರಲ್ಲಿ ಕೆಮಿಕಲ್ ಮಿಕ್ಸ್ ಆಗಿದೆ ಅದನ್ನು ಕುಡಿಯಬಾರದೆಂದು conditions ಹೇಳಿದರೂ ಕೂಡ ವಿಧಿಯಿಲ್ಲದೇ ಅದಕ್ಕೆ ನಾವು ದಾಸರಾಗಿದ್ದೇವೆ. ನಾಳೆ ದಿವಸ ಇದಾಗುವುದಿಲ್ಲವೇ? ಆ ಕಾಳಜಿಯಿಂದ ಮಾತನಾಡುತ್ತಿದ್ದೇವೆ. ರೈತರು ಕರ್ನಾಟಕ ರಾಜ್ಯದಲ್ಲಿ ಇರಬಹುದು, ಆಂಧ್ರ ಪ್ರದೇಶದಲ್ಲಿ, ಕೇರಳ, ಪಶ್ಚಿಮ ಬಂಗಾಳ, ಒರಿಸ್ಸಾದಲ್ಲಿ ಇರಬಹುದು ಭಾರತ್ ಬಂದ್ ಗೆ ಕರೆ ಕೊಟ್ಟು ಇಡೀ ರೈತರು ಇವತ್ತು ಬೀದಿಗೆ ಬಂದಿದ್ದಾರೆ. ಅವರು ಸುಮ್ಮನೇ ಬಂದಿದ್ದಾರೆಯೇ? ಅವರಿಗೇನು ಹುಚ್ಚು ಹಿಡಿದಿದೆಯೇ? ಏನು ಇವತ್ತು ಈ ಕಾನೂನನ್ನು ತರುವುದಕ್ಕೆ ಹೊರಟಿದ್ದೀರಿ; ನೀವು ಕೇವಲ ಮಾತಿನಲ್ಲಿ ಈ ದೇಶದ ಬೆನ್ನೆಲುಬು ರೈತರು ಎಂದು ಹೇಳುತ್ತೀರಿ. ಆದರೆ ಆ ಬೆನ್ನನ್ನು ಮುರಿಯುವುದಕ್ಕೆ ಹೊರಟಿದ್ದೀರಿ. ಯಾರೋ 4 ಜನ, 10 ಜನರನ್ನು ಮೆಚ್ಚಿಸುವುದಕ್ಕೋಸ್ಕರವಾಗಿ ಈ ದೇಶದ ಕಾನೂನನ್ನು ಬದಲಾವಣೆ ಮಾಡಿಕೊಂಡು ಹೋದರೆ ಯಾರೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಹೇಳುವವರು, ಕೇಳುವವರು ಇಲ್ಲವೇ? ಇವತ್ತಿನ ದಿವಸ ನಮ್ಮ ಸಹಾಯಕ್ಕೆ ಕೋರ್ಟುಗಳೂ ಬರುತ್ತಿಲ್ಲ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಏನು ಶಾಸನವನ್ನು ನಿರ್ಮಾಣ ಮಾಡುವಂತಹ ಶಕ್ತಿ ಇರುವಂತಹ ಈ ಸದನಕ್ಕೆ ಚಿಂತಕರ ಚಾವಡಿ ಎಂದು ಈ ಸದನಕ್ಕೆ ಕರೆಯುತ್ತಾರೆ. ನಾವುಗಳು ಕೂಡ ತಪ್ಪು ಮಾಡುವುದು ಬೇಡ. ದಯಮಾಡಿ ಪಕ್ಷಾತೀತವಾಗಿ; ನಮ್ಮ 'ಹಳ್ಳಿ ಹಕ್ಕಿ' ಮಾನ್ಯ ವಿಶ್ವನಾಥ್‌ರವರು ನಗುತ್ತಾ ಕುಳಿತಿದ್ದಾರೆ. ಅವರ ಅಂತರಾಳದ ಮಾತನ್ನು ಹೇಳಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರು ಕೂಡ ರೈತ ಕುಟುಂಬದಿಂದ ಹುಟ್ಟಿ ಬಂದವರು, ಸ್ವತಃ ಕೃಷಿಕರಾಗಿ ಬಂದಿರುವವರು. ಅವರ ಸಲಹೆಗಳನ್ನು, ಸತ್ಯಾಂಶಗಳನ್ನು ಕೇಳಿಕೊಳ್ಳಿ ಹೇಳುತ್ತಾರೆ. ಇಂತಹ ಪರಿಸ್ಥಿತಿ ಇರಬೇಕಾದರೆ, ನಮಗೆ ಈ ಕಾನೂನು ಬೇಕಾಗಿದೆಯೇ? ನಮ್ಮ ಸಭಾನಾಯಕರು ಸಮಯವನ್ನು ನಿಗದಿ ಮಾಡಿ ಅಷ್ಟರೊಳಗೆ ಮುಗಿಸಲಿ ಎಂದು ಹೇಳಿದರು. ಸಭಾನಾಯಕರು ಕೂಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದವರು. ರೈತರ ಕಷ್ಟ ಏನೆಂದು ಸ್ವತಃ ಅನುಭವಿಸಿ ಬಂದಿರುವಂತಹವರು. ನಿಮ್ಮ ಮಾತಿನಲ್ಲಿ ಈ ರೀತಿ ಬರಬಾರದು. ಮಾನ್ಯ ಸಚಿವರು ಸಭಾನಾಯಕರಿಗೆ ಈಗ ಎದ್ದು ನಿಲ್ಲಬೇಡಿ ಸಮಯ ಹಾಳಾಗುತ್ತದೆ, ಅವರೇನಾದರೂ ಮಾತನಾಡಿಕೊಳ್ಳಲಿ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಇಲ್ಲಿ Bill fail ಆದರೂ ಪರವಾಗಿಲ್ಲ, ಅಸೆಂಬ್ಲಿಗೆ ಹೋಗಿ ವಿಧೇಯಕವನ್ನು ಪಾಸ್ ಮಾಡಿಕೊಳ್ಳುತ್ತೇವೆಂದು ಸಚಿವರು ಇದ್ದಾರೆ. ಇಷ್ಟು ಗಂಭೀರವಾಗಿ ಮಾತನಾಡುತ್ತಿದ್ದೇವೆ, ವಿರೋಧಪಕ್ಷದ ಸಾಲಿನಲ್ಲಿ ಇಷ್ಟು ಜನರು ಕುಳಿತಿದ್ದೇವೆ. ಆದರೆ ಆಡಳಿತ ಪಕ್ಷದಲ್ಲಿ ಯಾರಿಗೂ ಕೂಡ ಕಾಳಜಿ ಇಲ್ಲ. ಅಲ್ಲಿ ಎಷ್ಟು ಜನರು ಕುಳಿತಿದ್ದಾರೆ ಎಂಬುದನ್ನು ನೋಡಿ. ಎಷ್ಟರಮಟ್ಟಿಗೆ ಅವರಿಗೆ ಇದರ ಬಗ್ಗೆ ಕಾಳಜಿ ಇದೆ ಎನ್ನುವುದನ್ನು ನೋಡಿ. ನಾವು ಸುಮ್ಮನೇ ಮಾತನಾಡುತ್ತಿದ್ದೇವೆಯೇ?

(ಮುಂದು)

(1013) 08-12-2020/ 02-10/ ಕೆಹೆಚ್-ಎಂಡಿ

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ 3 ಜನ ಮಾನ್ಯ ಸಚಿವರು ಇರಬೇಕಲ್ಲವೇ?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಸದನದಲ್ಲಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಾತನಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮೂರು ಜನ ಮಂತ್ರಿಗಳನ್ನು ಬಿಟ್ಟು ಬೇರೆ ಯಾರು ಇಲ್ಲ. ನಾನು ಹೇಳುವುದನ್ನು ಕೇಳುವಂತಹ ತಾಳ್ಮೆ ಇಲ್ಲ. ಮಾನ್ಯ ವಿರೋಧ ಪಕ್ಷದವರು ಏನಾದರೂ ಮಾತನಾಡಿಕೊಳ್ಳಿ. ನಾವು ಈ ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋಗುತ್ತೇವೆ ಎನ್ನುವಂತಹ ಆತುರಕ್ಕೆ ಬಿದ್ದಿದ್ದಾರೆ. ಇದರ ಬಗ್ಗೆ ನಾನು ಆಗಲೇ ಹೇಳಿದೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಬೇರೆ ಏನಾದರೂ ಮುಖ್ಯ ಕೆಲಸ ಇದ್ದರೆ ಮುಗಿಸಿಕೊಂಡು ಬರಲಿ. ನಾಳೆ ಬೇಕಾದರೆ ಚರ್ಚೆ ಮಾಡೋಣ ಎಂದು ಹೇಳಿದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನೇ ಪದೇ ಪದೇ ಹೇಳಿದರೆ ನಾವು ಇನ್ನೇನೂ ಕೇಳಬೇಕು.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರಗಳನ್ನು ಪದೇ ಪದೇ ಕೇಳುವುದಕ್ಕೆ ನಾವೇನು ಎಲ್.ಕೆ.ಜಿ., ಮಕ್ಕಳೇ. ಮಾನ್ಯ ಸದಸ್ಯರು ಹೇಳಿದ್ದನ್ನೇ ಹೇಳುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಿಗೆ ಕಿವಿ ಇಲ್ಲ. ಹೃದಯ ಇಲ್ಲ. ಬಾಡಿಯೇ ಇಲ್ಲ. ನಿಮ್ಮ ಮುಂದೆ ಮಾತನಾಡುತ್ತಿದ್ದರೆ ನಾವು ಏನು ಮಾಡುವುದು.

**ಶ್ರೀ ಆರ್.ಅಶೋಕ್:–** ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಏನು ಮಾತನಾಡುವುದು? ಇವತ್ತಿನ ದಿವಸ ಎಲ್ಲಾ ಕಾರ್ಮಿಕರಿಗೆಲ್ಲರಿಗೂ ಕೂಡ ನಿವೃತ್ತಿ ವಯಸ್ಸು ಎಂದು ಇರುತ್ತದೆ. ಇವರಿಗೆ ಸಂಬಳ ಇರುತ್ತದೆ. ನಿವೃತ್ತಿ ಹೊಂದಿದ ಮೇಲೆ ಪಿಂಚಣಿ ಸಿಗುತ್ತದೆ. ರೈತರಿಗೆ ಈ ರೀತಿಯ ಯಾವುದೇ ಸೌಲಭ್ಯ ಇಲ್ಲ. ರೈತರಿಗೆ ನಿವೃತ್ತಿ ವಯಸ್ಸು ಎಂದು ಇದೆಯೇ, ನಾವು ರೈತರಿಗೆ ಸಂಬಳ ಕೊಡುತ್ತೇವೆಯೇ ಅಥವಾ ಪಿಂಚಣಿಯನ್ನು ಕೊಡುತ್ತೇವೆಯೇ? ರೈತ ತನ್ನ ಭೂಮಿಯಲ್ಲಿ ಸಾಯುವ ತನಕ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದುಡಿಯಬೇಕು. ಇವತ್ತಿನ ದಿವಸ ಅಂತಹ ರೈತರ ಬದುಕನ್ನು ಬರಡು ಮಾಡುವುದಕ್ಕೆ ಹೊರಟಿದ್ದಾರೆ. ರೈತ ಯಾವ ಕೃಷಿಯನ್ನು ನಂಬಿಕೊಂಡು ಬದುಕುತ್ತಿದ್ದನೋ, ತನ್ನ ಜೊತೆಯಲ್ಲಿರುವಂತಹ ಒಂದು ಎಕರೆ, ಎರಡು ಎಕರೆ, ಐದು ಎಕರೆ ಜಮೀನಿನಲ್ಲಿ ಜೀವನ ಸಾಗಿಸುತ್ತಿದ್ದಾನೆ. ಇವತ್ತಿನ ದಿವಸ ಆತ ಬೀದಿ ಪಾಲಾಗಬೇಕಾಗಿದೆ, ಈತನನ್ನು ನಂಬಿಕೊಂಡಿರುವ ಕುಟುಂಬಗಳು ಬೀದಿಗೆ ಬಂದ ಮೇಲೆ ಅವರನ್ನು ಕಾಪಾಡುವಂತಹವರು ಯಾರು? ಇವತ್ತಿನ ದಿವಸ ರೈತರೆಲ್ಲಾ ಸಾಲ ಮಾಡಿಕೊಳ್ಳುತ್ತಿದ್ದಾರೆ. ಸಾಲ ಮಾಡಿ ಸಾಲ ಮರುಪಾವತಿ ಮಾಡಲು ಆಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಕೃಷಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಯೋ, ಹೆಂಡತಿ–ಮಕ್ಕಳನ್ನು ಸಾಕುವುದಕ್ಕೆ ಸಾಧ್ಯವಿಲ್ಲವೋ, ಅವರು ಹೇಡಿಗಳು ಎಂದು ಹೇಳಿದ್ದಾರೆ. ಇನ್ನು ಅವರನ್ನು ನಿಮ್ಮ ಕ್ಯಾಬಿನೇಟ್‌ನಲ್ಲಿ ಇಟ್ಟುಕೊಂಡಿದ್ದೀರಿ. ರೈತರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡಿ, ಇವತ್ತಿನ ದಿವಸ ಹೆಂಡತಿ–ಮಕ್ಕಳನ್ನು ಸಾಕುವುದಕ್ಕೆ ಯೋಗ್ಯತೆ ಇಲ್ಲದೆ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಒಬ್ಬ ಮಂತ್ರಿ ಹೇಳುತ್ತಾರೆ. ಒಬ್ಬ ಮಂತ್ರಿಯಾಗಿ ರೈತರ ಬಗ್ಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದನ್ನು ಕೇಳಬೇಕಲ್ಲವೇ, ತಾವು ಯಾರಾದರೂ ಮಂತ್ರಿಯವರನ್ನು ಕರೆದು ಬುದ್ಧಿವಾದ ಹೇಳಿ, ತಮ್ಮ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಲಾಗಿದೆಯೇ, ಇಂತಹ ಒಂದು ಕಾನೂನನ್ನು ತಂದಿರುವಂತಹ ತಾವು ಯಾವ ಪುರುಷಾರ್ಥಕ್ಕಾಗಿ ಈ ಕಾನೂನು ಬೇಕಾಗಿದೆ. ಯಾರಿಗೆ ಬೇಕಾಗಿದೆ? ಈ ಕಾನೂನು ಬಂಡವಾಳಶಾಹಿಗಳಿಗೆ ಬೇಕಾಗಿದೆ. ಬಂಡವಾಳಶಾಹಿಗಳ ಜೊತೆಗೆ ಯಾರು ಶಾಮೀಲಾಗಿರುತ್ತಾರೋ, ಅವರಿಗೆ ಈ ಕಾನೂನು ಬೇಕಾಗಿದೆ. ನಿಜವಾದ ರೈತರಿಗೆ ಅಲ್ಲ. ಆದುದರಿಂದ ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆತ್ಮಸಾಕ್ಷಿಗೆ ಅನುಗುಣವಾಗಿ ಈ ವಿಧೇಯಕಕ್ಕೆ ತರಲಾಗಿದೆಯೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ತಾವು ಹೇಳಿರುವಂತಹ ವಿಚಾರಗಳನ್ನು ನಾನು ತಲೆಗೆ ಹಾಕಿಕೊಂಡಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಮ್ಮನ್ನು ಇಲ್ಲಿಂದ ಬಿಟ್ಟರೇ ಸಾಕು ಎನ್ನುವಂತಾಗಿದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಒಂದು, ಎರಡು, ಮೂರು ಮತ್ತು ನಾಲ್ಕು ಎಂದು ಹೇಳಿದರೆ ಸಾಕು.

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಈ ಕಾನೂನು ಹಿಂದಕ್ಕೆ ತೆಗೆದುಕೊಳ್ಳಿ. 79 'ಎ' ಮತ್ತು 79 'ಬಿ' ನಗರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ Assistant Commissioner ಗಳು ಹಣ ಮಾಡಿ ದಂಧೆ ನಡೆಸುತ್ತಿರುವುದು ನಿಜ. ಅವರಿಗೆ ಕಡಿವಾಣ ಹಾಕುವುದಕ್ಕೆ ಕಾನೂನಿನಲ್ಲಿ ಬದಲಾವಣೆ ತೆಗೆದುಕೊಂಡು ಬನ್ನಿ. ಅದನ್ನು ಬಿಟ್ಟು ಎಲ್ಲಿ ಹಳ್ಳಿಗಾಡುಗಳಲ್ಲಿಯೂ ಈ ಕಾನೂನನ್ನು ಮಾಡಿ ರೈತರಿಗೆ ಹೊಡೆತ ಕೊಡುವಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ. ನಾವು ಈ ರೀತಿಯೇ ಮಾಡುತ್ತೇವೆಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ. ತಮ್ಮ ವರ್ತನೆ ಹಾಗೆಯೇ ಇದೆ. ನೀನು ಏನಾದರೂ ಮಾಡಿಕೊಳ್ಳಪ್ಪ, ನೀನು ಏನಾದರೂ ಹೇಳಪ್ಪ. ಒಂದು ವೇಳೆ ಈ ವಿಧೇಯಕವನ್ನು fail ಮಾಡಿ, ಇಲ್ಲಿಂದ ನಾವು ವಿಧಾನಸಭೆಗೆ ತೆಗೆದುಕೊಂಡು ಹೋಗಿ ವಿಧೇಯಕವನ್ನು ಪಾಸ್ ಮಾಡಿಕೊಳ್ಳುತ್ತೇವೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ನಾನು ಜೆ.ಡಿ.ಎಸ್., ಪಕ್ಷದವರ ಹತ್ತಿರ ಮನವಿ ಮಾಡಿಕೊಳ್ಳುತ್ತೇನೆ. ಒಬ್ಬರು ಈ ವಿಧೇಯಕವನ್ನು ವಿರೋಧಿಸಿ ಮಾತನಾಡುತ್ತಾರೆ. ಒಬ್ಬರು ಈ ವಿಧೇಯಕದ ಪರವಾಗಿ ಮಾತನಾಡುತ್ತಾರೆ. ಜೆ.ಡಿ.ಎಸ್., ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಗಾಂಧಿ ಪ್ರತಿಮೆಯ ಮುಂದೆ ಧರಣಿಯಲ್ಲಿ ಕುಳಿತುಕೊಂಡಿದ್ದಾರೆ. ಇದಕ್ಕೆ ನಾವೆಲ್ಲರೂ ಬೆಂಬಲ ಕೊಡಬೇಕು. ಹೊರಗೆ ರೈತರ ವಿರೋಧವಾಗಿರುವುದು. ಸದನದಲ್ಲಿ ರೈತರ ಪರವಾಗಿ ಮಾತನಾಡುವಂತಹದ್ದು. ಈ ರೀತಿ ಆಗಬಾರದು. ರೈತರು ರೈತರೇ, ಕಾಂಗ್ರೆಸ್ ರೈತರು, ಬಿಜೆಪಿ ರೈತರು, ಜೆಡಿಎಸ್ ರೈತರು, ಕಮ್ಯುನಿಸ್ಟ್ ರೈತರು ಎಂದು ಯಾರು ಇರುವುದಿಲ್ಲ. ಈ ದೇಶದ ರೈತರು ರೈತರೇ. ಆದ್ದರಿಂದ, ದಯಮಾಡಿ, ಇವತ್ತಿನ ಸರ್ಕಾರ ತಂದಿರುವಂತಹ ಈ ವಿಧೇಯಕವನ್ನು ವಿರೋಧಿಸಿ, ಮಾತನಾಡುವುದಕ್ಕೆ ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುಶಃ ದೇಶದಲ್ಲಿ ಹಲವಾರು ವಿಚಾರಗಳನ್ನಿಟ್ಟುಕೊಂಡು ರೈತ ದೆಹಲಿಯ ಸಂಸತ್ತಿಗೆ ಹೋಗಿ ತನ್ನ ಅಳಲನ್ನು ಹೇಳಬೇಕೆಂಬ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಇಲ್ಲಿ ವಿರೋಧ ಪಕ್ಷದವರ ಮಾತನ್ನು ಕೇಳುವುದು ಬೇಡ. ನಮಗೆ ಬಹುಮತ ಇದೆ. ನಾವು ವಿಧೇಯಕವನ್ನು ಪಾಸ್ ಮಾಡಿಕೊಳ್ಳುತ್ತೇವೆ ಎನ್ನುವಂತಹ ಮನಸ್ಸು ಉಳ್ಳವರು ಇಲ್ಲಿದ್ದಾರೆ.

**ಶ್ರೀ ಬಿ.ಎ. ಭೈರತಿ ಬಸವರಾಜ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ತಿಮ್ಮಾಪೂರರವರೇ, ಈಗಾಗಲೇ ಇಷ್ಟೆಲ್ಲಾ ಮಾತುಗಳನ್ನು ಮಾತನಾಡಿದ್ದಾರೆ. ಅವರ ಮಾತುಗಳನ್ನು ತಾವು ಕೇಳಲಿಲ್ಲವೇ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಚಿವರೇ, ಇದರ ಬಗ್ಗೆ ನಾನು ಹೇಳುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಇದರ ಬಗ್ಗೆ ತಾವು ಇನ್ನು ಏನು ತಿಳಿದುಕೊಂಡಿಲ್ಲ. ತಾವು ಇಲ್ಲಿಯ ವಿಷಯಗಳನ್ನು ಮಾತ್ರ ತಿಳಿದುಕೊಂಡಿದ್ದೀರಿ. ಇನ್ನು ಅಲ್ಲಿಯ ವಿಷಯಗಳನ್ನು ತಾವು ಇನ್ನು ಏನು ತಿಳಿದುಕೊಂಡಿಲ್ಲ. ಆ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಇನ್ನು ಬಹಳ ದಿವಸಗಳು ಬೇಕು. ಅಷ್ಟರಲ್ಲಿ ಮತ್ತೆ ಇಲ್ಲಿಗೆ ಬರುವುದಕ್ಕೆ ಪ್ರಯತ್ನ ಪಡುತ್ತೀರಿ.

ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಹಲವಾರು ನಕ್ಸಲೆಟ್ ಬೆಳವಣಿಗೆಗಳು ನಡೆಯುತ್ತಿರುವುದನ್ನು ನಾವು ಬೇರೆ ಬೇರೆ ರಾಜ್ಯದಲ್ಲಿ ನೋಡುತ್ತೇವೆ. ಆದರೆ ನಮ್ಮ ರಾಜ್ಯದಲ್ಲಿ ಈ ರೀತಿ ಏಕೆ ಆಗಲಿಲ್ಲ? ನಮ್ಮ ದೇಶದಲ್ಲಿ ಏಕೆ ಆಗಲಿಲ್ಲವೆಂದರೆ, ದೇವರಾಜು ಅರಸುರವರು ಹಲವಾರು ಬಡ ಕುಟುಂಬಗಳಿಗೆ ಭೂಮಿಯನ್ನು ಕೊಟ್ಟು, ಉಳುವವನೇ ಭೂಮಿಯ ಒಡೆಯ ಎಂಬ ಮಾತನ್ನು ದೃಷ್ಟಿಯಲ್ಲಿಟ್ಟುಕೊಂಡು ಬಡವರಿಗೆ, ಹಿಂದುಳಿದ ವರ್ಗದವರಿಗೆ, ಸಾಮಾಜಿಕ ನ್ಯಾಯವನ್ನು ಕೊಟ್ಟಂತಹ ಮಹಾಪುರುಷ ಒಂದು ಕಡೆಯಾದರೆ, ಸನ್ಮಾನಿತರು ಉಳುವವನೇ ಭೂಮಿಯ ಒಡೆಯ ಎನ್ನುವಂತಹ ತರ್ಕಬದ್ಧವಾದ ಕಾನೂನನ್ನು ತರುತ್ತಿದ್ದಾರೆ ಎಂದರೆ, ಇವರ ನಡೆ ಇದು ಸಾಮಾಜಿಕ ನ್ಯಾಯವಾಗಿದೆಯೇ, ನಾನು ಒಂದು ಹೇಳುವುದೇನೆಂದರೆ, ಕಂದಾಯ ಸಚಿವರೇ, ತಾವು ರಾಯಚೂರು ಕಡೆ ಹೋಗಿದ್ದೀರಿಯೇ, 5 ಸಾವಿರ ರೂಪಾಯಿಯಿಂದ 2 ಲಕ್ಷ ರೂಪಾಯಿಗಳವರೆಗೆ 500 ಎಕರೆ ಜಮೀನನ್ನು ಆಂಧ್ರದವರು ಖರೀದಿ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳುತ್ತಿದ್ದರು. 500 ಎಕರೆ ಜಮೀನನ್ನು ನೀನು ಏಕೆ ಉಳುಮೆ ಮಾಡುತ್ತೀಯಾ ಎಂದು ಕೇಳಿದರೆ, ಸರ್ವೆ ನಂಬರ್. 20 ನಲ್ಲಿ ಕೆಲಸ ಮಾಡುವವರು ಇಲ್ಲಿ ದುಡಿಯುತ್ತಿದ್ದಾರೆ. ಆತನ ಹೆಂಡತಿ ಕಸ ತೆಗೆಯುತ್ತಾಳೆ, ಅವಳು ಸರ್ವೆ ನಂಬರ್.24 ರಲ್ಲಿ ದುಡಿಯುತ್ತಾಳೆ ಎಂದು ಹೇಳುತ್ತಾನೆ. ಹಾಗಿದ್ದರೆ ತಾವು ಯಾರಿಗೆ ಮೋಸ ಮಾಡುವುದಕ್ಕೆ ಹೊರಟಿದ್ದೀರಿ? ತಾವು ceiling ತೆಗೆದು ಹೆಚ್ಚಿಗೆ ಮಾಡಿದ್ದೀರಿ. ಒಳ್ಳೆಯ ವಿಚಾರಗಳನ್ನು ತಾವು ಪ್ರತಿಬಿಂಬಿಸಿದ್ದೀರಿ. ಆದರೆ ಈಗ definition ಅನ್ನು ತೆಗೆದಿದ್ದೀರಿ. ನೀರಾವರಿ ಜಮೀನನ್ನು ನೀರಾವರಿ ಕೃಷಿಗೆ ಮಾತ್ರ ಉಪಯೋಗ ಮಾಡಿಕೊಳ್ಳಬೇಕು. ಮಾನ್ಯ ಕಂದಾಯ ಸಚಿವರೇ, ನನ್ನ ಹತ್ತಿರ 8 ಎಕರೆ ಜಮೀನು ಇದ್ದು, ಇದರಲ್ಲಿ 4 ಎಕರೆ ಜಮೀನಿನಲ್ಲಿ ತೊಗರಿಯನ್ನು ಬೆಳೆಯುತ್ತೇನೆ. ಇನ್ನು 4 ಎಕರೆಯಲ್ಲಿ ಲವಣೆಯನ್ನು ಬೆಳೆಯುತ್ತಿದ್ದೇನೆ. ಇವತ್ತಿನ ದಿವಸ ಅದೇ 8 ಎಕರೆ ಜಮೀನನ್ನು ನೀರಾವರಿ ಮಾಡಿದ್ದೇನೆ. ಇಡೀ ಕುಟುಂಬ ಸಹಭಾಗಿತ್ವದಿಂದ ಬದುಕುತ್ತೇವೆ. ಹೊಟ್ಟೆ ತುಂಬಾ ಊಟ ಮಾಡುತ್ತೇವೆ. ಬೈಕ್ ಇಟ್ಟುಕೊಂಡಿದ್ದೇವೆ. ಬದುಕು ಸಾಗಿಸುತ್ತೇವೆ. ನೀರಾವರಿಯನ್ನು ಮಾಡುವಂತಹ ರೈತ ಬೀದಿಗೆ ಬರಬೇಕೇ, ನೀರಾವರಿ ಜಮೀನು ಎಂದೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದು? What is your definition? ಕೋಲಾರ ಜಿಲ್ಲೆಯಲ್ಲಿ ಒಂದು ಸಾವಿರದಿಂದ ಎರಡು ಸಾವಿರ ಅಡಿ ಆಳ ತೆಗೆದರೆ ನೀರು ಬರುತ್ತದೆ. ನಮ್ಮಲ್ಲಿ 100 ಅಡಿ ಆಳ ತೆಗೆದರೂ ನೀರು ಬರುತ್ತದೆ. ಬೋರ್‌ವೆಲ್ ಮಾಡಲಾರದಂತಹ ಅಸಹಾಯಕ ಬೀದಿ ಪಾಲಾಗಬೇಕೇ. ತಮ್ಮ ಕಾನೂನು ಏನಿದೆ. ನೀರಾವರಿ ಜಮೀನು ಎಂದರೆ ಏನು definition ಎಂಬುದನ್ನು ತಿಳಿಸಿ. ನೀರಾವರಿ ಇದ್ದರೆ ಅವನು ಕೃಷಿಕ ಆಗಿರಬೇಕು. ಬಡವರ ಮನೆಗೆ ಬೋರ್‌ವೆಲ್ ಹಾಕಿಸಿಕೊಳ್ಳುವುದಕ್ಕೆ ಸಾಧ್ಯವಾಗಿರುವುದಿಲ್ಲ. ನದಿಯಿಂದ ನೀರನ್ನು ಎತ್ತುವುದಕ್ಕೆ ಸಾಧ್ಯವಾಗಿಲ್ಲ. ಇಂತಹ ದಲಿತರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಸಣ್ಣ ರೈತರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಮಧ್ಯಮ ವರ್ಗದ ರೈತರು ಇದ್ದಾರೆ. ರಾಯಚೂರು ಜಿಲ್ಲೆಯವರು 10 ರಿಂದ 20 ಎಕರೆ ಜಮೀನು ಇರುವವರು ಗೋವಾಕ್ಕೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀರಾವರಿ ಅನುಭವ ಇಲ್ಲ. ಇವತ್ತಿನ ದಿವಸ ಶಾಲೆಯಲ್ಲಿ ಕಲಿತು ಮುಂದೆ ಏನು ಸಿಗಲಾರದೇ ಊರಿಗೆ ಹೋದಾಗ, ಅಪ್ಪಾ, ನನಗೆ 20 ಎಕರೆ ಜಮೀನು ಇದೆ. ನಾನು ಉಳುಮೆ ಮಾಡಬೇಕೆಂಬ ಭಾವನೆ ಆತನಲ್ಲಿ ಬರುತ್ತದೆ. ತಮ್ಮ ಉದ್ದೇಶವೇನೆಂದರೆ, ತಮ್ಮ ಹಿಂದೆ ಇರುವಂತಹ ಉದ್ದೇಶ ದುರುದ್ದೇಶದಿಂದ ಕೂಡಿದೆ. ಬಡವರನ್ನು, ದೀನ-ದಲಿತರಿಂದ, ಭೂಮಿಯನ್ನು ಕಸಿದುಕೊಂಡು ಮತ್ತೆ ಬೀದಿ ಪಾಲು ಮಾಡುವುದಕ್ಕೆ ಹೊರಟಿದ್ದೀರಲ್ಲವೇ, ಇದು ಸರಿಯಾದ ಕ್ರಮ ಅಲ್ಲ. ಇದನ್ನು ಯಾವುದೇ ಸಣ್ಣ ರೈತ, ಬಡವ ದಲಿತರು ತಮ್ಮ ಬಗ್ಗೆ ಏನು ಹೇಳುತ್ತಾರೆ ಎಂದು ತಾವು ನೋಡಿಕೊಂಡು ಬನ್ನಿ.

(ಮುಂದು)

**(1014) 2:20 ಎಸ್‌ಪಿಆರ್/ಎಕೆ 08/12/2020**

**ಶ್ರೀ ಆರ್.ಬಿ.ತಿಮ್ಮಾಪೂರ(ಮುಂದು):-**

ಇಲ್ಲಿ ಕುಳಿತುಕೊಳ್ಳುವುದು ಬಹಳ ಚೆನ್ನಾಗಿದೆ. ಆದರೆ ನೀವು ಜಾರಿಗೆ ತರಲಿಚ್ಛಿಸಿರುವ ಕಾಯ್ದೆಯು ಎಷ್ಟರ ಮಟ್ಟಿಗೆ ಚೆನ್ನಾಗಿದೆ? ನೆರೆಯ ಆಂಧ್ರಪ್ರದೇಶ ರಾಜ್ಯಕ್ಕೆ ಹೋಗಿ ನೋಡಿ. ಅಲ್ಲಿ ಐದು ಎಕರೆ ಹೊಂದಿದ ಭಾರಿ ಜಮೀನ್ದಾರನಿದ್ದರೆ ಅವನ ಕೊಲೆಯಾಗುತ್ತದೆ. ಅವನು ನಕ್ಸಲ್ ಆಗುತ್ತಾನೆ. ಆದರೆ ನಮ್ಮ ರಾಜ್ಯದಲ್ಲಿ ಸರ್ಕಾರವು ಏನು ಮಾಡಲು ಹೊರಟಿದೆ? ಅಂತಹ ಬಡ ಹಾಗೂ ಸಣ್ಣ ರೈತರಿಗೆ ಕೆಟ್ಟ ಬುದ್ಧಿ ಕಲಿಯುವಂತೆ ಮಾಡಬೇಡಿ ಹಾಗೂ ಅವರನ್ನು ನಕ್ಸಲೈಟ್‌ರನ್ನಾಗಿ ಮಾಡುವುದಕ್ಕೆ ಹೋಗಬೇಡಿ. ಅವರುಗಳೂ ಸಹ ಸಮಾಜದಲ್ಲಿ ಬದುಕಲು ಅವಕಾಶ ಮಾಡಿಕೊಡಿ. ಸಣ್ಣ ಹಿಡುವಳಿದಾರನ ಪರಿಸ್ಥಿತಿ ಹೇಗಿದೆ ಎಂದರೆ, ಕೇವಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2-4 ಎಕರೆ ಜಮೀನು ಇಟ್ಟುಕೊಂಡು ಸಾಗುವಳಿ ಮಾಡಿ ಬದುಕಬೇಕು; ಆತನ ಹೆಂಡತಿ ಹೆಚ್ಚು ಓದಿಕೊಂಡಿದ್ದರೂ ಸಹ ಹಾಲು ಮಾರಿಕೊಂಡು ಜೀವನ ನಡೆಸಬೇಕು; ಆತನ ಮಗ ಶಾಲೆಗೆ ಹೋಗುತ್ತಾನೆ ಮತ್ತು ಅವನು ಕೂಲಿಕಾರನಾಗಿ ದುಡಿಮೆ ಮಾಡುತ್ತಾನೆ. ಇರುವ ಅಲ್ಪ ಭೂಮಿಯಲ್ಲಿಯೇ ವ್ಯವಸಾಯ ಮಾಡಿಕೊಂಡು ತಮಗೆ ತಿನ್ನಲು ಎಷ್ಟು ಉಳಿಯುತ್ತದೆ ಎಂದು ವಿಚಾರ ಮಾಡುವವರು ಎಲ್ಲಿಗೆ ಹೋಗಬೇಕು?

ನಮ್ಮ ರಾಜ್ಯದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ, ಹಲವಾರು ನೀರಾವರಿ ಯೋಜನೆಗಳನ್ನು ಮಾಡಲಾಗಿದೆ. ಅಂತಹ ಹಲವಾರು ನೀರಾವರಿ ಯೋಜನೆಗಳು ಕಾರ್ಪೋರೇಟ್ ಕಂಪೆನಿಗಳ ಪರವಾಗಿಯೇ ಆಗಬೇಕೇ? ಬಡವರ ಭೂಮಿಯನ್ನು ಮಾರಾಟ ಮಾಡಿಸಿ ನೀವು ಕಾರ್ಪೋರೇಟ್ ಕಂಪೆನಿಗಳನ್ನು ಬೆಳೆಸಬೇಕೇ? ಯಾವ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ನೀರಾವರಿ ಯೋಜನೆಗಳನ್ನು ಮಾಡಿದ್ದರು? ಸಣ್ಣ ರೈತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ಬೋರ್‌ವೆಲ್‌ಗಳನ್ನು ಹಾಕಲು ಹಾಗೂ ಅವರುಗಳು ತಮ್ಮ ಭೂಮಿಯಲ್ಲಿ ಉಳಿಮೆ ಮಾಡಿ ಬದುಕಲು ಅನುಕೂಲ ಮಾಡಿಕೊಟ್ಟರು. ಅಂತಹ ಜಮೀನುಗಳನ್ನು ಹರಾಜು ಹಾಕುವ ಕೆಲಸವನ್ನು ಸರ್ಕಾರವು ಈಗ ಮಾಡುತ್ತಿದೆ. ಕಾಯ್ದೆಯಲ್ಲಿರುವ 'ನೀರಾವರಿ' ಇದರ ವ್ಯಾಖ್ಯಾನವನ್ನು ತೆಗೆದು ಹಾಕುವಂತೆ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. 10 ಎಕರೆ ಜಮೀನು ಹೊಂದಿದ ನೀರಾವರಿ ಇಲ್ಲದ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಭೂಮಿಯನ್ನು ಖರೀದಿಸಲು ಅವಕಾಶ ಮಾಡಿಕೊಡಬೇಡಿ. This is not correct. ಹೀಗೆ ಮಾಡುವುದರಿಂದ ಅವರುಗಳು ಬೀದಿಗೆ ಬೀಳುತ್ತಾರೆ, ಆದ್ದರಿಂದ ಇದು ಸರಿಯಾದ ಕ್ರಮವಲ್ಲವೆಂದು ನಾನು ಹೇಳುತ್ತೇನೆ. ಕಾಯ್ದೆಯನ್ನು ಜಾರಿಗೆ ತರಲು ನ್ಯಾಯಾಲಯದ ತೀರ್ಪು ಬಂದಿದೆ, ಆ ಕಾರಣಕ್ಕಾಗಿ ನಾವು ಮಾಡುತ್ತಿದ್ದೇವೆ ಎಂದು ಸರ್ಕಾರವು ಹೇಳುತ್ತಿದೆ. ಪ್ರತಿಯೊಂದು ಬಾರಿಯೂ ಸಹ ನ್ಯಾಯಾಲಯವೇ ಸರ್ಕಾರಕ್ಕೆ ಮಾರ್ಗದರ್ಶನ ನೀಡುತ್ತದೆಯೇ? ಸರ್ಕಾರವು ಜನಪರವಾಗಿರಬೇಕೇ ವಿನಃ ನ್ಯಾಯಾಲಯದ ತೀರ್ಪಿನಂತಿರಬಾರದು. 'ಕಳ್ಳನಿಗೊಂದು ಪಿಳ್ಳೆ ನೆವ' ಎನ್ನುವ ರೀತಿಯಲ್ಲಿ ಸರ್ಕಾರವು ಯಾರು ಯಾರಿಗೋ ಸಹಾಯ ಮಾಡಲು ಹೊರಟಿದೆಯೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಸುಮ್ಮನೇ ನ್ಯಾಯಾಲಯದ ತೀರ್ಪನ್ನು ಇಲ್ಲಿ ಉಲ್ಲೇಖ ಮಾಡುತ್ತಿದ್ದಾರೆ. ಸರ್ಕಾರವು ಕಾರ್ಪೋರೇಟ್ ಕಂಪೆನಿಗಳ ಜೊತೆಗೆ ಇದ್ದೇವೆ ಎಂದು ಹೇಳಲಿ. 18,000 ಅರ್ಜಿಗಳನ್ನು ಸಲ್ಲಿಸಿದವರ ಬಗ್ಗೆ ಸರ್ಕಾರ ಏನು ಹೇಳುತ್ತದೆ? ಇಂತಹ ಅರ್ಜಿಗಳನ್ನು ಸರ್ಕಾರವು ಏನೇನೋ ಮಾಡಲು ಹೊರಟಿದೆ ಎಂದು ಹೊರಗಡೆ ಇರುವ ಜನರಲ್ಲಿ ಅನುಮಾನ ಕಾಡುತ್ತಿದೆ. ಅಂತಹ ಅನುಮಾನವನ್ನು ಈ ಸರ್ಕಾರವು ಹೊರಗೆ ಹಾಕಬೇಕಾದರೆ, ಅಂತಹ 18,000

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಜಿಗಳನ್ನು ಮಾಡುವುದಿಲ್ಲ ಎಂಬುದಾಗಿ ಸರ್ಕಾರವು ಹೇಳಬೇಕಾಗಿದೆ. 18,000 ಅರ್ಜಿಗಳನ್ನು ಯಾರು ಸಲ್ಲಿಸಿದ್ದಾರೆ, ಅವರುಗಳು ಎಷ್ಟು ಜಮೀನನ್ನು ಹೊಂದಿದ್ದಾರೆ ಹಾಗೂ ಇದರಿಂದ ಅವರುಗಳಿಗೆ ಎಷ್ಟು ಸಹಾಯವಾಗುತ್ತದೆ ಎನ್ನುವ ಮಾಹಿತಿಗಳನ್ನು ಸರ್ಕಾರವು ನೀಡಲಿ. ಹೀಗೆ ಅವರುಗಳಿಗೆ ಸಹಾಯ ಮಾಡುವ ಅವಸರ ಸರ್ಕಾರಕ್ಕೆ ಏನಿದೆ? ವಿಧೇಯಕದ ಮೇಲೆ ಚರ್ಚೆ ಮಾಡದೇ ತಕ್ಷಣವೇ ಜಾರಿಗೆ ತರಬೇಕು ಎನ್ನುವ ಭಾವನೆ ಸರ್ಕಾರಕ್ಕೆ ಇದೆ. ಚರ್ಚೆಯನ್ನು ಮಾಡದೇ ವಿಧೇಯಕವನ್ನು ಅನುಮೋದನೆ ಮಾಡುವುದಕ್ಕಾಗುತ್ತದೆಯೇ? ಈ ವಿಚಾರದಲ್ಲಿ ಭಾರಿ ಹುನ್ನಾರ ನಡೆದಿದೆ ಎನ್ನುವ ಸಂಶಯ ನಮ್ಮೆಲ್ಲರನ್ನು ಕಾಡುತ್ತಿದೆ.

ಹೊಸ ಕಾಯ್ದೆಯನ್ವಯ, ಕೃಷಿಕರಲ್ಲದವರಿಗೆ ಭೂಮಿಯನ್ನು ಯಾವ ಕಾರಣಕ್ಕಾಗಿ ಸರ್ಕಾರವು ನೀಡುತ್ತಿದೆ? ಕೃಷಿಕರಲ್ಲದವರು 20 ಎಕರೆ ಭೂಮಿಯಲ್ಲಿ ಕಾಂಪೌಂಡ್‌ನ್ನು ಹಾಕಿಕೊಂಡು, ಅದರೊಳಗೆ ಬಂಗಲೆಯನ್ನು ಕಟ್ಟಿಕೊಂಡು ಐಷಾರಾಮಿ ಬದುಕನ್ನು ನಡೆಸುತ್ತಾರೆ. ಆದರೆ ವಾಸ್ತವವಾಗಿ ಬಡವರಿಗೆ ಒಂದು ಎಕರೆ ಜಮೀನು ಸಹ ಸಿಗುತ್ತಿಲ್ಲ. ಬೆಂಗಳೂರಿನಿಂದ ತುಮಕೂರಿಗೆ ಹೊರಟರೆ, ಅಲ್ಲಿ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು, ಬೋರ್‌ವೆಲ್ ಹಾಕಿಸಿಕೊಂಡು ಐಷಾರಾಮಿ ಬದುಕು ನಡೆಸುತ್ತಿರುವುದನ್ನು ನಾವು ನೋಡಬಹುದು. ಇಂತಹವರಿಗೆ ಸಹಾಯ ಮಾಡುವ ಕರ್ಮ ಸರ್ಕಾರಕ್ಕೆ ಏಕೆ ಇದೆ? ಇಂತಹ ಅನುಕೂಲ ಮಾಡಿಕೊಡಲು ಸರ್ಕಾರವು ಅಧಿಕಾರಕ್ಕೆ ಬಂದಿದೆಯೇ? ಆದರೆ ಹಳ್ಳಿಯ ಜನರು ಹರಿದು ಹೋದ ಬಟ್ಟೆಯನ್ನು ತೊಟ್ಟು ಜೀವನ ನಡೆಸುತ್ತಿದ್ದಾರೆ. ಸರ್ಕಾರವು ಲ್ಯಾಂಡ್ ಬ್ಯಾಂಕ್ ಮಾಡಲು ಹೊರಟಿದೆ. ಸಣ್ಣ ಸಣ್ಣ ರೈತರಿಂದ ಜಮೀನು ಕಬಳಿಸಿಕೊಂಡು, ಹೆಚ್ಚಿನ ಮೊತ್ತ ಬಂದಾಗ ಅವುಗಳನ್ನು ಮಾರಾಟ ಮಾಡುತ್ತಾರೆ. ಸರ್ಕಾರವು ಶ್ರೀಮಂತರಿಗೆ ಐಷಾರಾಮಿ ಬದುಕನ್ನು ನಡೆಸಲು ಅವಕಾಶ ಮಾಡಿಕೊಡುತ್ತದೆ. ಆದರೆ ಸಣ್ಣ ಸಣ್ಣ ರೈತರು ಭಿಕ್ಷುಕರಾಗಿ ಅಲೆದಾಡುತ್ತಾರೆ. ಚೀನಾ ದೇಶವು ಭಾರತ ಪ್ರದೇಶವನ್ನು ಅತಿಕ್ರಮಣ ಮಾಡಿದಾಗ, ಇಲ್ಲಿನ ವ್ಯಾಪಾರಸ್ಥರು 84 ಕೋಟಿ ರೂಪಾಯಿಗಳ ವಹಿವಾಟು ಮಾಡಿದರು. ಹೀಗೆ ವ್ಯಾಪಾರ-ವಹಿವಾಟು ಮಾಡುವವರು ಸರ್ಕಾರಕ್ಕೆ ಬೇಕೇ? ಸರ್ಕಾರಕ್ಕೆ ಸಣ್ಣ ರೈತ, ಬಡವ ಹಾಗೂ ದಲಿತರು ಬೇಡವೇ? ಆಡಳಿತ ಪಕ್ಷದವರು ಶಾಲು ಹಾಕಿಕೊಂಡು ಬಂದರು. ನಮ್ಮ ಭಾಗದಲ್ಲಿ ರೈತರು ಶಾಲನ್ನು ಹಾಕಿಕೊಂಡು ಬರುತ್ತಾರೆ. ಇದಕ್ಕೆ ಬಹಳ ಮಹತ್ವವಿದೆ ಹಾಗೂ ನಾವು ಇದಕ್ಕೆ ಗೌರವ ನೀಡುತ್ತೇವೆ. ಹೀಗೆ ಶಾಲು ಹಾಕಿಕೊಂಡು ಬಂದ ಮುಖ್ಯಮಂತ್ರಿಗಳು ದಲಿತರು, ಸಣ್ಣ ಹಾಗೂ ಮಧ್ಯಮ ವರ್ಗದ ರೈತರನ್ನು ಬೀದಿ ಬದಿಗೆ ತಳ್ಳಿ, ಶ್ರೀಮಂತರು ಐಷಾರಾಮಿ ಬದುಕನ್ನು ನಡೆಸಲು ಅವಕಾಶ ನೀಡಿದ್ದಾರೆ. ಆದ್ದರಿಂದ ಇದನ್ನು Joint Select

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Committee ಗೆ ವಹಿಸುವಂತೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಧೇಯಕದ ಮೇಲೆ ಇನ್ನೂ ಹೆಚ್ಚಿನ ಚರ್ಚೆಗಳಾಗಲಿ. ಹೀಗೆ ಮಾಡಲು ಹೊರಟ ಸರ್ಕಾರದ ಹಣೆಬರಹವನ್ನು ಜನರು ತಿಳಿದುಕೊಂಡಿದ್ದಾರೆ. ಸಣ್ಣ ಹಾಗೂ ದಲಿತ ವರ್ಗದ ರೈತರನ್ನು ಹೊರಗೆ ಹಾಕುವ ರೀತಿ ನೀತಿಗಳಿಗೆ ಸರ್ಕಾರವು ಮುಂದಿನ ದಿನಗಳಲ್ಲಿ ತಕ್ಕ ಪಾಠವನ್ನು ಅನುಭವಿಸುತ್ತದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಪ್ರಸ್ತುತ ಮಂಡಿಸಿರುವ ವಿಧೇಯಕವನ್ನು ನಾನು ವಿರೋಧಿಸುತ್ತೇನೆ ಹಾಗೂ ಖಂಡಿಸುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಭೋಜನ ವಿರಾಮದ ನಂತರ ಇದೇ ವಿಧೇಯಕವನ್ನೇ ತೆಗೆದುಕೊಳ್ಳಿ. ಆಗ ಸಚಿವರ ಸಂಪೂರ್ಣ ಮಾತುಗಳನ್ನು ಕೇಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಬಹಳ ಹೊತ್ತಿನಿಂದ ಸದನದಲ್ಲಿ ಕುಳಿತುಕೊಂಡಿದ್ದಾರೆ. ಅವರುಗಳ ಮಾತುಗಳನ್ನು ನಾವು ಕೇಳಿದ್ದೇವೆ. ಸರ್ಕಾರವು ಉತ್ತರ ನೀಡುತ್ತದೆ.

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಈ ವಿಧೇಯಕದ ಮೇಲೆ ಐದು ನಿಮಿಷಗಳ ಕಾಲ ಮಾತನಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಒಂದು ಗಂಟೆಗಳ ಕಾಲ ಮಾತನಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕೇವಲ ಅರ್ಧ ಗಂಟೆ ಮಾತ್ರವೇ ಭೋಜನದ ವಿರಾಮವನ್ನು ನೀಡಿ. ಭೋಜನಾ ನಂತರದ ಸಮಯದಲ್ಲಿ ನಾನು ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೇವಲ ಅರ್ಧ ಗಂಟೆ ಮಾತ್ರವೇ ಭೋಜನ ವಿರಾಮವನ್ನು ನೀಡಿ. ನಂತರದಲ್ಲಿ ಸಚಿವರ ಉತ್ತರವನ್ನು ಕೇಳುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶೇಕಡ 200 ರಷ್ಟು ವಿಧೇಯಕವು reach ಆಗಿದೆ. ಹೀಗಾಗಿ ಸರ್ಕಾರವು ಏಕೆ ಅವಸರ ಮಾಡುತ್ತಿದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೇಳುವುದನ್ನು ಕೇಳಲು ನಾವು ಸಿದ್ಧರಿದ್ದೇವೆ. ಹೀಗಾಗಿ ನೀವು ಅವರಿಗೆ 10 ನಿಮಿಷಗಳ ಕಾಲಾವಕಾಶವನ್ನು ನೀಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಭೋಜನಾ ನಂತರ ಚರ್ಚೆಯನ್ನು ತೆಗೆದುಕೊಂಡರೆ ಕೇಳಲು ಚೆನ್ನಾಗಿರುತ್ತದೆ. ಆಗ ಸರ್ಕಾರವು ನೀಡುವ ಉತ್ತರವನ್ನು ಕೇಳಲು ನಮಗೆ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವುಗಳು ಇಷ್ಟು ಹೊತ್ತಿನಿಂದ ಸದನದಲ್ಲಿದ್ದೇವೆ. ಹೀಗಾಗಿ ತಾವು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶವನ್ನು ನೀಡಬಹುದಾಗಿದೆ. ನಾವು ಸಿದ್ಧರಿದ್ದೇವೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ನಾವು ಭೋಜನಕ್ಕೆ ತೆರಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಿಗೆ 10 ನಿಮಿಷಗಳ ಕಾಲಾವಕಾಶವನ್ನು ನೀಡಿ. ಅವರು ಏನು ಹೇಳುತ್ತಾರೋ ಹೇಳಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಭಾರತ ದೇಶವು ಕೃಷಿ ಪ್ರಧಾನವಾದ ದೇಶವಾಗಿದೆ. 'ಕೃಷಿತೋ ನಾಸ್ತಿ ದುರ್ಭಿಕ್ಷಃ' ಎಂದು ಸಂಸ್ಕೃತದಲ್ಲಿ ಮಾತೊಂದು ಇದೆ. ಕೃಷಿ ನಾಶವಾದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಿಕ್ಷೆಯನ್ನು ಬೇಡುವ ಸ್ಥಿತಿ ಉದ್ಭವಿಸುತ್ತದೆ. ಪ್ರಸ್ತುತ ತಂದಿರುವ ವಿಧೇಯಕವು ಕೃಷಿಯನ್ನು ನಾಶ ಮಾಡುತ್ತದೆ ಎಂದು ನನಗನ್ನಿಸುತ್ತದೆ. ಇಡೀ ಭಾರತ ದೇಶದ 138 ಕೋಟಿ ಜನರಿಗೆ ಅನ್ನ ನೀಡುವ ಅನ್ನದಾತನ ಬದುಕಿನ ಪ್ರಶ್ನೆಯಾಗಿದೆ. ಒಂದು ವೇಳೆ, ಪ್ರಸ್ತುತ ವಿಧೇಯಕವು ಕರ್ನಾಟಕ ರಾಜ್ಯದ ಮಟ್ಟಿಗೆ ಅನುಮೋದನೆಯಾದರೆ, ಕೇವಲ ರೈತರ ಪರಿಸ್ಥಿತಿ ಕೆಡುವುದು ಮಾತ್ರವಲ್ಲದೇ ದೇಶದ ಪರಿಸ್ಥಿತಿಯು ಕೆಡುತ್ತದೆ. ಕೃಷಿ ನಾಶವಾದರೆ, ಎಲ್ಲರೂ ಭಿಕ್ಷೆಯನ್ನು ಬೇಡುವಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

(ಮುಂದು)

(1015)08-12-2020(02-10)ಬಿಎಸ್‌ಡಿ–AK

**ಶ್ರೀ ಎಸ್.ಆರ್. ಪಾಟೀಲ್** (ಮುಂದು)

ಈ bill ಗೆ ಏಕೆ ಇಷ್ಟು ಬೆನ್ನುಹತ್ತಿದ್ದಾರೆ ಎಂದು ನನಗೆ ತಿಳಿಯುತ್ತಿಲ್ಲ. ಊಟ ಮಾಡುವುದನ್ನು ಬಿಟ್ಟು, ಹಸಿವಾಗಿದೆ ಎಂದು ಹೇಳಿದರೂ, ಹಸಿವಿನ ಪರಿವೇ ಇಲ್ಲದೇ ಇದನ್ನು ಮುಗಿಸಿ, bill pass ಮಾಡಿಕೊಳ್ಳೋಣ ಎಂದು ಹೇಳುತ್ತಿದ್ದಾರೆ. ಅವರ ಮೇಲೆ ಯಾವರೀತಿ ಒತ್ತಡ ಇದೆಯೋ, ನನಗೆ ಗೊತ್ತಿಲ್ಲ. ನನಗೆ ಅವರೆಲ್ಲರ ಮೇಲೆ ವಿಶ್ವಾಸ ಇದೆ. ಅವರೆಲ್ಲರೂ ಕೃಷಿ ಕುಟುಂಬದಿಂದ ಬಂದವರಾಗಿದ್ದು, ಮಾನ್ಯ ಕಂದಾಯ ಸಚಿವರು ಕೃಷಿ ಕುಟುಂಬದಿಂದ ಬಂದವರಾಗಿದ್ದಾರೆ. ನನಗನಿಸಿದ ಮಟ್ಟಿಗೆ ಅವರ conscience ಅಂತೂ ಇದಕ್ಕೆ permit ಮಾಡುವುದಿಲ್ಲ. But ಅನಿವಾರ್ಯ, The Government is working under the pressure of High Command. ದಿಲ್ಲಿಯ ದೊರೆಗಳ ಆದೇಶವನ್ನು ಪಾಲನೆ ಮಾಡಬೇಕಾಗಿದೆ. ನಿಜವಾಗಿಯೂ I feel pity for you all people. ಎಂತಹ ದುಸ್ಥಿತಿಗೆ ಸಿಲುಕಿಕೊಂಡಿದ್ದಾರೆ ಎನಿಸಿದೆ. ನನ್ನ ಮಾತನ್ನು ಮಾನ್ಯ ವಿಶ್ವನಾಥ್ ರವರಂತೂ ಒಪ್ಪುತ್ತಾರೆ. ಒಮ್ಮೊಮ್ಮೆ House ನಲ್ಲಿ ಮುಜುಗರ ಎನಿಸುತ್ತದೆ. ಆದರೆ ಮಾನ್ಯ ವಿಶ್ವನಾಥ್ ರವರು ಯಾವುದೇ ಮುಜುಗರ ಪಟ್ಟುಕೊಳ್ಳದೇ, ನೇರವಾಗಿ ಖಡಾಖಂಡಿತವಾಗಿ ಇದ್ದದ್ದನ್ನು ಇದ್ದಂತೆ ಹೇಳುವ ಜಾಯಮಾನದ ವ್ಯಕ್ತಿತ್ವದವರು. ಅವರ ಮೇಲೆ ನಮಗೆ ಅಭಿಮಾನ ಮತ್ತು ಗೌರವ ಇದೆ. ಮಾನ್ಯ ಸಭಾಪತಿಯವರೇ, ಖಜಭಿಣಟಿ 79A, Section 79B and Section 79C ಗಳನ್ನು ತೆಗೆದುಹಾಕುವುದರಿಂದ ಕೃಷಿಕಲ್ಲದವರು ಕೃಷಿ ಭೂಮಿಯನ್ನು ಖರೀದಿ ಮಾಡುವುದರಿಂದ ..... ಇನ್ನು ಮುಂದೆ ಭೂಮಿಯನ್ನು ಯಾರು ಖರೀದಿ ಮಾಡುತ್ತಾರೆ? ನನಗನಿಸಿದ ಮಟ್ಟಿಗೆ ಬಹುರಾಷ್ಟ್ರೀಯ ಕಂಪನಿ ಮಾಲೀಕರು, real estate ದಣಿಗಳು,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗರ್ಭ ಶ್ರೀಮಂತರು, ದೊಡ್ಡ ದೊಡ್ಡ ಬಂಡವಾಳಶಾಹಿಗಳು, ಕಾಳಧಣಿಗಳು ಭೂಮಿಯನ್ನು ಖರೀದಿ ಮಾಡುತ್ತಾರೆ. Black money ಬಂದು ಬಿದ್ದಿರುತ್ತದೆ. ಕಾಳಧಣಿಗಳು ಭೂಮಿಯನ್ನು ಏಕೆ ಖರೀದಿ ಮಾಡುತ್ತಾರೆಂದರೆ, ಗ್ರಾಮೀಣ ಭಾಗದಿಂದ ಬಂದ ನಾವು ನಿತ್ಯ ನೋಡುವಂತೆ Guidance Value ರೂ. 2 ಅಥವಾ 2.5 ಲಕ್ಷ ಒಂದು ಎಕರೆಗೆ ಇರುತ್ತದೆ. ಆದರೆ ಅಲ್ಲಿನ ಜಮೀನಿನ ಕಿಮ್ಮತ್ತು, Market Value ಕನಿಷ್ಠ ಅಂದರೂ ರೂ.20 ಲಕ್ಷ ಇರುತ್ತದೆ. Sub-Registrar ಹತ್ತಿರ Sale Deed ರೂ.2.5 ಲಕ್ಷಕ್ಕೆ ನೋಂದಣಿಯಾಗುತ್ತದೆ. ಇನ್ನು ರೂ.17.5 ಲಕ್ಷ ಕಾಳಧನಿಕರ ಹತ್ತಿರ ಇರುವ ಕಪ್ಪುಹಣ, ಬಿಳಿ ಹಣವಾಗಿ ಪರಿವರ್ತನೆಯಾಗುತ್ತದೆ. ಇದು ದೊಡ್ಡ ಹುನ್ನಾರ. ಕಪ್ಪು ಹಣ ಇಟ್ಟುಕೊಂಡವರಿಗೆ ದೊಡ್ಡ ಸಮಸ್ಯೆ ಇರುತ್ತದೆ, ಎಲ್ಲಿ invest ಮಾಡಬೇಕು, Income Tax ನವರ ಕೈಯಲ್ಲಿ ಸಿಕ್ಕಬಾರದು, ಇಡಿ (Enforcement Directorate) ರವರ ಕೈಯಲ್ಲಿ ಸಿಕ್ಕಬಾರದು ಎನ್ನುವ ಸಲುವಾಗಿ ಕಪ್ಪು ಹಣವನ್ನು ಹೇಗೆ ತಪ್ಪಿಸಬೇಕು ಎನ್ನುವ ಸಲುವಾಗಿ ...... ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣ ಬಿಳಿ ಹಣವಾಗಿ ಪರಿವರ್ತಿತವಾಗುತ್ತದೆ. They are going to pump black money into the sale transaction. Purchase ಮಾಡುವುದಕ್ಕೆ. ನಾನು ಪ್ರತಿಯೊಂದು ಗ್ರಾಮದಲ್ಲಿಯೂ ನೋಡಿದ್ದೇನೆ. ಯಾವುದೇ ವರ್ಗದ ಯಾವುದೇ ವ್ಯಕ್ತಿ ಭ್ರಷ್ಟಾಚಾರದಿಂದ ಗಳಿಸಿದ ಹಣ ವಿನಿಯೋಗವಾಗುತ್ತದೆ. ಇದೆಲ್ಲಕ್ಕಿಂತ ಮಿಗಿಲಾಗಿ ಅಕ್ಕಪಕ್ಕದ ಶ್ರೀಮಂತರು ಕೈ ಹಾಕುತ್ತಾರೆ. ಕೃಷಿಕರಲ್ಲದವರು ಭೂಮಿ ಖರೀದಿ ಮಾಡುವಾಗ ಈಗಾಗಲೇ Command Area ಎಲ್ಲೆಲ್ಲಿ ಇದೆ ಎನ್ನುವುದನ್ನು ನೋಡುತ್ತಾರೆ. ನಾನು ತುಂಗಾಭದ್ರಾ project ಬಗ್ಗೆ ಹೇಳಿದ್ದೇನೆ. ತುಂಗಾಭದ್ರದ ಜವಳಗೇರಿ farm ನಲ್ಲಿ ಒಬ್ಬ ವ್ಯಕ್ತಿ 500 ಎಕರೆ ಜಮೀನು ಖರೀದಿ ಮಾಡಿದ್ದನು. ನಾನು 30 ವರ್ಷಗಳ ಹಿಂದಿನ ಘಟನೆಯನ್ನು ಹೇಳುತ್ತಿದ್ದೇನೆ. ಬಹುತೇಕ 1990 ನೇ ಇಸವಿ ಇರಬಹುದು. ನಾನು ಒಬ್ಬ ತೋಟಗಾರಿಕೆಯ ಬೆಳೆಗಾರನಿಗೆ ಆ ಜಮೀನು ನೋಡುವುದಕ್ಕೆ ಹೋಗಿ, 500 ಎಕರೆ ಹೇಗೆ ಖರೀದಿ ಮಾಡಿದ್ದೀರಿ ಎಂದು ಕೇಳಿದೆ. ಆಗ ಆತ 'ನೋಡಿ ನಾನು map ನೋಡಿ, 12 ತಿಂಗಳು ನೀರು ಬರುವಂತಹ ಚಿಡಿಚಿಡಿ ಎಲ್ಲಿದೆ, ಎಲ್ಲಿ ಅನುಕೂಲತೆ ಇದೆ ಎಂಬುದನ್ನು ನೋಡಿ ಇಲ್ಲಿಗೆ ಬಂದು ರೂ.500, ರೂ.1,000 ಗಳಿಗೆ ಎಕರೆ ಜಮೀನನ್ನು ಖರೀದಿ ಮಾಡಿದ್ದೇನೆ, ಈ ಎಲ್ಲಾ ಜಮೀನುಗಳ ಮಾಲೀಕರು ನನ್ನ ಜಮೀನಿನಲ್ಲಿ ನೀರು ಹಾಯಿಸುತ್ತಾರೆ' ಎಂದು ಹೇಳಿದ. ದಾಳಿಂಬೆ ಹಣ್ಣುಗಳನ್ನು ಠಡಿಣ ಠಣಣ ಮಾಡುವುದು, packing ಮಾಡುವುದು, ಹಮಾಲಿ ಮಾಡುವುದು, ಜಮೀನಿನಲ್ಲಿ ಉಳುಮೆ ಮಾಡುವುದೆಲ್ಲ ನನಗೆ ಜಮೀನು ಕೊಟ್ಟ ಮಾಲೀಕರು ಮಾಡುತ್ತಾರೆ ಎಂದು ಹೇಳಿದ. ಮಾನ್ಯ ಸಭಾಪತಿಯವರೇ, ನಂತರ ಆತನ ಕಲ್ಕತ್ತಾ ಮನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದೆರಡು ದಿವಸ ಅತಿಥಿಯಾಗಿ ಇರಬೇಕೆಂದು request ಮಾಡಿಕೊಂಡನು. ಕಲ್ಕತ್ತಾದಲ್ಲಿ ಮಚಲಿ ಮಾರುಕಟ್ಟೆಯಲ್ಲಿ ದಾಳಿಂಬೆ ಮಾರುವುದಕ್ಕೆ ಹೋದಾಗ ನಡೆದ ಘಟನೆ. ನಂತರ ನಾನು ಸಂತೋಷದಿಂದ ಆತನ ಠಿಥು bungalow ಗೆ ಹೋಗಿದ್ದೆನು. ಆಗ 30 ವರ್ಷಗಳ ಹಿಂದೆ air-conditioned ಮನೆಯಲ್ಲಿ ಇದ್ದನು. ಅದು ಒಳ್ಳೆಯ privilege ಭಾವಿಸುವ ಸ್ಥಿತಿ ಇತ್ತು. ಆತನ ಸ್ಥಿತಿಗತಿ ನೋಡಿ, ನಂತರ ಆತನಿಗೆ urgent call ಬಂದಿರುವುದರಿಂದ ಅವಶ್ಯಕವಾಗಿ ತೆರಳಬೇಕಾಗಿದೆ, ಆದರೆ ನಾನು ಎರಡು ದಿವಸ ಇರಬೇಕೆಂದು ಬಂದಿದ್ದೆನು ಎಂದು ಹೇಳಿದೆ. ಆಗ ನನಗೆ ಬಹಳ ನೋವು ಎನಿಸಿತು. ನಂತರ ನಾನು ಅಲ್ಲಿಂದ ಜಾಗ ಖಾಲಿ ಮಾಡಿದೆ. ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 32 ಲಕ್ಷ ಎಕರೆ Command Area ಇದೆ. ಇಡೀ ಉತ್ತರ ಕರ್ನಾಟಕ ಸಂಪದ್ಭರಿತವಾದ ಭಾಗವಾಗಿ ಪರಿಣಮಿಸಲು, ಉತ್ತರ ಕರ್ನಾಟಕ ಮಾತ್ರವಲ್ಲದೇ ದಕ್ಷಿಣ ಕರ್ನಾಟಕವಲ್ಲದೇ, ಭಾರತ ದೇಶದ ಯಾವುದೇ ಅಭಿವೃದ್ಧಿ ಹೊಂದಿದ ಕ್ಷೇತ್ರ ಮೆಟ್ಟಿ ನಿಲ್ಲುವಂತೆ ಇದೆ. ಆದರೆ ಈ ಕಾನೂನು ಬಂದರೆ ನಮ್ಮ Command Area ದಲ್ಲಿ ಪಕ್ಕದ ರಾಜ್ಯದವರೇ ಹಾವಳಿ ಮಾಡುತ್ತಾರೆ. ಆಮೇಲೆ ಭೂಮಿ ತೆಗೆದುಕೊಂಡು ಆಲಮಟ್ಟಿ ಜಲಾಶಯದ ನೀರನ್ನು ತೆಗೆದುಕೊಳ್ಳುತ್ತಾರೆ. ಈಗಾಗಲೇ ನಾವು ಭೂಮಿ ಕಳೆದುಕೊಂಡಿದ್ದೇವೆ. 300 ಗ್ರಾಮಗಳನ್ನು ಕಳೆದುಕೊಂಡಿದ್ದೇವೆ. ಇಷ್ಟು ದೊಡ್ಡ ತ್ಯಾಗ ಮಾಡಿ 32 ಲಕ್ಷ ಎಕರೆ ಜಮೀನಿಗೆ ನೀರಾವರಿ ನೀಡುವುದರ ಮೂಲಕ ಕೇವಲ ರಾಜ್ಯದ ವರಮಾನವಲ್ಲದೇ ಇಡೀ ದೇಶದ ವರಮಾನ ಹೆಚ್ಚು ಮಾಡುವ ಅತ್ಯಂತ ಪ್ರತಿಷ್ಠಿತವಾದ ನೀರಾವರಿ ಯೋಜನೆಯಾಗಿದೆ. ಅದರಿಂದ ಬಹಳ ದೊಡ್ಡ ಕನಸು ಕಂಡಿದ್ದು, ಈ ಕಾನೂನು ಬಂದರೆ ನಮ್ಮ ಕನಸು ನುಚ್ಚು ನೂರಾಗುತ್ತದೆ. ನಂತರ ನಾವು ಅವರ ಜಮೀನಿಗೆ ಹೋಗಿ ಉಳುಮೆ ಮಾಡಿ ನೀರು ಹಾಯಿಸಬೇಕಾಗುತ್ತದೆ. ಅವರ ಮನೆಯಲ್ಲಿ ನಮ್ಮ ಹೆಣ್ಣು ಮಕ್ಕಳು ಕಸ–ಮುಸರೆ ಕೆಲಸ ಮಾಡುವ ಪರಿಸ್ಥಿತಿ ಉದ್ಭವಿಸುತ್ತದೆ. ಇದಕ್ಕೆ ಬಹುತೇಕ ಮಾನ್ಯ ಕಂದಾಯ ಸಚಿವರ conscience permit ಮಾಡುವುದಿಲ್ಲ ಎಂದು ನನಗೆ ವಿಶ್ವಾಸ ಇದೆ. ಆದರೆ ಇದು ಅವರಿಗೆ ಅನಿವಾರ್ಯವಾಗಿದೆ. The Government has been compelled. ಇದರ ಬಗ್ಗೆ ಇನ್ನೊಮ್ಮೆ ಯೋಚನೆ ಮಾಡಬೇಕು. ಇದನ್ನು ಮಾಡಲೇಬೇಕೆಂದು ಅಲ್ಲ. ಏನಾದರೂ ನೆಪ ಹೇಳಿ ಮುಂದಕ್ಕೆ ಹಾಕಿಬಿಡಲಿ. ಅವರ ಕುಟುಂಬ, ವಂಶಸ್ಥರಿಗೆ ಪುಣ್ಯ ಬರುತ್ತದೆ. ಯಾವಾಗಲೂ conscience ಪ್ರಕಾರ ಮಾಡಬೇಕು. ನಾನು ನನ್ನ ಅನುಭವದ ಪ್ರಕಾರ ಹೇಳುತ್ತಿದ್ದೇನೆ. ನಾನು ಯಾವಾಗಲಾದರೂ conscience ವಿರುದ್ಧವಾಗಿ ಸಣ್ಣ ತಪ್ಪು ಕೆಲಸ ಮಾಡಿದ್ದರೆ ಸಂಜೆವರೆಗೂ ನಾನು 'You did a mistake' ಎಂದು ನೆನಪು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತೇನೆ. ಇದನ್ನು ಮಾಡಬಾರದಾಗಿತ್ತು ಎಂದು ಚಿಂತಿಸುತ್ತೇನೆ. ನಾನು ಏನು ತಪ್ಪು ಮಾಡಿದ್ದೇನೋ, ಅದನ್ನು ಸರಿಮಾಡಿಕೊಂಡು ಯಾವ ವ್ಯಕ್ತಿಗಾದರೂ ಸ್ವಲ್ಪ ಅನ್ಯಾಯವಾಗಿದ್ದರೆ ಅವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿ ನಮಸ್ಕಾರ ಮಾಡಿ, 'ನನ್ನಿಂದ ತಪ್ಪಾಗಿದೆ, ದಯಮಾಡಿ ಕ್ಷಮಿಸಿ' ಎಂದು ಹೇಳುತ್ತೇನೆ. ನನ್ನ conscience against ನಾನು ಹೋಗುವುದಕ್ಕೆ ಆಗುವುದಿಲ್ಲ. ಇದು ಕೆಲವೊಮ್ಮೆ ಅನಿವಾರ್ಯ. Sometimes I will be compelled; I will go against my conscience. But my conscience will never permit me to continue in the same fashion. ನಾನು ಹೋಗಿ ನನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟುಕೊಂಡು ಬರುತ್ತೇನೆ. ಮಾನ್ಯ ಸಭಾಪತಿಯವರೇ, ಈಗ ಅವರ conscience permit ಮಾಡುವುದಿಲ್ಲ. ನನಗೆ ಅವರ ಮೇಲೆ ವಿಶ್ವಾಸ ಮತ್ತು ನಂಬಿಕೆ ಇದೆ. ಅವರೆಲ್ಲರೂ ಕೃಷಿ ಕುಟುಂಬದಿಂದ ಬಂದವರು. ಅವರಿಗೆ ಎಳ್ಳಷ್ಟು ಮನಸಿಲ್ಲ. ಎಂತಹ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ, ಸರ್ಕಾರ ರಚನೆ ಮಾಡಿದ್ದಾರೆ, ಅಲ್ಲಿ ನಮ್ಮ ಮಾನ್ಯ ಭೈರತಿ ಬಸವರಾಜು ಇದ್ದಾರೆ ನೋಡಿ. ಅವರ ಪಕ್ಕದಲ್ಲಿ ಮಾನ್ಯ ಸೋಮಶೇಖರ್ ರವರು ಇದ್ದಾರೆ. ಇವರೆಲ್ಲರನ್ನೂ ತೆಗೆದುಕೊಂಡು ಸರ್ಕಾರ ರಚನೆ ಮಾಡಿ, ದೊಡ್ಡ ಪ್ರಮಾಣದಲ್ಲಿ invest ಮಾಡಿ ಹೇಗೆ ಎನ್ನುವಂತೆ ಆಗಿದೆ. ಮೇಲೆ High Command ಹೇಳಿದಂತೆ ಕೇಳದಿದ್ದರೆ ಅವರನ್ನು ಇರುಗೊಡುವುದಿಲ್ಲ. ಅವರ ಮುಖ್ಯಮಂತ್ರಿಯನ್ನೇ ಇರುಗೊಡುವುದಿಲ್ಲ. ಈಗ ಅವರಿಗೆ bill pass ಮಾಡಬೇಕಾಗಿದೆ. ಅಂದರೂ ಇದರ ಬಗ್ಗೆ ಯೋಚನೆ ಮಾಡಬೇಕು, ಅವರಲ್ಲಿ ಆ ಧೈರ್ಯ ಇದೆ, ಆ ರಣಾಣ ಇದೆ. ಎಲ್ಲರನ್ನೂ ಧಿಕ್ಕರಿಸಿ conscience ಪ್ರಕಾರ ನಡೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ಇದೆ. ಈಗಲೂ bill ಅನ್ನು ತಿಣ್ಣುಜಡಿಚಿತಿ ಮಾಡಬಹುದು. ಮಾನ್ಯ ಸಭಾಪತಿಯವರೇ, ನಾನೊಬ್ಬ ಕೃಷಿಕ, ನನಗೆ ಜನ್ಮ ಕೊಟ್ಟ ತಾಯಿ ಇರುತ್ತಾರೆ. ಆದರೆ ನಿಜವಾದ ಕೃಷಿಕರ ತಾಯಿ ಭೂಮಿ ತಾಯಾಗಿದ್ದಾಳೆ. ಭೂಮಿತಾಯಿಯ ಮಕ್ಕಳು ರೈತರಾಗಿದ್ದಾರೆ. ರೈತರು, ಕೃಷಿಕರಲ್ಲದವರು ಭೂಮಿ ಖರೀದಿ ಮಾಡಿದರೆ ತಾಯಿ ಮಕ್ಕಳನ್ನು ಬೇರ್ಪಡಿಸುವ ಕ್ರಿಯೆ ಎಂದು ನಾನು ಭಾವಿಸುತ್ತೇನೆ. ತಾಯಿಯಿಂದ ಮಕ್ಕಳನ್ನು ಬೇರ್ಪಡಿಸುವುದು ಕೆಟ್ಟ ಕೆಲಸ, ಹೀನ ಕೆಲಸ, ಹೃದಯ ವಿದ್ರಾವಕ ಘಟನೆ ಮತ್ತು ಕರುಳು ಕಿತ್ತು ಬರುವಂತಹ ಘಟನೆಯಾಗಿದೆ. ತಾಯಿ ಮಕ್ಕಳನ್ನು ಬೇರ್ಪಡಿಸಿದಾಗ ತಾಯಿಗೆ ಎಷ್ಟು ನೋವಾಗುತ್ತದೆ, ಮಕ್ಕಳಿಗೆ ಎಷ್ಟು ನೋವಾಗುತ್ತದೆ? ಅಷ್ಟೇ ಅಲ್ಲದೇ ತಾಯಿಯನ್ನು ಮಾರಾಟ ಮಾಡಿಬಿಡುವುದು. ನಾವೆಲ್ಲರೂ ರೈತರಾಗಿದ್ದು, ಶತಮಾನಗಳಿಂದ ಭೂಮಿ ತಾಯಿ ನಮಗೆ ಅನ್ನ, ನೀರು ಕೊಟ್ಟು ನಮ್ಮನ್ನಷ್ಟೇ ಸಲುಹಿಲ್ಲ, ನಮ್ಮ ಪೂರ್ವಜರಾದ ಅಪ್ಪ, ಅಮ್ಮ ಅಜ್ಜ, ಮುತ್ತಜ್ಜ ಸೇರಿದಂತೆ ವಂಶಪಾರಂಪರ್ಯವಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿ ತಾಯಿ ಅನ್ನ, ನೀರು ನೀಡಿ ಕಾಪಾಡಿದ್ದಾಳೆ. 'ಜನನಿ ಜನ್ಮಭೂಮಿಶ್ಚ, ಸ್ವರ್ಗಾದಪಿ ಗರಿಯಾಸಿ' ಎನ್ನುತ್ತಾರೆ. ಹಡೆದ ತಾಯಿ, ಅನ್ನ ಕೊಟ್ಟ ಭೂಮಿ ಸ್ವರ್ಗಕ್ಕಿಂತ ಹೆಚ್ಚು ಎಂದು ಭಾವಿಸುತ್ತೇವೆ. ನಾವೆಲ್ಲ ಆ ಭೂಮಿತಾಯಿ ಮಕ್ಕಳು, ನಾವೆಲ್ಲರೂ ಕೃಷಿಕರು. ಸದನದಲ್ಲಿ ಈ ಕಡೆ ಆಕಡೆ ಎಲ್ಲರೂ ಭೂಮಿತಾಯಿ ಮಕ್ಕಳಾಗಿದ್ದೇವೆ. ಇವತ್ತು ತಾಯಿ ಮಕ್ಕಳನ್ನು ಬೇರ್ಪಡಿಸುವುದು. ಮಕ್ಕಳನ್ನು ತಾಯಿಯಿಂದ ಬೇರ್ಪಡಿಸುವುದು, ನಂತರ ತಾಯಿಯನ್ನು ಮಾರಾಟ ಮಾಡಿಬಿಡುವುದು. ಮಾನ್ಯ ಸಭಾಪತಿಯವರೇ, ಬಹುತೇಕ ನನ್ನ 23 ವರ್ಷಗಳ ಸಾರ್ವಜನಿಕ ಬದುಕಿನಲ್ಲಿ, ನಾನು ಮಾನ್ಯ ಸಭಾಪತಿಯವರಾದ ತಮಗೂ ಅಷ್ಟೇ ಆಗಿದೆ. ನಾವು–ನೀವು ಒಂದೇ ದಿವಸ ನಾಲ್ಕನೆಯ ಬಾರಿಗೆ ಬಂದಿದ್ದೇವೆ. ಇನ್ನು ಒಂದು ವರ್ಷದ ಅವಧಿ ಇದೆ. ಈ 23 ವರ್ಷಗಳ ಅವಧಿಯಲ್ಲಿ ಇಂತಹ ಕರುಳು ಕಿತ್ತು ಬರುವ, ಹೃದಯ ವಿದ್ರಾವಕ ಮತ್ತು ತಾಯಿ ಮಕ್ಕಳನ್ನು ಬೇರ್ಪಡಿಸಿ, ತಾಯಿಯನ್ನೇ ಮಾರಾಟ ಮಾಡುವ ಕಾನೂನು ಇದಾಗಿದೆ.

(ಮುಂದು)

(1016, 1017)/08.12.2020/2.40, 2.50/ಹೆಚ್‌ವಿಃಪಿಕೆಃವಿಕೆ

**ಶ್ರೀ ಎಸ್.ಆರ್.ಪಾಟೀಲ್**(ಮುಂದುವರೆದದ್ದು):–

ಸನ್ಮಾನ್ಯ ಸಭಾಪತಿಯವರೇ, ಮೂಲತಃ ನಾನೊಬ್ಬ ಕೃಷಿಕ. ನಾನು ಬಿ.ಎಸ್ಸಿ ಪದವಿ ಮುಗಿಸಿಕೊಂಡು ಕಾನೂನು ವಿಷಯವನ್ನು ಅಧ್ಯಯನ ಮಾಡಿ, ಊರಿನಲ್ಲಿ ಒಕ್ಕಲುತನ ಮಾಡುತ್ತಿದ್ದೆ. ನನ್ನ ತಂದೆತಾಯಿಗೆ ನಾನೊಬ್ಬನೇ ಮಗ. ನನ್ನ ಜೊತೆಗೆ 5 ಜನ ಅಕ್ಕ ತಂಗಿಯರು ಇದ್ದಾರೆ. ನನ್ನ ತಂದೆ ಕೃಷಿಕರು. ನಾನು ಹಳ್ಳಿಯಲ್ಲಿ ಒಕ್ಕಲುತನ ಮಾಡುತ್ತಿದ್ದಾಗ, ನನ್ನ ತಂದೆಯವರು, 'ಕಾನೂನು ವ್ಯಾಸಂಗ ಮಾಡಿ ಸಣ್ಣ ಹಳ್ಳಿಯಲ್ಲಿ ಇರುವುದನ್ನು ಬಿಟ್ಟು ಬಾಗಲಕೋಟೆಗೆ ಹೋಗಿ ವಕಾಲತ್ತು ಮಾಡು' ಎಂದು ಹೇಳಿದರು. ನನಗೆ ಕೃಷಿ ಬಿಟ್ಟು, ಆ ಭೂಮಿ ಬಿಟ್ಟು ಹೋಗಿ ವಕೀಲಿ ವೃತ್ತಿ ಮಾಡುವುದಕ್ಕೆ ಮನಸ್ಸೇ ಇರಲಿಲ್ಲ. ನಾನು ಸುಮಾರು ಮೂರು ವರ್ಷಗಳ ಕಾಲ ಮುಂದಕ್ಕೆ ಹಾಕಿದೆ. ನಂತರ ವಯಸ್ಸಾದ ತಂದೆಯವರ ಮಾತಿನ ವಿರುದ್ಧ ಹೋಗುವುದು ಸರಿ ಕಾಣಲಿಲ್ಲ. ನನ್ನ ತಾಯಿಯವರು, 'ಅಪ್ಪ ಹೇಳುತ್ತಿದ್ದಾರೆ. ಬಾಗಲಕೋಟೆ ಹೋಗಿ ವಕಾಲತ್ತು ವೃತ್ತಿ ಮಾಡು' ಎಂದು ಹೇಳಿದರು. ಆಗ ನಾನು ಬಾಗಲಕೋಟೆಗೆ ಹೋದೆ. ನಾನು ವೃತ್ತಿಯಿಂದ ನ್ಯಾಯವಾದಿ, ಪ್ರವೃತ್ತಿಯಿಂದ ರಾಜಕಾರಣಿಯಾಗಿದ್ದೇನೆ. ಇವತ್ತಿಗೂ I really love agriculture. ನಾನು ಕೃಷಿಕ ಎಂದು ಹೇಳಿಕೊಳ್ಳುವುದಕ್ಕೆ ನನಗೆ ಬಹಳ ಅಭಿಮಾನ ಮತ್ತು ಗೌರವವಿದೆ. I am immensely proud to

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

say that I am a farmer. ನಾನು ಬೇರೆಬೇರೆ ಇಂಡಸ್ಟ್ರೀಗಳನ್ನು ಮಾಡಿರಬಹುದು, ಶಾಲಾ-ಕಾಲೇಜುಗಳನ್ನು ತೆರೆದಿರಬಹುದು ಮತ್ತು ಸಹಕಾರಿ ಸಂಸ್ಥೆಗಳನ್ನು ತೆರೆದಿರಬಹುದು. ಆದರೆ, basically I am a farmer and have got a love for agriculture. ಕೃಷಿ ಬಿಟ್ಟರೆ ನನಗೆ ಜೀವ ಹೋದಂತಾಗುತ್ತದೆ. ಈಗಲೂ ನಾನು ಊರಿಗೆ ಹೋದರೆ, ಕೃಷಿ ಬಗ್ಗೆ ಮತ್ತು ಜಮೀನಿನ ಬಗ್ಗೆ ಚಿಂತನೆ ಮಾಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವಾರದ ಶ್ರೀ ಆರ್.ಅಶೋಕ್‌ರವರು ಈ ಕಾನೂನಿನ ಹಿಂದೆ ಯಾಕೆ ಬಿದ್ದಿದ್ದಾರೆಂದು ನನಗೆ ಗೊತ್ತಿಲ್ಲ. ಅವರ ಮನಸ್ಥಿತಿಯನ್ನು ನಾನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಅವರೊಬ್ಬರೇ ಅಲ್ಲ, ಬಹುತೇಕರು ಅದೇ ಮನಸ್ಥಿತಿಯಲ್ಲಿದ್ದಾರೆ. ಇಡೀ ದೇಶದ ರೈತರು ದಂಗೆ ಏಳುವಂತಹ ಪರಿಸ್ಥಿತಿಯುಂಟಾಗಿದೆ. ಕೇಂದ್ರ ಸರ್ಕಾರದವರು ತಂದಿರುವಂತಹ ಕೃಷಿಗೆ ಮತ್ತು ಎ.ಪಿ.ಎಂ.ಸಿ.ಗೆ ಸಂಬಂಧಪಟ್ಟ ಒಟ್ಟು ಮೂರು ಕರಾಳ ವಿಧೇಯಕಗಳನ್ನು ವಿರೋಧಿಸಿ ಒಂದು ರಾಜ್ಯದವರಲ್ಲ ಇಡೀ ದೇಶದಲ್ಲಿರುವ ಎಲ್ಲ ರಾಜ್ಯದ ರೈತರು ದಂಗೆ ಎದ್ದಿದ್ದಾರೆ. ಅದಕ್ಕೆ ಪೂರಕವಾಗಿ ನಮ್ಮ ರಾಜ್ಯದಲ್ಲಿಯೂ ಸಹ ಚಳುವಳಿ ನಡೆದಿದೆ. ರಾಜ್ಯದಲ್ಲಿ ಮಾನ್ಯ ಕಂದಾಯ ಸಚಿವರು ತಂದಿರುವಂತಹ ಈ ವಿಧೇಯಕ ರೈತರ ಪಾಲಿಗೆ ಮರಣ ಶಾಸನವಾಗಿದೆ ಮತ್ತು ಕರಾಳ ಶಾಸನವಾಗಿದೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ನನ್ನ ಎಲ್ಲ ಸ್ನೇಹಿತರು ಬಹಳ ಸುದೀರ್ಘವಾಗಿ ಮತ್ತು ಅರ್ಥಪೂರ್ಣವಾಗಿ ಬಹಳಷ್ಟು ಆಳಕ್ಕಿಳಿದು ಈ ವಿಚಾರದ ಮೇಲೆ ಬೆಳಕು ಚೆಲ್ಲಿದ್ದಾರೆ. ಮಾನ್ಯ ಕಂದಾಯ ಸಚಿವರು ಯಾವಾಗ ನಾನು ಈ ವಿಧೇಯಕಕ್ಕೆ ಸಂಬಂಧಪಟ್ಟ ಚರ್ಚೆಗೆ ಉತ್ತರ ಕೊಡುತ್ತೇನೆಂದು ತುದಿಗಾಲಿನ ಮೇಲೆ ನಿಂತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನೊಬ್ಬ ರೈತನಾಗಿ ಬಹಳ ಪ್ರಾಮಾಣಿಕವಾಗಿ ತಮ್ಮ ಮೂಲಕ ಕೈ ಮುಗಿದು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರು ಈ ವಿಧೇಯಕವನ್ನು ಹಿಂದಕ್ಕೆ ಪಡೆದರೆ, really you will be in the history of Karnataka. ಈ ರಾಜ್ಯದ ಇತಿಹಾಸದಲ್ಲಿ ಅವರ ಹೆಸರು ಅಜರಾಮರವಾಗಿ ನಿಲ್ಲುತ್ತದೆ. ಜನರು ಅವರ ಪೂಜೆ ಮಾಡುತ್ತಾರೆ. ಅವರು ಮತ್ತೊಮ್ಮೆ ಶಾಸಕರಾಗಿ ಚುನಾಯಿತರಾಗುವ ಅವಕಾಶ ಅವರಿಗೆ ಸಿಗಬಹುದು. ರೈತರಿಗೆ ಅನ್ಯಾಯವಾಗುವಂತಹ ಮತ್ತು ಕೃಷಿ ವ್ಯವಸ್ಥೆಯನ್ನು ಸರ್ವನಾಶ ಮಾಡುವಂತಹ ಈ ವಿಧೇಯಕವನ್ನು ಹಿಂದಕ್ಕೆ ಪಡೆಯಬೇಕೆನ್ನುವುದು ನಮ್ಮ ಒತ್ತಾಯವಾಗಿದೆ. ಈ ವಿಧೇಯಕದಿಂದ ಈಗ ಅವರಿಗೇನೂ ತೊಂದರೆ ಆಗದಿರಬಹುದು ಆದರೆ, ಮುಂದಿನ ಪೀಳಿಗೆಗೆ ಕೆಟ್ಟ ಶಾಸನವಾಗಿ ಪರಿಣಮಿಸಬಹುದು. 'ಯಾವ ಮಂತ್ರಿ ಈ ವಿಧೇಯಕವನ್ನು ಮೂವ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರು?' ಎಂದು ಅವರ ಕುಟುಂಬಸ್ಥರೇ, ಅವರನ್ನು ಕೇಳುವಂತಹ ಪರಿಸ್ಥಿತಿ ನಿಶ್ಚಿತವಾಗಿಯೂ ಬರುತ್ತದೆ. ನಾನು ಬಹಳ ಯೋಚನೆ ಮಾಡಿ ಈ ಮಾತುಗಳನ್ನು ಹೇಳುತ್ತಿದ್ದೇನೆ. ಈ ವಿಧೇಯಕದ ವಿರುದ್ಧ ಮಾತನಾಡಬೇಕೆಂದು ನಾನು ಮಾತನಾಡುತ್ತಿಲ್ಲ. ನಾನು ಮಾತನಾಡುತ್ತಿರುವ ಪ್ರತಿ ಶಬ್ದವೂ ನನ್ನ ಹೃದಯಾಂತರಾಳದಿಂದ ಬಂದಿದೆಯೇ ಹೊರತು, ನಾಲಿಗೆಯ ತುದಿಯಿಂದ ಬಂದಿರುವಂತಹ ಶಬ್ದವಲ್ಲ. ಖಟಿ ಜಜಠಿಣು ಇದರ ಬಗ್ಗೆ ನಾನು ಸಾಕಷ್ಟು ಅಧ್ಯಯನ ಮಾಡಿದ್ದೇನೆ. ನಾನು ಒಂದು ಸಣ್ಣ ಕುಗ್ರಾಮದಿಂದ ಬಂದಿರುವವನು. ಬಡತನ, ದಾರಿದ್ರ್ಯ ಮತ್ತು ಅನಕ್ಷರತೆ ಇವುಗಳನ್ನೆಲ್ಲ ನೋಡಿಕೊಂಡು ನಾನು ಇಲ್ಲಿಗೆ ಬಂದಿದ್ದೇನೆ. ವಿಶೇಷವಾಗಿ ಬಡ ಕೃಷಿಕರ ಬದುಕನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರ ಕೈಯಿಂದ ಆಗದಿರುವುದು ಏನಿದೆ? ಈ ಬಗ್ಗೆ ನಾನು ಹೆಚ್ಚಿಗೆ ಮಾತನಾಡಿದರೆ ನನ್ನ ಸ್ನೇಹಿತರಿಗೆ ಸಿಟ್ಟು ಬರಬಹುದು. ನಮ್ಮ ಪಕ್ಷದಿಂದ ಅವರುಗಳು ಆ ಪಕ್ಷಕ್ಕೆ ಹೋದರೂ ಸಹ ಅವರುಗಳು ನನ್ನ ಸ್ನೇಹಿತರಾಗಿಯೇ ಉಳಿದಿದ್ದಾರೆಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ಯಾವ ಸಂಬಂಧವೋ ಅಥವಾ ಋಣಾನುಬಂಧವೋ ಅವರುಗಳು ಆಡಳಿತ ಪಕ್ಷದಲ್ಲಿ ಕುಳಿತಿದ್ದಾರೆ. ಅವರಿಗೆ ಆ ಸ್ಥಾನ ಶಾಶ್ವತವಲ್ಲವೆಂದು ನನಗೆ ಗೊತ್ತಿದೆ. I know your mentality. ಅವರ wavelength ಮತ್ತು ನನ್ನ wavelength ಒಂದೇ ಆಗಿದೆ. ಮಾನ್ಯ ಅಶೋಕ್‌ರವರು ಭಾರತೀಯ ಜನತಾ ಪಕ್ಷದಲ್ಲಿ ಮೊದಲಿನಿಂದ ಇದ್ದವರು ಅವರ ಮಾತು ಬೇರೆ.

ಸನ್ಮಾನ್ಯ ಸಭಾಪತಿಯವರೇ, ಈಗಲೂ ಕಾಲ ಮಿಂಚಿಲ್ಲ, ನಾನು ಭಾರತೀಯ ಜನತಾ ಪಕ್ಷದ ನನ್ನ ಸ್ನೇಹಿತರಲ್ಲಿ ಕೇಳಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳಿಗೂ ಈ ವಿಧೇಯಕವನ್ನು ತರುವುದಕ್ಕೆ ಮನಸ್ಸಿಲ್ಲ. ಮಾನ್ಯ ಯಡಿಯೂರಪ್ಪನವರು ನಾಲ್ಕನೆಯ ಬಾರಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಬಹಳ ಶ್ರಮಪಟ್ಟು, ಕಷ್ಟಪಟ್ಟು, ನಮ್ಮ ಪಕ್ಷದ 17 ಜನ ಶಾಸಕರನ್ನು ತೆಗೆದುಕೊಂಡು ಹೋಗಿ, ಏನೇನೋ ಮಾಡಿ, ಅವರ ಕನಸಿನ ಪ್ರಕಾರ ಮುಖ್ಯಮಂತ್ರಿಗಳಾದರು. ಈ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ನಿಜಲಿಂಗಪ್ಪನವರ ದಾಖಲೆಯನ್ನು ನಮ್ಮ ಮುಖ್ಯಮಂತ್ರಿಗಳು ಸರಿಗಟ್ಟಿದ್ದಾರೆ. ಇಷ್ಟಾದ ಮೇಲೂ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿರುವವರು ಹೇಳಿದಂತೆ ಕೇಳಬೇಕೆಂದು ಇದೆಯೇ? ಒಂದು ಗಟ್ಟಿಯಾದ ನಿಲುವಿನಿಂದ ಒಂದು ದೃಢ ನಿರ್ಧಾರವನ್ನು ಅವರು ತೆಗೆದುಕೊಳ್ಳಬೇಕು. ಸದನದಲ್ಲಿ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳಿದ್ದಾರೆಂದು ನಮ್ಮ ಭಾವನೆಗಳನ್ನು ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕಾಗಿದೆ. ನಾನು ಬಹಳ ನೋವಿನಿಂದ ಮತ್ತು ಭಾರವಾದ ಹೃದಯದಿಂದ ಈ ಮಾತುಗಳನ್ನಾಡುತ್ತಿದ್ದೇನೆ. ತಲತಲಾಂತರದಿಂದ ನಮ್ಮದು ಕೃಷಿ ಕುಟುಂಬವಾಗಿದೆ. ಕೃಷಿ ಕುಟುಂಬದಿಂದ ಬಂದವನಾಗಿ ಮತ್ತು ನಾನು ಒಬ್ಬ ಕೃಷಿಕನಾಗಿ ರೈತರ ಕಷ್ಟ, ನೋವು-ನಲಿವು, ದುಃಖ-ದುಮ್ಮಾನಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅತ್ಯಂತ ಹತ್ತಿರದಿಂದ ನೋಡಿದ್ದೇನೆ. ಕೃಷಿ ಪ್ರಧಾನವಾಗಿರುವ ಈ ದೇಶದಲ್ಲಿ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಕೃಷಿ ಸಂಬಂಧಪಟ್ಟ ಈ ಕರಾಳ ಮಸೂದೆಯನ್ನು ತರಲಾಗಿದೆ. ತಾಯಿ ಮಗುವನ್ನು ಬೇರ್ಪಡಿಸಿ, ತಾಯಿಯನ್ನೇ ಮಾರಾಟ ಮಾಡುವ ಈ ಕರಾಳ ಮಸೂದೆಯನ್ನು ವಾಪಸ್ಸು ಪಡೆದರೆ ದೇವರು ಅವರಿಗೆ ಒಳ್ಳೆಯದು ಮಾಡುತ್ತಾನೆ, ಈ ನಾಡಿನ ಆರೂವರೆ ಕೋಟಿ ಜನರ ಶಹಭಾಷ್‌ಗಿರಿಯನ್ನು ಪಡೆದುಕೊಳ್ಳುತ್ತಾರೆಂದು ಹೇಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಹೇಳಬೇಕಾದರೆ, ಈ ಮಸೂದೆಯನ್ನು ಜಾರಿಗೊಳಿಸಿದರೆ ಕರ್ನಾಟಕ ರಾಜ್ಯದ ಕೃಷಿಕರ ಶವಪೆಟ್ಟಿಗೆಯ ಮೇಲೆ ಕೊನೆ ಮೊಳೆ ಹೊಡೆದಂತಾಗುತ್ತದೆ. ಒಂದು ಕೆಟ್ಟ ಪರಂಪರೆಗೆ ನಾಂದಿ ಹಾಡಿದಂತಾಗುತ್ತದೆ. It will be the last nail on the coffin of the farmers of Karnataka State. ಆದ್ದರಿಂದ ನಾನು ಎಲ್ಲ ವಿರೋಧ ಪಕ್ಷದ ಸದಸ್ಯರ ಪರವಾಗಿ ಮತ್ತು ಅವರಲ್ಲಿರುವ ಆತ್ಮಸಾಕ್ಷಿಯ ಪರವಾಗಿ ಈ ವಿಧೇಯಕವನ್ನು ವಿರೋಧಿಸುತ್ತಿದ್ದೇನೆ. ಔಪಚಾರಿಕವಾಗಿ ನಾನು ಈ ವಿಧೇಯಕವನ್ನು ವಿರೋಧಿಸುತ್ತಿಲ್ಲ. ಈ ವಿಧೆಯಕವನ್ನು ವಾಪಸ್ಸು ಪಡೆದುಕೊಂಡು ಮುಂಬರುವ ಅಧಿವೇಶನದಲ್ಲಿ ಪುನಃ ಮಂಡಿಸಿ ಸದನದ ಒಪ್ಪಿಗೆಯನ್ನು ಪಡೆದುಕೊಳ್ಳಲಿ. ಇದಕ್ಕಾಗಿಯೇ ಒಂದು ವಿಶೇಷ ಅಧಿವೇಶನವನ್ನು ಕರೆಯಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಈ ವಿಧೇಯಕವನ್ನು ಅವರು ವಾಪಸ್ಸು ಪಡೆದುಕೊಂಡರೇ, ಕರ್ನಾಟಕ ರಾಜ್ಯದ ರೈತರಿಗೆ ಒಂದು ದೊಡ್ಡ ವರದಾನವಾಗುತ್ತದೆ. ಅಷ್ಟೇ ಅಲ್ಲ, ಎಲ್ಲ ರಾಜಕಾರಣಿಗಳು ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುತ್ತೇವೆನ್ನುವ ಒಂದು ಸಂದೇಶವನ್ನು ಕೊಟ್ಟಂತಾಗುತ್ತದೆ. ಪ್ರತಿಯೊಬ್ಬ ಮನುಷ್ಯ ತನ್ನ ಆತ್ಮಸಾಕ್ಷಿಯ ವಿರುದ್ಧ ನಡೆದುಕೊಂಡು ಆತ್ಮವಂಚನೆ ಮಾಡಿಕೊಳ್ಳಬಾರದು. ಇದು ಅನಿವಾರ್ಯವಾಗಿರಬಹುದು ಆದರೆ, you can convince the Hon'ble Prime Minister of India. ಮಾನ್ಯ ನರೇಂದ್ರ ಮೋದಿಯವರನ್ನು ಸಹ ಇವರು ಕನ್ವಿನ್ಸ್ ಮಾಡಬಹುದು. ಯಾರನ್ನೋ ಒಪ್ಪಿಸುವುದಕ್ಕೆ ಇವರು ಏತಕ್ಕೋಸ್ಕರ ಆತ್ಮ ವಂಚನೆ ಮಾಡಿಕೊಳ್ಳಬೇಕು? Why are you going to please them? ಇನ್ನೂ ನಾಲ್ಕಾರು ವರ್ಷಗಳ ಕಾಲ ರಾಜಕಾರಣದಲ್ಲಿರುವುದು ಒಂದು ಸಾಧನೆಯೇ? ಇಡೀ ಕರ್ನಾಟಕ ರಾಜ್ಯದಲ್ಲಿರುವ ರೈತ ಸಮುದಾಯ ಶಿವಸ್ವರೂಪಿಗಳಾಗಿದ್ದಾರೆ. You go according to your conscious. Kindly withdraw this Bill and you convince the Hon'ble Chief Minister of Karnataka. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸದನದ ಸದಸ್ಯರ ಭಾವನೆಗಳು ಮತ್ತು ವಿಚಾರಗಳನ್ನು ಮಾನ್ಯ ಕಂದಾಯ ಸಚಿವರು ಹೇಳಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರ ಜೊತೆಗೆ 'ಇದೊಂದು ಕರಾಳ ಮಸೂದೆಯಾಗಿದೆ ಮತ್ತು ರೈತರ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯುವಂತಹ ಶಾಸನವಾಗಿದೆ ಇಂತಹ ಶಾಸನವನ್ನು ಜಾರಿಗೊಳಿಸುವಂತಹ ಕೆಟ್ಟ ಕೆಲಸವನ್ನು ನನ್ನ ಕೈಯಿಂದ ಮಾಡಿಸಬೇಡಿ' ಎಂದು ಮಾನ್ಯ ಅಶೋಕ್‌ರವರು ಹೇಳಿ, ಈಗ ತಂದಿರುವಂತಹ ವಿಧೇಯಕವನ್ನು ಹಿಂದಕ್ಕೆ ಪಡೆಯಬೇಕೆನ್ನುವುದು ನಮ್ಮ ಒತ್ತಾಯವಾಗಿದೆ. ಸ್ವತಃ ನಾವು ಯಾರೂ ಸಹ ಈ ವಿಧೇಯಕವನ್ನು ಒಪ್ಪುವುದಿಲ್ಲವೆನ್ನುವ ಮಾತನ್ನು ಹೇಳಿ ಈ ವಿಧೇಯಕವನ್ನು ವಾಪಸ್ಸು ಪಡೆಯುವುದಕ್ಕೆ ತಮ್ಮ ಮೂಲಕ ಭಾರತೀಯ ಜನತಾ ಪಕ್ಷದ ಸರ್ಕಾರಕ್ಕೆ ಅದರಲ್ಲೂ ವಿಶೇಷವಾಗಿ ಕೃಷಿ ಕುಟುಂಬದಿಂದ ಬಂದಿರುವ, ಕೃಷಿಕರೆಂದು ಹೆಮ್ಮೆಯಿಂದ ಗರ್ವದಿಂದ ಹೇಳುವ ಮಾನ್ಯ ಅಶೋಕ್‌ರವರು ಈ ವಿಧೇಯಕವನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

ಸಭಾಪತಿಯವರುಃ- ಇಲ್ಲಿಗೆ ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 3.30ರವರೆಗೆ ಮುಂದೂಡಲಾಗುತ್ತಿದೆ.

**(ಸದನವು ಮಧ್ಯಾಹ್ನ 2 ಗಂಟೆ 51 ನಿಮಿಷಗಳಿಗೆ ಮುಂದೂಡಲ್ಪಟ್ಟಿತು)**

(1018) 08-12-2020 (3.50) ಕೆಜಿ ಜಿಆರ್

**(ಮಧ್ಯಾಹ್ನ 2 ಗಂಟೆ 51 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 51 ನಿಮಿಷಗಳಿಗೆ ಸಮವೇಶಗೊಂಡಿತು)**
**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕಳೆದ ಎರಡು ದಿವಸಗಳಿಂದ ಭೂ ಸುಧಾರಣೆ ಕಾಯಿದೆ ಬಗ್ಗೆ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಹಿರಿಯ ಸದಸ್ಯರುಗಳು ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿ ಹಲವಾರು ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. 1957 ರಲ್ಲಿ ಮಾನ್ಯ ಬಿ.ಡಿ.ಜತ್ತಿಯವರ ನೇತೃತ್ವದಲ್ಲಿ ಸುಮಾರು 22 ಜನ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿ ಈ ಕಾಯಿದೆಯನ್ನು ತರಬೇಕೆಂದು, ಈ ಕಾಯಿದೆಯನ್ನು ತರುವುದರ ಮೂಲಕ ರೈತಾಪಿ ವರ್ಗಗಳಿಗೆ ಏನು ಸಮಸ್ಯೆಗಳು ಆಗುತ್ತಿವೆ ಅವುಗಳನ್ನು ಪರಿಹಾರ ಮಾಡಬೇಕೆಂದು ಮಾಡಿದ್ದರು. ಮಾನ್ಯ ಬಿ.ಡಿ.ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದರು. ಅವರು ಕೇಂದ್ರದಲ್ಲಿ ಉಪ ರಾಷ್ಟ್ರಪತಿಗಳಾಗಿದ್ದವರು, ಅವರು ಶ್ರೀ ಶರಣರು ಆಗಿದ್ದವರು. ಅದಕ್ಕೆ ತಾವು ಅವರನ್ನು support ಮಾಡುತ್ತೀರೆಂದು ನಾನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಳಿದುಕೊಂಡಿದ್ದೇನೆ. ಅದಾದ ಮೇಲೆ ಮೈಸೂರು ಭೂಸುಧಾರಣೆ ಕಾಯಿದೆ 1961 ನ್ನು ದಿನಾಂಕ 02.10.1965 ರಲ್ಲಿ ಜಾರಿ ಪಡಿಸಲಾಯಿತು. ಮಾನ್ಯ ಬಿ.ಡಿ.ಜತ್ತಿಯವರ ಸಮಿತಿಯ ಕಾಯಿದೆ ಜಾರಿಗೆ ಬಂತು. ಆ ಕಾಯಿದೆಯಲ್ಲಿ ಒಂದು ಕುಟುಂಬವು ಹೊಂದಿರಬಹುದಾದ ಜಮೀನಿನ ಮೇಲೆ ಮಿತಿಯನ್ನು ಹೇರಲಾಯಿತು. ಮೊದಲು ಮಿತಿ ಇರಲಿಲ್ಲ. ಮಾನ್ಯ ಬಿ.ಡಿ.ಜತ್ತಿಯವರ ಸಮಿತಿಯಲ್ಲಿ ಆ ಮಿತಿಯನ್ನು ಹೇರಲಾಯಿತು. "ಐದು ಜನ ಸದಸ್ಯರಿರುವ ಕುಟುಂಬವು ಅತ್ಯುತ್ತಮ ದರ್ಜೆಯ ಜಮೀನಾದರೆ 27 ಎಕರೆ ಅಥವಾ ಒಣ ಭೂಮಿಯಾದರೆ 216 ಎಕರೆ ಜಮೀನನ್ನು ಮಾತ್ರ ಹೊಂದಿರಬಹುದು" ಎಂದು ಸಮಿತಿಯು ವರದಿಯನ್ನು ನೀಡಿದೆ. ಒಂದು ಕುಟುಂಬದಲ್ಲಿ 10 ಸದಸ್ಯರಿದ್ದರೆ, ಏಕೆಂದರೆ ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಕುಟುಂಬದಲ್ಲಿ ಸುಮಾರು 10/20 ಜನ ಸದಸ್ಯರುಗಳನ್ನು ಒಳಗೊಂಡ ಕಡು ಬಡತನದಿಂದ ಕೂಡಿದ ಕುಟುಂಬಗಳು ಇರುತ್ತವೆ. 10 ಜನ ಸದಸ್ಯರಿದ್ದರೆ 432 ಎಕರೆ ಒಣಭೂಮಿ ಜಮೀನನ್ನು ಹೊಂದಬಹುದಾಗಿತ್ತು. ಇದು ಮಾನ್ಯ ಬಿ.ಡಿ.ಜತ್ತಿಯವರ ಸಮಿತಿಯಲ್ಲಿ ಆದಂತಹ ಕಾಯಿದೆ. ಇದು original ಕಾಯಿದೆ. ಇದು ಅವತ್ತಿನ ಸ್ಥಿತಿಗೆ, ಇವತ್ತಿನ ಸ್ಥಿತಿಗಲ್ಲ. ಇದು 1961 ಮತ್ತು 1974 ರ ಸ್ಥಿತಿ. ಇವತ್ತಿನ ಸ್ಥಿತಿ ಬೇರೆ ಇದೆ. ಅವತ್ತಿನ ಸ್ಥಿತಿಗೆ ಮಾನ್ಯ ಬಿ.ಡಿ.ಜತ್ತಿಯವರ ಸಮಿತಿಯು ಒಂದು ವರದಿಯನ್ನು ಕೊಟ್ಟು, ಒಂದು ಬದಲಾವಣೆಯನ್ನು ತಂದಿದ್ದರು. ಈ ಕಾಯಿದೆ ಬಂದ ಮೇಲೆ ಮಾನ್ಯ ದೇವರಾಜ ಅರಸುರವರು ಇದಕ್ಕೆ ಕಲಂ.79ಎ, 79ಬಿ ಎಂಬ ಪದವನ್ನು ಸೇರಿಸಿ ಮಾನ್ಯ ಬಿ.ಡಿ.ಜತ್ತಿಯವರು ತಂದಂತಹ original ಕಾಯಿದೆಗೆ ಬದಲಾವಣೆ ತಂದರು. ಅದಾದ ಮೇಲೆ ಮತ್ತೆ ಬದಲಾವಣೆ ಆಯಿತು. ಇದನ್ನು ಬಿಜೆಪಿ ತಂದಿಲ್ಲ. ಮತ್ತೆ ಕಲಂ. 79ಎ, 79ಬಿ ಅಡಿಯಲ್ಲಿನ ಆದಾಯ ಮಿತಿ original ಇದ್ದಿದ್ದು, ರೂ.12,000/–., ರೂ.12,000/– ರಿಂದ ಒಂದೇ ಬಾರಿಗೆ ರೂ.50,000/–ಗಳಿಗೆ ಏರಿಕೆ ಮಾಡಿದರು. ನಾವು ಇದನ್ನು ಮಾಡಿಲ್ಲ. ಇದು 1990 ರಲ್ಲಿ ಆಗಿದ್ದು. ನಂತರ 1995 ರಲ್ಲಿ ರೂ.50,000/–ಗಳಿಂದ ರೂ.2,00,000/–ಗಳಿಗೆ ಏರಿಕೆ ಮಾಡಿದರು. ನಾವು ಇದನ್ನು ಮಾಡಿಲ್ಲ. 2015 ರಲ್ಲಿ ರೂ.2,00,000/–ಗಳಿಗೆ ಇದಿದ್ದನ್ನು ರೂ.25,00,000/–ಗಳಿಗೆ ಏರಿಸಿದರು. ಈ ರೀತಿ ಜಮೀನನ್ನು ತೆಗೆದುಕೊಳ್ಳುವವರಿಗೆ ಆದಾಯ ಮಿತಿಯನ್ನು ಏರಿಸುತ್ತಾ ಹೋದರು. 1961 ನೇ ಸಾಲಿನಿಂದ ಇಲ್ಲಿಯವರೆಗೆ ಬಹಳ ಸುಧಾರಣೆಗಳು ಆಗಿವೆ. ಕರ್ನಾಟಕ ಭೂಸುಧಾರಣೆ ಕಾಯಿದೆ 1961ರ ಕಲಂ.79ಎ, 79ಬಿ ಅಡಿಯಲ್ಲಿ 1,76,180 ಎಕರೆ ಕೃಷಿ ಭೂಮಿಗೆ ಸಂಬಂಧಪಟ್ಟಂತೆ ಒಟ್ಟು 83,171 ಪ್ರಕರಣಗಳು ದಾಖಲಾಗಿವೆ. ಈ ಕಾಯಿದೆ ತಂದು ಸುಮಾರು 45 ವರ್ಷಗಳು ಆಗಿವೆ. ಮಾನ್ಯ ಸದಸ್ಯರಾದ ಭೋಜೇಗೌಡರವರು ವಕೀಲರಾಗಿದ್ದಾರೆ. ಕಾಯಿದೆಯನ್ನು implement ಮಾಡುವುದಕ್ಕೆ ತರುತ್ತಾರೆ. ಆದರೆ, ಎಷ್ಟು ಜಮೀನು ತೆಗೆದುಕೊಂಡಿದ್ದಾರೆ ಎಂದರೆ, ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಯಿದೆಯಡಿಯಲ್ಲಿ 1% ಅಥವಾ 1.50% ರಷ್ಟು ಜಮೀನನ್ನು ಸಹ ಮಾಡಿಲ್ಲ. ಕೇಸ್‌ಗಳನ್ನು ಹಾಕುವುದು ಮಾತ್ರ ಇತ್ತು. ಆದರೆ, ಯಾವುದೇ ಜಮೀನನ್ನು ಈ 45 ವರ್ಷಗಳಲ್ಲಿ ಮಾಡಿಲ್ಲ. ಸುಮಾರು ವರ್ಷಗಳ ಕಾಲ ಆಡಳಿತ ಮಾಡಿದವರೆ ಕಾಂಗ್ರೆಸ್ ಪಕ್ಷದವರು. ಈ ಕಾಯಿದೆಯನ್ನು ಮಾಡಿದವರು ಅದನ್ನು implement ಮಾಡಿದ್ದಾರೆಯೇ? ಇಲ್ಲ. ಈಗ ನಾವು ಈ ಕಾಯಿದೆಯನ್ನು ಏಕೆ ತಂದಿದ್ದೇವೆಂದರೆ, ನಮ್ಮ ರಾಜ್ಯದಲ್ಲಿ ಒಟ್ಟು 190.50 ಲಕ್ಷ ಹೆಕ್ಟೇರ್ ಜಮೀನು ಇದೆ. ಇದರಲ್ಲಿ ಅರಣ್ಯ ಭೂಮಿ 30.73 ಲಕ್ಷ ಹೆಕ್ಟೇರ್ ಜಮೀನು ಇದೆ. ಅದೇರೀತಿ 22.07 ಲಕ್ಷ ಹೆಕ್ಟೇರ್ ಜಮೀನು ಬಿಳು ಬಿದ್ದಿರುವಂತಹದ್ದು ಇದೆ. 11.79 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡಬಹುದಾಗಿದ್ದರೂ ಸಹ, ಕಳೆದ 10 ವರ್ಷಗಳಿಂದ ಈ ಜಮೀನಿನಲ್ಲಿ ಕೃಷಿ ಮಾಡದೆ ಬೀಡು ಬಿಟ್ಟಿದ್ದಾರೆ. ಅಂದರೆ, ಉಳುಮೆ ಮಾಡುತ್ತಿಲ್ಲ. ನಾವು ಇದನ್ನು ಯಾರಿಗೆ ಕೃಷಿ ಮಾಡುವುದಕ್ಕೆ ಆಸ್ತಕಿ ಇದೆ, ಯಾರು ವಿದ್ಯಾವಂತ ಯುವಕರಿದ್ದಾರೆ, ಅವರು ಮತ್ತೆ ಕೃಷಿ ಮಾಡುವುದಕ್ಕೆ ಹಳ್ಳಿ ಕಡೆಗೆ ಬರಬೇಕೆಂಬ ಸದುದ್ದೇಶವನ್ನು ಇಟ್ಟುಕೊಂಡು ಮಾಡಿದ್ದೇವೆ. ನಮ್ಮ ದೇಶ ಕೃಷಿ ಆಧಾರಿತ ಉತ್ಪನ್ನಗಳನ್ನು ರಫ್ತು ಮಾಡುವುದರಲ್ಲಿ 9ನೇ ಸ್ಥಾನದಲ್ಲಿದೆ. ವಿಶ್ವದ ರಫ್ತಿನಲ್ಲಿ 2.1 % ಭಾರತದ್ದು ಇದೆ. ಇದು ಬಹಳ ಮುಖ್ಯವಾದುದು. ಗುಜರಾತ್ ರಾಜ್ಯ ನಮ್ಮ ದೇಶದ agriculture products ಗಳನ್ನು ರಫ್ತು ಮಾಡುವುದರಲ್ಲಿ 18.8% ಪಾಲು ನಮ್ಮ ದೇಶದಲ್ಲಿಯೇ ಹೊಂದಿದೆ, ಎಲ್ಲಾ agriculture products ಸೇರಿ. ನಮ್ಮ ರಾಜ್ಯದ ಪಾಲು 5.7% ಇದೆ. ಅಲ್ಲಿಗೂ ಇಲ್ಲಿಗೂ ನಾವು ಬಹಳ ದೂರದಲ್ಲಿದ್ದೇವೆ.

**(ಮುಂದು...)**

(1019)08-12-2020(4-00)ಎಂವಿ-ಜಿಆರ್

**ಶ್ರೀ ಆರ್.ಅಶೋಕ್(ಮುಂದು...):-**

ನಮ್ಮ ರಾಜ್ಯ ಕೂಡ export ಮಾಡಬೇಕು. ಕೃಷಿಯಿಂದ ಬರತಕ್ಕಂಥ ಉತ್ಪನ್ನಗಳು ಏನಿದೆ ಅದು ಬೇರೆ ದೇಶಗಳಿಗೆ ಹೋದರೆ ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಅದರಿಂದ ಅವರ ಆದಾಯ ಹೆಚ್ಚಾಗುತ್ತದೆ. ಆ ಆದಾಯ ಹೆಚ್ಚಾಗಬೇಕು ಎನ್ನುವಂತಹ ದೃಷ್ಟಿ ಮತ್ತು ಸದುದ್ದೇಶದಿಂದ ಇದನ್ನು ಮಾಡಿರತಕ್ಕಂಥದ್ದು. ಏಕೆಂದರೆ, ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ನಮಗಿಂತ 3% ರಿಂದ 4% ratio ಜಾಸ್ತಿ ಇದೆ. Export ಮಾಡುವುದರಲ್ಲಿ ಮಹಾರಾಷ್ಟ್ರ ರಾಜ್ಯ ನಮಗಿಂತ ಮುಂದೆ ಇದೆ. ಇದರ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದವರು ಹೇಳುತ್ತಿದ್ದರು. ಕೈಗಾರಿಕೆಗಳು ಲೂಟಿ ಹೊಡದುಬಿಟ್ಟಿವೆ ಎಂದು. ಬಿಹಾರ ರಾಜ್ಯದಲ್ಲಿ ಚುನಾವಣೆ ನಡೆದಿರುವುದು ಹೇಗೆ ಎಂಬುದು ತಮಗೆ ಗೊತ್ತಿದೆ. ಅಲ್ಲಿ ಒಬ್ಬರು ಹೇಳಿದರು ಹತ್ತು ಲಕ್ಷ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗ ಕೊಡುತ್ತೇವೆಂದು. ಮತ್ತೊಬ್ಬರು ಹೇಳಿದರು ಹದಿನೈದು ಲಕ್ಷ ಉದ್ಯೋಗ ಕೊಡುತ್ತೇವೆಂದು. ಕೇವಲ ಉದ್ಯೋಗದ ಮೇಲೆಯೇ ಅಲ್ಲಿನ ಚುನಾವಣೆ. ನಮ್ಮ ಉದ್ದೇಶ ಉದ್ಯೋಗ ಸೃಷ್ಟಿಯಾಗಬೇಕೆಂದು. ನಾವು ಇದುವರೆಗೂ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆ ಆಗಬೇಕು, ವಿದ್ಯಾವಂತ ಯುವಕರಿಗೆ ಉದ್ಯೋಗ ಸಿಗಬೇಕು. ಆ ದೃಷ್ಟಿಯಿಂದ ಕೈಗಾರಿಕೆಗಳು ನಮ್ಮಲಿ ಬರುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಗ ಗೌರಿಬಿದನೂರಿನ ಪಕ್ಕದಲ್ಲೇ KIA ಕಾರಿನ ಫ್ಯಾಕ್ಟರಿ ಬಂದಿದೆ. ಅವರು ಸುಮಾರು 16 ಸಾವಿರ ಕೋಟಿಯಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅದು ನಮ್ಮ ಕರ್ನಾಟಕ ರಾಜ್ಯದ ಬಾಗೇಪಲ್ಲಿ ಮತ್ತು ಆಂಧ್ರ ಪ್ರದೇಶದ ಬಾರ್ಡರ್‌ನಲ್ಲಿದೆ. ಅದು ಆಂಧ್ರ ಪ್ರದೇಶಕ್ಕೆ ಸೇರಿದೆ. ಅದು ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲ. ಅವರು ಅಲ್ಲಿಗೆ ಏಕೆ ಹೋದರು? ಈಗ ಅಷ್ಟು ಉದ್ಯೋಗಗಳು ನಮ್ಮ ಕೈತಪ್ಪಿ ಹೋದವು. ನಮ್ಮ ರಾಜ್ಯಕ್ಕೆ ಸುಮಾರು 16 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೋಯಿತು. ನಾನು ಬಹಳಷ್ಟು ಸಲ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಬೇರೆಯವರು ಹೇಳಿರುವುದನ್ನು ನೋಡಿದ್ದೇನೆ. ಅಂದರೆ, ನಮ್ಮ ರಾಜ್ಯಕ್ಕೆ ಯಾರು ಕೈಗಾರಿಕೆಯವರು ಬರುವುದಿಲ್ಲವೆಂದು. ಅವರೆಲ್ಲರೂ ಸಹ ಬೇರೆ ರಾಜ್ಯಕ್ಕೆ ಹೋಗುತ್ತಿದ್ದಾರೆಂದು. ನೀವು ಯಾರನ್ನು ಸಹ ಕಂಟ್ರೋಲ್ ಮಾಡುವುದಿಲ್ಲ ಮತ್ತು ನಮಗೆ ಉದ್ಯೋಗ ಸಿಗುತ್ತಿಲ್ಲವೆಂದು. ಆದುದರಿಂದ ನಾವು ಕೈಗಾರಿಕೆಗಳಿಗೆ ಎಷ್ಟು ಆದ್ಯತೆ ಕೊಟ್ಟಿದ್ದೇವೆಂದು ಗೊತ್ತಾಗುತ್ತದೆ. ಏಕೆಂದರೆ, ಕೈಗಾರಿಕೆಗಳು ಕೇವಲ ಲೂಟಿ ಮಾಡಿ ಬಿಟ್ಟಿದ್ದಾರೆಂದು ಎಂದು ಹೇಳುತ್ತಾರೆ. ಕೈಗಾರಿಕೆ ಮತ್ತು ಐಟಿ ಮತ್ತು ಬಿಟಿ ಸಚಿವರು ಇಲ್ಲೇ ಇದ್ದಾರೆ. ಅದು ಯಾವುದಕ್ಕೆ ಉಪಯೋಗವಾಗುತ್ತಿದೆ ಎಂದು ಈಗಾಗಲೇ ನಾನು ಅದರ percentage ಅನ್ನು ಹೇಳಿದ್ದೇನೆ. ಕೈಗಾರಿಕೆಗಳಿಗೆ ಎಷ್ಟು percentage ಎಂದರೆ, ಕೈಗಾರಿಕೆಯವರು ಕೇಳಿರುವಂಥದ್ದು ಕೇವಲ 2% ಜಮೀನನ್ನು ಮಾತ್ರ. ಅಂದರೆ ಕರ್ನಾಟಕ ರಾಜ್ಯದಲ್ಲಿ 2% ಜಮೀನನ್ನು ನೀಡಿದರೆ ನಾವು ಸುಮಾರು ಒಂದರಿಂದ ಎರಡು ಕೋಟಿ ಜನರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ನಾವು ಅವರಿಗೆ ಕೊಟ್ಟಿರುವುದು ಎಷ್ಟು ಎಂಬುದನ್ನು ನಾನು official record ಅನ್ನು ಹೇಳುತ್ತಿದ್ದೇನೆ. ಅಂದರೆ, ಅವರಿಗೆ ಕೇವಲ 0.87% ಮಾತ್ರ ಕೊಟ್ಟಿದ್ದೇವೆ. ಆದರೆ, ಹೊಡೆದು ಬಿಟ್ಟಿದ್ದಾರೆ, ಹೊಡೆದು ಬಿಟ್ಟಿದ್ದಾರೆಂದು ಹೇಳುತ್ತಾರೆ. ಆದರೆ ಕೈಗಾರಿಕೆಗಳಿಗೆ ಕೇವಲ 0.87% ಮಾತ್ರ ಕೊಟ್ಟಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಕೈಗಾರಿಕೆ ವಿಚಾರವನ್ನು ಹೇಳಿದರು. ಇವತ್ತು ಕೈಗಾರಿಕೆಗಳು ಅಷ್ಟು ಎಕರೆ ತೆಗೆದುಕೊಂಡರು, ಇಷ್ಟು ಎಕರೆ ತೆಗೆದುಕೊಂಡರು ಹಾಗೂ ಸಾವಿರಾರು ಎಕರೆ ತೆಗೆದುಕೊಂಡು ಬಿಟ್ಟಿದ್ದಾರೆ,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆ, ಹೀಗೆ ಎಂದು ಮತ್ತು ಕೃಷಿಗೆ ಜಮೀನು ಇಲ್ಲ ಅನ್ನುವಂತಹ ರೀತಿಯಾದ ವಾದ ನಡೆಯುತ್ತಿದೆ. ಈಗ 1964ರಲ್ಲಿ ಕೆ.ಐ.ಎ.ಡಿ.ಬಿ., ಸ್ಥಾಪನೆಯಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಒಟ್ಟು ಕೈಗಾರಿಕೆಗಳ ಪ್ರದೇಶಾಭಿವೃದ್ಧಿಯ ಸಲುವಾಗಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆಂದು ಲೆಕ್ಕಚಾರ ಮಾಡಿದರೆ, reality ಏನು ಎಂಬುದು ನಮಗೆ ಅರ್ಥವಾಗುತ್ತದೆ. ಈಗ ಕೆ.ಐ.ಎ.ಡಿ.ಬಿ., 1964ರಲ್ಲಿ ಸ್ಥಾಪನೆಯಾದಾಗಿನಿಂದ 2020ನೇ ಇಸವಿಯವರೆಗೆ ಒಟ್ಟು ಕೈಗಾರಿಕೆ ಪ್ರದೇಶಾಭಿವೃದ್ಧಿಯ ಸಲುವಾಗಿ ಸುಮಾರು 86 ಸಾವಿರ ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೆ ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ S.U.C., (Single Unit Complex) ಅಡಿಯಲ್ಲಿ ಅವರು ಸ್ವಾಧೀನ ಮಾಡಿಕೊಡುವಂತಹ ಪ್ರಕ್ರಿಯೆ 500 ಎಕರೆ, 1000 ಎಕರೆ ಈ ರೀತಿ ಕೊಡುವಂತಹ ವ್ಯವಸ್ಥೆ ಎಷ್ಟಾಗಿದೆ ಎಂದರೆ, ಸುಮಾರು 74 ಸಾವಿರ ಎಕರೆ ಮಾತ್ರ. ಒಟ್ಟು ಈ ಎರಡನ್ನು ಕೂಡಿದರೆ 1,56,000 ಎಕರೆ ಜಮೀನು ಇಲ್ಲಿಯವರೆಗೆ ಸ್ವಾಧೀನ ಮಾಡಿಕೊಂಡಿರುವುದು. ಒಟ್ಟು ಕೃಷಿ ಜಮೀನು ಏನಿದೆ, ಅದು ಎಷ್ಟು percentage ಎಂದು ಲೆಕ್ಕ ಮಾಡಿದರೆ, 0.56 ಎಂದು ಹೇಳಿದ್ದಾರಲ್ಲ ಅಷ್ಟು ಮಾತ್ರ ಆಗುತ್ತದೆ. ಈ ಎರಡು ಸಹ ಒಂದು ಅಥವಾ ಎರಡು percentage ಅನ್ನು ದಾಟಿಲ್ಲ. ಆದರೆ, ಹೊರಗೆ ಏನಾಗಿದೆ ಎಂದರೆ, ಎಲ್ಲವನ್ನು ಸಹ ದೊಡ್ಡ ದೊಡ್ಡ ಕೈಗಾರಿಕೆಯವರಿಗೆ ಕೊಟ್ಟು ಅವರು ಅದನ್ನು ಲೂಟಿ ಹೊಡೆಯುತ್ತಿದ್ದಾರೆ ಎನ್ನುವಂತಹ ಅಪವಾದ. ಆದುದರಿಂದ reality ಇರುವುದು ಇದು. ಇವತ್ತು ಕಲಂ 79ಎ ಮತ್ತು 79ಬಿ ಅನ್ನು ತೆಗೆದುಬಿಟ್ಟಿದ್ದರೆ, ಸಾವಿರಾರು ಎಕರೆ ಜಮೀನನ್ನು ಯಾರೋ ಬಂದು ಹಿಡಿದುಕೊಳ್ಳುವುದಿಲ್ಲ. ಬೆಂಗಳೂರಿನ ಸುತ್ತಮುತ್ತ ಒಂದಷ್ಟು ಜನ ಹಿಡಿಯಬಹುದು. ನಗರ ಪ್ರದೇಶಗಳಲ್ಲಿ ಒಂದಷ್ಟು ಜನ ಹಿಡಿಯಬಹುದು. Remote areas ಮತ್ತು ತಾಲ್ಲೂಕು place ಗಳಲ್ಲಿ ಯಾರೂ ಸಹ ಸಾವಿರಾರು ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡುವುದಿಲ್ಲ. ಆದರೆ, ಹೂಡಿಕೆ ಮಾಡುವವರು ಬಹಳ ಬುದ್ಧಿವಂತರಿರುತ್ತಾರೆ. ಅಲ್ಲಿ ಏನಾದರೂ ಲಾಭ ಬರುವುದಾದರೆ ಮಾತ್ರ ಹೂಡಿಕೆ ಮಾಡುತ್ತಾರೆ. ನಮ್ಮ ಧಾರವಾಡ ಜಿಲ್ಲೆಯ ಕುಂದಗೋಳ ಮತ್ತು ಕಲಘಟಗಿ ಎನ್ನುವಂತಹ ಪ್ರದೇಶಗಳಲ್ಲಿ ಯಾರೂ ಸಹ ನೂರು ಎಕರೆ ಜಮೀನುಗಳನ್ನು ತೆಗೆದುಕೊಳ್ಳುವುದಿಲ್ಲ. ಅವರಿಗೆ ಎಲ್ಲಿ ಲಾಭವಾಗುತ್ತದೆ ಅಲ್ಲಿ ತೆಗೆದುಕೊಳ್ಳುತ್ತಾರೆ ಅಷ್ಟೆ. ಸಾವಿರಾರು ಎಕರೆ ಪ್ರದೇಶವನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಏಕೆಂದರೆ, ceiling limit ಇದೆ. ಆ limit ಅನ್ನು ದಾಟಿ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ Section 109 ಇರುವುದೇ ಅದರ ಸಲುವಾಗಿ. ನಾನು Land Reforms Act ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದೇವರಾಜು ಅರಸು ರವರು ಯಾರು ಭೂಮಿಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಳುತ್ತಾರೆ ಅವರು ಭೂಮಿಯ ಒಡೆಯನಾಗಬೇಕು ಎಂಬುದು ಅವರ ಮೂಲ ಉದ್ದೇಶವಾಗಿತ್ತು. ಮಾನ್ಯ ದೇವರಾಜ ಅರಸುರವರ ಮೂಲ ಉದ್ದೇಶ ಸಾಧನೆಯಾಗಿದೆ. ಇಲ್ಲಿಯವರೆಗೆ ಸುಮಾರು ಆರು ಲಕ್ಷ ಜನ ರೈತರಿಗೆ ಅದರ ಮಾಲೀಕತ್ವ ಸಿಕ್ಕಿ ಅದರಿಂದ ಲಾಭವಾಗಿದೆ. ನಾನು ಮತ್ತೊಂದನ್ನು ಹೇಳುತ್ತೇನೆ. ಅಂದರೆ, ಈ ಕಲಂ 79ಎ ಮತ್ತು 79ಬಿ ಕಾನೂನನ್ನು ತೆಗೆದುಕೊಂಡು ಬಂದಾಗ, ಅಲ್ಲಿಂದ ಇಲ್ಲಿಯವರೆಗೆ ಎಷ್ಟು ಜಮೀನು violation ಆಗಿದೆ ಮತ್ತು ಸರ್ಕಾರಕ್ಕೆ ಎಷ್ಟಾಗಿದೆ. ಅದರಲ್ಲಿ ಒಂದು ಎಕರೆಯೂ ಸಹ ಆಗಿಲ್ಲ. ಈಗ ಕಂದಾಯ ಅಧಿಕಾರಿಗಳು violation ಆಗಿದೆ ಎಂದು ನೋಟಿಸ್ ಕೊಡುವುದು, ವರ್ಷಾನುಗಟ್ಟಲೆ ಕೋರ್ಟ್‌ಗೆ ಓಡಾಡುವುದು. ಈ ರೀತಿ ಓಡಾಡಿದ ಮೇಲೆ ಅದನ್ನು drop ಮಾಡುವಂಥದ್ದು. ಈ ರೀತಿಯಾಗಿ ಎಲ್ಲಾ ನಡೆದಿದೆ. ಆದರೆ, ಅದರಿಂದ ಒಂದು ಎಕರೆ ಜಮೀನು ಸರ್ಕಾರಕ್ಕೆ waste ಆಗಲಿಲ್ಲ. ಅದು ಅಲ್ಲಿಂದ ಇಲ್ಲಿಯವರೆಗೆ ಆಗಬೇಕಾಗಿತ್ತು. ಆದರೆ, violation ಆಗಿದೆ ಎಂದು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಕರಣಗಳನ್ನು ದಾಖಲಿಸಿದರು. ಅದರಲ್ಲಿ ಒಂದೂ ಸಹ prove ಆಗಲಿಲ್ಲ. ಈಗ waste ಆಗಿಲ್ಲವೆಂದರೆ, ಅದನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಕಲಂ 79ಎ ಮತ್ತು 79ಬಿ ಯನ್ನು ತೆಗೆದು ಹಾಕಿದ ತಕ್ಷಣವೆ ಎಲ್ಲವೂ ಆಗುವುದಿಲ್ಲ. ಈಗ ನಾವು ತಮಿಳುನಾಡಿನ ಹೊಸೂರಿಗೆ ಹೋಗಿ ಜಮೀನು ತೆಗೆದುಕೊಳ್ಳಬಹುದು. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯದಲ್ಲಿ ಈ ರೀತಿ ಇಲ್ಲ. ನಾನು ಕೈಗಾರಿಕೆ ಸಚಿವನಾದ ಮೇಲೆ ಬಹಳಷ್ಟು ಜನ ಹೇಳುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಒಂದು ಎಕರೆ ಜಮೀನು ತೆಗೆದುಕೊಳ್ಳುವುದಕ್ಕೆ ಅದು ಬೇಗನೆ ಆಗುವುದಿಲ್ಲವೆಂದು. ನಾವು Section 109 ಪ್ರಕಾರ Provision ಮಾಡಿದ್ದೇವೆ. ಸರ್ಕಾರ ಮನಸ್ಸು ಮಾಡಿದ್ದರೆ ಸಾವಿರಾರು ಎಕರೆ ಜಮೀನಿಗೆ ಅನುಮತಿ ಕೊಡಬಹುದಾಗಿತ್ತು. ಈಗ ಎಲ್ಲಿಗೆ ಬೇಕು ಮತ್ತು ಎಲ್ಲಿಗೆ genuine ಇದೆ ಅಲ್ಲಿಗೆ ಜಮೀನು ಕೊಟ್ಟಿದ್ದೇವೆ. ಇವತ್ತು ಸಹ 54 ಎಕರೆ ಮಿತಿಯನ್ನು ದಾಟಿದ ಮೇಲೆ ಅವರಿಗೆ 200 ಎಕರೆ ಜಮೀನು ಬೇಕು ಎಂದರೆ ಅಂತಹವರು Section 109 ಪ್ರಕಾರ apply ಮಾಡಬೇಕು. ಅದರ restrictions ಇದ್ದೆ ಇದೆ. ಅದರ restrictions ಅನ್ನು ತೆಗೆದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದರಲ್ಲಿ ನಾವು ಏನನ್ನು ಕೇಳುತ್ತೇವೆಂದರೆ, Section 109 ರಲ್ಲಿ restrictions ಇದೆ ಎಂದು ಹೇಳುತ್ತಿದ್ದಾರೆ. ಅದರಲ್ಲಿ ಒಂದು ಏನೆಂದರೆ, ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ. ಆ ಮೂಲ ಉದ್ದೇಶ ಈಡೇರಬೇಕು ಎನ್ನುವುದು ಅಷ್ಟೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತೆ ಬೇರೆನೂ ಇಲ್ಲ. ಏಕೆಂದರೆ, change of land ಯಾವ ಕಾರಣಕ್ಕೂ ಮತ್ತು ಯಾವ ಕಾಲಕ್ಕೂ ಆಗಬಾರದು ಎಂದು. ಹಾಗಾಗಿ Section 109 ರ ಬಗ್ಗೆ ಮಾತನಾಡಿ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಜಗದೀಶ್ ಶೆಟ್ಟರು ಹೇಳಿದ ಹಾಗೆ, ಕಲಂ 109ರ ಪ್ರಕಾರ land ಅನ್ನು acquire ಮಾಡಿಕೊಡುತ್ತಾರೆಂದು. ಈಗ ಟಾಟಾ ನ್ಯಾನೋ ಕಂಪನಿಯವರು ಸುಮಾರು 1200 ಎಕರೆ ಜಮೀನನ್ನು ತೆಗೆದುಕೊಂಡರು. ಕಂಪನಿಯವರಿಗೆ ರಾಜ್ಯ ಸರ್ಕಾರದವರು ಸುಮಾರು ಒಂಬತ್ತು ಸಾವಿರ ರೂಪಾಯಿಗಳ ಸಾಲವನ್ನು ಸಹ ಕೊಟ್ಟರು. ಆದರೆ, ಇವತ್ತು ಅದರ ಕಥೆ ಏನೆಂದರೆ, ಆ ಕಂಪನಿಯ ಬಾಗಿಲು ಮುಚ್ಚಿದೆ. ಈಗ ಜಾಗ ಕೊಟ್ಟಿರುವಂತಹ ರೈತರ ಕಥೆ ಏನಾಗಬೇಕು. ಆ ಜಾಗ ಲ್ಯಾಂಡ್ ಬ್ಯಾಂಕ್ ಕಡೆಯಿಂದ ಟಾಟಾ ಕಂಪನಿಯವರಿಗೆ convert ಆಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಅದರಲ್ಲಿ ಕೆಲವೊಂದು exception cases ಇರುತ್ತವೆ. ಅದರ ಬಗ್ಗೆ ಆಯಾಯ ಕಾಲಕ್ಕೆ ಆಯಾಯ ಸರ್ಕಾರದವರು ಕ್ರಮ ಕೈಗೊಳ್ಳಬೇಕು. ಈಗ bonafide ಯಾಗಿ ಹೇಳುತ್ತೇನೆ. ನಮ್ಮಲ್ಲಿ ಪ್ರಸ್ತುತ ಬಂದಿರುವಂತಹ ಕಂಪನಿಗಳೆಲ್ಲಾ ಶೇಕಡಾ 100ರಷ್ಟು ಉಪಯೋಗಿಸಿಕೊಂಡಿದ್ದಾರೆಂದು ಹೇಳುವುದಿಲ್ಲ. ಎಲ್ಲಿ ಆ ರೀತಿಯಾದಂತಹ ಕಂಪನಿಗಳು ಇರುತ್ತವೆ ಅವರು violation ಮಾಡದ ಹಾಗೆ within 5 or 3 years ಒಳಗೆ process ಅನ್ನು complete ಮಾಡಬೇಕೆಂದು ಇರುತ್ತದೆ. ಅದು ಆಗದೇ ಇದ್ದಾಗ ಆಯಾಯ ಕಾಲಕ್ಕೆ ತಕ್ಕಂತೆ ಆಯಾಯ ಸರ್ಕಾರಗಳು immediately action ಮಾಡಿ, land ಅನ್ನು resume ಮಾಡಿಕೊಳ್ಳಬೇಕಾಗುತ್ತದೆ. ಅದು ಆ ರೀತಿ ಆಗದೇ ಇರುವುದಕ್ಕೆ ಈ ರೀತಿಯಾಗಿದೆ. ಅದರ ಹಣೆಬರಹ. ಅದಕ್ಕೆ resume ಮಾಡುವಂತೆ strict ಆಗಿ action ಆದರೆ ಬಹುಶಃ ಆ ಕಂಪನಿಯವರಿಗೆ ಹೆದರಿಕೆ ಇರುತ್ತದೆ. ಅಂದರೆ, ನಾವು ಅದನ್ನು ಉಪಯೋಗಿಸಿಕೊಳ್ಳಬೇಕೆಂದು. ಆ ಒಂದು process ಮಾಡುವುದು ಆ ಒಂದು strictness ತರೋಣ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಈ ತರಹ ಎಷ್ಟು ಲ್ಯಾಂಡ್‌ಗಳು ಉಳಿದಿವೆ. ಅದರ ಮೇಲೆ ಏನು ಕ್ರಮ ಕೈಗೊಳ್ಳುತ್ತಾರೆಂದು ಮಾನ್ಯ ಕೈಗಾರಿಕಾ ಸಚಿವರು ಹೇಳಬೇಕು.

**(ಮುಂದು...)**

(1020)-08.12.2020-04.10-LL-MD(VK)

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮೊದಲ ಬಾರಿ ಚರ್ಚೆಯಾಗುತ್ತಿಲ್ಲ ಅಥವಾ ನಾವೇ ಮೊದಲ ಬಾರಿ 79(ಎ)(ಬಿ) ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಮತ್ತು ಈ ಸದನದಲ್ಲಿಯೇ ಚರ್ಚೆಯಾಗುತ್ತದೆ ಎಂದು ಏನೂ ಇಲ್ಲ. ಈ ಹಿಂದೆಯೂ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ಇದರಲ್ಲಿ ಆದಾಯದ ಮಿತಿಯನ್ನು ಜಾಸ್ತಿ ಮಾಡುವಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಚರ್ಚೆಯಾಗಿರುತ್ತದೆ. ಆ ದಿನಕ್ಕೆ ಅಂದರೆ ಸುಮಾರು 15 ವರ್ಷಗಳ ಹಿಂದೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಇದ್ದಂತಹ ಸಂದರ್ಭದಲ್ಲಿ ಇರಬಹುದು, ಪ್ರತಿಯೊಬ್ಬರೂ ಕೂಡ ಬಹಳಷ್ಟು comment ಗಳನ್ನು ಹೇಳಿದ್ದಾರೆ. ಅವರೆಲ್ಲರೂ ನಮಗಿಂತಲೂ ಬಹಳ ಹಿರಿಯರು. ಏಕೆಂದರೆ, ನಾವಾದರೂ ಬರು ಬರುತ್ತಾ ಸ್ವಲ್ಪ modernize ಆಗಿದ್ದೇವೆ. ಆದರೆ, ಆಗಿದ್ದವರು pure ರೈತರು. ಈಗ ನಾವುಗಳು ಪ್ಯಾಂಟ್ ಹಾಕಿದ್ದೇವೆ. ಪಂಚೆ ಹೋಗಿ ಪ್ಯಾಂಟ್ ಬಂದಿದೆ ಹಾಗೂ ಇನ್ನಿತರ ಬದಲಾವಣೆಯಾಗಿದೆ. ಆಗ ಸದನಕ್ಕೆ ಪಂಚೆ ಹಾಕಿಕೊಂಡು ಬರುವಂತಹವರು ಬಹಳ ಜನ ಶಾಸಕರು ಇದ್ದರು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ modern agriculture ಕಾಲ. ಆಧುನಿಕ ಬೇಸಾಯದ ಮುಖಾಂತರ yield ಹತ್ತು ಪಟ್ಟು ಹೆಚ್ಚಾಗಿದೆ. ಈಗಲೂ ಕೃಷಿಯಲ್ಲಿ ಅಗಾಧವಾದ ಬದಲಾವಣೆಯಾಗಿದೆ. It is a difficult science and more difficult than space science. ಯಾರು ಜಾಣರಿದ್ದಾರೆ ಅವರು ಅದನ್ನು modern technology adopt ಮಾಡಿ successful ಆಗಿದ್ದಾರೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, Exactly correct. ಬದಲಾವಣೆ ಎನ್ನುವುದು ಪ್ರಕೃತಿ ನಿಯಮ. ಬದಲಾವಣೆಯಾಗುತ್ತಿರಬೇಕು. ಆ ಬದಲಾವಣೆಗೆ ಕಾನೂನು ತಂದಿರುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)** ಆವೊತ್ತಿನ ದಿನ ಬಹಳಷ್ಟು ಜನ ಹಿರಿಯ ಸದಸ್ಯರು ಚರ್ಚೆ ಮಾಡಿರುವಂಥದ್ದು... ನಮ್ಮ ರೆಕಾರ್ಡ್‌ನಲ್ಲಿರುವುದು, ಇದು ಯಾವುದೋ ಪತ್ರಿಕೆಯಲ್ಲಿ ಬಂದಿರುವುದಲ್ಲ. ಇದು on record ನಡೆದಿರುವಂತಹ ಸದನದ ನಡವಳಿಯನ್ನು ಅಧಿಕೃತವಾಗಿ ತೆಗೆದುಕೊಂಡಿರುತ್ತೇನೆ. ಆ ದಿನ ಶ್ರೀ ಮುನಿಸ್ವಾಮಿ, ಮಾಲೂರು ಶಾಸಕರು ಮಾತನಾಡಬೇಕಾದರೆ, "Plantation ಮತ್ತು ಇತರ plantation ಗೆ ಏನು ವಿನಾಯಿತಿ ಕೊಟ್ಟಿದ್ದಾರೆ, ನಾವು ವರ್ಗರಹಿತ ಸಮಾಜವನ್ನು ಕಟ್ಟಬೇಕೆಂದು ಹೇಳುತ್ತಿರುವಾಗ ಈ ರೀತಿ ಮಾಡಿದರೆ ನಾನಾ ವರ್ಗಗಳನ್ನು ನಿರ್ಮಾಣ ಮಾಡಿದಂತಾಗುತ್ತದೆ. ಇವೊತ್ತಿನ ದಿವಸ plantation ನಲ್ಲಿರುವವರು ಬಹಳ ಶ್ರೀಮಂತರಿದ್ದಾರೆ. ಎಲ್ಲರಿಗೂ ಬರಬೇಕು ಎನ್ನುವುದು" ಅವರ ವಾದ. ಶ್ರೀ ವಿಶ್ವನಾಥರೆಡ್ಡಿಯವರು, "ಬರೀ agriculturist ಮೇಲೆ ನೀವು limit ಹಾಕಿದರೆ ಇದು ನ್ಯಾಯವಲ್ಲವೆಂದು" ಹೇಳಿದ್ದಾರೆ. ಶ್ರೀ ಹೆಚ್.ಸಿ. ಸಿದ್ದಪ್ಪನವರು, "Coffee plantation ಗೆ ವಿನಾಯಿತಿ ಕೊಟ್ಟ ಮೇಲೆ ಅಡಿಕೆಗೆ ಏತಕ್ಕೆ ಕೊಟ್ಟಿರುವುದಿಲ್ಲ, ತೆಂಗಿಗೆ ಏತಕ್ಕೆ ಕೊಟ್ಟಿರುವುದಿಲ್ಲ. ಕೇವಲ ಕಾಫಿಗೆ ಮಾತ್ರ ಏತಕ್ಕೆ ವಿನಾಯಿತಿ ಕೊಟ್ಟಿದ್ದೀರಿ, ಕೊಡಿ" ಎಂದು ಹೇಳಿದ್ದಾರೆ. ಅದೇ ರೀತಿ ಸನ್ಮಾನ್ಯ ಆರ್.ವಿ. ದೇಶಪಾಂಡೆಯವರು 1990ರಲ್ಲಿ ನಡೆದಂತಹ ವಿಧಾನಸಭಾ ಚರ್ಚೆಯಲ್ಲಿ ಮಾತನಾಡುತ್ತಾ, "ಇವೊತ್ತಿನ ದಿವಸ ಕಾನೂನಿಗೆ ಮತ್ತೊಂದು amendment ಮಾಡಿದ್ದೀರಿ. 12 ಸಾವಿರ income limit ಇತ್ತಲ್ಲ, ಅದು non-agricultural land ಅನ್ನು acquire ಮಾಡಬೇಕಾದರೆ income 12 ಸಾವಿರ ಇದ್ದರೆ ಮಾಡುವುದಕ್ಕೆ ಬರುತ್ತದೆ. ಆದುದರಿಂದ, ಅದನ್ನು 50 ಸಾವಿರ ಮಾಡಿದ್ದೀರಿ. ಸಂತೋಷ" ಎಂದು ಸಂತೋಷ ವ್ಯಕ್ತ ಮಾಡಿದ್ದಾರೆ. ಆದರೆ, "I am going one step forward and saying that this section is redundant." ಇದರಲ್ಲಿ ಏನೂ ಅರ್ಥ ಇರುವುದಿಲ್ಲ. ಇದನ್ನು ತೆಗೆದುಹಾಕಿ ಎಂದು ಅವರು ಹೇಳಿದ್ದಾರೆ. ಯಾವುದನ್ನು ಎಂದರೆ, 79(ಎ)(ಬಿ) ಯನ್ನು ತೆಗೆದುಹಾಕಬೇಕೆಂದು" ಶ್ರೀ ದೇಶಪಾಂಡೆಯವರು ಹೇಳಿದ್ದಾರೆ. ಅದರಿಂದ ಇವೊತ್ತಿನ ದಿವಸ ಹಳ್ಳಿಗಳಲ್ಲಿ ಭೂಮಿ ಸಾಗುವಳಿ ಮಾಡುವುದಕ್ಕೆ ಜನ ಸಿಗುತ್ತಿಲ್ಲ. ಈಗ ತಾವು ಏನು ಲಿಮಿಟ್ ಹಾಕುತ್ತಿದ್ದೀರಿ. ಇದರಿಂದ ಒಳ್ಳೆಯದಾಗುವುದಿಲ್ಲ. 79(ಎ)(ಬಿ) ತೆಗೆದುಹಾಕಬೇಕೆಂದು ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು 79(ಎ)(ಬಿ) ಅಲ್ಲ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ನಡೆದಿರುವಂಥ ಚರ್ಚೆಯನ್ನು ಉಲ್ಲೇಖಿಸಿ ಮಾತನಾಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು agricultural income ತೆಗೆದುಹಾಕಬೇಕೆಂದು ಹೇಳಿದ್ದಾರೆ. Other than agricultural income 12 ಸಾವಿರ ಇದ್ದದ್ದನ್ನು 50 ಸಾವಿರ ಮಾಡಿದಾಗ, ಅದನ್ನು ಸ್ವಾಗತ ಮಾಡಿ ಇದು redundant ಇದೆ Other than agricultural income may be anything ಎನ್ನುವ ಅರ್ಥ ಅದು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಮತ್ತೊಮ್ಮೆ ಓದುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರು ಹೇಳುವುದನ್ನು ಪೂರ್ತಿ ಕೇಳಿದರೆ ತಮಗೆ ಅರ್ಥವಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, I can understand very well.

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ದೇಶಪಾಂಡೆಯವರು ಇನ್‌ಕಮ್ ಬಗ್ಗೆ ಸ್ವಾಗತ ಮಾಡಿದ್ದಾರೆ. ಅದಾದ ಮೇಲೆ, "one step forward ಹೋಗುತ್ತೇನೆ ನಾನು, ಈ ಕಾಯಿದೆ ಇದೆಯಲ್ಲ ಅದನ್ನು ತೆಗೆದುಹಾಕಿ" ಎಂದು ಹೇಳಿದ್ದಾರೆ. ಇದರ ಕಾಪಿಯನ್ನು ನಾನು ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಇದು ಬಹಳ ಮುಖ್ಯ. ಅದೇನೆಂದರೆ, ಆಗಲೇ ಮಾನ್ಯ ಸದಸ್ಯರು ಮಾತನಾಡುತ್ತಾ, ಪ್ರೊ: ನಂಜುಂಡಸ್ವಾಮಿಯವರು ಎಂದು quote ಮಾಡಿದರು. ಅವರು ನಂಬರ್ ಒನ್ ರೈತ ನಾಯಕರು. ಅವರು ರೈತ ನಾಯಕರೇ, ಎಂದು ಅವರ ಬಗ್ಗೆ ಯಾರೂ ಮಾತನಾಡುವ ಪ್ರಶ್ನೆಯೇ ಇಲ್ಲ. ನನಗನ್ನಿಸುವ ಪ್ರಕಾರ ಅದರ ಬಗ್ಗೆ doubt ಸಹ ಇಲ್ಲ. ಆ ರೀತಿಯ ಹೋರಾಟಗಾರ ಮುಖಾಂತರ ಬಂದಂತಹವರು. ಅವರು ಅಂದಿನ ವಿಧಾನಸಭೆಯಲ್ಲಿ ಮಾತನಾಡುತ್ತಾ, "ಈ ದೇಶದಲ್ಲಿ ನಾವು ಜನರಿಗೂ ಉದ್ಯೋಗ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಅದನ್ನು ನೇರವಾಗಿ ಉಲ್ಲಂಘನೆ ಮಾಡುತ್ತಿದ್ದೇವೆ. ಯಾವುದರ ಬಗ್ಗೆ ಎಂದರೆ, ನಾನು 79(ಎ)(ಬಿ) ಬಗ್ಗೆಯೇ ಮಾತನಾಡುತ್ತಿದ್ದೇನೆ. ಈ ದೇಶದಲ್ಲಿ ಜನರಿಗೆ ಏನು ಉದ್ಯೋಗ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ, ಅದನ್ನು ನೇರವಾಗಿ ಉಲ್ಲಂಘನೆ ಮಾಡುತ್ತಿದ್ದೇವೆ. ಆದುದರಿಂದ, ಈ 12 ಸಾವಿರ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ 50 ಸಾವಿರ ಎಂಬುದು ಏನಿದೆ ಅದು ಸಂಪೂರ್ಣ ಅಪ್ರಸ್ತುತವಾಗಿದೆ. ಹಾಗಾಗಿ, ಇದನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ನಾನ ಕೇಳಿಕೊಳ್ಳುತ್ತಿದ್ದೇನೆ. ಭಾರತದ ಸಂವಿಧಾನದ ಮೂಲಭೂತ ಹಕ್ಕಿಗೆ ಸಂಬಂಧಪಟ್ಟ Article 19(1)(g) ಪ್ರಕಾರ ಈ ದೇಶದ ಯಾವುದೇ ನಾಗರಿಕನಿಗೆ ಅವನು ಉದ್ಯೋಗ ಮಾಡುವುದಕ್ಕೆ ಅಂದರೆ, ಆತ ಯಾವುದೇ ಉದ್ಯೋಗ ಬೇಕಾದರೂ ಮಾಡಬಹುದು. ವ್ಯವಸಾಯ ಮಾಡಬಹುದು, ವ್ಯಾಪಾರ ಮಾಡಬಹುದು, ಏನಾದರೂ ಕೆಲಸಕ್ಕೆ ಹೋಗಬಹುದು, ಯಾವುದಾದರೂ ಉದ್ಯೋಗ ಮಾಡುವಂತಹ ಅಧಿಕಾರ ಇದೆಯಲ್ಲ ಆರ್ಟಿಕಲ್ 19 ಅನ್ನು ಉಲ್ಲಂಘನೆ ಮಾಡುತ್ತಿದ್ದಾರೆಂದು ರೈತ ಸಂಘದ ನಾಯಕರು 79(ಎ) (ಬಿ) ಅನ್ನು restrict ಮಾಡಿದಾಗ ಹೇಳಿದ್ದಾರೆ. ಇದೆಲ್ಲವೂ ರೆಕಾರ್ಡ್‌ನಲ್ಲಿರುವುದನ್ನು ನಾನು ಹೇಳುತ್ತಿದ್ದೇನೆ. ಅವರಿಗಿಂತಲೂ ಬೇರೆ ಯಾರೂ ರೈತ ನಾಯಕರಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 79(ಎ)(ಬಿ) ಎಂದು ಹೇಳಬಾರದು. ಅದರಲ್ಲಿ ಏನು ಇದೆ, ಅದನ್ನು ಮಾತ್ರ ಓದಲಿ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಅದು ಯಾವುದಕ್ಕೆ ಪುನಃ ಕೇಳುತ್ತಾರೆ. ಅದಕ್ಕಾಗಿ ನಾನು ಮೊದಲೇ ಹೇಳಿದೆನು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು 79(ಎ)(ಬಿ) ಅಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು 79(ಎ)(ಬಿ) ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಇದನ್ನು ಹೊರತುಪಡಿಸಿ ಬೇರೆ ಏನೂ ಮಾತನಾಡುವುದಿಲ್ಲ. ನಾನು ಇದನ್ನು ಬಿಟ್ಟು ಎಲ್ಲೆಲ್ಲಿಯೋ ಹೋಗುವುದಿಲ್ಲ. ನಾನು ಓದುತ್ತಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ. ಅದು ರೆಕಾರ್ಡ್‌ನಲ್ಲಿದೆ, ಅದನ್ನು ಅವರು ಅಪ್ಲೈ ಮಾಡಿ ತೆಗೆದುಕೊಳ್ಳಲಿ. ನಾನು ಹೇಳಿರುವುದರಲ್ಲಿ ತಪ್ಪಿದ್ದರೆ ನಾನೇ ಸಭಾಪತಿಗಳ ಮುಂದೆ ವಿನಂತಿ ಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಶ್ರೀ ಆರ್.ವಿ. ದೇಶಪಾಂಡೆಯವರು ಪುನಃ ಪ್ರಸ್ತಾಪ ಮಾಡಿ, "ಇವರೇನು point raise ಮಾಡಿದ್ದಾರಲ್ಲಾ ಅದು very serious point. ಇದು ಮಹಾರಾಷ್ಟ್ರ, ಗೋವಾ ಎಲ್ಲಿಯೂ ಇರುವುದಿಲ್ಲ. ಅಂದರೆ, income limit ತೆಗೆಯಿರಿ ಎಂದು ಏನು ಹೇಳುತ್ತಿದ್ದಾರೆ, ಅದು ಬಹಳ ಮುಖ್ಯವಾದದ್ದು. ಅಂದರೆ, income limit ತೆಗೆದುಹಾಕಬೇಕೆಂದು ಹೇಳಿದ್ದಾರೆ. ಇದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ ಎಲ್ಲಿಯೂ ಇರುವುದಿಲ್ಲ. Seriously ಇದರ ಬಗ್ಗೆ ನೋಡಿ" ಎಂದು ಹೇಳಿದ್ದಾರೆ. ಇನ್ನೂ ಶ್ರೀ ಬಿ.ಹೆಚ್.ಬನ್ನಿಕೋಡ್‌ರವರು ಹೇಳಿದ್ದಾರೆ. ಅದೇನೆಂದರೆ, "ಇದು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುವ ಕಾಯಿದೆ, ಆದುದರಿಂದ ಇದನ್ನು ದಯಮಾಡಿ ತೆಗೆಯಬೇಕು. ಗ್ರಾಮಾಂತರ ಪ್ರದೇಶದ ಜನರಿಗೆ ಹಾಗೂ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತಿದೆ ಮತ್ತು ಹೊಸ ವ್ಯವಸಾಯ ಮಾಡುವವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಮಾನ್ಯ ಸಚಿವರು ಒಳ್ಳೆಯ ಮನಸ್ಸು ಮಾಡಿ, ಇದನ್ನು ತೆಗೆದುಹಾಕಿ. ಇದರಿಂದಾಗಿ, ಎಲ್ಲರಿಗೂ ನ್ಯಾಯ ಸಿಗುತ್ತದೆ. ನಾನು ಹೇಳುತ್ತಿದ್ದೇನೆಂದು" ಹೇಳಿದ್ದಾರೆ. ಶ್ರೀ ಏಕಾಂತಯ್ಯ, ಚಿತ್ರದುರ್ಗ ಶಾಸಕರು ಮಾತನಾಡುತ್ತಾ, "ಇದು ಭ್ರಷ್ಟಾಚಾರಕ್ಕೆ ಒಂದು ದಾರಿ ಮಾಡಿಕೊಟ್ಟಿದೆ. ಈ ನಿಯಮವನ್ನು ತಿದ್ದುಪಡಿ ಮಾಡಿ" ಎಂದು ಹೇಳಿದ್ದಾರೆ. ಅರಸೀಕರೆ ಕ್ಷೇತ್ರದ ಶಾಸಕರಾದ ಶ್ರೀ ಶಿವಲಿಂಗೇಗೌಡರು, "ಈಗ ನಾವೇ ಏನಾದರೂ ಇಷ್ಟಪಟ್ಟು 5 ಎಕರೆ ಜಮೀನು ಎಲ್ಲಿಯಾದರೂ ತೆಗೆದುಕೊಂಡರೆ, ಒಂದು ಫಾರ್ಮ್‌ಹೌಸ್ ಮಾಡಿಕೊಂಡು ಜೀವನ ಮಾಡಬೇಕಾದರೆ, ಆ ಜಮೀನನ್ನು ಬೇರೆಯವರ ಹೆಸರಿಗೆ ಬರೆಯಬೇಕು. ಇದು ಒಂದು ರೀತಿ ಕಳ್ಳತನ ಮಾಡಿಕೊಂಡು ಜೀವನ ಮಾಡಬೇಕು. ಇದುವರೆವಿಗೂ 79(ಎ)(ಬಿ)ಯಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಆ ಪ್ರಕರಣವನ್ನು ದಾಖಲೆ ಮಾಡಿಕೊಳ್ಳುವುದಿಲ್ಲ, ತೋರಿಸಿ, ತೋರಿಸಿ, ತೋರಿಸಿ ದುಡ್ಡು ಕಿತ್ತುಕೊಳ್ಳುತ್ತಾರೆ. ನಿಮ್ಮ ಮುಂದೆ 79(ಎ)(ಬಿ) ಇದೆ ನೋಡಿ, ಅದನ್ನು ತೋರಿಸಿ, ತೋರಿಸಿ ದುಡ್ಡು ಕಿತ್ತುಕೊಳ್ಳುತ್ತಾರೆ" ಎಂದು ಹೇಳಿರುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಚಿವರೇ, ನಿಮ್ಮದು ಹೇಳಿ. ಅವರ ವಿಚಾರ ಬಿಡಿ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಅವರು ಯಾರು ನಮ್ಮ ಲೀಡರ್‌ಗಳಲ್ಲವೇ?

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವರು ನಮ್ಮ ಲೀಡರ್‌ಗಳೇ. ಈ ವಿಧೇಯಕದ ಬಗ್ಗೆ ತಮ್ಮ ವಿಚಾರ ಹೇಳಿ.

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಈಗ ತಾವೆಲ್ಲರೂ...

**(ಗೊಂದಲ)**

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಯಾರ್‍ಯಾರು ಮಾತನಾಡಿದ್ದಾರಲ್ಲ ಅವರ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ಬೇರೆ ಯಾರು ಮಾತನಾಡಿದ್ದಾರೆ... ಸದನದಲ್ಲಿ ಮಾತನಾಡಿರುವುದರಿಂದ...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದನ್ನು ಕೇಳುವುದಕ್ಕೆ ನಾಳೆ ಸಂಜೆಯವರೆಗೂ ತಯಾರಿದ್ದೇವೆ. ಹಾಗಾಗಿ, ಅಂದಿನ ದಿನ ಆ ವಿಷಯದ ಬಗ್ಗೆ ಯಾರ್‍ಯಾರು ಮಾತನಾಡಿದ್ದಾರೆ ಎಂಬುದನ್ನು ಅವರು ಹೇಳಲಿ. ಅದನ್ನು ಕೇಳುವುದಕ್ಕೆ ನಾವೆಲ್ಲರೂ ತಯಾರಾಗಿದ್ದೇವೆ. ದಯಮಾಡಿ, ಮಾನ್ಯ ಸದಸ್ಯರು ಸುಮ್ಮನೆ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಚಿವರೇ, ಒಂದು ನಿಮಿಷ. ಈಗ ತಾವು ಏನು ಹೇಳುತ್ತಿದ್ದೀರಿ..?

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಚರ್ಚೆ ಮುಗಿಸುವುದಕ್ಕೆ ನಾನು ತಯಾರಿದ್ದೇನೆ. ಅದಕ್ಕೆ ನನ್ನ ಅಭ್ಯಂತರವಿಲ್ಲ. ಮಾತನಾಡಬೇಕೆಂದು ಹೇಳಿದ್ದರಿಂದ ನಾನು ಮಾತನಾಡಿದ್ದೇನೆ. ಈ ಬಗ್ಗೆ ಚರ್ಚೆ ಬೇಡವೆಂದು ಹೇಳಿದರೆ, ಅದನ್ನು ನಿಲ್ಲಿಸಿ ಬಿಲ್ ಮೂವ್ ಮಾಡುವುದಕ್ಕೆ ನಾನು ತಯಾರಿದ್ದೇನೆ. **(ಗೊಂದಲ)** ಬೇಡವೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು, ಎರಡೆರಡು ಬಾರಿ ಅಂದರೆ, ಈ ಹಿಂದೆ ವಿಧೇಯಕದ ಬಗ್ಗೆ 15 ನಿಮಿಷ ಮಾತನಾಡಿ, ಈಗ 30 ನಿಮಿಷ ಮಾತನಾಡಿದ್ದಾರೆ. ನಾನು ಇನ್ನೂ 15 ನಿಮಿಷ ಮಾತ್ರ ಮಾತನಾಡಿದ್ದೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, justification ಕೇಳಿದಾಗ ಮಾನ್ಯ ಸಚಿವರು ಇದೆನ್ನೆಲ್ಲಾ ಕೊಡಬೇಕಾಗುತ್ತದೆ.

**ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಚರಿತ್ರೆ ಬಹಳ ಮುಖ್ಯ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಹೆಸರು ಹೇಳಬಾರದೆಂದು ಹೇಳಿದ್ದಾರೆ. ಹಾಗಾಗಿ, ಮುಂದೆ ಹೇಳುವಾಗ ಅವರುಗಳ ಹೆಸರು ಹೇಳುವುದಿಲ್ಲ. ಇನ್ನು ಮುಂದೆ ಹೇಳುವವರ ಹೆಸರು ಹೇಳುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಏತಕ್ಕೆ ಹೆಸರು ಹೇಳುವುದಿಲ್ಲ?

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಅವರು ಬೇಜಾರು ಮಾಡಿಕೊಳ್ಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಬೇಜಾರು ಮಾಡಿಕೊಳ್ಳುವುದಿಲ್ಲ. ಹಾಗಾಗಿ, ಹೆಸರು ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಯಾರ್‍ಯಾರು ಏನೇನು ಹೇಳಿದ್ದಾರೆಂದು ನಾವು ತಿಳಿದುಕೊಳ್ಳಬೇಕು ಮತ್ತು ಯಾರ್‍ಯಾರು ಹೇಗೆ ಇದ್ದರೆಂದು ನಾವು ತಿಳಿದುಕೊಳ್ಳೋಣ. ಹಾಗಾಗಿ, ಅವರ ಹೆಸರು ಹೇಳಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿದ್ದಾರೆಂದು ಈ ನಾಡಿನ ಜನತೆಗೆ ಗೊತ್ತಾಗಲಿ.

**(ಗೊಂದಲ)**

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಶ್ರೀ ಎಸ್. ರವಿಯವರು...

**(ಗೊಂದಲ)**

(ಮುಂದುವರೆದಿದೆ...)

(1021)08.12.2020/4.20/ವೈಎಲ್–ಎಂಡಿ(ವಿಕೆ)

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೆಸರನ್ನು ಹೇಳುವುದಕ್ಕೆ he does not require a right. ಏಕೆಂದರೆ, ಅವರು ಸಹ ಇನ್ನೊಂದು ಸದನದ ಸದಸ್ಯರಾಗಿದ್ದಾರೆ. He has spoken on the same issue. ಈಗ ಅವರು ಸಹ ಸದಸ್ಯರಾಗಿರುವುದರಿಂದ ಹೆಸರನ್ನು ಹೇಳುವುದಕ್ಕೆ no bar ಎಂದು ಹೇಳಲು ಇಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಕಲಂ "79ಎ ಮತ್ತು 79ಬಿ" ಸಲುವಾಗಿ ಕಾನೂನನ್ನು ಜಾರಿಗೆ ತಂದಿದ್ದು, ಕಲಂ "79ಎ ಮತ್ತು 79ಬಿ" ಏನಿದೆ ಅದು ಓಬಿರಾಯನ ಕಾಲದ ಕಾನೂನಾಗಿದ್ದು, ಅದನ್ನು ಕಿತ್ತು ಹಾಕಿ ಎಂದು ಹೇಳಿದ್ದಾರೆ. ಕಲಂ "79ಎ ಮತ್ತು 79ಬಿ" ಪ್ರಕರಣವು Assistant Commissioner ರವರು ಮತ್ತು ತಹಸೀಲ್ದಾರ್‌ರವರು ದುಡ್ಡು ಮಾಡಿಕೊಳ್ಳುವುದಕ್ಕಾಗಿ ಮಾಡಿರುವ ಕಾನೂನು ಎಂದು ಇನ್ನೂ ಹಲವಾರು ವಿಚಾರವನ್ನು ಹೇಳಿದ್ದಾರೆ. ಆದರೆ, ಇಷ್ಟಕ್ಕೆ ನನ್ನ ಮಾತನ್ನು ಮುಗಿಸುತ್ತೇನೆ. ಹಾಗೆಯೇ ನನಗೂ ಬಹಳ ಬೇಕಾಗಿರುವಂಥ ಅಧ್ಯಕ್ಷರು. ಅವರು ಹೇಳಿರುವ ಮಾತು ಏನೆಂದರೆ,...

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಧ್ಯಕ್ಷರ ಹೆಸರು ಏನೆಂಬುದನ್ನು ಹೇಳಬೇಕು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಅವರ ಹೆಸರು ಗೊತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹೆಸರು ಗೊತ್ತಿಲ್ಲವೆಂದರೆ ಹೇಗೆ? ಹೆಸರು ಹೇಳಲು ಮಾನ್ಯ ಸಚಿವರಿಗೆ ಧೈರ್ಯ ಇಲ್ಲವೇ? ಹೆಸರನ್ನು ಹೇಳಲಿ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಬೆಳಗ್ಗೆ ನಾನು ಮಾತನಾಡಿದಾಗ ಈ ಸದನದ ಮಾನ್ಯ ಸದಸ್ಯರುಗಳು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಹಾಗಾಗಿ ನಾನು ಮತ್ತೆ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆಪಾದನೆ ಪ್ರಶ್ನೆ ಬಂದಾಗ ಮಾನ್ಯ ಸಚಿವರು ಉಲ್ಲೇಖ ಮಾಡಿದರೆ ಅದರಲ್ಲಿ ತಪ್ಪೇನಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಯಾರು ಅಧ್ಯಕ್ಷರಿದ್ದಾರೆ ಅವರು ಸಹ ಈ ಸದನದ ಸದಸ್ಯರಾಗಿದ್ದು ಅವರ ಹೆಸರನ್ನು ಹೇಳಲಿ. ಒಂದು ವೇಳೆ ಬೇರೆ ಸದನದ ಸದಸ್ಯರಾಗಿದರೆ ಹೇಳುವ ಹಾಗಿಲ್ಲ.

**ಶ್ರೀ ಆರ್.ಅಶೋಕ್:–** ಮಾನ್ಯ ಹರಿಪ್ರಸಾದ್‌ರವರೆ, ಮಾನ್ಯ ಮರಿತಿಬ್ಬೇಗೌಡರು ಕೇಳಿದ್ದಾರೆ ಎಂದು ನಾನು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಿಮ್ಮ ಮಾತಿಗೆ ಬೆಲೆ ಕೊಟ್ಟಿದ್ದೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನಮ್ಮ ಮಾತಿಗೆ ಬೆಲೆ ನೀಡುವುದಲ್ಲ. ಅದು ಈ ಸದನದ ಸಂಪ್ರದಾಯ. ಈ ಸದನಕ್ಕೆ ಬಂದಮೇಲೆ ಅವರನ್ನು defend ಮಾಡಿಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಇಲ್ಲದೇ ಇದ್ದಾಗ ಅವರ ಮೇಲೆ ಆಪಾದನೆ ಮಾಡಿದರೆ ಸಮರ್ಥನೆ ಮಾಡಿಕೊಳ್ಳಲು ಅವರು ಇರುವುದಿಲ್ಲ. ಮಾನ್ಯ ಸಚಿವರು ಪತ್ರಿಕೆಯಲ್ಲಿ ಬಂದಿರುದ ಹೇಳಿಕೆಯನ್ನು refer ಮಾಡುತ್ತಿಲ್ಲ. ಸದನದಲ್ಲಿರುವ records ನ್ನು refer ಮಾಡುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ context ನಲ್ಲಿ ಹೇಳಿದ್ದಾರೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಹಾಗಾಗಿ ಯಾವ context ಹೇಳಿದ್ದಾರೆ ಎಂಬುದನ್ನು defend ಮಾಡಬೇಕು. Defend ಮಾಡಿಕೊಳ್ಳುವ ಶಕ್ತಿ ಇಲ್ಲವೆಂದ ಮೇಲೆ defend ಮಾಡಿಕೊಳ್ಳಲು ಆಗುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, defend ಮಾಡಿಕೊಳ್ಳುವುದಕ್ಕೆ ಮಾನ್ಯ ಹರಿಪ್ರಸಾದ್‌ರವರು ಸದನದಲ್ಲಿದ್ದಾರೆ ಅಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, defend ಮಾಡಿಕೊಳ್ಳಬೇಕಾದಂಥ ಅವರು ಅಲ್ಲಿ ಕುಳಿತಿರುವಾಗ ನಾವೇ defend ಮಾಡಿಕೊಳ್ಳುವಂಥ ಪರಿಸ್ಥಿತಿ ಇದೆ. ಯಾರ್ಯಾರು ಏನೇನು ಹೇಳಿದ್ದಾರೆ ಎಂಬುದು ನಮಗೂ ಗೊತ್ತಾಗಬೇಕಲ್ಲವೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಅವರ ಮಾತಿಗೆ ಗೌರವ ನೀಡುತ್ತಿದ್ದು, ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಯಾರೆಂಬುದನ್ನು ಬೆಳಗ್ಗೆ ಹೇಳಿದ್ದು, ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಗೆ ಸಂಬಂಧಿಸಿದಂತೆ,... ದಿನಾಂಕ: 03.01.2014 ರಂದು ಯಾವ ಸರ್ಕಾರ ಅಧಿಕಾರದಲ್ಲಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಮ್ಮ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿತ್ತು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಹೌದು. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದಂಥ ಸಂದರ್ಭದಲ್ಲಿ ಈ ವಿಚಾರವಾಗಿಯೇ ಒಂದು ಕಮಿಟಿ ನೇಮಕವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. ಕ್ಯಾಬಿನೆಟ್ ಸಬ್-ಕಮಿಟಿ ನೇಮಕವಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿತ್ತು ಎಂದು ಮಾನ್ಯ ಸಚಿವರು ಧೈರ್ಯವಾಗಿ ಹೇಳಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ Cabinet Sub-Committee ಯವರು ಒಂದು ವರದಿ ನೀಡುತ್ತಾರೆ. ಈ Cabinet Sub-Committee ಯಲ್ಲಿ 6 ಜನ ಸದಸ್ಯರಿರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I am also one of them.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರು ಏನೇ ಮಾತನಾಡಿದರೂ ಪ್ರತಿಯೊಂದು ಪಾಯಿಂಟ್‌ಗೂ defend ಮಾಡಿಕೊಳ್ಳುವ ಸಾಮರ್ಥ್ಯ ನನಗೆ ಇದೆ. ಶ್ರೀನಿವಾಸ್ ಪ್ರಸಾದ್‌ರವರು ಈ ಸಮಿತಿಯ ಅಧ್ಯಕ್ಷರಾಗಿದ್ದರು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾಜಿ ಸಚಿವರುಗಳಾದ ಶ್ರೀ ರಾಮಲಿಂಗಾ ರೆಡ್ಡಿ, ಶ್ರೀ ಟಿ.ಬಿ.ಜಯಚಂದ್ರ ಹಾಗೂ ಶ್ರೀ ಆರ್.ಬಿ.ದೇಶಪಾಂಡೆ ಇವರೆಲ್ಲರೂ Cabinet Sub-Committee ಯಲ್ಲಿ ಪಾಲ್ಗೊಂಡಿದರು. ಆ Cabinet Sub-Committee ಯಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961, ಕಲಂ 79ಎ ಮತ್ತು 79ಬಿ ಗೆ ಸಂಬಂಧಿಸಿದಂತೆ ಈಗಾಗಲೇ Karnataka Town and Country Planning Act ಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಭೂ ಉಪಯೋಗಕ್ಕೆ Master Plan ಪೂರ್ವನಿಯುಕ್ತವಾಗಿದೆ. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ಕ್ಕೆ ಸೂಕ್ತ ತಿದ್ದುಪಡಿ ತಂದು ನಗರ ಪ್ರದೇಶಗಳಿಂದ ಕಲಂ "79ಎ ಮತ್ತು 79ಬಿ" ಕಾಯ್ದೆಗೆ ಅವಕಾಶಗಳಿಂದ ವಿನಾಯಿತಿ ನೀಡಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಚಿಂತನೆಯಾಗಿದೆ. ನಾನು ನಗರ ಪ್ರದೇಶಗಳಿಗೆ ಸಂಬಂಧಿಸಿದ ವಿಚಾರ ಹೇಳುತ್ತಿಲ್ಲ. ಈಗಾಗಲೇ ಮಾನ್ಯ ಸದಸ್ಯರು ಮಾತನಾಡಿರುವುದಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆ. ಇದು ನಮ್ಮ ಚಿಂತನೆಯಾಗಿಲ್ಲ. ನಾವು ಸ್ವಲ್ಪ ಮುಂದೆ ಹೋಗಿದ್ದೇವೆ ಅಷ್ಟೇ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ನಡೆದಿರುವಂಥ Cabinet Sub-Committee ವರದಿ ನನ್ನ ಹತ್ತಿರ ಇದೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದಕ್ಕೆ ನಾನು ಸ್ಪಷ್ಟೀಕರಣವನ್ನು ನೀಡುತ್ತೇನೆ. ಮಾನ್ಯ ಸಚಿವರು ಎಲ್ಲಿಯೋ ಒಂದು ಕಡೆ ಸದನದ ದಾರಿಯನ್ನು ತಪ್ಪಿಸುತ್ತಿದ್ದಾರೆ. ಯಾವ ರೀತಿ ಎಂದರೆ, ಇವತ್ತಿನ ದಿವಸ ಕಲಂ "79ಎ ಮತ್ತು 79ಬಿ" ಯನ್ನು ನಗರ ವ್ಯಾಪ್ತಿ ಎಂದರೆ, planning area ಒಳಗೆ ಬರುವುದಕ್ಕೆ exemption ನೀಡಿ ಎಂದು ಹೇಳಿರುವುದು. ಆದರೆ, ಮಾನ್ಯ ಸಚಿವರು ಅದನ್ನು ತೆಗೆದುಕೊಂಡು ಹೋಗಿ ಪ್ರಾರಂಭಗೊಂಡಿದೆ ಎಂದರೆ ಹೇಗೆ? Automatically CDP (Comprehensive Development Plan) ಬಂದಾಗ ಅದರೊಳಗೆ ಬರುವಂಥ ಭೂಮಿಗೆ exemption ನೀಡಿ ಎಂದು ಹೇಳುವಂತಹದಾಗಿದೆ. Area Planning Zone ಎಂದು ಏನು ಮಾಡಿದ್ದಾರೆ, ಅದರಡಿ ಬರುವುದಕ್ಕೆ ವಿನಾಯಿತಿ ನೀಡಿ ಎಂದು ಹೇಳಿದ್ದಾರೆ, ವಿನಃ ಗ್ರಾಮೀಣ ಭಾಗದಲ್ಲಿ ಬರುವುದಕ್ಕೆ ವಿನಾಯಿತಿ ನೀಡಿ ಎಂದು ಹೇಳಿಲ್ಲ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಚಿಂತನೆಯ ಉದ್ದೇಶ, ಕೂಸು ಆಗ ಹುಟ್ಟಿದ್ದು, ನಾಮಕಾರಣ ಈಗ ಮಾಡುವಂಥದಾಗಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕೈಗಾರಿಕೆಗಳಿಗೆ red carpet ಹಾಕಿದ್ದಾರೆ. ಕೈಗಾರಿಕೆಗಳು ಯಥೇಚ್ಛವಾಗಿ ಬೆಳೆಯುತ್ತಿದ್ದು, ರೈತರ ಜಮೀನನ್ನು ಖರೀದಿಸಿಕೊಂಡು ಏನೂ ಕೆಲಸ ಮಾಡದೇ ಹೋಗುವಂಥದಾಗಿದೆ. ಎರಡು ಸಾವಿರ ಎಕರೆ, ಮೂರು ಸಾವಿರ ಎಕರೆ ಎಂಬ ವಿಚಾರವಾಗಿ ಮಾತನಾಡುವಾಗ ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದಾಗ ಹಿಂದೆ 20 ಯೂನಿಟ್ ಕೈಗಾರಿಕೆ ಅಭಿವೃದ್ಧಿಗೆ ನೀಡುತ್ತಿದ್ದರು. ನಂತರ 2015ನೇ ಸಾಲಿನಲ್ಲಿ ಅದನ್ನು 40 ಯೂನಿಟ್‌ಗೆ ಹೆಚ್ಚಿಸಲಾಗಿತ್ತು. ಅದೇ ರೀತಿ ಶೈಕ್ಷಣಿಕ ಸಂಸ್ಥೆಗಳಿಗೆ 4 ಯೂನಿಟ್ ಇರುವುದನ್ನು 8 ಯೂನಿಟ್‌ಗೆ ಹೆಚ್ಚಿಸಲಾಗಿತ್ತು. ಧಾರ್ಮಿಕ ಉದ್ದೇಶಕ್ಕಾಗಿ 1 ಯೂನಿಟ್ ಇರುವುದನ್ನು 2 ಯೂನಿಟ್‌ಗೆ ಹೆಚ್ಚಿಸಲಾಗಿತ್ತು. ಈಗಾಗಲೇ ಶಿಕ್ಷಣದ ಬಗ್ಗೆ ಮಾನ್ಯ ಮರಿತಿಬ್ಬೇಗೌಡು ಅಭಿಪ್ರಾಯ ಕೇಳಿದ್ದು, ನಾನು ಅದಕ್ಕೆ ಉತ್ತರ ನೀಡಿದ್ದೇನೆ. ಹಾಗೆಯೇ 2014ನೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲಿನಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದಾಗ ಯಾವುದೇ ಕೃಷಿ ಜಮೀನನ್ನು ಸರ್ಕಾರದಿಂದ ಕಲಂ 109 ಪ್ರಕಾರ ಅನುಮತಿ ತೆಗೆದುಕೊಂಡು ಕೈಗಾರಿಕೆ, ಶಿಕ್ಷಣ, ಇತ್ಯಾದಿ ಉದ್ದೇಶಗಳಿಗಾಗಿ ಜಮೀನನ್ನು ಪಡೆದುಕೊಂಡ ಮೇಲೆ ಆ ಜಾಗವನ್ನು ಮತ್ತೆ ಸರ್ಕಾರಕ್ಕೆ ವಾಪಸ್ಸು ನೀಡಬೇಕಾಗಿತ್ತು. ಒಂದು ಸಲ grant ಆದ ಮೇಲೆ agricultural land ನಲ್ಲಿ provision ಇಲ್ಲ. ಕಲಂ "79ಎ ಮತ್ತು 79ಬಿ" ಪ್ರಕಾರ ಜಾಗ ತೆಗೆದುಕೊಳ್ಳುವ ಹಾಗಿಲ್ಲ. ಕೃಷಿ ಜಮೀನನ್ನು ತೆಗೆದುಕೊಂಡು ಕೈಗಾರಿಕಾ ಸಂಸ್ಥೆ, ಶಿಕ್ಷಣ ಸಂಸ್ಥೆ ಪ್ರಾರಂಭ ಮಾಡಿ ಅದರ ಕಥೆ ಮುಗಿದು ಹೋದರೆ ಅಥವಾ ಲಾಸ್ ಹೊಂದಿದರೆ ಮತ್ತೆ ಆ ಜಾಗವನ್ನು ಸರ್ಕಾರಕ್ಕೆ ವಾಪಸ್ಸು ನೀಡಬೇಕಾಗಿತ್ತು. ಒಂದು ವೇಳೆ ಹಾಗೆಯೇ ಮುಂದುವರೆಸಿಕೊಂಡು ಹೋಗುವುದಾದರೆ ಮುಂದುವರೆಸಿಕೊಂಡು ಹೋಗಬಹುದು. 2014ನೇ ಸಾಲಿನಲ್ಲಿ ಕಾಂಗ್ರೆಸ್ ಸರ್ಕಾರ ಅದಕ್ಕೊಂದು ತಿದ್ದುಪಡಿ ಜಾರಿಗೆ ತಂದು, ಯಾರ್‍ಯಾರು ಕೈಗಾರಿಕೆ ಸ್ಥಾಪನೆ, ಶಿಕ್ಷಣ ಸಂಸ್ಥೆ ಸ್ಥಾಪನೆ ಮಾಡಿರುತ್ತಾರೆ ಅಂಥವರು ಏನಾದರೂ ಲಾಸ್ ಹೊಂದಿದರೆ ಅದನ್ನು ರಿಯಾಲ್ ಎಸ್ಟೇಟ್‌ನವರಿಗೆ ಮಾರಾಟ ಮಾಡಬಹುದೆಂಬ ವಿಧೇಯಕವನ್ನು ಜಾರಿಗೆ ತಂದಿತು. ನಾವು ಅದನ್ನು ಬದಲಾವಣೆ ಮಾಡಿ, ಯಾವುದೇ ಕಾರಣಕ್ಕೂ ಇನ್ನೂ ಮುಂದೆ ರಾಜ್ಯದಲ್ಲಿ ಯಾವ ಉದ್ದೇಶಕ್ಕೆ ಭೂಮಿ ಪಡೆದುಕೊಂಡಿರುತ್ತಾರೆ, ಅದೇ ಉದ್ದೇಶಕ್ಕೆ ಮಾರಾಟ ಮಾಡಬೇಕು. ಬೇರೆ ಉದ್ದೇಶಕ್ಕಾಗಿ ಮಾರಾಟ ಮಾಡುವ ಹಾಗಿಲ್ಲ. ಅಂದರೆ ಜೀವನ ಪರ್ಯಾಂತ ಯಾವುದಕ್ಕೆ ಅನುಮೋದನೆ ಆಗಿರುತ್ತದೆ, ಅದಕ್ಕಾಗಿಯೇ ಮಾರಾಟ ಮಾಡಬೇಕು. ಬೇರೆ ಉದ್ದೇಶಕ್ಕೆ ಮಾರಾಟ ಮಾಡುವುದನ್ನು ಈ ವಿಧೇಯಕದಲ್ಲಿ ತೆಗೆದು ಹಾಕಲಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ವಿಧೇಯಕದಲ್ಲಿ ಏನಿದೆ ಎಂಬುದನ್ನು ಓದಿ ಹೇಳಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ಓದಿ ಹೇಳಿದ್ದೇನೆ ಅಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ವಿಧೇಯಕದಲ್ಲಿ ಏನು ಬದಲಾವಣೆ ಮಾಡಿದ್ದಾರೆ ಎಂಬುದನ್ನು ಓದಿ ಹೇಳಲಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರದವರು ಯಾವ ವರ್ಷದಲ್ಲಿ ಮಾಡಿದ್ದಾರೆ ಎಂಬುದನ್ನು ಹೇಳಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಕೇಳುವಂತಹ ಉಪಪ್ರಶ್ನೆ ಏನೇ ಇದ್ದರೂ ಉತ್ತರ ನೀಡುತ್ತೇನೆ. ನಾವು ಕೃಷಿ ಜಮೀನನ್ನು ಯಾವ ಉದ್ದೇಶಕ್ಕೆ ಖರೀದಿಸುತ್ತೇವೆಯೋ, ಅದೇ ಉದ್ದೇಶಕ್ಕೆ ಮಾರಾಟ ಮಾಡುವಂಥ ತಿದ್ದುಪಡಿ ತಂದಿದ್ದೇವೆ. ನಮ್ಮ ಉದ್ದೇಶವೇನೆಂದರೆ, ಕಲಂ "79ಎ ಮತ್ತು 79ಬಿ" ಪ್ರಕಾರ ಯಾವುದೇ ರೈತ,...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ವಿಸ್ತೃತವಾಗಿ ಓದಿ ಹೇಳಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಮುಟ್ಟುಗೋಲು ಹಾಕುವಂಥದಾಗಿದೆ. ಅದು ಕ್ರಮೇಣವಾಗಿ ಬೇರೆ ಕಾಯ್ದೆಯಡಿ ಬರುತ್ತದೆ. ಒಂದು ವೇಳೆ ಬೇರೆ ಉದ್ದೇಶಕ್ಕೆ ಜಮೀನು ನೀಡಿದರೆ, ಉಲ್ಲಂಘನೆಯಾಗಿದೆ ಎಂದು ಸರ್ಕಾರವೇ ವಾಪಸ್ಸು ತೆಗೆದುಕೊಳ್ಳುತ್ತದೆ. ಇದಕ್ಕೆ ಬಹಳ ವಿರೋಧ, ಪ್ರತಿರೋಧ ಬಂದಿದೆ. ದಿನಾಂಕ: 30 ಜೂನ್ 2020, ಮಂಗಳವಾರ ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಅನುಭವ ಮಂಟಪದಲ್ಲಿ ಬರೆದಿರುವ ಹಾಗೆ ರೈತರು ಹೇಳಿರುವುದನ್ನು ನಾನು ತಮ್ಮೆಲ್ಲರ ಮುಂದೆ ಹೇಳುತ್ತೇನೆ.

(ಮುಂದು)

(1022)08.12.2020/4.30/ಎಸ್‌ಕೆ-ಎಕೆ

**ಶ್ರೀ ಆರ್. ಅಶೋಕ್ (ಮುಂದು):**

"ಭೂ ಸುಧಾರಣೆ ಕೃಷಿಕನಿಗೆ ಶಕ್ತಿ ತುಂಬಲಿದೆ, ಭೂಮಿ ಮೌಲ್ಯ" ಎಂದು ಹೆಡ್ಡಿಂಗ್‌ನಲ್ಲಿ ದೊಡ್ಡದಾಗಿ ಪತ್ರಿಕೆಯಲ್ಲಿ ವರದಿಯಾಗಿದೆ. ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತಂದು, ಭೂಮಿ ಮಾರಾಟಕ್ಕಿದ್ದ ನಿಯಮಗಳನ್ನು ಸರಳೀಕರಿಸಿ, ಪ್ರಜಾವಾಣಿಯಲ್ಲಿ ರೈತ ಬರೆದಿರುವಂತಹ ಆರ್ಟಿಕಲ್ ಹಾಗೂ ಅವರ ಛಾಯಚಿತ್ರವನ್ನು ಸಹ ಹಾಕಿದ್ದಾರೆ. ಇವರ್‍ಯಾರು ಎನ್ನುವುದು ಗೊತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ,

**ಶ್ರೀ ಆರ್. ಅಶೋಕ:-** ತಾವು ಮಾತನಾಡುವಾಗ, ನಾನು ಏನೂ ಮಾತನಾಡಲಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಾನು yield ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರು ಮಾತನಾಡಲಿ, ಆದರೆ ...

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಭೂಮಿ ಬೆಲೆ ಬಂದರೆ, ರೈತನ ಜಮೀನು ಮಾರಾಟ ಮಾಡುತ್ತಾರೆ ಎನ್ನುವುದು ತಪ್ಪು ವಿಶ್ಲೇಷಣೆ. ರೈತನನ್ನು ಅತ್ಯಂತ ಕನಿಷ್ಠವಾಗಿ ಕಾಣುವ ಪರಿ ಇದು. ಅನ್ನ ಕೊಡುವ ಭೂಮಿ ಚಿನ್ನಕ್ಕಿಂತಲೂ ಹೆಚ್ಚು ಮೌಲ್ಯ ಹೊಂದಿರುತ್ತದೆ ಎಂಬ ಅರಿವು ರೈತನಿಗೆ ಇದೆ. ಭೂಮಿಗೆ ಬೆಲೆ ಬಂದರೆ, ರೈತರ ಜೀವನ ಮಟ್ಟ ಸುಧಾರಣೆಯಾಗುತ್ತದೆಂಬ ಸತ್ಯವನ್ನು ಅರಿಯಬೇಕು. ಆದ್ದರಿಂದ, ಪತ್ರಿಕೆಯಲ್ಲಿ ರೈತ ಬರೆದಿರುವುದರ ಬಗ್ಗೆ ನಾನು ಹೇಳಿದ್ದೇನೆ. ಅದೇ ರೀತಿ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕೀಯ ವಿಭಾಗದ ವಾಚಕರ ವಾಣಿಯಲ್ಲಿ ಕೃಷಿ ಭೂಮಿ ಸದ್ಬಳಕೆಯಾಗಲಿ ಎಂದು ಬರೆದಿರುವಂತಹದ್ದು. ಪ್ರಗತಿಪರ ಕೃಷಿ ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿದವರು ಕೂಡ ಈ ಕಾಯಿದೆಯಲ್ಲಿ ಕಠಿಣ ಅಂಶಗಳಿಂದಾಗಿ ಅದರಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈಗ ಆ ತಡೆ ನಿವಾರಣೆಯಾಗಿದೆ. ಇದನ್ನು ಕನ್ನಡಪ್ರಭ ಪತ್ರಿಕೆಯ editorial ನಲ್ಲಿ ಬರೆದಿರುವಂತಹದ್ದನ್ನು ನಾನು ಹೇಳುತ್ತಿದ್ದೇನೆ. 'ತಿದ್ದುಪಡಿಯಿಂದ ವಲಸೆಯ ಇಳಿಮುಖ ಸಂಭವ' ಎಂಬ ವರದಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗ್ರಾಮೀಣ ಭಾಗದಲ್ಲಿ ಹೋಗಿ ಸುಲಭವಾಗಿ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ. ಸಣ್ಣ ರೈತನು ಹಣದ ಆಸೆಗೆ ಬಿದ್ದು ಯಾರೂ ಭೂಮಿಯನ್ನು ಮಾರಾಟ ಮಾಡುವುದಿಲ್ಲ. ರೈತರಿಗೂ ಭೂಮಿಯ ಮೌಲ್ಯ ಗೊತ್ತಿದೆ. ಇದರಲ್ಲಿ ಯಾವುದೇ ರೀತಿಯ ಬಲವಂತವಾಗಿ ಜಮೀನನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೇ ಗ್ರಾಮೀಣ ಭಾಗದಲ್ಲಿ ಯುವ ಜನಾಂಗದವರು ನೆಲೆಸಿರುವ ಸ್ಥಳದಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ. ಯಾರೂ ಕೂಡ ಬೆಂಗಳೂರಿನ ನಗರ ಪ್ರದೇಶಕ್ಕಾಗಿ ವಲಸೆ ಹೋಗುವ ಪ್ರಮೇಯ ಇಲ್ಲ ಎಂಬ ಮಾತು ಕೇಳಿ ಬರುತ್ತದೆ. ನಮ್ಮ ಉದ್ದೇಶವಿರುವಂತಹದ್ದು, ಬೇರೆ ಬೇರೆ ದೇಶಗಳು ಎಂದರೆ, ಇಂಡೋನೇಷಿಯಾ ಈ ತರಹದ ಕೆಲವು ದೇಶಗಳಲ್ಲಿ, ಎಲ್ಲಿ ಕೃಷಿಯಲ್ಲಿ ಈಗ ಮಾವುಗಳನ್ನು ಬೆಳೆಯುತ್ತಾರೋ, ಅಂತಹ ಕಡೆಗಳಲ್ಲಿ ಮಾವಿನ ಹಣ್ಣಿನ ರಸವನ್ನು ತೆಗೆಯುವಂತಹ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಕೊಡುತ್ತಾರೆ. ಎಲ್ಲಿ ಟೊಮ್ಯಾಟೋ ಬೆಳೆಯುತ್ತಾರೋ, ಅಂತಹ ಕಡೆಗಳಲ್ಲಿ ketchup ಮಾಡುವಂತಹ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಕೊಡುತ್ತಾರೆ. ಮೊನ್ನೆ ನಾನು ಉಸ್ತುವಾರಿ ಇದ್ದಾಗ, ಮಂಡ್ಯ ಜಿಲ್ಲೆಯಲ್ಲಿ ಮೀಟಿಂಗ್‌ಗೆ ಹೋಗಿದ್ದೆ. ಅಲ್ಲಿ ಕಬ್ಬು ಹೆಚ್ಚು ಇಳುವರಿ ಬಂದಿದ್ದರಿಂದ, ಅದನ್ನು ನಾವು ಮಂಡ್ಯದಿಂದ ತಮಿಳುನಾಡಿಗೆ ಸಾಗಿಸಬೇಕಾಗಿತ್ತು. ಆಗ ನಾವು ಲೆಕ್ಕ ಹಾಕಿದರೆ, ಪೂರ್ತಿ transportation ಗೆ ಹೋಗುತ್ತಿದೆಯೋ ಹೊರತು, ರೈತನಿಗೆ ಒಂದೂ ನಯಾ ಪೈಸೆ ಹಣವೂ ಬರುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ transportation cost ಜಾಸ್ತಿಯಾಗುತ್ತಿದೆ. ಎಲ್ಲಿ ಕೃಷಿ ಇದೆಯೋ, ಅಂತಹ ಕಡೆಗಳಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳು ಬಂದರೆ, ನಿಜಕ್ಕೂ ಕೃಷಿ ಮತ್ತು ಕೈಗಾರಿಕೆಗಳ ನಡುವೆ ಹೊಂದಾಣಿಕೆ ಏರ್ಪಟ್ಟರೆ ರೈತನು ಉದ್ಧಾರವಾಗುತ್ತಾನೆ ಮತ್ತು ಉದ್ಯೋಗ ಸಿಗುತ್ತದೆ. ಬೆಂಗಳೂರು ಕಡೆ ವಲಸೆ ಹೋಗುವಂತಹದ್ದು ತಪ್ಪುತ್ತದೆ. ಸ್ಥಳೀಯವಾಗಿ ಅವನಿಗೆ ಉದ್ಯೋಗ ಸಿಗುವಂತಹದ್ದಾಗುತ್ತದೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಬಹಳ ಜನ ಬಂದು ಭೂಮಿಯನ್ನು ತೆಗೆದುಕೊಂಡಿದ್ದಾರೆ ಎಂದು ಪ್ರಮುಖವಾದ ಮಾತನ್ನು ಹೇಳಿದರು. ಈ ಹಿಂದೆ Section 79A, Section 79B ಕಾನೂನು ಇದ್ದಾಗ ತೆಗೆದುಕೊಂಡಿರುವಂತಹದ್ದನ್ನು ಅವರು ಹೇಳುವಂತಹದ್ದು. ಈಗಲೂ ತೆಗೆದುಕೊಳ್ಳಬಹುದು. ಈ ಹಿಂದೆಯೂ ತೆಗೆದುಕೊಂಡಿದ್ದಾರೆ. ಈ ಹಿಂದೆ ನಾನು ರಾಯಚೂರು ಜಿಲ್ಲೆಗೆ ಹೋಗಿದ್ದಾಗ, ಈ ಮಾತನ್ನು ಹೇಳಿದ್ದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ಒಂದೇ ನಿಮಿಷ. ಉದಾರಣೆಗೆ ಹೇಳುವುದಾದರೆ, ಸಿಂಧೂನೂರು ತಾಲ್ಲೂಕಿನಲ್ಲಿ ಸುಮಾರು ನಾಲ್ಕು ಲಕ್ಷ ಹದಿನೈದು ಸಾವಿರ ಎಕರೆ ಭೂಮಿಯಿದೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಸುಮಾರು ಎರಡು ಲಕ್ಷ ಭೂಮಿಯನ್ನು ಆಂಧ್ರಪದೇಶದವರು ತೆಗೆದುಕೊಂಡಿದ್ದಾರೆ.

**ಶ್ರೀ ಆರ್. ಅಶೋಕ್:-** ಈ ಹಿಂದೆ ಕಾನೂನಿದ್ದಾಗ, ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ, ಎಲ್ಲಿ ಕೃಷಿ ಇರುತ್ತದೆಯೋ, ಆ ಕೃಷಿ ಪ್ರದೇಶಗಳಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳು ಹೆಚ್ಚಾಗಿ ಬರಬೇಕು ಎನ್ನುವುದು ನಮ್ಮ ಉದ್ದೇಶ. ಈಗ KIADB (Karnataka Industrial Area Development Board) ಬಗ್ಗೆ ಹೇಳಿದರು. ಈಗ KIADB ನವರಿಗೆ ಎಲ್ಲಿ ಜಮೀನುಗಳು ಸಿಗುತ್ತದೆಯೋ, ಅಂತಹ ಕಡೆಗಳಲ್ಲಿ industrial layout ಗಳನ್ನು ಮಾಡುತ್ತಾರೆ. ಅಂದರೆ ಕೋಲಾರದಂತಹ ಪ್ರದೇಶದಲ್ಲಿ ಅಲ್ಲಿ ಹೆಚ್ಚು ಟೊಮ್ಯಾಟೊವನ್ನು ಬೆಳೆಯುತ್ತಾರೆ. ಅಲ್ಲಿ ಅವರು ಹೋಗಿ industrial layout ಗಳನ್ನು ಮಾಡುವುದಕ್ಕಾಗುವುದಿಲ್ಲ. ಅವರಿಗೆ ಎಲ್ಲಿ availability ಇದೆಯೋ, ಅಂತಹ ಕಡೆಗಳಲ್ಲಿ industrial layout ಗಳನ್ನು ಮಾಡುತ್ತಾರೆ. ಯಾರದರೂ ಹೋಗಿ ಕೈಗಾರಿಕೆಗಳನ್ನು ಮಾಡಬೇಕೆಂದರೆ, ಸಾಧ್ಯವೇ ಇಲ್ಲ. ಈಗ ನಾವು ಕಾನೂನನ್ನು ತಂದಿರುವುದರಿಂದ, ಅಲ್ಲಿ ಹೋಗಿ ಕೂಡ ಅವರು ಕೈಗಾರಿಕೆಗಳನ್ನು ಪ್ರಾರಂಭ ಮಾಡಬಹುದು. ಅದರ ಜೊತೆಗೆ ಕೃಷಿಯಲ್ಲಿ ಆಧುನಿಕತೆ ಬರಬೇಕು. ನಾನು ಹೇಳುವುದೇನೆಂದರೆ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳು agriculture

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

products export ಮಾಡುವುದರಲ್ಲಿ ನಮ್ಮ ರಾಜ್ಯಕ್ಕಿಂತ ಮುಂದಿದ್ದಾರೆ. ನಾವು ಆ ಮಟ್ಟಕ್ಕೆ ಹೋಗಬೇಕಾದರೆ, ನಮ್ಮ ರಾಜ್ಯದಲ್ಲಿ ಆಧುನಿಕ ತಂತ್ರಜ್ಞಾನಗಳು ಬರಬೇಕು. ಯಾರೊಬ್ಬ ವಿದ್ಯಾವಂತ ಸಿಟಿಯಿಂದ ಹಳ್ಳಿಗೆ ಹೋದರೆ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುತ್ತಾನೆ. ಆದ್ದರಿಂದ ಆಧುನಿಕ ತಂತ್ರಜ್ಞಾನ ಬರುವಂತಹ ದೃಷ್ಟಿಯಿಂದಲೂ ಕೂಡ ಇವತ್ತು ಹಳ್ಳಿಗಳ ಕಡೆ ವಿದ್ಯಾವಂತರು ಬರಬೇಕು ಎನ್ನುವುದು ನಮ್ಮ ಉದ್ದೇಶ. ಅದರ ಜೊತೆಗೆ purchase ಮಾಡುತ್ತಾರೆ ಎಂದರು. ಹೌದು ಹಳೆ ಮೈಸೂರು ಮತ್ತು ಬೆಳಗಾವಿ ಭಾಗವನ್ನು ನೋಡಿ. ಈ ಕಾಯಿದೆ ಇರುವುದಕ್ಕೋಸ್ಕರ; ಇವತ್ತು ಮಾನ್ಯ ಹರಿ ಪ್ರಸಾದ್‌ರವರಿಗೆ ಗೊತ್ತು, ನಮ್ಮ ಹೊಸೂರು ಎಂಬ ಊರಿನಲ್ಲಿ 'ತಳಿ' ಎನ್ನುವ ಪ್ರದೇಶವಿದೆ. 'ತಳಿ' ಎಂಬ ಪ್ರದೇಶ ಒಂದು ದೊಡ್ಡ ತಾಲ್ಲೂಕು. ಅಲ್ಲಿ ನಮ್ಮ ಕನ್ನಡದವರೇ ಜಾಸ್ತಿಯಿದ್ದಾರೆ. ಬೆಂಗಳೂರು ನಗರದಲ್ಲಿರುವಂತಹ ಬಹಳಷ್ಟು ಜನರು ಅಲ್ಲಿ ನೂರು ಎಕರೆ, ಇನ್ನೂರು ಎಕರೆ ಜಾಗವನ್ನು ತೆಗೆದುಕೊಂಡಿದ್ದಾರೆ.

**ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಬೆಂಗಳೂರು ಜಿಲ್ಲೆಯಿಂದ ಅಲ್ಲಿಗೆ ಸಮೀಪವಾಗುತ್ತದೆಯಾ.

**ಶ್ರೀ ಆರ್. ಅಶೋಕ್:–** ಹೌದು ತುಂಬಾ ಸಮೀಪ. ಬೊಮ್ಮನಹಳ್ಳಿ ದಕ್ಷಿಣದಿಂದ ತುಂಬಾ ಸಮೀಪ. ಒಂದೂವರೆ ಅಥವಾ ಮಕ್ಕಾಲು ಗಂಟೆಗಳ ಅವಧಿಯಲ್ಲಿ ಅಲ್ಲಿಗೆ ಹೊರಟು ಹೋಗುತ್ತಾರೆ. ಎಲ್ಲರೂ ಅಲ್ಲಿ ಹೋಗಿ ಜಮೀನು ತೆಗೆದುಕೊಂಡಿದ್ದಾರೆ. ನಮ್ಮ ಹಣ ಅಲ್ಲಿ ಹೋಯಿತು. ಈ ಕಡೆ restriction ಇರುವುದರಿಂದ ಮಹಾರಾಷ್ಟ್ರದ ಕಡೆ ಹೋಗಿದ್ದಾರೆ. ಆಂಧ್ರಕ್ಕೆ ಹೋಗಿದ್ದಾರೆ. ನಾನೊಬ್ಬನನ್ನು ಬೀದರ್‌ನಲ್ಲಿ ವಿಚಾರಿಸಿದಾಗ, 'ಸಾರ್, ನಾನು ಇಲ್ಲಿ ಕಾರ್ಖಾನೆ ಮಾಡಬೇಕಾಗಿಯಿತು, ಜಮೀನಿಗೆ ನಮ್ಮ KIADB ಯಲ್ಲಿ ಪ್ರಾಜೆಕ್ಟ್ ಮಾಡಿಲ್ಲ. ಅದಕ್ಕೆ ನಾನು ಏನು ಮಾಡಿದೆ ಎಂದರೆ, ನನ್ನ ಪಕ್ಕದ ಬಾರ್ಡರ್‌ನಲ್ಲಿಯೇ ಎರಡು ಕಿಲೋ ಮೀಟರ್ ದೂರದಲ್ಲಿ ಆಂಧ್ರವಿತ್ತು. ಅಲ್ಲಿ ನಾನು ಐದು ಎಕರೆ ಜಾಗವನ್ನು ತೆಗೆದುಕೊಂಡು ಕಾರ್ಖಾನೆಯನ್ನು ಮಾಡಿದ್ದೇನೆ.' ಎಂದು ಹೇಳಿದ. ಅವರು ದಿನ ಬೀದರ್ ಜಿಲ್ಲೆಯಿಂದ ಅಲ್ಲಿಗೆ ಹೋಗುತ್ತಾರೆ. ಈ ತರಹ ಏನೇನು ಅಡಚಣೆಗಳಿತ್ತೋ, ಅದನ್ನು ತೆಗೆದುಹಾಕುವ ದೃಷ್ಟಿಯಿಂದ ಕಾನೂನನ್ನು ತಂದಿರುವಂತಹದ್ದು. ಇನ್ನೊಂದು ಪ್ರಮುಖವಾಗಿ ಮಾನ್ಯ ದೇವರಾಜ ಅರಸುರವರು 'ಉಳುವವನೇ ಭೂಮಿಯ ಒಡೆಯ ಎಂಬ ಕಾಯಿದೆಯನ್ನು ಜಾರಿಗೆ ತಂದಿದ್ದು. ಆ ಕಾಯಿದೆ ಏನಿದೆಯಲ್ಲಾ, ನಾವು ಅದನ್ನು touch ಮಾಡಿಲ್ಲ. 'ಉಳುವವನಿಗೇ ಭೂಮಿ' ಎಂಬ ಕಾಯಿದೆ ಏನಿದೆಯೋ, ಆ ಕಾನೂನು ಹಾಗೆಯೇ ಇರುತ್ತದೆ. ಅದರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮೀಪಕ್ಕೂ ನಾವು ಹೋಗಿಲ್ಲ. ಎರಡನೆಯದಾಗಿ ಎಸ್‌ಸಿ, ಎಸ್‌ಟಿ ಗೆ ಸಂಬಂಧಿಸಿದಂತೆ PTCL (Prohibition of Transfer of Certain Lands) Act ಏನಿದೆಯೋ, ಇದಕ್ಕೂ ಮತ್ತು ಅದಕ್ಕೂ ಏನೂ ಸಂಬಂಧವಿಲ್ಲ. ಮೊದಲು ಕಾಯಿದೆ ಇರಲಿಲ್ಲ. Section 79A, Section 79B ಗೆ ಆ ಕಾಯಿದೆಯನ್ನು ಸೇರಿಸಿಬಿಟ್ಟಿದ್ದೇವೆ. Section 79A, Section 79B ಗೆ ಸಂಬಂಧಿಸಿದಂತೆ ಏನು ಕಾಯಿದೆಯನ್ನು ಮಂಡನೆ ಮಾಡಿದ್ದೀರಿ, ಅದರಲ್ಲಿ ಎಸ್‌ಸಿ, ಎಸ್‌ಟಿ ಜಮೀನುಗಳನ್ನು ಯಾವುದನ್ನೂ ಮುಟ್ಟುವ ಹಾಗಿಲ್ಲ. ಮೊದಲು ಹೇಗಿತ್ತೋ, ಹಾಗೆಯೇ retain ಮಾಡುವಂತಹದ್ದಕ್ಕೆ ಆ ನಿರ್ಬಂಧವನ್ನು ನಾವು ಹೇಳಿದ್ದೇವೆ. ಮತ್ತೆ ಈ ಹಿಂದೆ ಐವತ್ನಾಲ್ಕು ಎಕರೆ ಗರಿಷ್ಠವಾದುದ್ದು ಎಂಬ ನಿರ್ಬಂಧ ತಮ್ಮ ಸರ್ಕಾರದಲ್ಲೇನಿತ್ತು; ನಲವತ್ತಾದರೆ, ಒಂದು ಕುಟುಂಬಕ್ಕೆ ಇಪ್ಪತ್ತೇಳು ಎಕರೆ ಬರುತ್ತದೆ. ಒಂದು ಕುಟುಂಬ ಎಂದರೆ ಐದು ಜನರು ಇರಬೇಕು. ಒಳ್ಳೆಯ ಜಮೀನಾದರೆ, ಇಪ್ಪತ್ತೇಳು ಎಕರೆ ಬರಬಹುದು. ಪೂರ್ತಿ ಬೇರೆ land ಆದರೆ, ಐವತ್ನಾಲ್ಕು ಎಕರೆ ಇದೆ. ಅದು ಏನಿದೆ, ಹಾಗೆಯೇ ಅದಕ್ಕೆ retain ಮಾಡಿದ್ದಾರೆ.

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಇದರ ಜೊತೆಗೆ two crops, single crop irrigation ತರಹವೇ?

**ಶ್ರೀ ಆರ್. ಅಶೋಕ್:-** ಹೌದು. ಆಮೇಲೆ ಕಲಂ 80 ರಡಿಯಲ್ಲಿ 'ಎ' ವರ್ಗದ ನೀರಾವರಿ ಜಮೀನುಗಳು ಏನಿವೆ, ಡ್ಯಾಂಗಳು, ನದಿ ಪಾತ್ರಗಳು ಏನು ಬರುತ್ತಿದೆ, ಆ ಜಮೀನುಗಳನ್ನು ಯಾವುದೇ ಕಾರಣಕ್ಕೆ ಬದಲಾವಣೆ ಮಾಡುವ ಹಾಗಿಲ್ಲ. ಅದನ್ನು ಯಾರೇ ತೆಗೆದುಕೊಂಡರೂ ಕೂಡ ಆ ಜಮೀನನ್ನು ನೀರಾವರಿಯಾಗಿ ಮಾಡಬೇಕೇ ಹೊರತು, ಅಲ್ಲಿ ಯಾವುದೇ ಕೈಗಾರಿಕೆಗಳಾಗಲಿ, business centre ಗಳಾಗಲೀ, real estate ಆಗಲಿ ಮಾಡುವ ಹಾಗಿಲ್ಲ. ಆ ದೃಷ್ಟಿಯಿಂದ ನಾವು ಏನು ಕಾಯಿದೆಯನ್ನು ತಂದಿದ್ದೇವೆ, ಇದು ಸದುದ್ದೇಶದಿಂದ ತಂದಿರುವಂತಹದ್ದು. ಒಬಿರಾಯನ ಕಾಲದ ಕಾಯಿದೆಗಳೇನಿವೆ, ಕಾಲ ಕಾಲಕ್ಕೆ ಅವು ಬದಲಾವಣೆಗಳಾಗಬೇಕು. ಇಡೀ ದೇಶದಲ್ಲಿ ಇವತ್ತು ಎಲ್ಲಿಯೂ ಈ ಕಾಯಿದೆ ಇಲ್ಲ. ಕಾಶ್ಮೀರದಲ್ಲಿ ಜಮೀನುಗಳನ್ನು ತೆಗೆದುಕೊಳ್ಳಬಹುದೆಂದು ಹೇಳಿ ಮೊನ್ನೆ ಆದೇಶ ಬಂತು. Article 370 ಅನ್ನು ತೆಗೆದ ಮೇಲೆ ಕಾಶ್ಮೀರ; ಎಲ್ಲಾ ಪಕ್ಷದ ನಾಯಕರುಗಳು ಇದನ್ನು ಸ್ವಾಗತ ಮಾಡಿದರು. ನಾವು ಯಾವತ್ತೂ ಜಮೀನುಗಳನ್ನು ಕಾಶ್ಮೀರದಲ್ಲಿ ತೆಗೆದುಕೊಳ್ಳುವುದಕ್ಕಾಗಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ದಯವಿಟ್ಟು ಕಾಂಗ್ರೆಸ್‌ನವರು ಮಾಡಿಲ್ಲ.

**ಶ್ರೀ ಆರ್. ಅಶೋಕ್:-** ಅಲ್ಲಿ ಹಾಗೆಯೇ Article 370 ಇರಬೇಕೆಂದು ತಾವು ಹೇಳುತ್ತೀರಾ?

**ಶ್ರೀ ಬಿ.ಕೆ. ಹರಿಪ್ರಸಾದ್:-** (ಗೊಂದಲ) ಈಗ ಜಮ್ಮುವಿನಲ್ಲಿರುವಂತಹ Kashmiri pandits ನ್ನು ಕೇಳಿ ಎನ್ನುತ್ತಿದ್ದಾರೆ... **(ಗೊಂದಲ)** ಆ ಕಾನೂನಿಗೆ ಹೋಗುವುದಕ್ಕೆ ಹೋಗಬೇಡಿ. ಅದು ಬಹಳ ಗೊಂದಲ ಇರುವಂತಹದ್ದು. **(ಗೊಂದಲ)** ವಿಷಯವನ್ನು ಬೇರೆ ಕಡೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. Article 371-G ಇರುವ Mizoram ನಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. Article 371 ನಿಂದ ಹಿಡಿದು Article 371-J ವರೆಗೂ, ಅಂದರೆ ಹೈದಾರಾಬಾದ್-ಕರ್ನಾಟಕದವರೆಗೂ ಇದೆ. ಅದರೆ ಅದು ಬೇರೆ ವಿಚಾರ. ಈ ವಿಚಾರದ ಬಗ್ಗೆ ಹೇಳಿದರೆ ತುಂಬಾ ಒಳ್ಳೆಯದಿತ್ತು.

**ಶ್ರೀ ಆರ್. ಅಶೋಕ್:-** ನಾನು ಸುಮ್ಮನೆ ಹೇಳಿದ್ದು. ಕಾಶ್ಮೀರದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿರುವವರು ಕರ್ನಾಟಕದಲ್ಲಿ ಏಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ, ಕಾಶ್ಮೀರ, ಆಯೋಧ್ಯೆ, Common Civil Code ಎನ್ನುವುದು ತಮ್ಮ ಪಕ್ಷಕ್ಕೆ ರೋಟಿ, ಕಪಡ್, ಮಖಾನ್ ಇದ್ದಂತೆ. ಅದು ಬಹಳ sensitive issue. ಈ ವಿಚಾರಕ್ಕೆ ಬನ್ನಿ, ಮಾತನಾಡೋಣ.

**ಶ್ರೀ ಆರ್. ಅಶೋಕ್:-** ಅದೇ ರೀತಿ ಹೋರಾಟದ ಬಗ್ಗೆ ಮಾತನಾಡುತ್ತಿದ್ದರು.

(ಮುಂದು)

(1023) 08.12.2020 4.40 ಟಿಸಿಹೆಚ್-ಎಕೆ

**ಶ್ರೀ ಆರ್.ಅಶೋಕ್ (ಮುಂದು)**

ಅದೇ ರೀತಿ ಪಂಜಾಬ್ ಮತ್ತು ಹರಿಯಾಣದಲ್ಲಿ ಇದರ ಬಗ್ಗೆ ಹೋರಾಟ ನಡೆಯುತ್ತಿದೆ. ಪಂಜಾಬ್ ಮತ್ತು ಹರಿಯಾಣದಲ್ಲಿ ಕಲಂ 79ಎ ಮತ್ತು 79ಬಿ ಯಾವುದೂ ಕಾನೂನು ಇಲ್ಲ. ಆದ್ದರಿಂದ ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ಸಲಹೆ ಕೊಟ್ಟಂತಹ ಎಲ್ಲಾ ಮಾನ್ಯ ಸದಸ್ಯರಿಗೆ, ಇದರಲ್ಲಿ ಯಾವುದೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಚ್ಚಿಡುವಂತಹ agenda, inner agenda ಏನೂ ಇಲ್ಲ. ಹಿಂದೆ ಕೇಸ್‌ಗಳಾಗಿ ವಜಾ ಆಗಿದ್ದು, ಸರ್ಕಾರದ ಪರವಾಗಿ ಕೋರ್ಟ್‌ಗಳಲ್ಲಿ ಮತ್ತು ಬೇರೆ ಬೇರೆ ಡಿ.ಸಿ., ಕಚೇರಿಗಳಲ್ಲಿ ತೀರ್ಪುಗಳು ಬಂದಿವೆ. ಯಾವ್ಯಾವುದನ್ನು ನಾವು ಸರ್ಕಾರದ ವಶಕ್ಕೆ ಯಾವ್ಯಾವ ಜಮೀನನ್ನು ತೆಗೆದುಕೊಂಡಿದ್ದೇವೆ, ಆ ಜಮೀನುಗಳು ಸರ್ಕಾರದ ವಶದಲ್ಲಿಯೇ ಇರುತ್ತದೆ. ಯಾವುದೇ ಕಾರಣಕ್ಕೂ ಬಿಟ್ಟು ಕೊಡುವಂತಹ ಪ್ರಶ್ನೆಯೇ ಇಲ್ಲ. ಏನು ಕೇಸ್‌ಗಳು ನಡೆಯುತ್ತಿವೆ, ಅದನ್ನು ಮಾತ್ರ ಇವತ್ತು ವಾಪಸ್ಸು ತೆಗೆಯುತ್ತಿರುವುದು. ಆ ಕೇಸ್‌ಗಳು ಯಾರ್ಯಾರದ್ದು ಎಂದು ನಮಗೂ ಕೂಡ ಗೊತ್ತಿಲ್ಲ. ಯಾರ್ಯಾರು ಬಲಾಢ್ಯರು ಹಣ ಇರತಕ್ಕಂಥವರೆಲ್ಲಾ ಕೇಸ್‌ಗಳನ್ನು ಕ್ಲೋಸ್ ಮಾಡಿಕೊಂಡಿದ್ದಾರೆ. ಹಣ ಇಲ್ಲದೇ ಇರತಕ್ಕಂಥವರ ಕೇಸ್‌ಗಳು ಹಾಗೆಯೇ ಇವೆ. ವಿಧಾನಸಭೆಯಲ್ಲಿ ಮಾತನಾಡುವಾಗ ನಿಮ್ಮ ನಾಯಕರೊಬ್ಬರು ಇದರಲ್ಲಿ ನಾನೇ ಸಿಕ್ಕಿ ಹಾಕಿಕೊಂಡಿದ್ದೇನೆಂದು ಹೇಳಿದರು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಚಿವರೇ, ತಾವು ಯಾರೆಂದು ಹೇಳಬೇಕು.

**ಶ್ರೀ ಆರ್.ಅಶೋಕ್:–** ಶ್ರೀ ಮರಿತಿಬ್ಬೇಗೌಡರವರೇ, ಭೋಜೇಗೌಡರ ನಾಯಕರು, ನಿಮ್ಮ ನಾಯಕರು ಅಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ನಿಮ್ಮ ನಾಯಕರು ಎಂದರೆ ಯಾರು ಹೇಳಿ?

**ಶ್ರೀ ಆರ್.ಅಶೋಕ್:–** ಸದಸ್ಯರಾದ ಮಾನ್ಯ ಎಸ್.ಎಲ್.ಭೋಜೇಗೌಡರವರು ಹೇಳಿದರೆ ಮಾತ್ರ ಹೇಳುವುದು. ಅವರ ನಾಯಕರು, ನಿಮ್ಮ ನಾಯಕರು ಅಲ್ಲವೆಂದು ನಾನು ಹೇಳಿದ್ದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಬೇಜವಾಬ್ದಾರಿತನದಿಂದ ಮಾತನಾಡಬಾರದು. ಯಾರು ಎಂದು ಹೇಳಬೇಕು. ನೀವು ನಿಮ್ಮ ನಾಯಕರು ಎಂದು ಹೇಳಿದ ಮೇಲೆ ಅವರ ನಾಯಕರು ಯಾರೆಂದು ಅವರ ಹೆಸರನ್ನು ಹೇಳಬೇಕು. ಎಲ್ಲರಿಗೂ ನೀವು ಹೌದು, ನಿಮ್ಮ ನಿಮ್ಮ ನಾಯಕರು ಎಂದು ಹೇಳುವುದು ಸರಿಯಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರು ಹೇಳುತ್ತಿರುವುದು ಮಾನ್ಯ ಎಸ್.ಎಲ್.ಭೋಜೇಗೌಡರವರ ನಾಯಕರು ಎಂದರೆ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು.

**ಶ್ರೀ ಮರಿತಿಬ್ಬೇಗೌಡ:–** ಆ ರೀತಿ ಹೇಳುವುದು ನಿಮಗೆ ಸರಿ ಅನ್ನಿಸುತ್ತದೆಯೇ?

**ಶ್ರೀ ಆರ್.ಅಶೋಕ್:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಅವರ ಹೆಸರನ್ನು ಹೇಳಿದರಲ್ಲಾ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಎಸ್.ಎಲ್.ಭೋಜೇಗೌಡರವರೇ, ಅವರೇನಪ್ಪಾ ಈ ಪ್ರಕರಣದಲ್ಲಿ ಅಧಿಕೃತವಾಗಿ ಸಿಕ್ಕಿಹಾಕಿಕೊಂಡಿರುವುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಈ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಎಸ್.ಎಲ್.ಭೋಜೇಗೌಡರವರೇ, ನಿಮ್ಮ ನಾಯಕರು ಸಿಕ್ಕಿಹಾಕಿಕೊಂಡಿದ್ದಾರೆಂದು ಹೇಳುತ್ತಿದ್ದಾರಲ್ಲಾ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಆ ವಿಚಾರ ಗೊತ್ತಿಲ್ಲ. ಈ ಪ್ರಕರಣದಲ್ಲಿ ಅವರು ಸಿಕ್ಕಿಹಾಕಿಕೊಳ್ಳತಕ್ಕಂಥ ಆ ರೀತಿಯ ಯಾವುದೂ ಕೆಲಸ ಮಾಡಿಲ್ಲ. ಅವರು ನಾಯಕರ ಹೆಸರನ್ನು ಹೇಳಬೇಕು ಎಂದಿದ್ದಕ್ಕೆ ಹೇಳಿದೆನು ಅಷ್ಟೆ. ಆ ರೀತಿ ಏನಾದರೂ ಈ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆಂದು ದಾಖಲೆ ಇದ್ದರೆ ಕೊಡಲಿ.

**ಶ್ರೀ ಆರ್.ಅಶೋಕ್:-** ಕಾಯ್ದೆ ಏನಿದೆ, ಈ ಕಾಯ್ದೆಯನ್ನು ಬಹಳಷ್ಟು ನಮ್ಮ ನಾಯಕರುಗಳು, ವಿರೋಧ ಪಕ್ಷದ ಗೌರವಾನ್ವಿತ ಎಲ್ಲಾ ಸದಸ್ಯರುಗಳು ವಿಸ್ತೃತವಾಗಿ ಮೂರು ದಿನಗಳ ಕಾಲ ಚರ್ಚೆ ಮಾಡಿ ಮಾತನಾಡಿದ್ದಾರೆ. ನಾನು ಕೂಡ ಅದಕ್ಕೆ ಉತ್ತರಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಬಿಲ್‌ನ್ನು ತಾವೆಲ್ಲರೂ ಅನುಮೋದಿಸಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನದೊಂದು clarification.

**ಶ್ರೀ ಎಂ.ಟಿ.ಬಿ.ನಾಗರಾಜ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಕೈಗಾರಿಕೆ ಸಚಿವರು ಹಾಗೂ ಮಾನ್ಯ ಕಂದಾಯ ಸಚಿವರು ಇಬ್ಬರೂ ಕೂಡ ಇಲ್ಲೇ ಇದ್ದಾರೆ, ಅವರಿಗೆ ನಾನು ಒಂದು ಮನವಿ ಮಾಡುತ್ತೇನೆ. ನಮ್ಮ ವೈಟ್‌ಫೀಲ್ಡ್ ರಸ್ತೆಯಲ್ಲಿ ಹೂಡಿ ಮತ್ತು ದೇವಸಂದ್ರ ಇಂಡಸ್ಟ್ರಿಯಲ್ ಏರಿಯಾ ಎಂದು 1966 ರಲ್ಲಿ 560 ಎಕರೆ ಭೂಸ್ವಾಧೀನವಾಯಿತು. ಈ ಭೂಸ್ವಾಧೀನ ಪ್ರಕ್ರಿಯೆ ಆದನಂತರ, ಇವತ್ತು ಅಲ್ಲಿ ನೂರಾರು ಎಕರೆ ಜಮೀನಿನಲ್ಲಿ ಕೈಗಾರಿಕೆಗಳು ಸ್ಥಾಪನೆ ಆಗಲಿಲ್ಲ ಮತ್ತು ಉದ್ಯೋಗ ಕೂಡ ಸೃಷ್ಟಿಯಾಗಲಿಲ್ಲ. 55 ವರ್ಷವಾಗಿದೆ. ಅವೊತ್ತು ರೈತರಿಗೆ ಒಂದು ಎಕರೆ ಜಮೀನಿಗೆ ಕೇವಲ ರೂ.25000/-ಗಳು acquisition compensation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಾಯಿತು. ಇವತ್ತಿನ ದಿವಸ ಮಾರುಕಟ್ಟೆ ಬೆಲೆ ಹೆಚ್ಚಾಗಿದೆ. 1966ರಲ್ಲಿ ಗ್ರಾಫೈಟ್ ಇಂಡಿಯಾದವರಿಗೆ 46 ಎಕರೆ ಭೂಮಿ allot ಆಯಿತು. ಸುಮಾರು 55 ವರ್ಷಗಳ ಕಾಲ ಆ ಕಾರ್ಖಾನೆ ನಡೆದಿದೆ. ಈಗ ಅದನ್ನೂ ಕೂಡ ಮಾರಾಟ ಮಾಡಲು auction ಮೂಲಕ ಕೊಟ್ಟಿದ್ದಾರೆ. ಅದಕ್ಕೆ 1 ಎಕರೆಗೆ 34 ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಅದು ನಮ್ಮ ಮನೆ ಪಕ್ಕದಲ್ಲೇ ಇದೆ. ಅವೊತ್ತು ರೈತರಿಂದ ಕೇವಲ 25 ಸಾವಿರಕ್ಕೆ ತೆಗೆದುಕೊಳ್ಳಲಾಗಿತ್ತು. ಹೂಡಿ ಸರ್ವೇ ನಂ. 26ರಲ್ಲಿ ನಮ್ಮ 10 ಎಕರೆ ಜಮೀನು ಕೂಡ ಬರೂಕಾ ಸ್ಟೀಲ್‌ನವರಿಗೆ allot ಮಾಡಿದ್ದಾರೆ. ಇದುವರೆಗೂ ಆ ಸರ್ವೇ ನಂಬರ್‌ನಲ್ಲಿ industryನ್ನು ಸ್ಥಾಪಿಸಿಲ್ಲ ಮತ್ತು ಉದ್ಯೋಗ ಕೂಡ ಸೃಷ್ಟಿ ಮಾಡಿಲ್ಲ. ಸುಮಾರು 55 ವರ್ಷದ ಹಿಂದೆ ಭೂಸ್ವಾಧೀನ ಪಡಿಸಿಕೊಂಡಿದ್ದರೂ ಕೂಡ ಇವತ್ತು ಆ ಭೂಮಿ ಹಾಗೆಯೇ ಉಳಿದಿದೆ. ಈಗ industry ಪ್ರಾರಂಭ ಮಾಡುತ್ತಿದ್ದಾರೆ. ಆದ್ದರಿಂದ ನಾನು ಮಾನ್ಯ ಕೈಗಾರಿಕಾ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಈ ಕಾನೂನುಗಳು ಏನಿವೆ, ಈ ಕಾನೂನುಗಳು ಕಟ್ಟುನಿಟ್ಟಾಗಿ ಪಾಲನೆ ಆಗಲಿಲ್ಲ. ಹಿಂದೆ ಇದ್ದಂತಹ ಸರ್ಕಾರಗಳು ಮತ್ತು ಈಗ ಇರುವಂಥ ಸರ್ಕಾರ ಯಾವುದೇ ಸರ್ಕಾರವಾದರೂ ಕೂಡ ತಂದಿರತಕ್ಕಂಥ ಕಾನೂನುಗಳು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ನೀವೇನು ಟೈಮ್ ಲಿಮಿಟ್ ಕೊಟ್ಟಿದ್ದೀರಿ, ಯಾರಿಗೆ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ನೀವು ಜಮೀನು allot ಮಾಡುತ್ತೀರಾ, ಅವರು 3 ವರ್ಷ ಅಥವಾ 5 ವರ್ಷಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಮತ್ತು ಉದ್ಯೋಗ ಸೃಷ್ಠಿ ಆಗಬೇಕು. ಈಗ ಏನು ಕಾನೂನುಗಳಿವೆ, ಈ ಕಾನೂನುಗಳು ಕಾನೂನುಗಳಾಗಿಯೇ ಉಳಿದಿವೆ. ಈ ಕಾನೂನುಗಳು ಕಾರ್ಯಗತ ಆಗಲಿಲ್ಲ. ಆದ್ದರಿಂದ ದಯಮಾಡಿ ಹೇಳುವುದೇನೆಂದರೆ, ಈ ಕಾನೂನುಗಳನ್ನು ನೀವು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಇವತ್ತಿನ ದಿವಸ ಯಾರ್‍ಯಾರು 10ವರ್ಷ, 20 ವರ್ಷಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗದೇ ಆ ಭೂಮಿಯನ್ನು ರಿಯಲ್ ಎಸ್ಟೇಟ್‌ಗೆ ಕನ್ವರ್ಟ್ ಮಾಡಿದ್ದಾರೆ. ಅಂತಹ ಭೂಮಿಯನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕೆಂದು ತನ್ಮೂಲಕ ನಾನು ಕೈಗಾರಿಕೆ ಮತ್ತು ಕಂದಾಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಅವರು ಹೇಳಿರತಕ್ಕಂಥ ಸರ್ವೇ ನಂಬರ್‌ನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಧರ್ಮಸೇನ:-** ಮಂತ್ರಿಗಳು, ಎಂ.ಎಲ್.ಎ., ಎಂ.ಎಲ್.ಸಿ.ಗಳದ್ದೇ ಇಷ್ಟು ಇದೆ ಎಂದರೆ, ಇನ್ನೂ ನಮ್ಮ ದಲಿತರ ಕತೆ ಏನು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಬಿಲ್‌ಗೆ support ಇಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಎಂ.ಟಿ.ಬಿ.ನಾಗರಾಜ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಈ ಬಿಲ್‌ಗೆ ನಮ್ಮ ಬೆಂಬಲವಿದೆ. ಈ ಬಿಲ್ ಪಾಸ್ ಮಾಡುವುದಕ್ಕೆ ನಮ್ಮಿಂದ ಎಲ್ಲಾ ರೀತಿಯ ಸಹಕಾರವಿದೆ. ಇದು ತಮಗೂ ಕೂಡ ಗೊತ್ತಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಅವರು ಬಿಲ್ ವಿರುದ್ಧವೇನು ಮಾಡಲ್ಲಿಲ್ಲ. ಆ ಸರ್ವೇ ನಂಬರನ್ನು ಮುಟ್ಟುಗೋಲು ಹಾಕಿಕೊಳ್ಳಿ.

(ಗೊಂದಲ)

**ಶ್ರೀ ಎಂ.ಟಿ.ಬಿ.ನಾಗರಾಜ್:-** ಮಾನ್ಯ ಸಭಾಪತಿಯವರೇ, ನಾನು ಒಬ್ಬ ರೈತನ ಮಗನಾಗಿರುವುದರಿಂದ ನನಗೆ ಎಲ್ಲಾ ಕಷ್ಟಗಳು ಗೊತ್ತಿದೆ. ನಾನು ಹೇಳುವುದೇನೆಂದರೆ, ಇವತ್ತು ರೈತರ ಜಮೀನುಗಳು ಬೆಂಗಳೂರು ಮಹಾನಗರ, ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೈತರ ದುಡ್ಡು ದಲ್ಲಾಳಿಗಳ ಪಾಲಾಗುತ್ತಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಕಲಂ 79(ಎ) ಮತ್ತು ಕಲಂ 79(ಬಿ)ಯನ್ನು ಏನಾದರೂ ನಾವು ಇಟ್ಟುಕೊಂಡಿದ್ದರೆ, ರೈತರು ಭೂಮಿ ಮಾರಾಟ ಮಾಡತಕ್ಕಂಥ ದುಡ್ಡು ದಲ್ಲಾಳಿಗಳ ಪಾಲಾಗುತ್ತದೆ. ಕಲಂ 79(ಎ) ಮತ್ತು ಕಲಂ 79(ಬಿ)ಯನ್ನು ತೆಗೆಯುವುದರಿಂದ, ನೇರವಾಗಿ ರೈತರಿಂದ ಭೂಮಿಯನ್ನು ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳು ಖರೀದಿ ಮಾಡುತ್ತಾರೆ. ರೈತರಿಗೆ ಹೆಚ್ಚಿನ ಬೆಲೆ ಸಿಗುತ್ತದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ತಟ್ಟಿ ಭೂಸುಧಾರಣೆ ಬಿಲ್‌ಗೆ ಬೆಂಬಲ ವ್ಯಕ್ತಪಡಿಸಿದರು)**

ಇದನ್ನು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ನೀವು ಬೇಕಾದರೆ ಎಂ.ಟಿ.ಬಿ.ನಾಗರಾಜ್‌ರವರು ರಿಯಲ್ ಎಸ್ಟೇಟ್‌ನವರು ಎಂದು ಹೇಳಬಹುದು. ಹಾಗಾಗಿ ಈ ಬಿಲ್ ಪಾಸ್ ಮಾಡುವುದಕ್ಕೆ ನಮ್ಮೆಲ್ಲರ ಸಹಮತವಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರು, ಎಸ್,ಆರ್.ಪಾಟೀಲ್ ರವರ ಪ್ರಶ್ನೆಗೆ ಉತ್ತರ ಕೊಡುತ್ತಿದ್ದರು. ಅವರು ಏನು ಹೇಳಿದರೆಂದರೆ, ಎಷ್ಟೋ ಲಕ್ಷ ಎಕರೆ ಜಮೀನನ್ನು ಆಂಧ್ರದವರು ಬಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನನ್ನು ಖರೀದಿಸಿದ್ದಾರೆಂದು ಹೇಳಿದರು. ತಾವು ಆಗಿನ ಕಾಲದ ಕಾನೂನಿನಲ್ಲಿ ತೆಗೆದುಕೊಂಡಿದ್ದಾರೆಂದು ಹೇಳಿದಿರಿ. ಆದರೆ ಈಗ ಬಂದಿರತಕ್ಕಂಥ ಕಾನೂನಿನಲ್ಲಿ ಅವರು ಬರುವುದಿಲ್ಲವೇ ಎಂದು ಸ್ಪಷ್ಟೀಕರಣ ಮಾಡಿಬಿಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಂ.ಟಿ.ಬಿ.ನಾಗರಾಜುರವರ ಅನುಭವದಲ್ಲಿ ಆಗಿರತಕ್ಕಂಥ ವಸ್ತುಸ್ಥಿತಿಯನ್ನು ಸದನದ ಮುಂದೆ ಇಟ್ಟಿದ್ದಾರೆ. ಈಗಾಗಲೇ ಅಲ್ಲಿ ಯಾವ ಉದ್ದೇಶಕ್ಕೆ ತೆಗೆದುಕೊಂಡಿದ್ದರೊ, ಆ ಉದ್ದೇಶಕ್ಕೆ ಉಪಯೋಗಿಸದೇ ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆ ಎಂದು ಉದಾಹರಣೆಯನ್ನು ಕೊಡುತ್ತಿದ್ದಾರೆ. ಈ ವಿಷಯ ಅವರಿಗೆ ಗೊತ್ತಿದೆ. ಆ ರೀತಿ ಇರತಕ್ಕಂಥದ್ದು ಮತ್ತೆ stipulated period ನಲ್ಲಿ ಆ prescribed purpose ಗೋಸ್ಕರವೇ ಭೂಮಿಯನ್ನು ಉಪಯೋಗಿಸಬೇಕು ಎಂದು ಏನಿತ್ತು, ಅದನ್ನು ಉಪಯೋಗಿಸದಿದ್ದರೆ ಅದನ್ನು ಸರ್ಕಾರ ಕೂಡಲೇ retrospective and prospective ಆಗಿ ಮಾಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸದನಕ್ಕೆ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಮಧ್ಯೆ ಮಾತನಾಡಿದರೆ ಹೇಗೆ?

**ಸಭಾಪತಿಯವರು:-** ಅವರು yield ಆಗಿದ್ದಾರಲ್ಲವೆ.

**ಶ್ರೀ ಕೆ.ಗೋವಿಂದರಾಜು:-** ಶ್ರೀ ಎಂ.ಟಿ.ಬಿ.ನಾಗರಾಜ್‌ರವರೇ, ಆ 10 ಎಕರೆ ಜಮೀನನ್ನು ನಿಮ್ಮ ಮನೆ ಪಕ್ಕಲ್ಲಿರುವ ಗ್ರಾಫೈಟ್ ಇಂಡಿಯಾದವರಿಗೆ ಹೇಗೆ ಬಿಟ್ಟುಬಿಟ್ಟಿರಿ? ನಿಮ್ಮ ಗಮನಕ್ಕೆ ಬಂದಿದ್ದ ಭೂಮಿ ಯಾವುದೂ ಉಳಿಯುವುದಿಲ್ಲ. ಅದು ಹೇಗೆ ಉಳಿದಿದೆ. ಅದು ವಾಸ್ತುದೋಷದಿಂದ ಏನೋ ಹೆಚ್ಚು-ಕಡಿಮೆಯಾಗಿದೆ.

**(ಸದನದಲ್ಲಿ ನಗು)**

**ಶ್ರೀ ಆರ್.ಅಶೋಕ್:-** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020ರ ಖಂಡ-1, ಖಂಡ-12 ಮತ್ತು ಖಂಡ-13 ತಂದಿರುವ ತಿದ್ದುಪಡಿಗಳೊಂದಿಗೆ ಅಂಗೀಕರಿಸುವುದು.

**ಸಭಾಪತಿಯವರು:-** ಮಾನ್ಯ ಸಚಿವರೇ ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾವ್ಯಾರು ಕೂಡ ಕ್ಲಾರಿಫಿಕೇಷನ್ ಕೇಳುವುದು ಬೇಡವೇ? ನೀವು ಮಾತನಾಡುವಾಗ ನಾನು ಎಷ್ಟು ಹೊತ್ತು ಬೇಕಾದರೂ ಮಾತನಾಡುತ್ತೇನೆಂದು ಹೇಳಿಬಿಟ್ಟು ಈಗ ನಮ್ಮ ಕ್ಲಾರಿಫಿಕೇಷನ್‌ನ್ನು ಕೇಳದೇ ಬಿಲ್ ಮಂಡಿಸಲು ಏಕೆ ಇಷ್ಟು ಆತುರ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗ ಗ್ರಾಮೀಣ ಪ್ರದೇಶದವರಿಗೆ ಗುಡಿ ಕೈಗಾರಿಕೆಗಳಂತಹ ಕೈಗಾರಿಕೆಗಳಲ್ಲಿ ಉದ್ಯೋಗ ಸೃಷ್ಟಿಯಾಗತಕ್ಕಂಥದ್ದು ಆಗುತ್ತದೆಂದು ಮಾನ್ಯ ಸಚಿವರು ಹೇಳಿದರು. ಅದಕ್ಕೆ ನಾವು ಸ್ವಾಗತ ಕೋರುತ್ತೇವೆ. ಆದರೆ ಈಗ ತಾವು ತಂದಿರತಕ್ಕಂಥ ವಿಧೇಯಕದಲ್ಲಿ ಏನಿದೆ, ಭೂಮಿಯನ್ನು ಯಾವ ಉದ್ದೇಶಕ್ಕೆ ತೆಗೆದುಕೊಳ್ಳುತ್ತಾರೋ ಅದೇ ಉದ್ದೇಶಕ್ಕೆ ಮಾಡಬೇಕೆಂದು ಇಟ್ಟಿದ್ದಾರೆ. ಆ ಭೂಮಿ irrigation ಗೆ ಮೀಸಲಾಗಿದ್ದರೆ ಆ ಭೂಮಿಯನ್ನು irrigation ಮಾಡುವುದಕ್ಕಾಗಿಯೇ ಬಳಸಬೇಕು. ಒಕ್ಕಲುತನ ಮಾಡುವವರು ಒಕ್ಕಲುತನವೇ ಮಾಡಬೇಕು ಎಂದು ಹೇಳಿದ್ದೀರಿ. ಆದರೆ ಕೈಗಾರಿಕೆಗಳಿಗೆ ಯಾವ ರೀತಿ ಇದೆ. ಅದನ್ನು ಮಾಡುವುದಕ್ಕೆ ಅವಕಾಶವೇ ಇಲ್ಲವಲ್ಲಾ.

**ಶ್ರೀ ಆರ್.ಅಶೋಕ್:-** ಆಗಲೇ ನಾನು ಹೇಳಿದಂತೆ, ನೀರಾವರಿಗೆ ಸಂಬಂಧಪಟ್ಟಂತೆ, ನಾವು 'ಎ' ವರ್ಗದ ನೀರಾವರಿ ಭೂಮಿ ಎಂದು ವರ್ಗೀಕರಣ ಮಾಡಿದ್ದೇವೆ. ಅಲ್ಲಿ ಯಾವುದೇ ಉದ್ದೇಶಕ್ಕೂ ಕೈಗಾರಿಕೆಗಳು ಬರುವಂತಿಲ್ಲ. ಒಂದು ವೇಳೆ, ಬೇರೆ ನೀರಾವರಿ ಜಮೀನು ಇದ್ದರೆ, ಡ್ಯಾಂಗಳು ಮತ್ತು ನದಿ ಪಾತ್ರಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಮಾಡುವುದಿದ್ದರೆ ಅದನ್ನು Industries Act ಪ್ರಕಾರ ಮಾಡಬಹುದು.

**(ಮುಂದು)**

(1024)8.12.2020/4.50/ಎಂ.ಎಂ-ವಿ.ಕೆ

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಮ್ಮ ಸಲಹೆಯೇನೆಂದರೆ, 11 ಸಾವಿರ ಎಕರೆ Barren and Un-cultivable lands ಇದೆಯೆಂದು ತಾವು ಹೇಳಿದಿರಿ ಅಂತಹ ಜಾಗದಲ್ಲಿ ಮಾತ್ರ ಕೈಗಾರಿಕೆಗಳನ್ನು ಕೊಡಬೇಕೇ ಹೊರತು agriculture land ಇದ್ದಾಗ conversion ಗೆ ಕೊಡಬಾರದೆಂಬುದು ನಮ್ಮ ವಿನಂತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್. ಭೋಜೇಗೌಡ:–** (ಗೊಂದಲ) ಆದರೆ ಅವರು ಸಿಕ್ಕಿಹಾಕಿಕೊಂಡಿದ್ದರು ಎಂದು ಒಂದು ಮಾತು ಹೇಳಿದ್ದಾರೆ. ಕಲಂ 79ಎ 79ಬಿ ಕೇಸ್ ಹಾಕಿ ಅದು ಫೈನಲ್ ಆಗಿದೆ. ದಯಮಾಡಿ ಸಿಕ್ಕಿ ಹಾಕಿಕೊಂಡಿದ್ದರು ಎನ್ನುವ ಪದವನ್ನು ಕಡತದಿಂದ ತೆಗೆಯಬೇಕು. ಕಾನೂನು ಪ್ರಕಾರ ಕಲಂ 79ಎ 79ಬಿ ಕೇಸ್ ತೀರ್ಮಾನವಾಗಿದೆ. ಅದರ ದಾಖಲೆಗಳನ್ನು ಕೊಡುತ್ತೇನೆ. ದಯವಿಟ್ಟು ಆ ಪದವನ್ನು ಕಡತದಿಂದ ತೆಗೆಸಿ.

**ಶ್ರೀ ಆರ್. ಅಶೋಕ್:–** ತೆಗೆಯಬಹುದು.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಸಚಿವರು ಕೊಟ್ಟಿರುವ ಉತ್ತರಕ್ಕೆ ನಾನು ಕೆಲವು ಸ್ಪಷ್ಟೀಕರಣ ಕೇಳಬೇಕು. ಇವತ್ತು ನಮ್ಮ ರೈತರಿಗೆ, ಗ್ರಾಮೀಣ ಪ್ರದೇಶದ ಜನರಿಗೆ ಏನು social security ಇತ್ತು ಅದನ್ನು ತೆರವು ಮಾಡುತ್ತಿದ್ದೀರಿ. ಹಿಂದೆ ರೈತರು ಯಾರ್‍ಯಾರು 'ಉಳುವವನೇ ಭೂಮಿಯ ಒಡೆಯ' ಎಂದು ಒಂದು ಕಾನೂನು ಬಂತು ಅದರಿಂದ ಪಡೆದಂತಹ ಲಕ್ಷಾಂತರ ಜನ ರೈತರು ಆ ಜಾಗಗಳನ್ನು ಇಟ್ಟುಕೊಂಡಿದ್ದಾರೆ. ಇವತ್ತು social security ಎಂಬುದೇನಿತ್ತು ಅದರ ಗೇಟ್ ಅನ್ನು ತೆರೆದಿದ್ದೀರಿ. ಕೋರ್ಟ್ ಆರ್ಡರ್ ಏನನ್ನು ಹೇಳಿದೆ ಅದರ ಬಗ್ಗೆ very specific ಆಗಿ ನಿಮ್ಮ ನೋಟ್‌ನಲ್ಲಿ objections, statements, reasons ಏನು ಕೊಟ್ಟಿದ್ದೀರಿ ಅದರಲ್ಲಿ ಬಹಳ ನಿರ್ದಿಷ್ಟವಾಗಿ ಹೇಳಿದ್ದೀರಿ. ಏನೆಂದರೆ, ಯಾವ ಯಾವ ಆರ್ಡರ್‌ಗಳನ್ನು ತೆಗೆದುಕೊಂಡು ಭೂಮಿಯನ್ನು ತೆಗೆದುಕೊಂಡಿಲ್ಲ ಅಂತಹದ್ದನ್ನು ನೀವು ವಾಪಸ್ ತೆಗೆದುಕೊಳ್ಳದೇ ಇರುವುದನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ. ಅದರ ಬಗ್ಗೆ ಒಂದು action plan ಕೊಡಿ, ಅದನ್ನು ತೆಗೆದುಕೊಳ್ಳುವುದಕ್ಕೆ ಹೇಗೆ ಮಾಡುತ್ತೀರಿ ಎಂದು ಕೇಳಿದ್ದಾರೆ. ನೀವು ಆರ್ಡರ್ ಮಾಡಿರುವುದು ಈ ಕಾಯಿದೆಗೆ ಅನ್ವಯಿಸುವುದಿಲ್ಲ. ಏನಿದ್ದರೂ ತೆಗೆದುಕೊಳ್ಳಲೇ ಬೇಕಾಗುತ್ತದೆ. ಅದನ್ನು ತೆಗೆದುಕೊಳ್ಳಬೇಕಾದರೆ action plan ಜೊತೆಗೆ ನಿಮ್ಮ ನಿಲುವನ್ನು ಹೇಳಬೇಕಾಗುತ್ತದೆ. ನೀವು ಇವತ್ತು ಕೊಡುತ್ತಿರುವುದು ಕೇವಲ ಆ ಎರಡನ್ನೂ ತೆಗೆದು ಅಂದರೆ prospective ಆಗುತ್ತದೆ retrospective ಆಗುವುದಿಲ್ಲ. Retrospective ಯಾವ ಯಾವ ನ್ಯಾಯಾಲಯ, ಟ್ರಿಬ್ಯುನಲ್‌ನಲ್ಲಿದೆ ಅಂತಹವುಗಳಿಗೆ ಅನ್ವಯಿಸುವುದಕ್ಕೆ ತಂದಿದ್ದೀರಿ. ಅದು ಕಲಂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

79ಎ 79ಬಿ ರಲ್ಲಿ ಆರ್ಡರ್ ಆಗಿ position ಎಂದು ಹೇಳುತ್ತೀರಿ ಅಂತಹದ್ದನ್ನು ತೆಗೆದುಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಅಂತಹ ನೂರಾರು ಪ್ರಕರಣಗಳು ಕೆ.ಎ.ಟಿ. ನಲ್ಲಿದೆ.

**ಶ್ರೀ ಪಿ.ಆರ್. ರಮೇಶ್:–** ನ್ಯಾಯಾಲಯಕ್ಕೆ ಯಾವ ರೀತಿ ಉತ್ತರವನ್ನು ಕೊಡುತ್ತೀರಿ ಎಂಬುದಕ್ಕೆ ಸ್ಪಷ್ಟೀಕರಣ ಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ನನಗೆ ಮೂರು ಸ್ಪಷ್ಟೀಕರಣ ಬೇಕು. ಪ್ರಮುಖವಾಗಿ Industries ಬರಬೇಕು ಅದಕ್ಕೆ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ಮಾಜಿ ಸಚಿವರಾದ ಶ್ರೀ ಎಂ.ಟಿ.ಬಿ. ನಾಗರಾಜುರವರು ಬಹಳ ವಿಸ್ತಾರವಾಗಿ ಹೇಳಿದರು. ಕಾರ್ಖಾನೆಗಳಿಗೆಂದು ಜಾಗ ತೆಗೆದುಕೊಂಡು ಇನ್ನೂ ಕಾರ್ಖಾನೆಗಳನ್ನೇ ಪ್ರಾರಂಭ ಮಾಡಿಲ್ಲ. ಹತ್ತಾರು ವರ್ಷಗಳಿಂದ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರಗಳನ್ನು ಕೊಟ್ಟಿದ್ದರೆ, ಯಾವುದೇ ಉದ್ಯೋಗಗಳನ್ನಂತೂ ಯಾರಿಗೂ ಕೊಟ್ಟಿಲ್ಲ. ಇದುವರೆಗೂ ರಾಜ್ಯದಲ್ಲಿ ಬಂದಿರುವ ಕೈಗಾರಿಕೆಗಳಲ್ಲಿ ನಮ್ಮ ಸರ್ಕಾರಗಳು ಈ ಷರತ್ತನ್ನು ವಿಧಿಸಿವೆ. ಎಷ್ಟು ಜನ ಕನ್ನಡಿಗರಿಗೆ ಈ ಸರ್ಕಾರ ಉದ್ಯೋಗ ಕೊಡಿಸಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕನ್ನಡಿಗರಿಗೆ ಯಾರಿಗೂ ಕೂಡ ಈ ರಾಜ್ಯದಲ್ಲಿರುವ ಕೈಗಾರಿಕೆಗಳಲ್ಲಿ ಉದ್ಯೋಗ ಕೊಟ್ಟಿರುವುದು ಎಷ್ಟು ಪರ್ಸೆಂಟ್ ಎನ್ನುವುದನ್ನು ಎಲ್ಲಾ ಸರ್ಕಾರಗಳೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಸರ್ಕಾರದಿಂದ ಲಕ್ಷಾಂತರ ಉದ್ಯೋಗ ಸೃಷ್ಟಿ ಮಾಡುತ್ತೇವೆಂದು ಹೇಳುತ್ತಾರೆ. ಇದು ಕೇವಲ ಸುಳ್ಳು ಆಶ್ವಾಸನೆಯಾಗಿದೆ. ಈ ರೀತಿ ಕೈಗಾರಿಕೆಗಳಿಂದ ಉದ್ಯೋಗ ಸೃಷ್ಟಿ ಮಾಡುತ್ತೇವೆಂದು ಎಲ್ಲಾ ಸರ್ಕಾರಗಳೂ ಹೇಳಿಕೊಂಡು ಬಂದಿವೆ. ಆದರೆ ಕೈಗಾರಿಕೆಗಳು ಸುಧಾರಣೆಯಾಗಿಲ್ಲ. ಇವತ್ತು ಭಾರತ ದೇಶ ರೈತರ ಆರ್ಥಿಕತೆಯಿಂದ ಎಲ್ಲಾ ದೇಶಗಳಲ್ಲೂ ತಲೆಯೆತ್ತಿ ನಿಂತಿರುವುದು ರೈತರಿಂದ ಮತ್ತು ರೈತರ ದುಡಿಮೆಯಿಂದ. ಈ ಕಾಯಿದೆಯನ್ನು ಮಾರ್ಪಾಡು ಮಾಡುವುದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರು ಜಮೀನನ್ನು ಕಳೆದುಕೊಳ್ಳುತ್ತಾರೆ ಎನ್ನುವುದು ನಮ್ಮೆಲ್ಲರ ಕೂಗು. ಉದ್ಯೋಗಗಳನ್ನು ಹೇಗೆ ಸೃಷ್ಟಿ ಮಾಡುತ್ತೀರಿ, ಈಗಿರುವ ಕಂಪನಿಗಳಿಂದಲೇ ಉದ್ಯೋಗ ಕೊಡಿಸುವುದಕ್ಕೆ ಆಗಿಲ್ಲ. ಮುಂದೆ ಎಂತಹ ಕೈಗಾರಿಕೋದ್ಯಮಿಗಳು ಬರುತ್ತಾರೆ ಎನ್ನುವುದು ಗೊತ್ತು. ಅವರ ಹತ್ತಿರ ಉದ್ಯೋಗ ಕೊಡಿಸುತ್ತೇವೆಂದು ಹೇಳುತ್ತೀರಲ್ಲಾ 25 ವರ್ಷ ನೀವೇ ರಾಜ್ಯವನ್ನಾಳುತ್ತೀರಾ? ಭೂ ಪರಿವರ್ತನೆಯನ್ನು ಕೃಷಿಗೆ ಎಂದಿರುವುದನ್ನು ಕೃಷಿಗೇ ಇಡುತ್ತೇವೆ. ಇನ್ನೊಂದು ಸರ್ಕಾರ ಬಂದು ಅವರು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟಿರಬಹುದು ಅದನ್ನು ನಾವು ಬದಲಾವಣೆ ಮಾಡುತ್ತೇವೆ ಎನ್ನುತ್ತಾರೆ. ನೀವೇ 25 ವರ್ಷ ಗೂಟ ಹೊಡೆದುಕೊಂಡು ಇರುತ್ತೀರಾ? ಭವಿಷ್ಯತ್ತಿನ ದಿನಗಳನ್ನು ಯೋಚನೆ ಮಾಡಬೇಕು.

(ಗೊಂದಲ)

**ಡಾ: ತೇಜಸ್ವಿನಿಗೌಡ:–** ನೀವು ಮಾಡಿದ ಯೋಜನೆಗಳ ಬಗ್ಗೆ ನಾವು . . . (ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಕಂದಾಯ ಸಚಿವರು ಸಮರ್ಥರಿದ್ದಾರೆ. ದಯವಿಟ್ಟು ನೀವು ಕುಳಿತುಕೊಳ್ಳಿ. (ಗೊಂದಲ) ತಾವು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಕನ್ನಡಿಗರ ಬಗ್ಗೆ ಮಾತನಾಡುವುದಕ್ಕೆ ಹಕ್ಕಿದೆ ತಾವು ಪ್ರಶ್ನೆ ಎತ್ತಿದ್ದೀರಿ ನಮ್ಮದು ಹೇಳುತ್ತೇವೆ. ಕೌಶಲ್ಯಾಭಿವೃದ್ಧಿ ಸಚಿವರು ಇಲ್ಲಿಯೇ ಕುಳಿತಿದ್ದಾರೆ. ಸರ್ಕಾರವು ಮಕ್ಕಳಿಗೆ ಕೆಲಸ ಸಿಗಬೇಕೆಂದು 33,000 ಜನರಿಗೆ ತರಬೇತಿ ಕೊಡುತ್ತಿದೆ. ನಮ್ಮ ಸಚಿವರಿಗೆ commitment ಇದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ತಾವು ಬಹಳಷ್ಟು ಮಹನೀಯರು ಪತ್ರಿಕೆಗಳಲ್ಲಿ ಹೇಳಿಕೆ, ವರದಿ ಕೊಟ್ಟಿದ್ದಾರೆಂದು ಹೇಳಿದಿರಿ. ವಿಧೇಯಕದ ಪರವಾಗಿ ಬರೆದಿರುವುದನ್ನು ಹೇಳಿದಿರಿ. ಹಾಗೆಯೇ ನೀವು ತರುತ್ತಿರುವ ವಿಧೇಯಕಕ್ಕೆ ವಿರೋಧವಾಗಿ ಬರೆದಿರುವುದನ್ನು ಹೇಳಿದರೆ; ನಾವು ಈಗಲೂ ಹೇಳುತ್ತೇವೆ. ಶ್ರೀ ನಾಗಮೋಹನದಾಸ್‌ರವರು ನಿವೃತ್ತ ನ್ಯಾಯಾಧೀಶರು, ಯಲ್ಲಪ್ಪ ರೆಡ್ಡಿ, ನಾಗೇಶ್ ರೆಡ್ಡಿ, ಪ್ರೊ॥ ಎಂ.ಕೆ. ರಮೇಶ್ ಮತ್ತು ವಾಸವಿ ಇವರು;

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇದೆಂತಹ clarification?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾನಾಯಕರೇ, ನಾನು ಸ್ಪಷ್ಟೀಕರಣ ಕೇಳುತ್ತಿದ್ದೇನೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕ್ಲಾರಿಫಿಕೇಷನ್ನೇ ಇಷ್ಟು ಹೊತ್ತಾದರೆ ಇನ್ನು ಭಾಷಣ ಇನ್ನೆಷ್ಟು ಹೊತ್ತು ಮಾಡುತ್ತಾರೆ?

**ಶ್ರೀ ಮರಿತಿಬ್ಬೇಗೌಡ:–** ನಮ್ಮ ರೈತ ನಾಯಕ, ದಲಿತ ನಾಯಕ ಶ್ರೀ ದೇವನೂರ ಮಹಾದೇವರವರು, ರೈತ ಮುಖಂಡರು ಎಲ್ಲರೂ ಕೂಡ ಎಂಟು ತಿಂಗಳಿನಿಂದ ಈ ಸುಗ್ರೀವಾಜ್ಞೆ ವಿರುದ್ಧ ಚಳುವಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ಅವರನ್ನೇನಾದರೂ ಕರೆದು ಮಾತನಾಡಿದರಾ? ಏತಕ್ಕೆ ಇಷ್ಟೊಂದು ವ್ಯಾಪಕವಾದ ವಿರೋಧ ಮಾಡುತ್ತಿದ್ದೀರಿ? ಈ ತಿದ್ದುಪಡಿಯಿಂದ ಇಷ್ಟೆಲ್ಲಾ ಉಪಯೋಗವಾಗುತ್ತಿದೆ ಎಂದು ಒಂದಲ್ಲ ಎರಡು ಸಲ ಕರೆದು ಅವರಿಗೆ ಮನವರಿಕೆ ಮಾಡಿದಿರಾ? ಈ ಕಾಯಿದೆ ವಿರುದ್ದ ವ್ಯಾಪಕವಾದ ವಿರೋಧ ಇಲ್ಲವೇ? ಮೂರನೆಯದಾಗಿ ಇವತ್ತು ತಾವು ಬಿಲ್ ತಂದಿದ್ದೀರಿ. ಬಿಲ್‌ನಲ್ಲಿ ತಾವು ಏನನ್ನು ಹೇಳಿದ್ದೀರಿ ಎಂದರೆ, ರಾಜ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆಜ್ಞೆಯ ಪ್ರಕಾರ ಎಂದು ಹೇಳಿದ್ದೀರಿ. ತಾವು ಮಧ್ಯಂತರ ಆಜ್ಞೆಯ ವಿರುದ್ಧ ಏಕೆ ನೀವು ರಿಟ್ ಅಪೀಲು ಹೋಗಲಿಲ್ಲ ಅಥವಾ ಮಧ್ಯಂತರ ಆಜ್ಞೆ ಕೊಟ್ಟಿದ್ದಾರೆ ಅದರ ಪ್ರಕಾರ ಬಿಲ್ ಮಾಡಿದರೆ ಅಂತಿಮ ಆದೇಶವಾದ ಮೇಲೆ ಮತ್ತೊಂದು ತೊಂದರೆ ಉದ್ಭವಿಸಬಹುದು. ದಯಮಾಡಿ ಅಂತಿಮ ಆದೇಶವಾದ ಮೇಲೆ ಮಾಡಿ ಈ ಬಿಲ್ ತರುತ್ತೇವೆಂದು ಏಕೆ ನೀವು ನ್ಯಾಯಾಧೀಶರ ಮುಂದೆ ಹೇಳಲಿಲ್ಲ? ಮತ್ತು ಏಕೆ ರಿಟ್ ಅಪೀಲು ಹಾಕಲಿಲ್ಲ? ಇದು ಇವತ್ತಿನ ತಿದ್ದುಪಡಿಗೆ ದೊಡ್ಡ ಸಂಶಯ ತಂದಿರುವುದಾಗಿದೆ. ನೀವೆಲ್ಲಾ ಭೂಗಳ್ಳರ ಪರವಾಗಿ, ಬಂಡವಾಳಶಾಹಿಗಳ ಪರವಾಗಿ ಈ ಬಿಲ್ ಅನ್ನು ತಂದಿದ್ದೀರಿ. ಮಧ್ಯಂತರ ಆದೇಶವನ್ನು ಇಟ್ಟುಕೊಂಡು ತಂದಿರುವುದಕ್ಕೆ ದಯವಿಟ್ಟು ಸ್ಪಷ್ಟೀಕರಣ ಕೊಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 83,000 ಪ್ರಕರಣಗಳಿವೆ. ಅಧಿಕಾರಿಗಳ ನಿರ್ಲಕ್ಷ್ಯ ಭ್ರಷ್ಟಾಚಾರದಿಂದ ಕಲಂ 79ಎ, 79ಬಿ ಅನ್ನು ತೆಗೆಯುತ್ತೇವೆಂದು ಹೇಳಿದ್ದೀರಿ. ಭ್ರಷ್ಟ ಅಧಿಕಾರಿಗಳು ಯಾರಿದ್ದಾರೆ, ಅವರೇಕೆ ಇದನ್ನು ಅನುಷ್ಠಾನ ಮಾಡಿಲ್ಲ, ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕಲ್ಲವೇ? 83,000 ಕೇಸ್ ಆಗಿದೆ, ಇವತ್ತು ಈ ಕಾನೂನನ್ನು ತರುತ್ತಿದ್ದೀರಿ, ಭ್ರಷ್ಟ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಲ್ಲವೇ? ಹಾಗೇ ಬಿಟ್ಟರೆ ಹೇಗಾಗುತ್ತದೆ? ಇನ್ನೊಂದು ಸ್ಪಷ್ಟೀಕರಣ ಬೇಕಾಗಿದೆ, ಈಗಾಗಲೇ ತಾವು ಹೇಳಿದಿರಿ, ಹಲವಾರು ಸರ್ಕಾರಗಳು ಬಂದಾಗ, ಹಲವಾರು ನಿಯಮಗಳನ್ನು ಚೇಂಜ್ ಮಾಡಿ 02 ಲಕ್ಷ ಇತ್ತು, 25 ಲಕ್ಷ ಮಾಡಿದ್ದೇವೆ ಎಂದಿರಿ ಅದೇ ರೀತಿ ತಾವು ಎಷ್ಟೊಂದು ಭರವಸೆಗಳನ್ನು ಕೊಟ್ಟಿರಿ, ಜಿ.ಎಸ್.ಟಿ ಮೇಲೆ ಭರವಸೆ ಕೊಟ್ಟಿರಿ, ಉಲ್ಟಾ ಹೊಡೆದಿರಿ ಹಾಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮೇಲೆ ಭರವಸೆ ಕೊಟ್ಟು ಉಲ್ಟಾ ಹೊಡೆದಿರಿ. (ಗೊಂದಲ) ಎಷ್ಟು ಸಲ ಚೇಂಜ್ ಮಾಡುತ್ತೀರಿ? ಎರಡು ವರ್ಷದಿಂದ . . . (ಗೊಂದಲ)

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಸದನ ಎರಡು ದಿವಸದಿಂದ ನಡೆಯುತ್ತಿದೆ, ಎರಡು ದಿವಸ ಭಾಷಣ ಮಾಡಿದ್ದಾರೆ . . .

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಪ್ರಕಾಶ್ ರಾಥೋಡ್‌ರವರೇ, . . .

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಇದನ್ನು ವಿರೋಧ ಮಾಡುತ್ತೇವೆ, ಇದು ರೈತ ವಿರೋಧಿ ವಿಧೇಯಕವಾಗಿದೆ.

(ಮುಂದು)

(1025) 08–12–2020/ 05–00/ ಕೆಹೆಚ್–ವಿಕೆ

**ಶ್ರೀ ಆರ್.ಅಶೋಕ್:–** ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಕೇಳಿರುವಂತಹ ಪ್ರಶ್ನೆಗೆ ಯಾವುದನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಸದಸ್ಯರು ಇನ್ನು ಎಷ್ಟು ಚರ್ಚೆ ಮಾಡುತ್ತಾರೆ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಮತ್ತೊಂದು ಬಾರಿ ಭಾಷಣ ಮಾಡುತ್ತಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನದಿ ಪಾತ್ರದಲ್ಲಿ ಇರುವಂತಹ ಜಮೀನು ಎಂದು ತಾವು ಹೇಳಿದ್ದೀರಿ, ನದಿ ಪಾತ್ರದಲ್ಲಿ ಇರುವಂತಹ ಜಮೀನಿನಲ್ಲಿ 10 ಕಿ.ಮೀವರೆಗೆ ನೀರಾವರಿ ಮಾಡಿದ್ದೇವೆ. ನದಿ ಪಾತ್ರ ಎಂದರೆ ಎಲ್ಲಿಯವರೆಗೆ . . .

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಈ ವಿಧೇಯಕ ಇದಕ್ಕೆ ಸಂಬಂಧಪಟ್ಟಿರುವಂತಹದ್ದು ಅಲ್ಲ. ಮಾನ್ಯ ಸಚಿವರೇ ತಾವು ಉತ್ತರವನ್ನು ಹೇಳಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅಚ್ಚುಕಟ್ಟು ಪ್ರದೇಶದಲ್ಲಿ ಈ ಪಂಪ್ ಸೆಟ್‌ಗಳಿಗೆ ನೀರಾವರಿ ಆಗುತ್ತಿರುತ್ತದೆ. ಇದನ್ನು ಪರಿಗಣಿಸದೇ ಇದ್ದರೆ ಕಷ್ಟವಾಗುತ್ತದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಕೊನೆಯಾದಾಗಿ ಒಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ತಮಗೆ exemption. ತಾವು 4 ಪ್ರಶ್ನೆಗಳನ್ನು ಬೇಕಾದರೆ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರೇ, ನಾನು 4 ಪ್ರಶ್ನೆಗಳನ್ನು ಏನು ಕೇಳುವುದಿಲ್ಲ. Karnataka Land Reforms Act 79 'ಎ' ಮತ್ತು 79 'ಬಿ' ಬಗ್ಗೆ ಕೆಳಮನೆಯಲ್ಲಿ ಕೆಲವು ಒಳ್ಳೆಯ ಸಂಸದೀಯ ಪಟುಗಳು, ದೊಡ್ಡ ದೊಡ್ಡ ನಾಯಕರುಗಳು ಮಾತನಾಡಿರುವಂತಹ ವಿಚಾರಗಳನ್ನು ಮಾನ್ಯ ಕಂದಾಯ ಸಚಿವರು ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಕೆಳಮನೆಯಲ್ಲಿ ಚರ್ಚೆಗೆ ಬಂದಿದ್ದು 79 'ಎ' ಸಲುವಾಗಿ, ತಿದ್ದುಪಡಿಗೆ ಅಲ್ಲ. 79 'ಬಿ' ಸಲುವಾಗಿ ಚರ್ಚೆಗೆ ಬಂದಿದೆ. 79 'ಬಿ' 12 ಸಾವಿರದಿಂದ 2 ಲಕ್ಷ ರೂಪಾಯಿಗಳಿಗೆ ಮಾಡುವಾಗ redundant. ಇದನ್ನು other than agriculture income, 2 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರುತ್ತಾರೆ. 2 ಲಕ್ಷ ರೂಪಾಯಿಗಳಿಗಿಂತ ಮೇಲೆ ಇದ್ದವರು ಖರೀದಿ ಮಾಡಬಾರದು ಎನ್ನುವ ಸಂದರ್ಭದಲ್ಲಿ 79 'ಎ' other than agriculturist, ಕೃಷಿಕರು ಅಲ್ಲದೆ ಇರುವವರು ಭೂಮಿಯನ್ನು ಖರೀದಿ ಮಾಡುವವರಾಗಿದ್ದಾರೆ. ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕ್ಯಾಬಿನೇಟ್ ಸಬ್ ಕಮಿಟಿಯ ಅಧ್ಯಕ್ಷರಾದ ಶ್ರೀನಿವಾಸ್ ಪ್ರಸಾದ್‌ರವರು ಅಂದಿನ ಕಂದಾಯ ಇಲಾಖೆಯ ಸಚಿವರಾಗಿದ್ದರು. ಆ ಕ್ಯಾಬಿನೇಟ್ ಸಬ್ ಕಮಿಟಿಯಲ್ಲಿ ನಾನು ಕೂಡ ಇದ್ದೆ. ಮಾನ್ಯ ಸದಸ್ಯರಾದ ಎಂ.ಟಿ.ಬಿ., ನಾಗರಾಜುರವರು ಒಂದು ಎಕರೆ ಜಮೀನಿಗೆ 25 ಸಾವಿರ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡಿದ್ದೆವು. ಈಗ ಒಂದು ಎಕರೆ ಜಮೀನಿಗೆ 34 ಕೋಟಿ ರೂಪಾಯಿಗಳು ಆಗಿದೆ ಎಂದು ಹೇಳಿದರು. ಈ ದೃಷ್ಟಿಯಿಂದ land value increase ಆದಾಗಲೆಲ್ಲಾ income slab ಹೆಚ್ಚಾಗುತ್ತದೆ. 10 ಸಾವಿರ ರೂಪಾಯಿಗಳಿಂದ 25 ಲಕ್ಷ ರೂಪಾಯಿಗಳವರೆಗೂ ಬಂದಿದೆ. ನಾವು 50 ಲಕ್ಷದವರೆಗೂ increase ಮಾಡೋಣ ಎನ್ನುವ ವಿಚಾರವನ್ನು ಇಟ್ಟಿದ್ದೇವೆ. ಈಗ ಕೊನೆಗೆ 25 ಲಕ್ಷ ರೂಪಾಯಿಗೆ ಬಂದು ನಿಂತಿದೆ. ಕೆಲವು ಜನರ ಹೆಸರನ್ನು ತಾವು ಉಲ್ಲೇಖ ಮಾಡಿದ್ದೀರಲ್ಲವೇ, ತಾವು 79 'ಬಿ' ಅನ್ನು ತಿದ್ದುಪಡಿ ಮಾಡುವ ಮೊದಲೇ ಅವರು ಮಾತನಾಡಿದಂತಹ ಮಾತುಗಳಾಗಿವೆ. 79 'ಎ' ಬಗ್ಗೆ ಅಲ್ಲ. ತಾವು ಮಾತನಾಡುವಾಗ 79 'ಎ' ಮತ್ತು 79 'ಬಿ' ಎಂದು ಎರಡನ್ನು ಸೇರಿಸಿದ್ದೀರಿ. ಅದು ನನಗೆ ಆ ರೀತಿಯಾದಂತಹ ಜಿಜ್ಞಾಸೆ ಇದೆ. It

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

should go on record. ನಾವು ಸುಮ್ಮನೆ ಕೂತು, ಪ್ರತಿಪಕ್ಷದ ನಾಯಕನಾಗಿ 79 'ಬಿ' ತಿದ್ದುಪಡಿ ಮಾಡುವ ಮೊದಲು ಕೆಳಮನೆಯಲ್ಲಿ ಹೇಳಿರುವಂತಹ ಮಾತುಗಳಾಗಿವೆ. ಮಾನ್ಯ ಸಚಿವರು 79 'ಎ' ಅನ್ನು ಸೇರಿಸಿಕೊಂಡು ಮಾತನಾಡಿದ್ದಾರೆ. ಮಾನ್ಯ ಸಚಿವರು ಬಹಳ ಜಾಣರು ಇದ್ದಾರೆ. 79 'ಎ' ಮತ್ತು 79 'ಬಿ' ಆಗ ತೆಗೆಯದೇ ಇದ್ದವರು, ಈಗ ತೆಗೆದಿದ್ದೇವೆ ಎಂದು ಹೇಳುವುದಕ್ಕೆ ಹೊರಟಿದ್ದಾರೆ. I don't agree and I completely disagree with it. ನಂತರ ನಾನು ಹೇಳಿರುವಂತಹ ಅಂಶಗಳು ದಾಖಲೆಗೆ ಹೋಗಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಸಲಹೆಗಳನ್ನು ಕೊಟಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರಾದ ಪಿ.ಆರ್. ರಮೇಶ್‌ರವರು ಸರ್ಕಾರಕ್ಕೆ ಪ್ರಕರಣಗಳನ್ನು ಮುಟ್ಟುಗೋಲು ಹಾಕಲಾಗಿದೆ. ಈಗಾಗಲೇ ಮುಟ್ಟುಗೋಲು ಹಾಕಿರುವಂತಹ ಪ್ರಕರಣಗಳು ಸರ್ಕಾರದ ವಶದಲ್ಲಿಯೇ ಇರುವುದರಿಂದ, ಇದನ್ನು ಸರ್ಕಾರ ಮುಂದುವರೆಸುತ್ತದೆ. ಮುಟ್ಟುಗೋಲು ಹಾಕಿರುವಂತಹ ಜಮೀನುಗಳನ್ನು ಸರ್ಕಾರದ ವಶದಲ್ಲಿಯೇ ಮಾಡಲಾಗುತ್ತದೆ. ಎರಡನೆಯದಾಗಿ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಅವರನ್ನು ಕರೆದು ಮಾತನಾಡಿದ್ದೀರಾ ಎಂದು ಕೇಳಿದರು. ವಿಧಾನಸೌಧದ 3ನೇ ಮಹಡಿಯಲ್ಲಿರುವ ಕೊಠಡಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ರೈತ ಮುಖಂಡರುಗಳನ್ನು ಕರೆದು ಒಂದು ಸಭೆಯನ್ನು ಮಾಡಿದ್ದೇವೆ. ಅಲ್ಲಿಯೂ ಕೂಡ ರೈತ ಮುಖಂಡರುಗಳಿಗೆ convince ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ದಯವಿಟ್ಟು, ಆ ದೃಷ್ಟಿಯಿಂದ ಈ ವಿಧೇಯಕವನ್ನು ಅನುಮೋದಿಸಬೇಕೆಂದು ಕೋರುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ, ಇದರ ಬಗ್ಗೆ ನ್ಯಾಯಾಲಯಕ್ಕೆ ಏಕೆ appeal ಹೋಗಲಿಲ್ಲ? ಇದಕ್ಕೆ ಮಧ್ಯಂತರ ಆದೇಶವನ್ನು ತರುವಂತಹ ಅನಿವಾರ್ಯತೆ ಏನಿತ್ತು? ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ಇದು 2013ನೇ ಸಾಲಿನಲ್ಲಿ ಆಗಿರುವಂತಹದ್ದು. 2014-15ನೇ ಸಾಲಿನಲ್ಲಿ ಅಧಿಕಾರದಲ್ಲಿ ಯಾರು ಇದ್ದರೋ . . .

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 1, 12 ಮತ್ತು 13**

**ಸಭಾಪತಿಯವರು:–** "ಖಂಡ 1, 12 ಮತ್ತು 13 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 1, 12 ಮತ್ತು 13ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, we will press for division. ಇದನ್ನು ನಾವು voice vote ನಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. So, we will press for division.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ, ಇದನ್ನು ಡಿವಿಜನ್‌ಗೆ ಹಾಕಿ. ಇದನ್ನು ನಾವು ಒಪ್ಪುವುದಿಲ್ಲ. ನಮಗೆ ಈ ವಿಧೇಯಕ ಸಮಾಧಾನ ತಂದಿರುವುದಿಲ್ಲ. ಇದು ರೈತ ವಿರೋಧ ಕಾಯ್ದೆ ಆಗಿದೆ. ಆದ್ದರಿಂದ ನಮ್ಮೆಲ್ಲರ ಒತ್ತಾಯದಂತೆ ಇದನ್ನು ಧ್ವನಿ ಮತದಲ್ಲಿ ಪಾಸ್ ಮಾಡುವುದು ಬೇಡ. ಡಿವಿಜನ್‌ಗೆ ಹಾಕಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಧ್ವನಿ ಮತದಿಂದ ತಾವು ಈ ವಿಧೇಯಕವನ್ನು ಒಪ್ಪಿಕೊಳ್ಳಬೇಡಿ. We will press for division. ಕೃಷಿಕರನ್ನು ಮತ್ತು ಕೃಷಿಯನ್ನು ಪೂರ್ತಿಯಾಗಿ ನಾಶ ಮಾಡುವಂತಹ ಕಾನೂನು ಆಗಿರುವುದರಿಂದ, ಧ್ವನಿ ಮತದ ಮುಖಾಂತರ ನಾವು ಒಪ್ಪುವುದಿಲ್ಲ. We will press for division.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇದನ್ನು ಧ್ವನಿ ಮತದ ಮುಖಾಂತರ ಅಂಗೀಕರಿಸಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಧ್ವನಿ ಮತಕ್ಕೆ ಒಪ್ಪಿಗೆ ಕೊಡುವುದಿಲ್ಲ. ನಾವು division ಗೆ press ಮಾಡುತ್ತೇವೆ. ಇದಕ್ಕೆ division ಆಗಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಧ್ವನಿ ಮತದಿಂದ ಒಪ್ಪಿಗೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ರೈತ ವಿರೋಧಿ ಕಾಯ್ದೆಯಾಗಿದೆ. ಅದಕ್ಕೋಸ್ಕರ ನಾವು ಈ ವಿಧೇಯಕವನ್ನು ಒಪ್ಪುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು division ಗೆ press ಮಾಡಿದಾಗ you have no alternative. They cannot make any suggestions for the Chair. You have to agree for the division, and you have no alternative at all.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಕೂಡ ಅನೇಕ ಬಾರಿ ಕೇಳಿದಾಗ ಪೀಠ ತೀರ್ಮಾನ ತೆಗೆದುಕೊಂಡು, ಧ್ವನಿ ಮತಕ್ಕೆ ಬೆಲೆ ಕೊಟ್ಟಿರುವುದನ್ನು ನಾವು ಕೇಳಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ವಿರೋಧ ಪಕ್ಷದವರು ವಿಭಜನೆಗೆ ಕೇಳಿದಾಗ ನಮಗೆ alternate ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ವಿಭಜನೆಗೆ ಕೇಳಿದರೆ ಮುಗಿಯಿತು. ತಾವೆಲ್ಲರೂ ಇದಕ್ಕೆ ಒಪ್ಪಿಕೊಳ್ಳಬೇಕು.

**ಸಭಾಪತಿಯವರು:-** ಈಗ ವಿಧೇಯಕವನ್ನು division ಗೆ ಹಾಕಲಾಗುವುದು.

**(ಈ ಹಂತದಲ್ಲಿ ವಿಧೇಯಕದ ಬಗ್ಗೆ ವಿರೋಧ ಪಕ್ಷದವರು ವಿಭಜನೆ ಕೇಳಿದ್ದರಿಂದ, ಸದನದ ಬೆಲ್ ಅನ್ನು ಹಾಕಿ, ಸದನದ ಎಲ್ಲಾ ಬಾಗಿಲುಗಳನ್ನು ತೆರೆಯಲಾಯಿತು ಮತ್ತು ಎರಡು ನಿಮಿಷಗಳ ನಂತರ ಸದನದ ಬೆಲ್ ಅನ್ನು ಆಫ್ ಮಾಡಿ ಎಲ್ಲಾ ಬಾಗಿಲುಗಳನ್ನು ಮುಚ್ಚಲಾಯಿತು)**

**ಸಭಾಪತಿಯವರು:-** ವಿಧೇಯಕದ ಪರವಾಗಿರುವವರು ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲಬೇಕು.

**<u>ಸಭೆಯನ್ನು ವಿಭಜಿಸಲಾಯಿತು</u>**

**ಸಭಾಪತಿಯವರು:-** ವಿಭಜಿಸಿದಾಗ ಫಲಿತಾಂಶ ಹೀಗಿದೆ:

| | |
|---|---|
| ಪರ | – 37 |
| ವಿರೋಧ | – 21 |

ಸೂಚನೆಯು 'ಹೌದು' ಎನ್ನುವವರ ಪರವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕದ ಪರವಾಗಿ 37 ಮತಗಳು ಹಾಗೂ ವಿರುದ್ಧವಾಗಿ 21 ಮತಗಳು ಬಂದಿರುವುದರಿಂದ ವಿಧೇಯಕವು ಅಂಗೀಕೃತಗೊಂಡಿದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

**(1026) 5:10 ಎಸ್‌ಪಿಆರ್/ಎಕೆ 08/12/2020**

**(ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವುದರ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ರೈತರ ಮಕ್ಕಳು ಎಂದು ಹೇಳಿಕೊಳ್ಳುವವರು ಯಾರ ಪರವಾಗಿದ್ದಾರೆ ಎನ್ನುವುದು ನಮಗೆ ಗೊತ್ತಾಗಬೇಕಾಗಿತ್ತು ಅಷ್ಟೇ. ಸ್ವಾಭಿಮಾನದ ಪರವಾಗಿ ಶ್ರೀ ಮರಿತಿಬ್ಬೇಗೌಡರು ಮತ ಚಲಾಯಿಸಿದ್ದಾರೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ದೇಶದಲ್ಲೆಲ್ಲಾ ಕಾಂಗ್ರೆಸ್ ಪಕ್ಷದವರನ್ನು ಖಾಲಿ ಮಾಡಿದ್ದಾರೆ. ಎಲ್ಲಿಯೂ ಸಹ ಏನೂ ಉಳಿದಿಲ್ಲ. ಎಲ್ಲಾ ಕಡೆ ಶೂನ್ಯ ಹಾಗೂ ಖಾಲಿಯಾದೆ.

**(ಗೊಂದಲ)**

**3. ಪ್ರಕಟಣೆ**

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ ಹಾಗೂ ಶ್ರೀ ಸುನೀಲ್‌ಗೌಡ ಬಿ.ಪಾಟೀಲ್ ಅವರುಗಳು ವಿಧಾನ ಪರಿಷತ್ತಿನ 142 ನೇ ಅಧಿವೇಶನದ ಉಪವೇಶನಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವಾದ ಕಾರಣ ಹಾಜರಾತಿ ವಿನಾಯಿತಿ ನೀಡಬೇಕೆಂದು ಕೋರಿರುತ್ತಾರೆ. ಸದರಿಯವರ ಗೈರುಹಾಜರಿಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

ಈಗ ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ. ಶ್ರೀ ಎಸ್.ಆರ್.ಪಾಟೀಲ್ ರವರೇ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, we have to go according to the Agenda.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಗಳನ್ನು ಮೊದಲು ತೆಗೆದುಕೊಳ್ಳಿ. ನಾವು ಸದನದಲ್ಲಿ ಕುಳಿತುಕೊಳ್ಳುತ್ತೇವೆ. ನಂತರದಲ್ಲಿ ಈ ವಿಚಾರವನ್ನು ಪ್ರಾರಂಭಿಸಬಹುದಾಗಿದೆ.

**ಸಭಾಪತಿಯವರು:-** ಕಾರ್ಯಕಲಾಪಗಳ ಪಟ್ಟಿಯಲ್ಲಿನ ಇತರ ವಿಷಯಗಳನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಈಗ ಅವಕಾಶ ನೀಡಿದರೆ ಮಾತ್ರವೇ ನಾನು ಮಾತನಾಡುತ್ತೇನೆ. ಏಕೆಂದರೆ ಕಾರ್ಯಕಲಾಪಗಳ ಪಟ್ಟಿಯನ್ವಯ ನನ್ನ ಸರದಿಯು ಇದೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಂತರದಲ್ಲಿ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:-** ಕಾರ್ಯಕಲಾಪಗಳ ಪಟ್ಟಿಯ ರೀತ್ಯಾ ಸದನವನ್ನು ನಡೆಸೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ನಿಯಮ 68 ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ

**ವಿಷಯ:– ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಠಿಯಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳು ಹಾಗೂ ಪ್ರಾಣ ಹಾನಿಯಾಗಿದ್ದು ಸರ್ಕಾರವು ಪರಿಹಾರ ಕಾರ್ಯಗಳನ್ನು ಕೈಗೊಳ್ಳದಿರುವ ಬಗ್ಗೆ.**

– – – –

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಠಿಯಿಂದಾಗಿ ಸುಮಾರು 55 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಬೆಳೆದ ಬೆಳೆಯು ನಾಶವಾಗಿದೆ. 50,000 ಕ್ಕಿಂತ ಹೆಚ್ಚು ಮನೆಗಳು ಹಾನಿಯಾಗಿವೆ ಹಾಗೂ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ. ಹಲವಾರು ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ನೂರಾರು ಹಳ್ಳಿಗಳು ನೀರಿನಲ್ಲಿ ಮುಳುಗಿವೆ. ಆದರೂ ಸಹ ಇದುವರೆವಿಗೆ ಪರಿಹಾರ ಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಿಯಮ 59ರ ಅಡಿಯಲ್ಲಿ ನಾನು ಹಾಗೂ ನನ್ನ ಅನೇಕ ಸ್ನೇಹಿತರು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಆಗ ತಾವು ನಿಯಮ 68 ರಡಿ ನಮ್ಮ ಮನವಿಯನ್ನು ಪರಿವರ್ತನೆ ಮಾಡಿ ಮಾತನಾಡಲು ನನಗೆ ಅವಕಾಶವನ್ನು ನೀಡಿದ್ದೀರಿ.

ಮೊಟ್ಟಮೊದಲಿಗೆ ಸರ್ಕಾರದ ಕಂದಾಯ ಸಚಿವರು ನೀಡಿರುವ ಹೇಳಿಕೆಯನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಅವರ ಹೇಳಿಕೆ ಈ ಮುಂದಿನಂತಿದೆ. 'ಪ್ರವಾಹದಿಂದಾಗಿ ರಾಜ್ಯದಲ್ಲಿ 24,942 ಕೋಟಿ ಮೊತ್ತದ ಅಂದರೆ, ಅಂದಾಜು 25,000 ಕೋಟಿ ಮೊತ್ತದ ಹಾನಿ ಸಂಭವಿಸಿದೆ.' ಇದನ್ನು ಸ್ವತಃ ಕಂದಾಯ ಸಚಿವರೇ ಹೇಳಿದ್ದಾರೆ. ಇಷ್ಟೇ ಅಲ್ಲದೇ ಕಂದಾಯ ಸಚಿವರು ಒಂದು ಹೆಜ್ಜೆ ಮುಂದೆ ಹೋಗಿ ರಾಜ್ಯದ 180 ತಾಲ್ಲೂಕುಗಳು ಪ್ರವಾಹ ಪೀಡಿತವಾಗಿವೆ ಎಂದು ಘೋಷಣೆ ಮಾಡಿದ್ದಾರೆ. ಪ್ರವಾಹದಿಂದಾಗಿ 90 ಜನ ಮೃತರಾಗಿದ್ದಾರೆ. 1,935 ಜಾನುವಾರುಗಳು ಅಂದರೆ, ಅಂದಾಜು ಸುಮಾರು 2,000 ದಷ್ಟು ಜಾನುವಾರುಗಳು ಕೂಡ ಜೀವ ಕಳೆದುಕೊಂಡಿವೆ. ಅಂದಾಜು 55 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಪರಿಹಾರ ನೀಡುವಂತೆ ಮನವಿ ಮಾಡಿದ್ದೇವೆ. ಇಂತಹ ಹೇಳಿಕೆಯನ್ನು ಕಂದಾಯ ಸಚಿವರಾದ ಶ್ರೀ ಆರ್.ಅಶೋಕ್‌ರವರು ನೀಡಿದ್ದಾರೆ.

2020-21 ನೇ ಸಾಲಿನಲ್ಲಿ ನಮ್ಮ ರಾಜ್ಯವು ಮೂರು ಹಂತದಲ್ಲಿ ಅಂದರೆ ಆಗಸ್ಟ್, ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಪ್ರವಾಹಕ್ಕೆ ತುತ್ತಾಗಿದೆ. ಪ್ರವಾಹ ಬಂದು ಈಗಾಗಲೇ ಮೂರ್ನಾಲ್ಕು ತಿಂಗಳುಗಳು ಕಳೆದರೂ ಸಹ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿದೆ. ಕೇಂದ್ರ ಸರ್ಕಾರವು ಜುಜುಬಿ ಹಣವನ್ನು ನೀಡಿದೆ. ರಾಜ್ಯ ಸರ್ಕಾರವು 10,000 ಕೋಟಿ ರೂಪಾಯಿಗಳನ್ನು ಕೇಳಿದರೆ, ಕೇವಲ 577 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನೀಡಿದೆ. ನೆರೆ ಸಂಕಷ್ಟದಲ್ಲಿರುವ ಜನರಿಗೆ ಸರ್ಕಾರ ಸೂಕ್ತ ಸಮಯದಲ್ಲಿ ಸೂಕ್ತ ಪರಿಹಾರವನ್ನು ನೀಡುವಲ್ಲಿ ಆಸಕ್ತಿ ಇದೆಯೋ ಅಥವಾ ಇಲ್ಲವೋ ಎನ್ನುವ ಬಹಳಷ್ಟು ಸಂಶಯವು ನನಗೆ ಬಂದಿದೆ. ಸರ್ಕಾರವು ಪರಂತು ಹಾನಿಯ ಲೆಕ್ಕವನ್ನು ಹೇಳಿಕೊಂಡೇ ಕುಳಿತಿದೆ. ಪ್ರಾಥಮಿಕ ಹಂತದ ಸಮೀಕ್ಷೆ ಇದ್ದು, ಇನ್ನೂ ಹೆಚ್ಚಿನ ಸಮೀಕ್ಷೆ ಮಾಡಬೇಕು, ಇನ್ನೂ ಹೆಚ್ಚಿನ ಮಾಹಿತಿ ಬರಬೇಕು ಎಂದು ಹೇಳುತ್ತಿದ್ದಾರೆ. ಎಷ್ಟು ಕ್ಷೇತ್ರಗಳು ಪ್ರವಾಹದಲ್ಲಿ ಮುಳುಗಿವೆ, ಎಷ್ಟು ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ, ಎಷ್ಟು ಜಾನುವಾರುಗಳು ಸತ್ತು ಹೋಗಿವೆ ಎನ್ನುವ ವಿಷಯದ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಪರಿಹಾರ ಮೊತ್ತ ಕೇಳಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ, ಅಲ್ಲಿಂದ ಹಣ ಬರುತ್ತದೆ. ಆದರೆ ಹಣವನ್ನು ಕೊಡುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರವು ಮಾಡಬೇಕು. ಆದರೆ, ಇಲ್ಲಿ ಆ ರೀತಿಯ ಪರಿಹಾರ ಕಾರ್ಯವನ್ನು ಇನ್ನೂ ಮಾಡಿಲ್ಲ. ಮಾಸಿಕ ವರದಿಯನ್ವಯ ಬೆಳೆ ನಷ್ಟದ ವಿವರವನ್ನು ನಾನು ಹೇಳುತ್ತೇನೆ. ಆಗಸ್ಟ್ ತಿಂಗಳಿನಲ್ಲಿ 3,56,749 ಹೆಕ್ಟೇರ್‌ನಷ್ಟು ಬೆಳೆ ನಷ್ಟವಾಗಿದೆ.

(ಮುಂದು)

(1027)08-12-2020(05-20)ಬಿಎಸ್‌ಡಿ-ಎಂಡಿ

**ಶ್ರೀ ಎಸ್.ಆರ್. ಪಾಟೀಲ್** (ಮುಂದು)

ಅಷ್ಟೂ ಕ್ಷೇತ್ರದಲ್ಲಿ ಬೆಳೆದ ಬೆಳೆ ನಷ್ಟವಾಗಿದೆ. 2ನೇ ಹಂತದ ಸೆಪ್ಟೆಂಬರ್ ತಿಂಗಳಲ್ಲಿ 6,21,462 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಬೆಳೆ ನಷ್ಟವಾಗಿದೆ. 3ನೇ ಹಂತದ ಅಕ್ಟೋಬರ್ ತಿಂಗಳಲ್ಲಿ 9,30,316 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಬೆಳೆ ಅಂದರೆ ಅಂದಾಜು ಸುಮಾರು 50 ಸಾವಿರ ಎಕರೆಗಿಂತ ಮೇಲ್ಪಟ್ಟು ಬೆಳೆ ನಷ್ಟವಾಗಿದೆ. ಇದು ಸರ್ಕಾರ ನೀಡಿರುವ ಅಂಕಿ ಅಂಶಗಳಾಗಿದ್ದು, ನಿಜ ಸ್ಥಿತಿಯಲ್ಲಿ ನಮ್ಮ ಅಂಕಿ ಅಂಶಗಳ ಪ್ರಕಾರ ಇನ್ನು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಜಿಲ್ಲಾವಾರು ಬೆಳೆ ನಷ್ಟದ ಬಗ್ಗೆ ಹೇಳಬೇಕೆಂದರೆ, ಕಲಬುರಗಿ ಜಿಲ್ಲೆಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4,33,900 ಹೆಕ್ಟೇರ್ ಪ್ರದೇಶದಲ್ಲಿ ರೈತರು ಬೆಳೆದ ಬೆಳೆ ಕೊಚ್ಚಿಕೊಂಡು ಹೋಗಿದೆ. ಬೀದರ್‌ನಲ್ಲಿ 2,69,032 ಹೆಕ್ಟೇರ್, ಗದಗ್ ಜಿಲ್ಲೆಯಲ್ಲಿ 2,96,854 ಹೆಕ್ಟೇರ್, ಧಾರವಾಡ ಜಿಲ್ಲೆಯಲ್ಲಿ 1,79,053 ಹೆಕ್ಟೇರ್, ಬೆಳಗಾವಿಯಲ್ಲಿ 1,61,710 ಹೆಕ್ಟೇರ್, ರಾಯಚೂರು ಜಿಲ್ಲೆಯಲ್ಲಿ 86,149 ಹೆಕ್ಟೇರ್‌ನಷ್ಟು ಬೆಳೆ ನಷ್ಟವಾಗಿದೆ. ಅದೇರೀತಿ ಬಾಗಲಕೋಟೆ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಬೆಳೆ ನಷ್ಟವಾಗಿ ಮನೆಗಳು ನಾಶವಾಗಿದೆ. 2020-21ನೇ ಸಾಲಿನ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ತೊಗರಿ ಪೀಕು ನಾಶವಾಗಿದೆ, ಜೋಳ ನಾಶವಾಗಿದೆ, ಹೆಸರು ನಾಶವಾಗಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ನೆಲಗಡಲೆ, ಸೋಯಾ ಬೆಳೆಗಳು ನಾಶವಾಗಿದೆ. ಇದರ ಜೊತೆಗೆ 97,091 ಹೆಕ್ಟೇರ್‌ನಲ್ಲಿ ಕಬ್ಬು ನಾಶವಾಗಿದೆ. 51,408 ಹೆಕ್ಟೇರ್‌ನಲ್ಲಿ ಭತ್ತ ನಾಶವಾಗಿದೆ. ಅದೇರೀತಿ ಹತ್ತಿ 2,62,525 ಹೆಕ್ಟೇರ್‌ನಲ್ಲಿ ನಾಶವಾಗಿದೆ. ತೊಗರಿ ಕಣಜ ಎನ್ನುವಂತಹ ಕಲ್ಯಾಣ ಕರ್ನಾಟಕದಲ್ಲಿ 5,95,637 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ನಾಶವಾಗಿದೆ. 2,37,914 ಹೆಕ್ಟೇರ್‌ನ ಪ್ರದೇಶದ ಜೋಳ ನಾಶವಾಗಿದೆ. 2,20,645 ಹೆಕ್ಟೇರ್ ಪ್ರದೇಶದ ಹೆಸರು ಹಾನಿಯಾಗಿದೆ. 1,30,913 ಹೆಕ್ಟೇರ್ ಪ್ರದೇಶದ ನೆಲಗಡಲೆ ಹಾನಿಯಾಗಿದೆ, 2,02,829 ಹೆಕ್ಟೇರ್ ಪ್ರದೇಶದ ಸೋಯಾ ಬೀನ್ ಬೆಳೆ ಕೂಡ 2020-21ನೇ ಸಾಲಿನ ಮೂರು ಹಂತಗಳಲ್ಲಿ ರೈತ ಬೆಳೆ ಕಳೆದುಕೊಂಡಿದ್ದಾನೆ.

ಮಾನ್ಯ ಸಭಾಪತಿಯವರೇ, 2019-20ನೇ ಸಾಲಿನಲ್ಲಿ ನೆರೆ ಹಾವಳಿಯಿಂದ ಶತಮಾನದಲ್ಲಿ ಕಂಡರಿಯದ ಅಂದರೆ 118 ವರ್ಷಗಳಲ್ಲಿ ಎಂದೂ ಕಂಡರಿಯದ, ವಿಶೇಷವಾಗಿ ಉತ್ತರ ಕರ್ನಾಟಕದ ಜಲಪ್ರಳಯವಾಗಿದ್ದು, ಅಲ್ಲಿ 19 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಪ್ರವಾಹ ಬಂದಿತ್ತು. 2020-21ನೇ ಸಾಲಿನಲ್ಲಿ 25 ಜಿಲ್ಲೆಗಳ 180 ತಾಲ್ಲೂಕುಗಳು ಪ್ರವಾಹದ ಹಾನಿ ಅನುಭವಿಸಿವೆ. ಅದೇರೀತಿ 2019-20ರಲ್ಲಿ 26 ಲಕ್ಷ ಎಕರೆಯಲ್ಲಿ ಬೆಳೆದ ಪೀಕು ಹಾನಿಯಾಗಿದೆ. ಈ ಸಾರಿ 55 ಲಕ್ಷ ಎಕರೆ ಭೂಮಿಯಲ್ಲಿ ಬೆಳೆದ ಬೆಳೆ ಹಾನಿಯಾಗಿದೆ. 2019-20ರಲ್ಲಿ ಒಟ್ಟು ರೂ.35,160 ಕೋಟಿ ಹಾನಿಯಾಗಿದ್ದು, ಈ ಸಾರಿ ರೂ.25,000 ಕೋಟಿ ಹಾನಿಯಾಗಿದೆ. ನಮ್ಮ ರಾಜ್ಯದಲ್ಲಿ ಕಳೆದ ಹಾಗೂ ಈ ಸಾರಿ ನೆರೆ ಹಾವಳಿಯಿಂದ ರೂ.60 ಸಾವಿರ ಕೋಟಿಗಳಷ್ಟು ಹಾನಿ ಅನುಭವಿಸಿದೆ.

ಮಾನ್ಯ ಸಭಾಪತಿಯವರೇ, ಹೋದಸಾರಿ ಅಂದರೆ 2019-20ರಲ್ಲಿ 2,47,628 ಮನೆಗಳು ಹಾನಿಯಾಗಿದ್ದರೆ, ಈ ಸಾರಿ 48,424 ಮನೆಗಳು ಹಾನಿಯಾಗಿದ್ದು, ಒಟ್ಟು 2,96,052 ಮನೆಗಳು ಅತಿವೃಷ್ಟಿಯಿಂದ ಹಾಳಾಗಿವೆ. ನನಗನಿಸಿದ ಮಟ್ಟಿಗೆ ಸುಮಾರು 3 ಲಕ್ಷ ಮನೆಗಳು ಹಾಳಾಗಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಪೈರಿನ ಬಗ್ಗೆ ಹೇಳುವುದಾದರೆ ಹೋದಸಾರಿ 26 ಲಕ್ಷ ಎಕರೆಯಲ್ಲಿ ಪೈರು ಹಾನಿಯಾಗಿದ್ದು, ಈ ಸಾರಿ 50 ಲಕ್ಷ ಎಕರೆಯಲ್ಲಿ ಬೆಳೆದ ಪೈರು ಹಾನಿಯಾಗಿದ್ದು, ಒಟ್ಟು 76 ಲಕ್ಷ ಎಕರೆ ಪ್ರದೇಶದ ಪೈರು ಸಂಪೂರ್ಣವಾಗಿ ನಾಶವಾಗಿದೆ ಎಂದು ಹೇಳಬಯಸುತ್ತೇನೆ. ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ರೂ.1,611 ಕೋಟಿ ಹಾನಿಯಾಗಿದ್ದು, ಸುಮಾರು 19 ಜಾನುವಾರುಗಳನ್ನು ಕಳೆದುಕೊಂಡಿದ್ದೇವೆ ಹಾಗೂ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ನಾನು ಬೆಳಗಾವಿಯ ಜಿಲ್ಲೆಗೆ ಭೇಟಿ ಕೊಟ್ಟಿದ್ದಾಗ, ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಮಾಹಿತಿ ಸಂಗ್ರಹಿಸಲು ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ ಒಟ್ಟು 1,39,182 ರೈತರು ಹಾನಿಗೊಳಗಾಗಿದ್ದಾರೆ. ಅಂದರೆ ಅವರ ಜಮೀನಿನಲ್ಲಿ ಪೈರು ಕಳೆದುಕೊಂಡಿದ್ದಾರೆ. ಅದರಲ್ಲಿ 31,140 ರೈತರಿಗೆ ಪರಿಹಾರ ಅಂದರೆ input subsidy ಕೊಟ್ಟಿದ್ದಾರೆ. ಅಂದರೆ ಶೇಕಡ 20.98 ರೈತರಿಗೆ ಮಾತ್ರ ಪರಿಹಾರ ಸಂದಾಯವಾಗಿದೆ. ಬೆಳಗಾವಿಗೆ ನಾನು ಭೇಟಿ ಕೊಟ್ಟ ದಿನಾಂಕದಂದು ಪ್ರತಿಶತ 80 ರಷ್ಟು ರೈತರಿಗೆ ಪರಿಹಾರ ದೊರಕಿಲ್ಲ. ಮಾನ್ಯ ಜಗದೀಶ್‌ಶೆಟ್ಟರ್ ಬೆಳಗಾವಿ ಉಸ್ತುವಾರಿ ಸಚಿವರೆಂದು ಅನಿಸುತ್ತದೆ. ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಮಹಾಪೂರ ಬರುತ್ತದೆ ಎಂದನಿಸುತ್ತದೆ. ಅಂದರೆ ಅವರು ಬಂದಾಗಲೇ ಮಹಾಪೂರ ಬರುತ್ತದೆ ಎಂದು ಹೇಳುವುದಿಲ್ಲ. 2009 ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಉತ್ತರ ಕರ್ನಾಟಕ ಭೀಕರ ಮಳೆಗೆ ಪೂರ ಕೊಚ್ಚಿಕೊಂಡು ಹೋಗಿತ್ತು. ಆಗ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆಗ ದೊಡ್ಡ ಪ್ರಮಾಣದಲ್ಲಿ ಬೇರೆ ಬೇರೆ ದಾನಿಗಳು ಬಂದರು, ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆ ಮಾಡಿದರು, food grains supply ಮಾಡಿದರು, 2009ರಲ್ಲಿ ಉತ್ತರ ಕರ್ನಾಟಕ ಪೂರಾ ಕೊಚ್ಚಿಕೊಂಡು ಹೋಯಿತು. ನಂತರ ಬೇರೆ ಬೇರೆ ಜಾಗಗಳಲ್ಲಿ ಖರೀದಿಸಿ, ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆ ಆಗಿ, rehabilitation centre fix ಮಾಡಿ, ದೊಡ್ಡ ಪ್ರಮಾಣದಲ್ಲಿ ಹಾನಿಯಾಯಿತು. ಆಮೇಲೆ 2019ರಲ್ಲಿ...... ನಮ್ಮ ಕಡೆಯಿಂದ ಹೋದ ಮಂತ್ರಿಗಳು ಯಾರೂ ಆ ಕಡೆ ಕಾಣುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಿಜೆಪಿ ಸರ್ಕಾರ ಇದ್ದಾಗ ಪ್ರವಾಹ ಬಂದ ಬಗ್ಗೆ ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲ, I am just referring.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಮ್ಮ ಸರ್ಕಾರ ಇದ್ದಾಗ ಪ್ರವಾಹ ಬಂತು, ಅವರ ಸರ್ಕಾರ ಇದ್ದಾಗ ಬರಗಾಲ ಬಂತು. ಒಟ್ಟಾರೆ ಯೋಚಿಸಿದಾಗ ಭೀಕರ ಬರಗಾಲ.......

**ಶ್ರೀ ಎಸ್.ಆರ್. ಪಾಟೀಲ್:-** Just for reference I am telling. ನನಗೆ ಭವಿಷ್ಯದಲ್ಲಿ ನಂಬಿಕೆ ಇಲ್ಲ, ಅವರು ಬಂದರೆ ಹೀಗೆ ಆಗುತ್ತದೆ ಎಂದು ಹೇಳಲು ಆಗುವುದಿಲ್ಲ. ನಾನು ಮುಹೂರ್ತ ನೋಡುವುದಿಲ್ಲ. ರಾಹುಕಾಲ, ಗುಳಿಕ ಕಾಲ ಮತ್ತು ಯಮಗಂಡ ಕಾಲ ಎಂದಿದ್ದು, ಯಮಗಂಡ ಕಾಲದಲ್ಲಿಯೇ ನಾನು ಒಳ್ಳೆಯ ಕೆಲಸ ಮಾಡುತ್ತೇನೆ. ನಾನು ಯಾವತ್ತೂ ಮುಹೂರ್ತ ನೋಡಿ ಕೆಲಸ ಮಾಡುವುದಿಲ್ಲ. ಯಾವುದು ಕೆಟ್ಟ ಮುಹೂರ್ತ ಎನ್ನುತ್ತಾರೋ, ಆಗ ನಾನು ಒಳ್ಳೆಯ ಕೆಲಸ ಮಾಡುತ್ತೇನೆ. ಭವಿಷ್ಯದಲ್ಲಿ ನನಗೆ ನಂಬಿಕೆ ಇಲ್ಲ.

(ಮುಂದು)

(1028)/08.12.2020/5.30/ಹೆಚ್‌ವಿಃಜಿಆರ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್**(ಮುಂದುವರೆದದ್ದು)

ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ಕಾಕತಾಳೀಯ ಎನ್ನುವಂತೆ 2009ರಲ್ಲಿ, 2019ರಲ್ಲಿ ಮತ್ತು 2020 ರಲ್ಲಿ ಹೀಗೆ ರಾಜ್ಯವು ಮೂರು ಬಾರಿ ದೊಡ್ಡ ಪ್ರಮಾಣದಲ್ಲಿ ಪ್ರವಾಹಕ್ಕೀಡಾಗಿದೆ. 2020ನೇ ಸಾಲಿನಲ್ಲಿ ಮೂರು ಹಂತಗಳಲ್ಲಿ ರಾಜ್ಯ ಪ್ರವಾಹಕ್ಕೆ ತುತ್ತಾಗಿದೆ. ಆಗಸ್ಟ್ 15 ರಿಂದ ಸೆಪ್ಟೆಂಬರ್ 15ರವರೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಮಳೆ ಮತ್ತು ಪ್ರವಾಹ ಉಂಟಾಗಿತ್ತು ಇದು ಮೊದಲನೆಯ ಹಂತ. ಎರಡನೆಯ ಹಂತದ ಸೆಪ್ಟೆಂಬರ್ 16ರಿಂದ ಸೆಪ್ಟೆಂಬರ್ 30ರವರೆಗೆ ಹಾಗೂ ಮೂರನೆಯ ಹಂತ ಅಕ್ಟೋಬರ್ 10 ರಿಂದ 20ರವರೆಗೆ, ಹೀಗೆ ಮೂರು ಹಂತಗಳನ್ನು ಗುರುತಿಸಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2009ರಲ್ಲಿ ಉಂಟಾದ ದೊಡ್ಡ ಪ್ರಮಾಣದ ಪ್ರವಾಹವನ್ನು ನನ್ನ ಸಾರ್ವಜನಿಕ ಬದುಕಿನಲ್ಲಿ ಕಂಡಿರಲಿಲ್ಲ. ಬ್ರಿಟೀಷ್ ಸರ್ಕಾರ ಅಸ್ತಿತ್ವದಲ್ಲಿ ಇದ್ದಂತಹ ಕಾಲದಲ್ಲಿ ಅಂದರೆ 1914ರಲ್ಲಿ ಬಹಳ ದೊಡ್ಡ ಪ್ರಮಾಣದ ಪ್ರವಾಹ ಬಂದಿರುವುದಾಗಿ ಹೇಳುತ್ತಾರೆ. ಬ್ರಿಟೀಷ್‌ರ ಆಡಳಿತ ಕಾಲದಲ್ಲಿ ಒಂದು ಮಾರ್ಕಿಂಗ್ ಸ್ಟೋನ್ ಫಿಕ್ಸ್ ಮಾಡಿದ್ದಾರೆ. ಈ ಬಾರಿ ಪ್ರವಾಹ ಬಂದಾಗ ನಾವು ಹೋಗಿ ನೋಡಿದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಮಾರ್ಕಿಂಗ್ ಸ್ಟೋನ್ ಮುಳುಗಡೆಯಾಗಿ ಅದರ ಮೇಲೆ ನೀರು ಬಂದಿದೆ. ಅಂದರೆ, 106 ವರ್ಷಗಳಲ್ಲಿ ಆಗದೇ ಇರುವಷ್ಟು ದೊಡ್ಡ ಪ್ರಮಾಣದ ಮಳೆ ಬ್ರಿಟೀಷರು ಬಿಟ್ಟು ಹೋದ ಮೇಲೆ ಈಗ ಆಗಿದೆ. ಶತಮಾನಗಳ ಹಿಂದೆ ಯಾವ ರೀತಿಯಲ್ಲಿ ಮಳೆಯಾಗಿತ್ತು ಎನ್ನುವುದನ್ನು ಹೇಳುವುದಕ್ಕೆ ಹಿರಿಯರು ಯಾರೂ ಇಲ್ಲ. ಈಗ ನಾವು ಬಹಳ ಹಿರಿಯ ನಾಗರಿಕರನ್ನು ಈ ಬಗ್ಗೆ ಕೇಳಿದರೆ, 'ಇಲ್ಲ ನಮ್ಮ ತಾತ ಮತ್ತು ನಮ್ಮ ತಂದೆಯವರು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರವಾಹ ಬಂದಿತ್ತು ಎಂದು ಹೇಳುತ್ತಿದ್ದರು ನಾವು ನೋಡಿಲ್ಲ', ಎಂದು ಹೇಳುತ್ತಾರೆ. 2009-10, 2019-20 ಮತ್ತು 2020-21 ರಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿತ್ತು, ಆಗಲೇ ಭಾರಿ ಪ್ರಮಾಣದ ಪ್ರವಾಹ ಮತ್ತು ಮಳೆ ಆಗಿದೆ. ಅದಕ್ಕಾಗಿಯೇ ನಾನು ಇದು ಕಾಕತಾಳೀಯ ಎನ್ನುವ ಮಾತನ್ನು ಹೇಳಿದ್ದೇನೆ. ಅಕ್ಟೋಬರ್ 10 ರಿಂದ 20ರ ನಂತರ ಮಳೆ ಬರುವುದು ನಿಂತಿಲ್ಲ. ಉತ್ತರ ಕರ್ನಾಟಕವನ್ನು ಹೊರತು ಪಡಿಸಿ ಉಳಿದ ಜಿಲ್ಲೆಗಳು ಅಂದರೆ, ಕೋಲಾರ, ಬೆಂಗಳೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ ಮುಂತಾದ ಹಳೆಯ ಮೈಸೂರು ಭಾಗದ ಜಿಲ್ಲೆಗಳಲ್ಲಿ ಕಟಾವಿಗೆ ಬಂದಂತಹ ರಾಗಿ, ಭತ್ತ ಮತ್ತು ಜೋಳದ ಬೆಳೆಗಳು ಹಾಳಾಗಿ ನೆಲಕಚ್ಚಿವೆ. ತೆನೆಯಲ್ಲಿಯೇ ಮೊಳಕೆಯೊಡೆದಿವೆ. ಅತೀ ಮಳೆಯಾದಾಗ ಕಾಳು ತೇವಾಂಶದಿಂದ ಕೂಡಿರುತ್ತದೆ ಆಗ ತೆನೆಯಲ್ಲಿಯೇ ಮೊಳಕೆವೊಡೆಯುತ್ತದೆ. ಇಷ್ಟು ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆ ನಷ್ಟವುಂಟಾಗಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟಿದೆ. ಅದರಲ್ಲಿ 'ಸುಮಾರು 50 ಲಕ್ಷ ಎಕರೆಯಲ್ಲಿ ಬೆಳೆದಿರುವ ಫಸಲು ಸಂಪೂರ್ಣವಾಗಿ ಹಾಳಾಗಿದೆ' ಎಂದು ಉಲ್ಲೇಖ ಮಾಡಿದೆ. 2020-21ನೇ ಸಾಲಿನಲ್ಲಿ ಹೆಚ್ಚು ಕಡಿಮೆ ಈ ವರ್ಷ ಬಿತ್ತನೆ ಮಾಡಿರುವ ಪ್ರದೇಶದಲ್ಲಿ ನಾಲ್ಕನೆ ಒಂದು ಭಾಗದಷ್ಟು ಕೊಚ್ಚಿ ಹೋಗಿದೆ. ಇದರ ಜೊತೆಗೆ ರೈತರ ಭೂಮಿಯಲ್ಲಿ ಹೂಳು ತುಂಬಿದೆ. It will not be fit for cultivation. ಈ ಭೂಮಿಯಲ್ಲಿ ರೈತ ಉಳುಮೆ ಮಾಡಿ ಬಿತ್ತನೆ ಮಾಡುವುದಕ್ಕೆ ಅಸಾಧ್ಯವಾಗಿದೆ. ಸುಮಾರು 26,313 ಹೆಕ್ಟೇರ್ ಪ್ರದೇಶ ಹೂಳು ತುಂಬಿಕೊಂಡು ಹಾಳಾಗಿದೆ. ಈಗಾಗಲೇ ನಾನು ಹೇಳಿದಂತೆ ಸುಮಾರು 2,000ದಷ್ಟು ಜಾನುವಾರುಗಳು ಸಾವನ್ನಪ್ಪಿವೆ. 90 ಜನರು ಪ್ರಾಣ ಕಳೆದುಕೊಂಡಿದ್ದಾರೆ. Just for casual reference I quoted the statistics of 2019-20. ಈ ಬಾರಿ 48,420 ಮನೆಗಳು ಸಂಪೂರ್ಣವಾಗಿ ಹಾಳಾಗಿವೆ. ಸುಮಾರು 37,806 ಕಿಲೋಮೀಟರ್ ರಸ್ತೆ ಹಾಳಾಗಿದೆ. 4,084 ಸೇತುವೆಗಳು ಹಾಳಾಗಿವೆ. ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ 1371 ಕಾಮಗಾರಿಗಳು ಕೊಚ್ಚಿಕೊಂಡು ಹೋಗಿವೆ. 660 ಕೆರೆಕಟ್ಟೆಗಳು ಹಾಳಾಗಿವೆ. ಶಾಲಾ ಕಟ್ಟಡಗಳಿರಬಹುದು, ಅಂಗನವಾಡಿ ಕೇಂದ್ರಗಳಿರಬಹುದು ಇನ್ನಿತರ ಸಾರ್ವಜನಿಕ ಕಟ್ಟಡಗಳು ಒಟ್ಟಾರೆ, ಸುಮಾರು 7606 ಸರ್ಕಾರಿ ಕಟ್ಟಡಗಳು ಹಾಳಾಗಿವೆ. ವಿದ್ಯುತ್ ಕಂಬಗಳು ಕಿತ್ತುಕೊಂಡು ಹೋಗಿವೆ, ವಿದ್ಯುತ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈರ್‌ಗಳು ಕಿತ್ತುಕೊಂಡು ಹೋಗಿವೆ. ಟ್ರಾನ್ಸ್‌ಫಾರಂಗಳು ನೀರಿನಲ್ಲಿ ಮುಳುಗಿವೆ. ಅಂದಾಜು ಹಾನಿಯ ಮೊತ್ತ 25 ಸಾವಿರ ಕೋಟಿ ರೂಪಾಯಿಗಳಷ್ಟಾಗಿದೆ. ಎರಡು ಹಂತಗಳಲ್ಲಿ ಹಾನಿಯಾಗಿದೆ. ಆ ಮನವಿಯಲ್ಲಿ ಉಲ್ಲೇಖ ಮಾಡಿರುವುದನ್ನು ನೋಡಿದರೆ, ಸುಮಾರು 5 ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿರುವ ಸಣ್ಣ ಮತ್ತು ಅತೀ ಸಣ್ಣ ರೈತರು ಶೇಕಡಾ 30ಕ್ಕಿಂತ ಹೆಚ್ಚು ಹಾನಿಗೊಳಗಾಗಿದ್ದಾರೆ. ಸುಮಾರು 16,68,971 ಹೆಕ್ಟೇರ್ ಪ್ರದೇಶದಲ್ಲಿ ಇವರು ಬೆಳೆದಂತಹ ಬೆಳೆ ಹಾನಿಗೊಳಗಾಗಿದೆ. ದೊಡ್ಡ ರೈತರು ಎಂದರೆ, 5 ಎಕರೆಗಿಂತ ಮೇಲ್ಪಟ್ಟು ಭೂಮಿಯನ್ನು ಹೊಂದಿರುವವರ ಪಾಡನ್ನು ಕೇಳುವವರೇ ದಿಕ್ಕಿಲ್ಲ. ಇವರುಗಳು ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸಿದ್ದಾರೆ. ದೊಡ್ಡ ರೈತರ ಸ್ಥಿತಿ ಚಿಂತಾಜನಕವಾಗಿದೆ. ಅವರು ಹೊರಗೆ ಹೋಗಿ ಉಳುಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೆಳೆದ ಬೆಳೆ ಅವರ ಕೈಗೆ ಬರಲಿಲ್ಲ. ಅವರುಗಳು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಮೂರನೆ ಹಂತದಲ್ಲಿ ಕಲ್ಯಾಣ ಕರ್ನಾಟಕ ಅಂದರೆ, ಹೈದ್ರಾಬಾದ್-ಕರ್ನಾಟಕದ ಪ್ರದೇಶಗಳು ಅಕ್ಟೋಬರ್ ತಿಂಗಳಿನಲ್ಲಿ ಆದಂತಹ ಮಳೆಯಿಂದ ಅತೀ ಹೆಚ್ಚು ಹಾನಿಗೆ ಒಳಗಾಗಿದೆ. ಇದರ ಜೊತೆಗೆ ಚಿತ್ರದುರ್ಗದಿಂದ ಹಿಡಿದು ರಾಜ್ಯದ ಉದ್ದಗಲಕ್ಕೆ ಎಲ್ಲ ಕಡೆಗಳಲ್ಲಿಯೂ ಹಿಡುವಳಿ ಹೋಗಿದೆ. ಟೊಮೊಟೋ, ಹತ್ತಿ, ಮುಸುಕಿನ ಜೋಳ, ಮೆಣಸಿನಕಾಯಿ ಮತ್ತು ತೊಗರಿ ಬೆಳೆಗಳು ಸಂಪೂರ್ಣವಾಗಿ ಹಾಳಾಗಿವೆ.

ಸನ್ಮಾನ್ಯ ಸಭಾಪತಿಯವರೇ, ಕೈಗಾರಿಕಾ ಸಚಿವರು ಉತ್ತರ ಕರ್ನಾಟಕಕ್ಕೆ ಸೇರಿದವರಾಗಿದ್ದಾರೆ. ನಮ್ಮ ಭಾಗದಲ್ಲಿ ಕಪ್ಪು ಹತ್ತಿಯ ಮಣ್ಣನ್ನು ಕಾಣುತ್ತೇವೆ. ಕೆಂಪು ಮಣ್ಣಿನ ಪ್ರದೇಶದಲ್ಲಿ ಮಳೆಯಾದರೆ, ಭೂಮಿಯಲ್ಲಿ ಹೀರಲ್ಪಡುತ್ತದೆ. ನಮ್ಮ ಭಾಗದಲ್ಲಿ ಮಳೆಯಾದರೆ, ಭೂಮಿ ಹಿಂಗುವುದಿಲ್ಲ. ಅದು ಹಾಗೆಯೇ ಉಳಿಯುತ್ತದೆ. ಇದರಿಂದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿ ಅನುಭವಿಸುತ್ತೇವೆ. ಇಷ್ಟೆಲ್ಲ ಹಾನಿಯ ಬಗ್ಗೆ ನಾನು ಮಾಹಿತಿಯನ್ನು ನೀಡಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಯೊಂದು ಜಿಲ್ಲೆಗೆ ಹೋಗಿ ರೈತರನ್ನು ಭೇಟಿ ಮಾಡಿ ಸಾಂತ್ವನ ಹೇಳುವಂತಹ ಕೆಲಸವನ್ನು ಮಾಡಿಲ್ಲ. ಪರಿಹಾರ ಕೊಡುವುದು ಬೇರೆ ಪ್ರಶ್ನೆ. ಪರಿಹಾರ ಕೊಡುವುದಕ್ಕೆ ಶಿಫಾರಸ್ಸು ಮಾಡಬೇಕು, ಅದು ಕೇಂದ್ರ ಸರ್ಕಾರಕ್ಕೆ ಹೋಗಬೇಕು ಕೇಂದ್ರ ಸರ್ಕಾರದಿಂದ ಬರುವಂತಹ ಹಣ ಕಡಿಮೆಯಾದರೆ, ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ ಹಣವನ್ನು ಕೊಡಬೇಕಾಗುತ್ತದೆ. ಕಷ್ಟದಲ್ಲಿದ್ದಾಗ, ನೋವಿನಲ್ಲಿದ್ದಾಗ, ದುಃಖದಲ್ಲಿದ್ದಾಗ ಯಾರಾದರು ಒಬ್ಬ ಹಿರಿಯ ಐ.ಎ.ಎಸ್., ಅಧಿಕಾರಿ ಹೋಗಿ ಸಾಂತ್ವನ ನೀಡಿದರೆ ಅವರಲ್ಲಿ ಆಶಾ ಭಾವನೆ ಮೂಡುತ್ತದೆ. ಆದರೆ, ಯಾರೊಬ್ಬರೂ ಆ ಕಡೆ ಸುಳಿದಿಲ್ಲ. ಉಸ್ತುವಾರಿ ಕಾರ್ಯದರ್ಶಿಗಳು ತಮಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟ ಉಸ್ತುವಾರಿ ಜಿಲ್ಲೆಗಳಲ್ಲಿ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳೊಂದಿಗೆ ಭೇಟಿ ನೀಡಿ, ಸಭೆ ಕರೆದು, ರೈತರ ಜಮೀನುಗಳಿಗೆ ಭೇಟಿ ಕೊಟ್ಟು, ಎಲ್ಲ ಅಧಿಕಾರಿಗಳ ಸಭೆ ಕರೆಯಬೇಕಾಗಿತ್ತು.

(ಮುಂದುವರಿದಿದೆ)

(1029) 8.12.2020 : 5.40 : ಪಿಕೆ:ಜಿಆರ್

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ವಿಧೇಯಕವನ್ನು ಮತಕ್ಕೆ ಹಾಕಿದ ಸಂದರ್ಭದಲ್ಲಿ ನಿಮ್ಮ ಪಕ್ಷದ ಎಲ್ಲಾ ಸದಸ್ಯರು ಉಪಸ್ಥಿತರಿರಬೇಕಾಗಿತ್ತು. ನಿಮ್ಮಲ್ಲಿನ ಸದಸ್ಯರೇ ಅನುಪಸ್ಥಿತರಾಗಿದ್ದರು. ವಿಪ್ ಸರಿಯಾಗಿ ಕೆಲಸ ಮಾಡಬೇಕಾಗಿತ್ತು.

**ಡಾ॥ ಎಂ.ನಾರಾಯಣಸ್ವಾಮಿ:-** ನಮ್ಮ ಮಾತು ಕೇಳಿ. ಯಾರು ಮಣ್ಣಿನ ಮಕ್ಕಳು, ರೈತರ ಮಕ್ಕಳು ಎಂದು ಹೇಳುತ್ತಿದ್ದರೋ ಅವರು ಎಕ್ಸ್‌ಪೋಸ್ ಆಗಬೇಕಾಗಿತ್ತು. . . .

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಿಮ್ಮಲ್ಲಿ ಆಗ ಕೋರಂ ಇರಲಿಲ್ಲ. 9 ಜನ ಅನುಪಸ್ಥಿತರಾಗಿದ್ದರು. ಅಂದರೆ, ನಿಮ್ಮಲ್ಲೇ ಎರಡು ಭಾಗ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್:-**ನಿಮ್ಮ ಎಲ್ಲಾ ಸದಸ್ಯರು ಉಪಸ್ಥಿತರಿದ್ದರೇ?

**ಶ್ರೀ ವೈ.ಎ.ನಾರಾಯಣಸ್ವಾಮಿ:-** ನಮ್ಮ ಕಡೆಯ ಎಲ್ಲಾ ಸದಸ್ಯರು ಇದ್ದರು.

**ಶ್ರೀ ಎಸ್.ಆರ್.ಪಾಟೀಲ್:-**ನೀವು ಜೆಡಿ(ಎಸ್)ನವರ ಸಹಾಯ ತೆಗೆದುಕೊಂಡು ಗೆದ್ದಿರಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಯಾವ ಯಾವ ಕಾಲದಲ್ಲಿ ಏನೇನಾಗಿತ್ತು ಎನ್ನುವುದು ನಮಗೆ ಗೊತ್ತಿರಲಿಲ್ಲ. ಮಾನ್ಯ ಬಿ.ಡಿ.ಜತ್ತಿರಯವರ ಕಾಲದಿಂದ ಭೂ ಸುಧಾರಣೆಗೆ ಸಂಬಂಧಪಟ್ಟಂತೆ ಯಾರ್‍ಯಾರು, ಯಾವರೀತಿ ಸಪೋರ್ಟ್ ಮಾಡಿದ್ದರು ಎನ್ನುವ ವಿಚಾರಗಳನ್ನು ಮಾನ್ಯ ಕಂದಾಯ ಸಚಿವರು ಬಿಚ್ಚಿಟ್ಟರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ನಿಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ, ನಿರೀಕ್ಷೆಗೆ ಮೀರಿ, ನಮ್ಮ ಊಹೆಗೆ ಮೀರಿ, ಶತಮಾನದಲ್ಲಿ ಕಂಡರಿಯದಂತಹ, ಕೇಳರಿಯದಂತಹ ಅತಿವೃಷ್ಟಿ ಆಗುವುದರ ಜೊತೆಗೆ ದೊಡ್ಡ ಪ್ರಮಾಣದಲ್ಲಿ ಮಹಾಪೂರ ಬಂದು, ಜನ ಕೊಚ್ಚಿಕೊಂಡು ಹೋದರು, ಮನೆಗಳು ಕೊಚ್ಚಿಕೊಂಡು ಹೋಯಿತು, ಬೆಳೆಗಳು ಕೊಚ್ಚಿಕೊಂಡು ಹೋಯಿತು, ಭೂಮಿ ಕೂಡ ಕೊಚ್ಚಿಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹೃದಯ ವಿದ್ರಾವಕ ಘಟನೆಗಳು ನಡೆದಂತಹ ಸಂದರ್ಭದಲ್ಲಿ ಉಸ್ತುವಾರಿ ಕಾರ್ಯದರ್ಶಿಗಳು ಅಂತಹ ಜಾಗಗಳಿಗೆ ಹೋಗಬೇಕಾಗುತ್ತದೆ, ಸಚಿವರು ಹೋಗಬೇಕಾಗುತ್ತದೆ. ಬಹುತರ ನಾನು ಇಂಥದ್ದನ್ನು ನೋಡಿಲ್ಲ. Politicians should be very sensitive. Other than that, ರಾಜಕಾರಣಿಗಳಿಗೆ ತಾಯಿ ಕರುಳು ಇರಬೇಕು; ಮಾತೃ ಹೃದಯ ಇರಬೇಕು. ತಾಯಿ ಎನ್ನುವವಳು ತನ್ನ ಮಕ್ಕಳಿಗೆ ಸ್ವಲ್ಪ ಏನಾದರೂ ಎಡವಟ್ಟಾದರೆ ತಕ್ಷಣ ಬಂದು ಕಾಳಜಿ ಮಾಡುತ್ತಾಳೆ. ನಮ್ಮ ರಾಜಕಾರಣಿಗಳಿಗೆ, ಅದರಲ್ಲೂ ಅಧಿಕಾರ ನಡೆಸುವಂಥವರಿಗೆ ತಾಯಿ ಕರುಳು ಇರಬೇಕು ಅಲ್ಲವೇ? ಮಾತೃ ಹೃದಯ ಇರಬೇಕು ಅಲ್ಲವೇ? ಜನರು ನೀರಿನಲ್ಲಿ ತೇಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಮನೆಗಳು, ಬೆಳೆ, ಹಳ್ಳಿಗಳು, ರೈತರ ಜಮೀನಿನಲ್ಲಿ ಹೂಳು ತುಂಬಿ ಎಲ್ಲವೂ ನಾಶವಾಗಿವೆ. ಎಷ್ಟೋ ಕಡೆ ಮಣ್ಣು ಕೆತ್ತಿಕೊಂಡು ಹೋಗಿಬಿಟ್ಟಿದೆ. ಇಂತಹ ಸಂದರ್ಭದಲ್ಲಿ ಉಸ್ತುವಾರಿ ಕಾರ್ಯದರ್ಶಿಗಳಾಗಲಿ, ಜಿಲ್ಲಾ ಉಸ್ತುವಾರಿ ಸಚಿವರು ಹೋಗಬೇಕಾಗಿತ್ತು. ಅವರೆಲ್ಲರೂ ಅಲ್ಲೇ ಇರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಶಿರಾ ಉಪಚುನಾವಣೆ ಸಂದರ್ಭದಲ್ಲಿ ನಾನು ಒಂದೆರಡು ಗಂಟೆಗಳು ಅಲ್ಲಿಗೆ ಹೋಗಿದ್ದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರವಾಹ ಬಂದು ಎಲ್ಲವೂ ಕೊಚ್ಚಿಕೊಂಡು ಹೋಗುತ್ತಿದ್ದರೆ ಸಚಿವರು ಅನಿಸಿಕೊಂಡವರು ಶಿರಾ ಉಪಚುನಾವಣೆಗೆಂದು ಓಡಾಡುತ್ತಿದ್ದರು. ನೀರಿನಲ್ಲಿ ಮುಳುಗುತ್ತಿದ್ದವರ ಆಕ್ರಂದನ ಕೇಳುವವರು ಯಾರೂ ಇರಲಿಲ್ಲ. ಜಾನುವಾರುಗಳು ಕೊಚ್ಚಿಕೊಂಡು ಹೋದವು. ರೈತರು ಬೊಬ್ಬೆ ಹೊಡೆಯುತ್ತಿದ್ದರೂ ಮಾನ್ಯ ಸಚಿವರು ಶಿರಾ ಉಪಚುನಾವಣೆಗೆ ಓಡಾಡುತ್ತಿದ್ದರು. ನಾನು ಕೆಲವು ಜಿಲ್ಲೆಗಳ ಬಗ್ಗೆ ಹೇಳುತ್ತೇನೆ. ಬಳ್ಳಾರಿ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಈ ಜಿಲ್ಲೆಗಳಲ್ಲಿ ಯಾವುದೇ ಸಭೆಗಳು ನಡೆದಿಲ್ಲ. ಬೀದರ್‌ನಲ್ಲಿ ಮಾನ್ಯ ಪ್ರಭುಚವ್ಹಾಣ್‌ರವರು ಸಭೆಯನ್ನು ಮಾಡಲಿಲ್ಲ. ಚಾಮರಾಜ ನಗರ ಜಿಲ್ಲೆಗೆ ಮಾನ್ಯ ಸುರೇಶ್‌ಕುಮಾರ್‌ರವರು ಭೇಟಿ ಕೊಟ್ಟಿದ್ದರು. ಚಿಕ್ಕಬಳ್ಳಾಪುರ ಜಿಲ್ಲೆಗೆ ಯಾರೂ ಹೋಗಲಿಲ್ಲ. ಚಿಕ್ಕಮಗಳೂರು ಜಿಲ್ಲೆಗೆ ದಿನಾಂಕ 1.8.2020 ಮತ್ತು 8.8.2020 ಸಚಿವರು ಭೇಟಿ ಕೊಟ್ಟಿದ್ದರೂ ಯಾವುದರ ಬಗ್ಗೆ ಚರ್ಚೆ ಮಾಡಿದ್ದಾರೆ ಎನ್ನುವುದರ ಬಗ್ಗೆ ನನಗೆ ಮಾಹಿತಿಯಿಲ್ಲ. ಬಳ್ಳಾರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮತ್ತು ಚಿತ್ರದುರ್ಗ ಜಿಲ್ಲೆಗಳ ಉಸ್ತುವಾರಿ ಬಹುಶಃ ಮಾನ್ಯ ಶ್ರೀರಾಮುಲು ಅವರಿಗೆ ಬರುತ್ತದೆ ಎಂದು ಭಾವಿಸುತ್ತೇನೆ. ಚಿತ್ರದುರ್ಗದಲ್ಲಿ ಈರುಳ್ಳಿ ಮತ್ತಿತರ ಬೆಳೆಗಳು ಹಾಳಾಗಿ ಹೋಗಿವೆ. ಆದರೂ ಅಲ್ಲಿ ಒಂದು ಸಭೆ ಕೂಡ ನಡೆಸಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನ್ಯ ಸಭಾನಾಯಕರು ಕೆ.ಡಿ.ಪಿ., ಸಭೆಯನ್ನು ನಡೆಸಿದ್ದಾರೆ. ಮಾನ್ಯ ಬಸವರಾಜ ಭೈರತಿಯವರು ಸದನದಲ್ಲಿದ್ದಾರೆ. ಅವರು ಎಲ್ಲೆಲ್ಲಿ ಸಭೆ ನಡೆಸಿದ್ದಾರೆ ಎನ್ನುವ ವಿವರ ಕೊಡುತ್ತೇನೆ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. 7ನೇ ಆಗಸ್ಟ್‌ರಂದು ಹೋಗಿದ್ದಾರೆ.

**ಶ್ರೀ ಭೈರತಿ ಬಸವರಾಜು(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಆ ರೀತಿಯಾದ ಪರಿಸ್ಥಿತಿಗಳು ನಿರ್ಮಾಣವಾಗಲಿಲ್ಲ. ಸಣ್ಣದಾಗಿ ಕೆಲವು ಭಾಗಗಳಲ್ಲಿ ಭತ್ತದ ಬೆಳೆಗಳು ನಾಶವಾದಾಗ ನಾನು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-**ಹಾನಿ ಆಗಿಲ್ಲ ಎನ್ನುವುದಾದರೆ ಅದು ಬಹಳ ಸಂತೋಷದ ವಿಷಯ. ನಿಮಗಿಂತ ನಾನು ಹೆಚ್ಚು ಖುಷಿ ಪಡುತ್ತೇನೆ.

**ಶ್ರೀ ಭೈರತಿ ಬಸವರಾಜು:-** ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾ ಉಸ್ತುವಾರಿ ಸಚಿವನಾದ ಮೇಲೆ ದಾವಣಗೆರೆ ಜಿಲ್ಲೆಗೆ ಸುಮಾರು 30 ಸಲ ಹೋಗಿದ್ದೇನೆ. ಎಲ್ಲಾ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಆ ಮಾಹಿತಿಗಳು ನನ್ನ ಹತ್ತಿರ ಇದೆ. ನಾನು ಹೇಳುತ್ತೇನೆ. ನೀವು ನನ್ನ ಆತ್ಮೀಯ ಸ್ನೇಹಿತರು. ನೀವು ನಮ್ಮ ಹತ್ತಿರ ಇದ್ದಿರಿ. ನಾವು-ನೀವು ಕೂಡಿ ರಾಜಕಾರಣ ಮಾಡುತ್ತಿದ್ದೆವು. ಈಗೇನೋ ಬದಲಾವಣೆಯಾಗಿದೆ. ತಪ್ಪಿ ಆ ಕಡೆಗೆ ಹೋಗಿದ್ದೀರಿ. ಅಲ್ಲೆಷ್ಟು ದಿನ ಇರುತ್ತೀರೋ ಅದು ಬೇರೆ ವಿಚಾರ. ನೀವು ಆಗಸ್ಟ್ 7ನೇ ತಾರೀಖಿಗೆ ಹೋಗಿ ತ್ರೈಮಾಸಿಕ ಸಭೆ ಮಾಡಿದ್ದೀರಿ. ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೀರಿ.

**ಶ್ರೀ ಭೈರತಿ ಬಸವರಾಜು:-** ಅದಾದ ಮೇಲೆ 4 ಸಲ ಹೋಗಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-**ನಿಮ್ಮಲ್ಲಿ ಹಾನಿಯಾಗಿಲ್ಲ ಎಂದು ಹೇಳಿದಿರಿ, ಬಹಳ ಸಂತೋಷ.

**ಶ್ರೀ ಭೈರತಿ ಬಸವರಾಜು:-** ದಾವಣಗೆರೆ ಜಿಲ್ಲೆಯಲ್ಲಿ ಏನು ನದಿ ಹರಿಯುತ್ತದೆಯೋ ಅದರ ಆಸುಪಾಸಿನಲ್ಲಿ, ಅಕ್ಕಪಕ್ಕದಲ್ಲಿ ಬೆಳೆದಿದ್ದ ಭತ್ತದ ಬೆಳೆಗೆ ಸ್ವಲ್ಪ ಹಾನಿಯಾಗಿತ್ತು.

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಧಾರವಾಡಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಆಗಸ್ಟ್ 4 ಮತ್ತು ಆಗಸ್ಟ್ 13ಕ್ಕೆ ಹೋಗಿ ಏನು ಸಭೆ ಮಾಡಿದ್ದರೋ ಅದರ ಮಾಹಿತಿ ಇಲ್ಲ. ಗದಗಕ್ಕೆ ಮಾನ್ಯ ಸಿ.ಸಿ.ಪಾಟೀಲ್‌ರವರು ಹೋಗಿಲ್ಲ. ಮಾನ್ಯ ಕೆ.ಗೋಪಾಲಯ್ಯನವರು ಹಾಸನಕ್ಕೆ ಆಗಸ್ಟ್ 4ನೇ ದಿನಾಂಕದಂದು ಹೋಗಿ ಕೋವಿಡ್-19 ಕೇರ್ ಸೆಂಟರ್‌ಗೆ ಭೇಟಿ ಕೊಟ್ಟಿದ್ದಾರೆ, ಆಗಸ್ಟ್ 7ನೇ ದಿನಾಂಕದಂದು ಪ್ರವಾಹ ಕುರಿತಂತೆ ಪರಿಶೀಲನಾ ಸಭೆಯನ್ನು ಮಾಡಿದ್ದೀರಿ. ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೀರಿ. ಆಗಸ್ಟ್ 20 ರಂದು ಕೋವಿಡ್ ಸಂಬಂಧ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೀರಿ. ಸೆಪ್ಟೆಂಬರ್ 9 ರಂದು ಮಳೆ ಹಾನಿ ಕಾಮಗಾರಿಯನ್ನು ಪರಿಶೀಲನೆ ಮಾಡಿದ್ದೀರಿ. ಅಕ್ಟೋಬರ್ 8ರಂದು ಮತ್ತು 10 ರಂದು ಕೊರೊನಾ ಹರಡುವುದನ್ನು ತಡೆಗಟ್ಟುವುದಕ್ಕೆ ಸಂಬಂಧಪಟ್ಟಂತೆ ಸಭೆಗಳನ್ನು ಮಾಡಿದ್ದೀರಿ. ನಾವು ವಿರೋಧ ಪಕ್ಷದಲ್ಲಿದ್ದೇವೆಂದು ಕೇವಲ ಟೀಕೆಗಳನ್ನೇ ಮಾಡುವುದಿಲ್ಲ. ನೀವು ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಹೇಳುತ್ತೇವೆ.

**ಶ್ರೀ ಕೆ.ಗೋಪಾಲಯ್ಯ(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-** ಮಳೆ ಪ್ರಾರಂಭವಾದ ದಿನವೇ ಮಾನ್ಯ ಮುಖ್ಯಮಂತ್ರಿಗಳು, ಯಾರ್‍ಯಾರು ಯಾವ ಜಿಲ್ಲೆಗಳಿಗೆ ಹೋಗಬೇಕೆಂದು ಸೂಚಿಸಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-**ನೀವು ಎಲ್ಲರನ್ನೂ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಿಮಗೆ ನಾವು ಶಹಬಾಷ್‌ಗಿರಿ ಕೊಟ್ಟಿದ್ದೇವೆ.

**ಶ್ರೀ ಕೆ.ಗೋಪಾಲಯ್ಯ:-** ಎಲ್ಲಾ ಸಚಿವರುಗಳು ನಿರ್ದಿಷ್ಟ ಜಿಲ್ಲೆಗಳಿಗೆ ಹೋಗಬೇಕೆಂದು ಸೂಚನೆ ಕೊಟ್ಟಾಗ, ಆಯಾ ಜಿಲ್ಲೆಗಳಲ್ಲಿ ಎರಡು-ಮೂರು ದಿನಗಳ ಕಾಲ ಪ್ರವಾಸ ಮಾಡಿ, ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ಜೊತೆ ಸಭೆ ಮಾಡಿದ್ದೇವೆ.

(ಮುಂದು)

(1030)8-12-2020 5.50 ಡಿಎಸ್-ಎಂಡಿ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಗೋಪಾಲಯ್ಯನವರು ಏಳು ಸಲ ಭೇಟಿ ಕೊಟ್ಟಿದ್ದಾರೆ. ಅವರು ಕೋವಿಡ್ ಬಗ್ಗೆಯೂ ಕಾಳಜಿ ವ್ಯಕ್ತಪಡಿಸಿದ್ದಾರೆ, ಮಳೆ ಹಾನಿಯಾಗಿರುವ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದಾರೆ. ನಾನು ಒಳ್ಳೆಯದನ್ನು ಮಾಡಿದ್ದಾರೆ ಎಂದು ಹೇಳುತ್ತಿದ್ದೇನೆ, ನಾನು ನಿಮ್ಮ ವಿರೋಧ ಹೇಳುತ್ತಿಲ್ಲ, ನಿಮ್ಮ ಪರ ಹೇಳುತ್ತಿದ್ದೇನೆ. ಪ್ರತಿಪಕ್ಷದ ನಾಯಕರು ನಿಮ್ಮ ಪರ ಹೇಳುತ್ತಿದ್ದೇನೆಂದರೆ, you should be very

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

happy. ಹಾವೇರಿ ಜಿಲ್ಲೆಗೆ ಯಾರು ಭೇಟಿ ಕೊಟ್ಟಿಲ್ಲ. ಮಾನ್ಯ ಗೋವಿಂದ ಕಾರಜೋಳರವರು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು. ಅವರು ಆತ್ಮೀಯರು. ಅವರು ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ಭೇಟಿಯೇ ಕೊಟ್ಟಿಲ್ಲ. ಅವರು ಕಲಬುರ್ಗಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ದಿನಾಂಕ:17-09-2020 ರಲ್ಲಿ ಅತಿವೃಷ್ಟಿ ಮತ್ತು ಕೋವಿಡ್ ಬಗ್ಗೆ ಹೋಗಿದ್ದಾರೆ. ಅವರು ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ಹೋಗಿದ್ದಾರೆ. ಅವರು ಅಕ್ಟೋಬರ್ ತಿಂಗಳಿನಲ್ಲಿ ಒಮ್ಮೆಯೂ ಭೇಟಿ ಕೊಟ್ಟಿಲ್ಲ. ಕಲ್ಯಾಣ ಕರ್ನಾಟಕ ಕಲಬುರ್ಗಿಯಲ್ಲಿ ಲಕ್ಷಾಂತರ ಎಕರೆ ಪ್ರದೇಶ ಮುಳುಗಿ ಹೋಗಿದೆ. ಕೊಡಗಿಗೆ ಮಾನ್ಯ ಸೋಮಣ್ಣನವರು ಭೇಟಿ ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಗಂತೂ ಯಾರು ಭೇಟಿಯೇ ಕೊಟ್ಟಿಲ್ಲ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಶ್ರೀ ಹೆಚ್.ನಾಗೇಶ್‌ರವರು ಕೋಲಾರ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುತ್ತಾರೆ. ಅವರು ಕೋಲಾರ ಜಿಲ್ಲೆಯವರೇ ಆಗಿರುವುದರಿಂದ ಅವರು ಯಾವಾಗಲೂ ಕೋಲಾರದಲ್ಲಿಯೇ ಇರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ನಾಗೇಶ್‌ರವರು ಕೋಲಾರದಲ್ಲಿಯೇ ಇರುತ್ತಾರೆಂದರೆ, ಆ ವಿಚಾರ ಬಿಡಿ. ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಈ ಜಿಲ್ಲೆಗಳಿಗೆ ಯಾರು ಭೇಟಿ ಕೊಟ್ಟಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾನ್ಯ ಶಿವರಾಮ್ ಹೆಬ್ಬಾರ್‌ರವರು ಯಾವುದೇ ಸಭೆಯನ್ನು ನಡೆಸಿಲ್ಲ. ನನ್ನ ಕ್ಷೇತ್ರವಾದ ವಿಜಾಪುರ ಜಿಲ್ಲೆಯಲ್ಲಿ ಶ್ರೀಮತಿ ಶಶಿಕಲಾ ಜೊಲ್ಲೆಯವರು ಆಗಸ್ಟ್-14, ಅಕ್ಟೋಬರ್-18 ರಂದು ಪ್ರವಾಹ ನಿರ್ವಹಣೆ ಬಗ್ಗೆ ಮತ್ತು ಕೋವಿಡ್ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಆ ಸಭೆಗೆ ಹೋಗಿದ್ದೇನೆ. ಯಾದಗಿರಿ ಜಿಲ್ಲೆಯಲ್ಲಿ ಶ್ರೀ ಪ್ರಭುಚವ್ಹಾಣ್‌ರವರು ಕೋವಿಡ್‌ಗೆ ಸಂಬಂಧಪಟ್ಟ ಹಾಗೆ ಒಂದು ಸಭೆ ಮಾಡಿದ್ದಾರೆ.

**ಡಾ||ಸಿ.ಎನ್.ಅಶ್ವಥ್ ನಾರಾಯಣ(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಅಂಕಿ-ಅಂಶವನ್ನು ಓದುತ್ತಿದ್ದಾರೆ, ಅದು ತಪ್ಪಿದೆ.

**ಶ್ರೀ ಎಸ್.ಆರ್.ಪಾಟೀಲ್:-** ತಾವು ಉತ್ತರ ಕೊಡುವಾಗ ಹೇಳಿ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ದಾಖಲೆಗೆ ಹೋಗುತ್ತಿರುವುದರಿಂದ ತಪ್ಪು ಮಾಹಿತಿ ಹೋಗುವುದು ಬೇಡ. Covid management ಗೆ ಸಂಬಂಧಿಸಿದಂತೆ ಇಡೀ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕದಲ್ಲಿ ರಾಮನಗರ ಜಿಲ್ಲೆ ಬಹಳ ಉತ್ತಮವಾಗಿ ನಿರ್ವಹಣೆ ಮಾಡಿರುವಂತಹ ಜಿಲ್ಲೆಯಾಗಿರುತ್ತದೆ. ಹಾಗಾಗಿ ಒಂದು ಪರಿಸ್ಥಿತಿಯಲ್ಲಿ ಜಿಲ್ಲಾ ಆಸ್ಪತ್ರೆಯೂ ಇಲ್ಲದೆ, ಅಂತಹ ಪರಿಸ್ಥಿತಿಯಲ್ಲೂ ಉತ್ತಮವಾಗಿ ಒಂದು War Room ವ್ಯವಸ್ಥೆ, Testing ವ್ಯವಸ್ಥೆ, ಚಿಕಿತ್ಸೆಯಲ್ಲಿ ಬಹಳ ಉತ್ತಮವಾಗಿ ನಿರ್ವಹಣೆಯಾಗಿದೆ. ಆ ಜಿಲ್ಲೆಯಲ್ಲಿ ICU (Intensive Care Unit) ಇರಲಿಲ್ಲ, ICU Unit ನ್ನು ಪ್ರಾರಂಭ ಮಾಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. Let it go on record. ICU Unit ದೊಡ್ಡದೇನು ಅಲ್ಲ. ಅವರು ವೈದ್ಯರಾಗಿದ್ದಾರೆ. ನಾನು Medical Graduate ಅಲ್ಲದಿದ್ದರೂ ICU, Ventilator, Oxygen facility ಏನು ಎಂಬುದು ನನಗೆ ಗೊತ್ತಿದೆ. ಅವರು ಯಾರು ಭೇಟಿಯನ್ನು ಕೊಟ್ಟಿಲ್ಲ. ಆದರೆ, ಬಾಗಲಕೋಟೆ ಜಿಲ್ಲೆಯಲ್ಲಿ Covid Designated Hospital ಗೆ ನಮ್ಮ ಜಿಲ್ಲಾಧಿಕಾರಿಗಳು, ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ನಾನು ಭೇಟಿ ಕೊಟ್ಟಿದ್ದೇನೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಪಾಟೀಲ್‌ರವರೇ, 'ನೀವು ಅಲ್ಲಿಗೆ ಹೋಗುವುದು ಬೇಡ ನೀವು ಹಿರಿಯರಾಗಿದ್ದೀರಿ, you don't visit, there is heavy spread of virus' ಎಂದು ಹೇಳಿದರು. ನನ್ನ ಜೊತೆಗೆ ಬಂದಿರುವಂತಹ ಡಿಸ್ಟ್ರಿಕ್ಟ್ ಸರ್ಜನ್‌ರವರು ಒಳಗೆ ಬರಲಿಲ್ಲ. ಕೋವಿಡ್-19 ಸೋಂಕಿತರನ್ನು ಬಹಳ ಕೆಟ್ಟ ರೀತಿಯಲ್ಲಿ ಜನರು ನೋಡುತ್ತಿದ್ದಾರೆ. ಮನೆಯಲ್ಲಿ ಅವರ ಹೆಂಡತಿ ಅವರ ಪಕ್ಕಕ್ಕೆ ಹೋಗುವುದಿಲ್ಲ, ಮಕ್ಕಳು ಹೋಗುವುದಿಲ್ಲ, ಅಪ್ಪನನ್ನು ಮೇಲೆ ಒಂದು ಮೂಲೆಯಲ್ಲಿ ಹಾಕಿ ಎಂದು ಹೇಳುತ್ತಾರೆ. ಅವರಿಗೆ ಊಟ ಕೊಡುವುದನ್ನು ನೋಡಿದರೆ, ಅವರಿಗೆ ಆತ್ಮಸ್ಥೈರ್ಯ ತುಂಬಬೇಕೆನ್ನುವ ಉದ್ದೇಶದಿಂದ 'I am going to visit the Covid Designated Hospital' ಎಂದು ಹೇಳಿದೆ. 'ಪಾಟೀಲ್‌ರವರೇ, ನೀವು suffer ಆಗುತ್ತೀರಿ' ಎಂದು ಹೇಳಿದರು. Ok, let it be, ನಾವು ಹಿರಿಯರಾಗಿದ್ದೇವೆ, ಇಷ್ಟು ವರ್ಷ ಸಾರ್ವಜನಿಕ ಬದುಕಿನಲ್ಲಿ ಕೆಲಸ ಮಾಡಿದ್ದೇವೆ. ನಾವು ಮಾಡತಕ್ಕಂಥ ಕೆಲಸ ಮಾಡಿದ್ದೇವೆ. ಕೋವಿಡ್-19 ಬಂದುಬಿಟ್ಟರೆ ಸತ್ತು ಹೋಗುತ್ತಾರೆಯೇ, ಕೊನೆಪಕ್ಷ ಜನರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಬೇಕೆಂದು ಹೇಳಿದೆ.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ, ಪ್ರತಿಪಕ್ಷದ ನಾಯಕರು ಬಹಳ ಮಹತ್ವದ ನಾಯಕರು. ಹಾಗಾಗಿ ಕೋವಿಡ್ ಸಲುವಾಗಿ ಸಚಿವ ಸಂಪುಟದ ಮಂತ್ರಿಗಳ ಪ್ರವಾಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರಿತಂತೆ ಮಾಹಿತಿಯನ್ನು ಸರ್ಕಾರದಿಂದ ಪಡೆದರೆ ಒಳ್ಳೆಯದು. ಏಕೆಂದರೆ, ಅನೇಕರು ಪ್ರವಾಸ ಮಾಡಿದ್ದಾರೆ. ಕೆಲವು ಮಾಹಿತಿ ಇಲ್ಲ, ಮಾಹಿತಿ ಕೊರತೆ ಇರಬಹುದು. ಅದಕ್ಕೋಸ್ಕರ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಕೋವಿಡ್ ಬಗ್ಗೆ ಈಗ ಮಾತನಾಡುತ್ತಿಲ್ಲ. ನಾನು ಪ್ರವಾಹದ ಬಗ್ಗೆ ನಿಯಮ 68 ರಲ್ಲಿ ಚರ್ಚೆ ಮಾಡುತ್ತಿದ್ದೇನೆ. ಕೋವಿಡ್ ಬಗ್ಗೆ ಸಭೆ ಮಾಡಿರುವುದನ್ನು ನಾನು ಹೇಳಿದೆ. ಹಾಸನಕ್ಕೆ ಎಲ್ಲಾ ಸಚಿವರಿಗಿಂತ ಹೆಚ್ಚು ಭೇಟಿ ಕೊಟ್ಟಿದ್ದಾರೆ. ಅದನ್ನು ವಿವರಿಸಿ ಮಾಡಿ ಮಾಹಿತಿಯನ್ನು ಕೊಟ್ಟರೆ ಇನ್ನು ಒಳ್ಳೆಯದು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆಂದರೆ, I will be the first man to garland you and congratulate you.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಉಸ್ತುವಾರಿಯಾಗಿರುವಂತಹ ರಾಮನಗರ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಇವತ್ತು ನೀರಾವರಿ ವಿಚಾರದಲ್ಲಾಗಲಿ, ಸಣ್ಣ ಕೆರೆಗಳ ಅಭಿವೃದ್ಧಿಯಾಗಲಿ, ನರೇಗಾ ಯೋಜನೆಯಲ್ಲಾಗಲಿ, ರೇಷ್ಮೆ ಮಾರ್ಕೆಟ್ ಸ್ಥಾಪನೆ ಮಾಡುವ ವಿಚಾರದಲ್ಲಾಗಲಿ, ಆಹಾರ ಸಂಸ್ಕರಣಾ ಘಟಕ, ವಿಶ್ವವಿದ್ಯಾಲಯ ಸ್ಥಾಪನೆಯಾಗಲಿ, ಅವರಿಗೆ ಏನೆಲ್ಲಾ ಅಂಕಿ-ಅಂಶಗಳು ಬೇಕೋ ಅದನ್ನೆಲ್ಲಾ ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಮಾಹಿತಿಯನ್ನು ಒದಗಿಸಿದರೆ ಅವರು ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನು ಇಲ್ಲಿ ನಿಂತು ಹೇಳುತ್ತೇನೆ. I will be very happy. ನಾನು ಎರಡು ಜಾಗದಲ್ಲೂ ಕುಳಿತಿದ್ದೇನೆ. ನಾನು ಸಭಾನಾಯಕನಾಗಿ ಕೆಲಸ ಮಾಡಿದ್ದೇನೆ, ಎರಡನೇ ಬಾರಿ ಪ್ರತಿಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಪ್ರತಿಪಕ್ಷದ ನಾಯಕನಾಗಿದ್ದೆ. ನಾನು ಸಭಾನಾಯಕನಾಗಿದ್ದಾಗ ಮಾನ್ಯ ಸದಾನಂದಗೌಡರು ಇಲ್ಲಿ ಬಂದು ಕುಳಿತರು. ಮಾತು-ಕೃತಿ, ನಡೆ-ನುಡಿ ಒಂದಾಗಿರಬೇಕು ಎಂದು ಹೇಳುವವನು.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಬಯಲು ಸೀಮೆಯಲ್ಲಿ ಪ್ರವಾಹದ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ನೀರು ಇಲ್ಲದ ಜಾಗದಲ್ಲಿ ನೀರು ಶೇಖರಣೆಯಾಗುವ ರೀತಿಯಲ್ಲಿ ನಮ್ಮಲ್ಲಿ ಎರಡೂವರೆ ಸಾವಿರ ಕೆರೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಅಭಿವೃದ್ಧಿ ಕೆಲಸದ ಮಾಹಿತಿಯನ್ನು ಈಗ ಕೊಡುವುದು ಬೇಡ. ಅವರು ಮತ್ತೊಂದು ದಿವಸ ನನಗೆ ಮಾಹಿತಿಯನ್ನು ಕೊಟ್ಟರೆ ನಾನು ಒಂದು ದಿವಸ ಮಾತನಾಡುತ್ತೇನೆ. ಅವರ ಸಲುವಾಗಿ ತಮ್ಮ ಹತ್ತಿರ ಕಾಲಾವಕಾಶವನ್ನು ತೆಗೆದುಕೊಳ್ಳುತ್ತೇನೆ. If you have done a good work, I will be very proud. I will congratulate you. ಉಪ ಮುಖ್ಯಮಂತ್ರಿಯವರು ಬಹಳ ಪ್ರಚಂಡರಿದ್ದಾರೆ ಎಂದು ಹೇಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲೆಲ್ಲಿ ಭೇಟಿ ಕೊಡುತ್ತಾರೆಂದು ಹೆಚ್ಚು ಕಡಿಮೆ ಒಂದು ತಿಂಗಳಿನ ಮುಂಚೆಯೇ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿರುತ್ತಾರೆ. ಮಾನ್ಯ ಸಚಿವರೆಲ್ಲರಿಗೂ ನಾನು ವಿನಂತಿ ಮಾಡುವುದೇನೆಂದರೆ, ಆ ಕಾರ್ಯಕ್ರಮದ ಪಟ್ಟಿಯನ್ನು ಆಯಾಯ ಸಂಬಂಧಪಟ್ಟ ಶಾಸಕರುಗಳಿಗೆ ಕಳುಹಿಕೊಟ್ಟರೆ ಬಹಳ ಸೂಕ್ತವಾಗುತ್ತದೆ. ಏಕೆಂದರೆ, ನಾಳೆ ಸಚಿವರು ಬರುತ್ತಾರೆ, ಅವರು ಕೆ.ಡಿ.ಪಿ. ಸಭೆಯನ್ನು ಕರೆದಿದ್ದಾರೆ ಎಂದು ನನಗೆ ಹಿಂದಿನ ದಿವಸ ಅಧಿಕಾರಿಗಳು ಫೋನ್ ಮಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಭೋಜೇಗೌಡರು ಹೇಳುವುದು ನೂರಕ್ಕೆ ನೂರು ಸತ್ಯ. ಮಾನ್ಯ ಸಚಿವರು ಬಂದಾಗ ಕೆಳಮನೆ, ಮೇಲ್ಮನೆಯ ಎಲ್ಲಾ ಶಾಸಕರುಗಳಿಗೂ ಕಾರ್ಯಕ್ರಮದ ಮಾಹಿತಿಯನ್ನು ಕೊಡಬೇಕು.

**ಡಾ||ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಭೋಜೇಗೌಡರೇ, ತಮ್ಮ ಪಕ್ಷದ ಮುಖ್ಯಮಂತ್ರಿಗಳಿದ್ದಾಗ ನೀವು ಒಂದು ತಿಂಗಳ ಕಾರ್ಯಕ್ರಮದ ಪಟ್ಟಿಯನ್ನು ಕೊಡುವುದಕ್ಕಾಗಲಿಲ್ಲ; ನೀವು ಇವತ್ತು ಮಂತ್ರಿಗಳ ಕಾರ್ಯಕ್ರಮದ ಪಟ್ಟಿಯನ್ನು ಕೇಳುತ್ತಿದ್ದೀರಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಯಾವ ಮಂತ್ರಿಗಳು ಯಾವ ಜಿಲ್ಲೆಗೆ ಭೇಟಿ ಕೊಟ್ಟಾಗ ಎಲ್ಲಾ ಜನಪ್ರತಿನಿಧಿಗಳಿಗೆ TP (Tour Programme) ಕಳುಹಿಸಿ, ಕಾರ್ಯಕ್ರಮದ ಪಟ್ಟಿಯನ್ನು ಕಳುಹಿಸಿ ಮಾಹಿತಿಯನ್ನು ಕೊಡಬೇಕು. ಅವರು ಬೀಗತನ ಮಾಡುವುದಕ್ಕೆ ಬಂದಿರುವುದಿಲ್ಲ. ಅವರ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಬಂದಿರುತ್ತಾರೆ. ಅದು ನಮ್ಮ ಸರ್ಕಾರ ಇರಲಿ, ಅವರ ಸರ್ಕಾರ ಇರಲಿ, ಚುನಾಯಿತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿನಿಧಿಗಳಿಗೆ ಮಾಹಿತಿ ಕೊಡುವುದು ಮಾನ್ಯ ಸಚಿವರ ಆದ್ಯ ಕರ್ತವ್ಯವಾಗಿರುತ್ತದೆ, ಪರಮ ಗುರಿಯಾಗಿರುತ್ತದೆ ಎಂದು ಮಾನ್ಯ ಭೋಜೇಗೌಡರು ಸಲಹೆಯನ್ನು ಕೊಟ್ಟಿದ್ದಾರೆ. ಅವರ ಧ್ವನಿಗೆ ನನ್ನ ಧ್ವನಿಯನ್ನು ಸೇರಿಸಿ ಜೋರಾಗಿ ನಾನು ಹೇಳಿದ್ದೇನೆ. ಮುಂದಿನ ದಿನಮಾನಗಳಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡುತ್ತಾರೆಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಸರ್ಕಾರ ಈ ರೀತಿ ನಿಷ್ಕ್ರಿಯವಾಗಬಾರದು. ಮಂತ್ರಿಗಳಾದ ಮೇಲೆ ಎತ್ತರದ ಸ್ಥಾನಕ್ಕೆ ಹೋದ ಮೇಲೆ ಅವರಿಗೆ politeness, ಸೌಜನ್ಯತೆ ಹೆಚ್ಚಾಗಬೇಕು, ಶಿಷ್ಟಾಚಾರ ಹೆಚ್ಚಾಗಬೇಕು. ಏಕೆಂದರೆ, ನಮಗೆ ಅಧಿಕಾರ ಬಂದ ಕೂಡಲೇ ಕೋಡು ಬರುವುದಿಲ್ಲ. ಎಷ್ಟು ನಾವು ಎತ್ತರಕ್ಕೆ ಹೋಗುತ್ತೇವೆಯೋ ಅಷ್ಟು ಸೌಜನ್ಯದಿಂದ, ಶಿಷ್ಟಾಚಾರದಿಂದ, ಗೌರವದಿಂದ, ಪ್ರೀತಿಯಿಂದ, ವಿಶ್ವಾಸದಿಂದ, ಅಭಿಮಾನದಿಂದ, ವಾತ್ಸಲ್ಯದಿಂದ ಜನರನ್ನು ನಾವು ಕಾಣಬೇಕು. ಎಂ.ಎಲ್.ಸಿ. ಇದ್ದಾಗ ಈ ರೀತಿ ಇದ್ದ, ಮಂತ್ರಿಯಾದ ಮೇಲೆ ಭಾರಿ ಬದಲಾವಣೆಯಾಗಿದ್ದಾರೆ, ಇವರನ್ನು ಭೇಟಿಯಾಗುವುದೇ ಕಠಿಣವಾಗುತ್ತಿದೆ ಎನ್ನುವಂತಹ ಬಹಳಷ್ಟು ಉದಾಹರಣೆಗಳನ್ನು ನಾವು ಕೇಳಿದ್ದೇವೆ.

(ಮುಂದು)

**(1031) 08.12.2020 06.00 ಎಸ್‌ವಿ-ಎಂಡಿ**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):**

ಎತ್ತರಕ್ಕೆ ಹೋದಂತೆಲ್ಲಾ ಮುಗಿದು ಹೋಯಿತು. ಜನರಿಗೆ ಸಮೀಪವಾಗಬೇಕು. ಎತ್ತರಕ್ಕೆ ಹೋಗುವ ಉದ್ದೇಶವೇನು? ನಾವು ನಮಗೆ ರಾಜಕೀಯ ಸ್ಥಾನಮಾನಗಳನ್ನು ಏಕೆ ಅಪೇಕ್ಷೆ ಮಾಡುತ್ತೇವೆ? ಜನರ ಸಮೀಪಕ್ಕೆ ಹೋಗಿ, ಜನರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡಲು, ಜನರ ಕಣ್ಣೀರು ಒರೆಸಲು ಅನುಕೂಲವಾಗಬೇಕೆನ್ನುವ ಸಲುವಾಗಿ ನಮಗೆ ರಾಜಕೀಯ ಸ್ಥಾನಮಾನಗಳು ಬೇಕು, ಮತ್ತೇಕೆ ಬೇಕು? ಮೋಜು-ಮಜಾ ಮಾಡುವುದಕ್ಕೆ ನಮಗೆ ಸ್ಥಾನ-ಮಾನ ಸಿಗಬೇಕೆ? ನಾವು ಕುಳಿತಿರುವ ಕುರ್ಚಿಗಿಂತಲೂ ನಾವು ಎತ್ತರದಲ್ಲಿರಬೇಕು. ನಮ್ಮ ವ್ಯಕ್ತಿತ್ವದಿಂದ ಕುರ್ಚಿಗೆ ಗೌರವ ಬರಬೇಕು. ಆದರೆ ಆ ಸ್ಥಾನದಿಂದ ನಮಗೆ ಗೌರವ ಬರಬಾರದು. ಖ ಚಿಟ ರಜಿ ಣುಚಿಣ ಠಿಡುಟಚಿಬಿಠಿಟಜ. ನಾವು ನುಡಿದಂತೆ ನಡೆಯಬೇಕು. ರಾಜಕಾರಣಿಗಳು ಏನು ನುಡಿಯುತ್ತಾರೆ? ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಒಂದು ವಚನವನ್ನು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗೆ ನಡೆಯದಿದ್ದರೆ ಮೆಚ್ಚನಾ ನಮ್ಮ ಕೂಡಲ ಸಂಗಮದೇವ.”

ನಾವು ಏನು ನುಡಿಯುತ್ತೇವೆಯೋ ಅದರಂತೆ ನಡೆದುಕೊಳ್ಳಬೇಕು. ಮಾತಿಗೆ ಕೃತಿಗೆ ಅಂತರವಿದ್ದಲ್ಲಿ ನಮ್ಮನ್ನು ಯಾರೂ ನಂಬುವುದಿಲ್ಲ. ಮುಂದೆ ರಾಜಕಾರಣಿಗಳು ಈ ರೀತಿಯಾಗುತ್ತಾರೆಂದು ಹನ್ನೆರಡನೆಯ ಶತಮಾನದಲ್ಲಿಯೇ ತಿಳಿದಿದ್ದರೇನೋ ಎಂಬುದು ನನ್ನ ಅನಿಸಿಕೆ. 900 ವರ್ಷಗಳ ಹಿಂದೆ ಈ ವಚನವನ್ನು ಬರೆದಿದ್ದಾರೆ. ಮುಂದೆ ಪ್ರಜಾಪ್ರಭುತ್ವ ವ್ಯವಸ್ಥೆ ಬಂದು ರಾಜಕೀಯ ವ್ಯಕ್ತಿಗಳಿಗೆ ಕೇವಲ ಮಾತನಾಡುವುದು ಒಂದೇ ಕೆಲಸ ಎಂದು ಹನ್ನೆರಡನೆಯ ಶತಮಾನದಲ್ಲಿಯೇ ತಿಳಿದುಕೊಂಡು ಹೇಳಿರಬಹುದು. ಸರ್ಕಾರ ನಿಷ್ಕ್ರಿಯ ಆಗಬಾರದು. I am giving my suggestions. It is up to the Government to consider it or not. ಇದ್ದಿದ್ದನ್ನು ನಾನು ಹೇಳಬೇಕಾಗಿದೆ. ಅದು ನನ್ನ ಕರ್ತವ್ಯ, ನನ್ನ ಜವಾಬ್ದಾರಿ, ನನ್ನ ನೀತಿ, ನನ್ನ ಧರ್ಮ. ಪ್ರತಿಪಕ್ಷದ ನಾಯಕನಾಗಿ ನಾನು ಏನು ಕಂಡುಕೊಂಡಿದ್ದೇನೋ ಅದನ್ನು ಹೇಳಿದ್ದೇನೆ.

**ಡಾ:ಸಿ.ಎನ್.ಅಶ್ವತ್ಥನಾರಾಯಣ (ಉಪ ಮುಖ್ಯಮಂತ್ರಿಗಳು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಖಂಡಿತವಾಗಿಯೂ ತಾವು ಅದರ ಮೇಲೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿ. ಅದು ಒಳ್ಳೆಯದು. ಆದರೆ ಕೆಲಸ ಮಾಡಿದಾಗ ನಾವು ಮಾಡಿರುವ ಕೆಲಸವನ್ನು ಗುರುತಿಸದೆ ಈ ರೀತಿ ನೀವು ಆಪಾದನೆ ಮಾಡಿದಾಗ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಉಪಮುಖ್ಯಮಂತ್ರಿಯವರೇ, ನಾನು ಸುಮ್ಮನೆ ಯಾರ ಮೇಲೆಯೂ ಆಪಾದನೆ ಮಾಡುವುದಿಲ್ಲ. I am not a man of that politician. You don’t bring me under that category. ನಾನು ಏನು ಹೇಳಿದ್ದೇನೆಂದರೆ, if you have done a good thing, I am the first man to garland you and congratulate you. ನೀವು ಒಳ್ಳೆಯ ಕೆಲಸ ಮಾಡಿದ್ದರೆ ನಾನು ಖಂಡಿತವಾಗಿ ಅದನ್ನು ಪ್ರಶಂಸಿಸಿ ಮಾತನಾಡುತ್ತೇನೆ. I am a different politician. ಒಳ್ಳೆಯದನ್ನು ಮಾಡಿದ್ದರೆ ಒಳ್ಳೆಯದು ಎಂದು ಹೇಳುತ್ತೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Dr. C.N.ASHWATHNARAYAN:-** Since you are making a statement on record, ಅದು ದಾಖಲೆಗೆ ತಪ್ಪಾಗಿ ಹೋಗುವುದು ಬೇಡ. ಕೆಲಸ ಮಾಡಿಯೂ ಸಹ ಕೆಟ್ಟ ಹೆಸರು ತೆಗೆದುಕೊಳ್ಳುವುದೇ? ನೀವು ಬೆಳಕಿಗೆ ತರಬೇಕು ಎನ್ನುವುದೇ ನಮ್ಮ ಅಪೇಕ್ಷೆ ಕೂಡ. ಆದರೆ ಮಾಡಿರುವ ಕೆಲಸವನ್ನು ಮಾಡಿದ್ದೇವೆಂದು ಹೇಳುತ್ತೇವೆ.

**Sri S.R.PATIL:-** I am a different politician. ಮಾಡಿರುವ ಒಳ್ಳೆಯ ಕೆಲಸಗಳನ್ನು ಒಳ್ಳೆಯದು ಎಂದೇ ಹೇಳುತ್ತೇನೆ. ಅಭಿಮಾನದಿಂದ ಹೇಳುತ್ತೇನೆ, ಗೌರವದಿಂದ ಹೇಳುತ್ತೇನೆ, ಪ್ರೀತಿಯಿಂದಲೂ ಹೇಳುತ್ತೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದು, ಸುಮಾರು ರೂ.25,000 ಕೋಟಿಯಷ್ಟು ಹಾನಿಯಾಗಿದೆ. ಕಳೆದ ಬಾರಿ ರೂ.35,000 ಕೋಟಿಯಷ್ಟು ಹಾನಿಯಾಗಿದೆ. 2019-20ನೇ ಸಾಲಿನಲ್ಲಿ ಹಾನಿಗೊಳಗಾಗಿದ್ದ ಅನೇಕ ರೈತರಿಗೆ input subsidy ಬಂದಿರುವುದಿಲ್ಲ. ಎಷ್ಟೋ ರೈತರಿಗೆ ಮನೆಯನ್ನು ನಿರ್ಮಾಣ ಮಾಡಿಕೊಳ್ಳಲು ಹಣ ಬಂದಿರುವುದಿಲ್ಲ. ಮುಂದೆ ಅದನ್ನು ಪ್ರಸ್ತಾಪಿಸುತ್ತೇನೆ. ಈ ಬಾರಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾದಾಗ ತಕ್ಷಣವೇ ಸ್ಪಂದಿಸಬೇಕಿತ್ತು. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದು, ಸರ್ಕಾರ ಅದಕ್ಕೆ ತಕ್ಕಂತೆ ಸ್ಪಂದಿಸಿರುವುದಿಲ್ಲ. ಸ್ಪಂದಿಸಿಲ್ಲ ಎಂದರೆ ಏನರ್ಥ? ಸರ್ಕಾರ ನಿಷ್ಕ್ರಿಯವಾಗಿರಬಾರದು. ಸರ್ಕಾರ ಕೋಮಾದಲ್ಲಿದ್ದಂತಿರಬಾರದು. 'Living dead' ಎನ್ನುತ್ತಾರೆ. ಐ.ಸಿ.ಯುನಲ್ಲಿದ್ದಾಗ oxygen ಕೊಡುತ್ತಾರೆ, ಮನುಷ್ಯ ಬದುಕಲಿಕ್ಕೆ ಏನೇನು ಅವಶ್ಯಕವೋ ಅವೆಲ್ಲವನ್ನು ಕೊಡುತ್ತಾರೆ. ಗುರುತೂ ಹಿಡಿಯುವುದಿಲ್ಲ, ಮಾತನಾಡುವುದಿಲ್ಲ. ಅಂತಹ ಕೋಮಾ ಸ್ಥಿತಿಯಲ್ಲಿರುವ ಸರ್ಕಾರ ಇದಾಗಬಾರದು. ಸರ್ಕಾರ active ಇರಬೇಕು. ಜನಪರ ಸರ್ಕಾರ ಎಂದರೇನು? ಜನಕಲ್ಯಾಣ ಸರ್ಕಾರ ಎಂದರೇನು? ಜನರ ಕಷ್ಟಕ್ಕೆ, ಅವರ ನೋವಿಗೆ, ದುಃಖಕ್ಕೆ, ದುಮ್ಮಾನಕ್ಕೆ ನಾವು ಹೋಗಿ ಸ್ಪಂದಿಸಬೇಕು. ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಬೇಕು. ಜನರನ್ನು ಭೇಟಿಯಾದರೆ ಎಷ್ಟೋ ಜನ ನಮ್ಮ ಮಂತ್ರಿಗಳು ಬಂದಿದ್ದರೆಂದು ಸಂತೋಷ ಪಡುತ್ತಾರೆ. ಮಂತ್ರಿಗಳೂ ಇಲ್ಲ, ಅಧಿಕಾರಿಗಳೂ ಇಲ್ಲ, ಯಾರೂ ದಿಕ್ಕಿಲ್ಲ. ನಮ್ಮನ್ನು ಕೇಳುವವರೇ ಇಲ್ಲ ಎಂದ ಮೇಲೆ ನಾವೇನು ಶಂಖ ಹೊಡೆಯೋಣವೇ ಎಂದು ಕೇಳುತ್ತಾರೆ. ಆ ರೀತಿ ನಿಷ್ಕ್ರಿಯ ಸರ್ಕಾರ ಆಗಬಾರದು. ಸರ್ಕಾರ active ಆಗಿ ಜನರ ಕಷ್ಟದಲ್ಲಿ ಭಾಗಿಯಾಗಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರ ಅಭಿಪ್ರಾಯಗಳನ್ನು ನಾವು ಗೌರವಿಸುತ್ತೇವೆ. ಆದರೆ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಷ್ಕ್ರಿಯವಾಗಿದೆ, ಸರ್ಕಾರ ದುರ್ಬಲವಾಗಿದೆ, ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ತಾವು ನಮ್ಮ ಉತ್ತರದಲ್ಲಿ ನೋಡಬಹುದು. ಪ್ರತಿಯೊಬ್ಬ ಮಂತ್ರಿಗಳೂ ಅವರವರ ಜಿಲ್ಲೆಯಲ್ಲಿ ಪ್ರಗತಿ ಪರಿಶೀಲನೆ ಮಾಡಿದ್ದಾರೆ. ಪ್ರವಾಹ ಬಂದಾಗ ಅವರವರ ಜವಾಬ್ದಾರಿ ಏನೆಂದು ತಿಳಿದುಕೊಂಡಿರುತ್ತಾರೆ. ಕೆಲವು ಶಾಸಕರೇ ಮಂತ್ರಿಗಳಾಗಿದ್ದು, ಅವರವರ ಜಿಲ್ಲೆಗಳಲ್ಲಿ ಅನೇಕ ಸಂಪರ್ಕ ಸಭೆಗಳನ್ನು ಮತ್ತು ಸಂದರ್ಶನಗಳನ್ನು ಮಾಡಿರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೆ, ನೀತಿ ಹೇಳುವವರು ನೀತಿವಂತರಾಗಿರಬೇಕು. "One who seeks morality must do morally".

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು ಆತ್ಮಸಾಕ್ಷಿಯಂತೆ ಮಾತನಾಡುತ್ತೇನೆಂದು ಹೇಳಿದರು. ಅವರು ಮೆಚ್ಚುವಂತೆ ಸರ್ಕಾರ ಮಾಡಿರುವ ಒಳ್ಳೆಯ ಕೆಲಸ ಬಡವರಿಗೆ ತಲುಪಿದೆ. ಸಂತ್ರಸ್ತರು ಯಾರಿದ್ದಾರೆಯೋ ಅವರಿಗೆ ಮನೆಯನ್ನು ಕೊಡುವ ಕೆಲಸ ಆಗಿದೆ. ಎಲ್ಲೆಲ್ಲಿ ಕೆರೆಕಟ್ಟೆಗಳು ಒಡೆದು ಹೋಗಿದೆಯೋ ಅಲ್ಲಿ ದುರಸ್ತಿ ಮಾಡಿಸುವ ಕೆಲಸವಾಗಿದೆ. ಎಲ್ಲಾ ಅಂಕಿ ಅಂಶಗಳು ನಮ್ಮ ಬಳಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನೀವೇ ಉತ್ತರ ಕೊಟ್ಟುಬಿಟ್ಟರೆ ಹೇಗೆ? ನನ್ನ ಮಾತು ಮುಗಿದ ಮೇಲೆ ತಾವು ಹೇಳಿ. ನಾನು ಸ್ವಾಗತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಮಾತನಾಡುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಆದರೆ ಮಾತನಾಡುವಾಗ ಪ್ರತಿ ಬಾರಿಯೂ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ಸರ್ಕಾರ ಸಕ್ರಿಯವಾಗಿ ಜನರ ಕಷ್ಟಕ್ಕೆ ಸ್ಪಂದಿಸುತ್ತಿದೆ ಎಂದು ಹೇಳಲೇ? ಜನರ ದುಃಖ ದುಮ್ಮಾನಗಳಿಗೆ ಆಸರೆಯಾಗಿದೆ ಎಂದು ಹೇಳಲೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧಪಕ್ಷದ ನಾಯಕರೇ, ವಿರೋಧ ಪಕ್ಷದ ನಾಯಕನಾಗಿ ನಾನು ವಿರೋಧವನ್ನೇ ಮಾಡುತ್ತೇನೆಂದರೆ ನಮ್ಮದೇನೂ ವಾದವಿಲ್ಲ. ವಾಸ್ತವಿಕತೆಯನ್ನು ಮಾತನಾಡುತ್ತೇನೆಂದು ತಾವು ಹೇಳಿದ್ದರಿಂದ ಇದು ಎಷ್ಟರ ಮಟ್ಟಿಗೆ ಸರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, My criticism will always be constructive criticism and not destructive criticism. ರಚನಾತ್ಮಕವಾದಂತಹ ಟೀಕೆಗಳನ್ನು ನಾನು ಮಾಡುತ್ತೇನೆ. ಈ ಸದನದಲ್ಲಿ ನಾಲ್ಕನೆಯ ಬಾರಿಗೆ ನಿಮ್ಮ ಜೊತೆಯಲ್ಲಿಯೇ ನಾನು ಆಯ್ಕೆಯಾದವನು. 23 ವರ್ಷ ಅಂದರೆ ಎರಡೂವರೆ ದಶಕಗಳ ಸಮೀಪದಲ್ಲಿದ್ದೇನೆ. ನನ್ನ ಅನುಭವದಿಂದ ಸರಿಯಿರುವುದನ್ನು ಸರಿಯಿದೆ ಎಂದು ಹೇಳುತ್ತೇನೆ. ನನ್ನ ವೈರಿಯೇ ಆಗಿದ್ದರೂ ಒಳ್ಳೆಯ ಕೆಲಸ ಮಾಡಿದ್ದರೆ ಅವರ ಮನೆಗೆ ಹೋಗಿ ಒಂದು ಶಾಲು ಹೊದಿಸಿ ಹಾರ ಹಾಕಿ ಒಳ್ಳೆಯ ಕೆಲಸ ಮಾಡಿದ್ದೀರೆಂದು ಹೇಳಿ ಬರುತ್ತೇನೆ. I am a man of that nature. ಸರಿಯಿಲ್ಲವೆಂದು ನಾವು ಸಲಹೆಗಳನ್ನು ಕೊಟ್ಟರೆ, you should take in a good spirit. ನಾವು ಹೇಳಿದಂತಹ ಸಲಹೆಗಳನ್ನು ತಾವು ಸ್ವೀಕಾರ ಮಾಡಬೇಕು. Man is bound to commit mistake. "To err is human". ಮನುಷ್ಯ ತಪ್ಪು ಮಾಡುವುದು ಸಹಜ. ನನ್ನ ಬೆನ್ನು ನನಗೆ ಕಾಣುವುದಿಲ್ಲ. ಮಾನ್ಯ ತಿಮ್ಮಾಪುರ ಅವರಿಗೆ ನನ್ನ ಬೆನ್ನು ಕಾಣುತ್ತದೆ. ಅವರು ಹೇಳುತ್ತಾರೆ. ಆಗ ಅದನ್ನು ನಾನು ಸರಿಪಡಿಸಿಕೊಳ್ಳಬೇಕು. I have to rectify my mistakes and I should take it in a good spirit. ನಾನು ಮಾತ್ರ ಒಪ್ಪಿಕೊಳ್ಳುತ್ತೇನೆ. ನೀವು ಒಪ್ಪಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳಿ. ನೀವು ಕರಾವಳಿ ಭಾಗದವರು ಜಾಣರು, ಮೀನು ತಿಂದವರು.

ಬೆಂಗಳೂರಿನಲ್ಲಿ ಕೊರೊನಾಕ್ಕೆ ತುತ್ತಾಗಿ ಫಜೀತಿಗೊಳಗಾಗಿ ಜೀವ ಉಳಿಸಿಕೊಂಡು ಹಳ್ಳಿಗೆ ಬಂದು ವ್ಯವಸಾಯ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಬಹಳ ಜನ ಬೆಂಗಳೂರಿನಲ್ಲಿದ್ದವರು, ಸತ್ತರೆ ನಮ್ಮ ಊರಿನಲ್ಲಿಯೇ ಸಾಯೋಣ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 06 ಗಂಟೆ 10 ನಿಮಿಷವಾಗಿದೆ. ಇನ್ನೂ ಪ್ರಶ್ನೋತ್ತರ, ಶೂನ್ಯವೇಳೆಯನ್ನು ತೆಗೆದುಕೊಂಡಿಲ್ಲ. ತಮ್ಮ ಮಾತನ್ನು ನಾಳೆ ಮುಂದುವರೆಸಿ.

**ಸಭಾಪತಿಯವರು:-** ಮಾನ್ಯ ಪಾಟೀಲರೇ, ತಮ್ಮ ಮಾತನ್ನು ಮುಗಿಸುವಿರಾ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಇಂದೇ ಮುಗಿಸಿಬಿಡುತ್ತೇನೆ. ನಾಳೆ ಪುನಃ ಹೆಚ್ಚು ಸಮಯ ತೆಗೆದುಕೊಳ್ಳುವುದು ಬೇಡ. ಈಗ ನಾನು ಮುಗಿಸುವ ಹಂತಕ್ಕೆ ಬಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಹೆಚ್.ಎಂ.ರಮೇಶ್‌ಗೌಡ:- ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ವೇಳೆಯನ್ನು ನಾಳೆಗೆ ತೆಗೆದುಕೊಳ್ಳಿ. ಕಳೆದ ಬಾರಿ ಪ್ರಶ್ನೋತ್ತರ ವೇಳೆಯನ್ನು ಮರುದಿನ ತೆಗೆದುಕೊಳ್ಳಲಿಲ್ಲವೇ?

**ಸಭಾಪತಿಯವರು:-** ಮಾನ್ಯ ಪಾಟೀಲರೇ, ತಾವು ಪ್ರಾರಂಭ ಮಾಡಿ ಒಂದು ಗಂಟೆಯಾಯಿತು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ಗಂಟೆ ಇದಕ್ಕೆ ಹೆಚ್ಚಿನ ಸಮಯವೇನೂ ಅಲ್ಲ. ಇದು ಈ ಶತಮಾನದ ಜ್ವಲಂತ ಸಮಸ್ಯೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಶ್ರೀಕಂಠೇಗೌಡರೇ, ಈಗ ವಿರೋಧಪಕ್ಷದ ನಾಯಕರು ಮಾತನಾಡಲು ಪ್ರಾರಂಭಿಸಿದ್ದಾರೆ. ಅವರ ಮಾತು ಮುಗಿಸಿದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I am going to conclude. ನಾಳೆ ಬೇರೆ ವಿಷಯದ ಮೇಲೆ ಮಾತನಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ಮಾನ್ಯ ಶ್ರೀಕಂಠೇಗೌಡರ ಸಮಸ್ಯೆ ಏನೆಂದರೆ, ತಾವು ಮುಗಿಸುತ್ತೇನೆಂದ ಮೇಲೆ ಪುನಃ ಮುಕ್ಕಾಲು ಗಂಟೆ ಮಾತನಾಡುತ್ತೀರಿ ಎಂಬ ಸಣ್ಣ ಅನುಮಾನ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ತಾವು ಮಧ್ಯದಲ್ಲಿ ಮಾತನಾಡದಿದ್ದರೆ ಇಷ್ಟು ಹೊತ್ತಿಗೆ ನಾನು ಮುಗಿಸುತ್ತಿದ್ದೆನು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸಭಾನಾಯಕರು ತಮ್ಮ ಅಭಿಪ್ರಾಯವನ್ನು ನನ್ನ ಮೂಲಕ ಹೇಳುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಈ ಮಾತು ಸರಿ. ತಾವು ಮಧ್ಯೆ-ಮಧ್ಯೆ ಎದ್ದು ನಿಂತು ಅರ್ಧಗಂಟೆಗೂ ಹೆಚ್ಚು ಕಾಲ ವ್ಯಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಕೋವಿಡ್‌ಗೆ ಅಂಜಿದ ಜನ ಸತ್ತರೆ ನಮ್ಮ ಊರಿನಲ್ಲಿ ಸಾಯೋಣ, ಕಾರ್ಪೊರೇಷನ್ ಹೆಣವಾಗುವುದು ಬೇಡ ಎಂದು ಹೇಳಿ ಗುಳೆ ಬಂದಿದ್ದ ಜನರೆಲ್ಲಾ ತಮ್ಮ ಊರುಗಳಿಗೆ ಹಿಂದಿರುಗಿ ವ್ಯವಸಾಯವನ್ನು ಪ್ರಾರಂಭಿಸಿದ್ದಾರೆ. ಕಳೆದ ಬಾರಿಗೆ ಹೋಲಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದರೆ ಈ ಬಾರಿ ಬಿತ್ತನೆ ಶೇ.15 ಹೆಚ್ಚಳವಾಗಿದೆ. ಇನ್ನೇನು ಬೆಳೆ ಕೈಗೆ ಬರುತ್ತದೆ ಎನ್ನುವ ವೇಳೆಗೆ ಉತ್ತರ ಕರ್ನಾಟಕದಲ್ಲಿ ಭೀಕರ ಮಳೆಯಾಯಿತು. ಉಳಿದ ಜಿಲ್ಲೆಗಳೂ affect ಆಗಿದೆ. ಶೇಂಗಾ, ಈರುಳ್ಳಿ, ಅಡಕೆ, ಭತ್ತ, ಕಾಫಿ, ಮೆಣಸು, ಜೋಳ, ಇತರ ದ್ವಿದಳ ಧಾನ್ಯಗಳು, ಹತ್ತಿ ಹೀಗೆ ಎಲ್ಲವೂ ಕೊಚ್ಚಿಕೊಂಡು ಹೋಗಿವೆ.

**(ಮುಂದು)**

(1032) 08-12-2020 (6.10) ಕೆಜಿ-ಎಕೆ

**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಮಾನ್ಯ ಸಭಾಪತಿಯವರೇ, ಎಲ್ಲಾ ಬೆಳೆಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ಅವರು ವ್ಯವಸಾಯ ಮಾಡೋಣವೆಂದು ಸಾಲಸೋಲ ಮಾಡಿ ಕೃಷಿಯಲ್ಲಿ ತಮ್ಮನ್ನು ತಾವು ಅಳವಡಿಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಿ ಇನ್ನೇನು ಬೆಳೆ ಕೈಗೆ ಬರುತ್ತದೆ ಎನ್ನುವಷ್ಟರಲ್ಲಿ ದೊಡ್ಡ ಪ್ರಮಾಣದ ಅತಿವೃಷ್ಟಿ ಮತ್ತು ಪ್ರವಾಹದಿಂದ ಅದರಲ್ಲೂ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ 2019-20 ರಲ್ಲಿ ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಎರಡು ಸೇರಿದರೆ ಒಟ್ಟು 13 ಜಿಲ್ಲೆಗಳು. ಅದರಲ್ಲಿ 12 ಜಿಲ್ಲೆಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿದ್ದವು. ಈ ಬಾರಿ ಎಲ್ಲವು ಮುಳುಗಿವೆ. ಈ ಬಾರಿ ಬೆಳೆಗಳು ಕೈಗೆ ಬರದಂತೆ ಆಗಿದೆ. ಕಲ್ಯಾಣ ಕರ್ನಾಟಕದಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ನೋಡಿ, ಕೃಷಿ ಇಲಾಖೆಯವರ ಪ್ರಕಾರ, 3,70,982 ಹೆಕ್ಟೇರ್ ಪ್ರದೇಶದಲ್ಲಿ 2,47,209 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಬೆಳೆಗಳು ಸಂಪೂರ್ಣವಾಗಿ ಹಾನಿಯಾಗಿವೆ. ಒಟ್ಟು ಬಿತ್ತನೆಯಾದಂತಹ ಬೆಳೆ ಕೈಗೆ ಬರುವಂತಹದ್ದು ಇನ್ನೇನು harvest ಮಾಡುವುದಕ್ಕೆ ಹೋಗಬೇಕು ಎನ್ನುವಂತಹ ಬೆಳೆ 66.64% ಹಾನಿಯಾಗಿದೆ. ಇದು ಬೀದರ್ ಜಿಲ್ಲೆಯದ್ದು. ಕಲಬುರಗಿ ಜಿಲ್ಲೆಯದ್ದು ಜುಲೈ. ಆಗಸ್ಟ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಒಟ್ಟು 3,44,085 ಹೆಕ್ಟೇರ್ ಇದರಲ್ಲಿ 1,12,000 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಮತ್ತು 34,000 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆ ನಾಶವಾಗಿದೆ. ಒಟ್ಟು ಬಿತ್ತನೆ ಮಾಡಿದ ಪ್ರದೇಶದಲ್ಲಿ 60% ರಷ್ಟು ಬೆಳೆ ಹಾನಿಯಾಗಿದೆ. ಬೆಳೆ ನೀರು ಪಾಲಾಗಿದೆ. ಇದು ಪ್ರಾಥಮಿಕ ಸಮೀಕ್ಷೆಯ ವರದಿ. ಸಮೀಕ್ಷೆ ಪೂರ್ಣಗೊಂಡರೆ ಇನ್ನೂ ಎಷ್ಟು ಮಾಹಿತಿ ಸಿಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನನ್ನ ಕ್ಷೇತ್ರ ಬಿಜಾಪುರ ಜಿಲ್ಲೆ. ಅದರಲ್ಲಿ ದಿನಾಂಕ 13-10-2020 ರಿಂದ 20-10-2020ರವರೆಗೆ 1,60,739 ಹೆಕ್ಟೇರ್ ಪ್ರದೇಶದ ಕೃಷಿ ಬೆಳೆಗಳು ಹಾನಿಯಾಗಿವೆ. 11,929 ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆಗಳು ಹಾನಿಯಾಗಿವೆ. ಒಟ್ಟು 1,72,668 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ನಾಶವಾಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

preliminary report ನಿಂದ ತಿಳಿದಿದೆ. ಕೆಲವು ಕಡೆ ಸರ್ವೆ ಮಾಡಲು ಹೋಗಲಾರದಂತಹ ಸ್ಥಿತಿ ಇದೆ. ನಾನು ಬಿಜಾಪುರ ಜಿಲ್ಲೆಯ ಅನೇಕ ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದೇನೆ. ಅದರಲ್ಲಿ ಕೆಲವು ಗ್ರಾಮಗಳಿಗೆ ಹೋಗುವುದಕ್ಕೆ access ಇಲ್ಲ. ಅಂತಹ ಒಂದು ಪರಿಸ್ಥಿತಿ ಇತ್ತು. ಒಟ್ಟು ನಮ್ಮ ರಾಜ್ಯದಲ್ಲಿ 50 ಲಕ್ಷದಷ್ಟು ಎಕರೆ ಹಾನಿಯಾಗಿದೆ. 14,714.3 ಕೋಟಿಗಳಷ್ಟು ಕೃಷಿ ಬೆಳೆ ನಷ್ಟವಾಗಿದೆ. 2,432.2 ಕೋಟಿಗಳಷ್ಟು ತೋಟಗಾರಿಕೆ ಬೆಳೆಗಳು ನಾಶವಾಗಿವೆ. 646.5 ಕೋಟಿಗಳಷ್ಟು plantation ಬೆಳೆಗಳು ನಾಶವಾಗಿವೆ. ಕೃಷಿ ಭೂಮಿಯಲ್ಲಿ ಹೂಳು ತುಂಬಿದ್ದರಿಂದ ಅಂದಾಜು 487.2 ಕೋಟಿಗಳಷ್ಟು ಮೊತ್ತದ ಹಾನಿ ಸಂಭವಿಸಿದೆ. ಭೂಮಿಯಲ್ಲಿ cultivation ಮಾಡುವುದಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿ ಇತ್ತು. ಒಟ್ಟಾರೆ, 18,280.2 ಅಂದರೆ, 18 ಸಾವಿರ ಕೋಟಿಗಳ ಮೊತ್ತದಷ್ಟು ಬೆಳೆಗಳು ನಷ್ಟವಾಗಿ ರೈತರು ಕಷ್ಟದ ಪರಿಸ್ಥಿತಿಗೆ ಸಿಲುಕಿದ್ದಾರೆ.

ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದಂತೆ ಕಳೆದ ವರ್ಷದ ಪರಿಹಾರ ಧನವನ್ನು ಸಹ ಸಮರ್ಪಕವಾಗಿ ನೀಡಿಲ್ಲ. ಕಳೆದ ವರ್ಷ ಅಂದರೆ, 2019-20 ರಲ್ಲಿ 2,47,000 ಮನೆಗಳಿಗೆ ಹಾನಿಯಾಗಿದೆ. ಶತಮಾನದಲ್ಲಿ ಕಂಡರಿಯದಂತಹ ಮತ್ತು ಕೇಳರಿಯದಂತಹ ಮಹಾ ಮಳೆಗೆ ಈ ಮನೆಗಳು ಹಾನಿಯಾಗಿವೆ. ಇದರ ಬಗ್ಗೆ ಕೇಂದ್ರಕ್ಕೆ memorandum ಅನ್ನು ಸಲ್ಲಿಸಿದ್ದಾರೆ. ನಂತರ 1,24,000 ಮನೆಗಳಿಗೆ ಮಾತ್ರ ಪರಿಹಾರ ನೀಡಿದ್ದಾರೆ. 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡುತ್ತೇವೆಂದು ಹೇಳಿ, 9.120 ಮನೆಗಳಿಗೆ ಮಾತ್ರ ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಲು ಪ್ರಾರಂಭ ಮಾಡಿ ಒಂದು ಗಂಟೆ ಹದಿನೈದು ನಿಮಿಷಗಳು ಆಗಿದೆ. ತಾವು ಬೇಗ ಮಾತನಾಡಿ ಮುಗಿಸಿ ಇನ್ನೂ ವಿಷಯಗಳು ಇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ಲಕ್ಷದ ಮನೆಗಳಿಗೆ ಪರಿಹಾರವನ್ನು ಕೊಡದೆಯೇ ಕೈತೊಳೆದುಕೊಂಡಿದ್ದಾರೆ. ಅದಕ್ಕೆ ನಾನು ನೇರವಾಗಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು 1,887 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ಆದರೆ ಬಿಡುಗಡೆ ಮಾಡಿದ್ದು 1,652 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ ನಮ್ಮ ತಲೆಯ ಮೇಲೆ ಚಪ್ಪಡಿ ಎಳೆಯುತ್ತಾರೆಂದು ನನಗೆ ಅನಿಸುತ್ತದೆ. ಈ ವರ್ಷ 25 ಸಾವಿರ ಕೋಟಿ ರೂಪಾಯಿಗಳು ಹಾನಿಯಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಈ ವರ್ಷ ಮಾನ್ಯ ಮುಖ್ಯ ಮಂತ್ರಿಯವರು ಹತ್ತು ಸಾವಿರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜ್‌ನ್ನು ಕೇಳಿದ್ದಾರೆ. ಅದರಲ್ಲಿ 577 ಕೋಟಿ ರೂಪಾಯಿಗಳು ಮಾತ್ರ ಬಂದಿದೆ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೇ ಪಡುತ್ತೇನೆ. ಪಶ್ಚಿಮ ಬಂಗಾಳಕ್ಕೆ 2,707.77 ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದಾರೆ ಏಕೆಂದರೆ, ಅಲ್ಲಿ ಚುನಾವಣೆ ಇದೆ. ಅದಕ್ಕೆ ಬಿಡುಗಡೆ ಮಾಡಿದ್ದಾರೆ. ಚುನಾವಣೆಯ ಮೇಲೆ ಹಣ ಬಿಡುಗಡೆ ಮಾಡುತ್ತಾರೆಯೋ ಅಥವಾ ಹಾನಿಯ ಮೇಲೆ ಹಣ ಬಿಡುಗಡೆ ಮಾಡುತ್ತಾರೆಯೋ ನನಗೆ ಗೊತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗಲೇ ಮುಗಿಸುತ್ತೀರಾ ಅಥವಾ ನಾಳೆ ಮುಂದುವರಿಸುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಿಂದ 25 ಜನ ಸಂಸದರಾಗಿ ಆಯ್ಕೆಯಾಗಿದ್ದಾರೆ. 26 ಜನ ಸಂಸದರು ಅಂದರು ಸಹ ಅಡ್ಡಿ ಇಲ್ಲ. ನಮ್ಮ ಭಾರತೀಯ ಜನತಾ ಪಕ್ಷದ ಬೆಂಬಲದಿಂದ. I have come to an end already. ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಬೇಗ ಮುಗಿಸುವುದಿಲ್ಲ. ನನಗೆ interrupt ಮಾಡಿದರೆ ಬೇಗ ಮುಗಿಸುವುದಿಲ್ಲ. ನಮ್ಮ ರಾಜ್ಯದ 25 ಜನ ಸಂಸದರು ನಮ್ಮ ಋಣದಲ್ಲಿದ್ದಾರೆ, ಕೇಂದ್ರದಲ್ಲಿರುವ ಮತ್ತು ರಾಜ್ಯದಲ್ಲಿರುವ ಸರ್ಕಾರಗಳು ಒಂದೇ ಪಕ್ಷದ ಸರ್ಕಾರಗಳು ಆಗಿದ್ದರೆ ಸ್ವರ್ಗವನ್ನೇ ಧರೆಗೆ ಇಳಿಸಬಹುದು ಎಂದು ಹೇಳುತ್ತಿದ್ದರು. ಆದರೆ, ಈಗ ಎರಡು ಸರ್ಕಾರಗಳು ಬೇರೆ ಬೇರೆ ಇವೆಯೇ? ಇಲ್ಲಿಯೂ ಬಿಜೆಪಿ ಸರ್ಕಾರ ಇದೆ. ಅಲ್ಲಿಯೂ ಬಿಜೆಪಿ ಸರ್ಕಾರ ಇದೆ. ಹಾಗಾದರೆ, ಈಗ ಸ್ವರ್ಗ ಧರೆಗೆ ಇಳಿಯಿತೇ? ನಮ್ಮ ರಾಜ್ಯಕ್ಕೆ ಹೆಚ್ಚಿನ ಪರಿಹಾರ ಪಡೆಯಲು ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುತ್ತೇನೆ. ಕಳೆದ ವರ್ಷದ ಬಾಕಿ ಹಣದ ಬಗ್ಗೆ ಇವರ ವಿಚಾರ ಏನು? ಅದನ್ನು ಯಾವಾಗ ಕೊಡುತ್ತಾರೆ? ರಾಜ್ಯದ ರೈತರು ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಬೀದಿಗೆ ಬಂದಿದ್ದಾರೆ. ರಸ್ತೆಯಲ್ಲಿ ಮಸಿ ಮಡಿಕೆಯನ್ನು ಹೊತ್ತುಕೊಂಡು ಇರುವವರಿಗೆ ಈ ಸರ್ಕಾರ ಯಾವಾಗ ಪರಿಹಾರ ಕೂಡುತ್ತಾರೆ? ಕೃಷಿ ಜಮೀನುಗಳು ಕೊಚ್ಚಿ ಹೋಗಿವೆ, ಬೆಳೆಗಳು ನಾಶವಾಗಿದೆ, ಸರ್ಕಾರಕ್ಕೆ ಅವರ ಬದುಕುಗಳನ್ನು ಸರಿಪಡಿಸುವಂತಹ ವಿಚಾರ ಇದೆಯೋ ಅಥವಾ ಇಲ್ಲವೋ? ಹಾನಿಯಾದಂತಹ ಶಾಲಾ ಕೊಠಡಿಗಳು ಇರಬಹುದು, ಅಂಗನವಾಡಿಗಳು ಇರಬಹುದು, ಸೇತುವೆಗಳು ಇರಬಹುದು, ಕೆರೆಕಟ್ಟೆಗಳು ಇರಬಹುದು, ನಾಲೆಗಳು ಇರಬಹುದು ಮತ್ತು ರಸ್ತೆಗಳು ಇರಬಹುದು ಇವುಗಳನ್ನು ಯಾವಾಗ ದುರಸ್ತಿ ಮಾಡುತ್ತಾರೆ? ಸರ್ಕಾರ ಈ ಮೂಲಭೂತ ಸೌಕರ್ಯಗಳನ್ನು ಯಾವಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುರಸ್ತಿ ಮಾಡುತ್ತಾರೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಇವುಗಳನ್ನು ದುರಸ್ತಿ ಮಾಡುತ್ತಾರೋ ಅಥವಾ ಇಲ್ಲವೋ? ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ 'Karnataka is No.1 State in the country' ಎಂದು ಹೇಳುತ್ತಿದ್ದರು. No.1 ಇದಿದ್ದನ್ನು ಈ ಪರಿಸ್ಥಿತಿಗೆ ನೂಕಿದರು ಅದಕ್ಕೆ ನಮಗೆ ನೋವಾಗಿದೆ. ಮಾನ್ಯ ಸಭಾನಾಯಕರೇ, ಕೇಂದ್ರದಿಂದ ಬರುವಂತಹ ಪರಿಹಾರದ ಹಣವನ್ನು ಯಾವುದೇ ದೃಷ್ಟಿಯಿಂದ ತೆಗೆದುಕೊಂಡು ಬಂದು ಇದಕ್ಕೆ ಪರಿಹಾರ ಮಾಡಿ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಕೇಂದ್ರದಿಂದ ಕೊಡುವಂತಹ ಜಿ.ಎಸ್.ಟಿ., ಪರಿಹಾರವಾಗಲಿ, ತೆರಿಗೆಯಲ್ಲಿ ಹಂಚಿಕೆ ಮಾಡುವಂತಹ ವಿಚಾರದಲ್ಲಿಯಾಗಲಿ, ಅನುದಾನದಲ್ಲಿಯಾಗಲಿ ಮತ್ತೆ ಪ್ರವಾಹದ ಪರಿಹಾರದಲ್ಲಿಯಾಗಲಿ ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ. ಇವೆಲ್ಲದರಲ್ಲಿಯೂ ನಮ್ಮ ರಾಜ್ಯಕ್ಕೆ ನ್ಯಾಯ ಸಮ್ಮತವಾಗಿ ಬರಬೇಕಾಗಿತ್ತು. ಅದು ಬರುತ್ತಿಲ್ಲ. ಇದರ ವಿರುದ್ಧ ಮಾನ್ಯ ಸಚಿವರು, ಮಾನ್ಯ ಸಂಸದರು ಮತ್ತು ರಾಜ್ಯಸಭಾ ಸದಸ್ಯರು ಒಬ್ಬರೂ ಸಹ ಧ್ವನಿ ಎತ್ತುತ್ತಿಲ್ಲ ಏಕೆ?

**(ಮುಂದು...)**

(1033)08-12-2020(6-20)ಎಂವಿ-ಎಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಧ್ವನಿ ಎತ್ತದಿರುವುದಕ್ಕೆ ಕಾರಣ ಬೇಕಲ್ಲವೇ? ನಾನು ಬಿಜಾಪುರದ ಶಾಸಕರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ ರವರ ಬಗ್ಗೆ ಇಲ್ಲಿ ಉಲ್ಲೇಖ ಮಾಡಬೇಕಾಗುತ್ತದೆ. ಅವರು ಹೇಳುತ್ತಾರೆ, ನಾನು ಭಾರತೀಯ ಜನತಾ ಪಕ್ಷದ ಟಿಕೇಟ್‌ನಿಂದ ಶಾಸಕನಾಗಿರಬಹುದು. ಆದರೆ, ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಅನ್ಯಾಯವಾಗಿದೆ, ಇದಕ್ಕೆ ನ್ಯಾಯ ಒದಗಿಸಬೇಕೆಂದು ಅವರೊಬ್ಬರು ಮಾತ್ರ ತಮ್ಮ ಧ್ವನಿಯನ್ನು ಎತ್ತಿದ್ದಾರೆ. ನಾನು ಅದನ್ನು ಹೇಳದೆ ಇರುವುದಿಲ್ಲ. ಏಕೆಂದರೆ, ಅವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಅದಕ್ಕೆ ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತೇನೆ. ಆಡಳಿತ ಪಕ್ಷದವರು ಕೇಂದ್ರ ಸರ್ಕಾರದವರನ್ನು ಕೇಳಬೇಕು. As a matter of right, you can claim; you should demand. ಅವರು ಏನು ಪುಕ್ಕಟೆ ಮತ್ತು ದಾನವನ್ನು ಕೊಡುತ್ತಾರೆಯೇ? ನಮಗೆ ನ್ಯಾಯಸಮ್ಮತವಾಗಿ ಕೊಡಬೇಕಾಗಿರುವುದನ್ನು ಕೇಂದ್ರ ಸರ್ಕಾರ ಕೊಡಬೇಕು ಅಲ್ಲವೇ? ಇಲ್ಲವಾದರೆ ರಾಜ್ಯದ ಆರೂವರೆ ಕೋಟಿ ಜನರ ಗತಿಯೇನು? Therefore, you have got every moral right. ಕೇಂದ್ರದಲ್ಲಿ ನಮ್ಮ ರಾಜ್ಯದ 26 ಜನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಸತ್ ಸದಸ್ಯರು ಇದ್ದಾರೆ. ಇವತ್ತು ರಾಜ್ಯದಲ್ಲಿ ಸರ್ಕಾರವನ್ನು ಹೇಗೋ ತಂದಿದ್ದಾರೆ. ನಮ್ಮ ಪಕ್ಷ ಈ ರೀತಿ ಬಂದಿದೆ, ಸಹಾಯ ಮಾಡಿ ಎಂದು ಹೇಳಿ. ಅವರನ್ನು ಹೆಚ್ಚಿಗೆ ಕೇಳುವುದಲ್ಲ. ಈಗ ಪಕ್ಕದ ಪಶ್ಚಿಮ ಬಂಗಾಳಕ್ಕೆ ಹೇಗೆ ಕೊಟ್ಟಿದ್ದಾರೆ ಮತ್ತು ನಮ್ಮ ರಾಜ್ಯಕ್ಕೆ ಹೇಗೆ ಕೊಟ್ಟಿದ್ದಾರೆಂದು ನೋಡಿ. ಮಾನ್ಯ ಸಭಾನಾಯಕರು ನಮ್ಮ ಮುಂದೆ ಧ್ವನಿ ಎತ್ತುವುದು ಬೇಡ. ಅವರು ಅಲ್ಲಿ ಮೇಲಕ್ಕೆ ಧ್ವನಿಯನ್ನು ಎತ್ತಲಿ. ನಾನು ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಸುಮಾರು 35 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿತ್ತು. ಈ ಬಾರಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಇಲ್ಲಿ ಏನಾಗಿದೆ ಎಂದರೆ, ಇದು ಮಹತ್ವವಾದ ವಿಚಾರ ಇದನ್ನು ಯಾರು ಚರ್ಚೆ ಮಾಡಿಲ್ಲ. ಕಳೆದ ಬಾರಿ 35 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವುದು ಆಲಮಟ್ಟಿ ಜಲಾಶಯದಿಂದ ಕೃಷ್ಣಾ ನದಿಗೆ ನೀರನ್ನು ಬಿಟ್ಟರು. ಅಧಿಕಾರಿಗಳು ಅದನ್ನು ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ವಿಫಲರಾಗಿದ್ದಕ್ಕೆ ಇಷ್ಟು ದೊಡ್ಡ ಪ್ರಮಾಣದ ಹಾನಿಯಾಯಿತು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕಳೆದ ಬಾರಿ ಹಾನಿಯ ಬಗ್ಗೆ ಮಾತನಾಡುತ್ತಿದ್ದಾರೆಯೋ ಅಥವಾ ಈ ಬಾರಿ ಆದ ಹಾನಿಯ ಬಗ್ಗೆ ಮಾತನಾಡುತ್ತಿದ್ದಾರೆಯೋ?

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಕಳೆದ ಬಾರಿಯ ಹಾನಿಯ ಬಗ್ಗೆ ಮಾತನಾಡುತ್ತಿದ್ದೇನೆ. ಕಳೆದ ಬಾರಿ ಕೃಷ್ಣಾ ನದಿಯಿಂದ ಆಗಿರುವುದು. ಆದರೆ, ಈ ಬಾರಿ ಇಲ್ಲ. ಈಗ ತಮ್ಮ ತಪ್ಪನ್ನು ಸರಿಪಡಿಸಿಕೊಂಡಿದ್ದಾರೆ. ಅಂದರೆ, ಮಾನ್ಯ ಕಂದಾಯ ಸಚಿವರು, 'What mistake we had done last time, that has been rectified' ಎಂದು ಹೇಳಿದ್ದಾರೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೋದ ವರ್ಷ ಚೆನ್ನಾಗಿ ನಿರ್ವಹಣೆಯಾಗಿದೆ. ಆದರೆ, ಎರಡು ವರ್ಷದ ಹಿಂದೆ ಈ ರೀತಿಯಾಗಿರುವುದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಆಮೇಲೆ ಮಾತನಾಡುವಾಗ ಹೇಳುತ್ತೇನೆ. I will come to that point. ಈ ಬಾರಿ ಮಹಾರಾಷ್ಟ್ರದಿಂದ ಭೀಮಾ ನದಿಗೆ ನೀರು ಬಂತು. ಅಲ್ಲಿ ಏನಾಗಿದೆ ಎಂದರೆ, ಅಲ್ಲಿ ಸೊನ್ನ ಬ್ಯಾರೇಜ್ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದು ನಮ್ಮ ಜಿಲ್ಲೆಯ ಕೊನೆಯ ಬ್ಯಾರೇಜ್ ಅದು. ಅಲ್ಲಿ ಭೀಮಾ ನದಿಯನ್ನು ನಿರ್ವಹಣೆ ಮಾಡುವುದಕ್ಕೆ ಅಸಮರ್ಥರಾಗಿದ್ದಕ್ಕೆ ಅಲ್ಲಿ ಸುಮಾರು 7,38,000 ಕ್ಯೂಸೆಕ್ಸ್ ನೀರು ಒಳಹರಿವು ಇತ್ತು ಮತ್ತು ಹೊರಹರಿವು ಸಹ 7,38,000 ಕ್ಯೂಸೆಕ್ಸ್ ಎಂದು ಹೇಳಿದ್ದಾರೆ. ಈ ಸೊನ್ನ ಬ್ಯಾರೇಜ್‌ನಲ್ಲಿ effective ಆಗಿ, ಸರಿಯಾಗಿ ಮತ್ತು ಕ್ರಮಬದ್ಧವಾಗಿ 7,38,000 ಕ್ಯೂಸೆಕ್ಸ್ ನೀರು ಒಳಹರಿವು ಏನಿತ್ತು, ಅದನ್ನು ಹೊರಗೆ ಬಿಟ್ಟಿದ್ದರೆ ಏನಾಗುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆಲಮಟ್ಟಿಗೆ ಭೇಟಿ ನೀಡುತ್ತಾರೆಂದಾಗ ನಾನು ಅಲ್ಲಿಗೆ ಭೇಟಿ ನೀಡಿದ್ದೆ. ನಾನು ಅಲ್ಲಿನ ಅಧಿಕಾರಿಗಳ ಜೊತೆ ಚರ್ಚೆ ಮಾಡಿದೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಸಮಯವಾಗಿದೆ Helicopter ಹೋಗಿ reach ಆಗುವುದಿಲ್ಲ ಎನ್ನುವ ಸಲುವಾಗಿ ಆಲಮಟ್ಟಿ ಭೇಟಿಯನ್ನು ರದ್ದುಪಡಿಸಿದರು. ಅಲ್ಲಿ ಎಲ್ಲಾ ಹಿರಿಯ ಅಧಿಕಾರಿಗಳು ಇದ್ದರು, ಆಗ ನಾನು ಕೇಳಿದಾಗ unofficially they agreed that it was a mistake made by the Sonna Barrage Management. ಅಲ್ಲಿರುವಂತಹ ಇಂಜಿನಿಯರ್ಸ್‌ಗಳು ತಪ್ಪು ಮಾಡಿದ್ದಾರೆ. ಈಗ ಎಷ್ಟು ನೀರು ಒಳಹರಿವು ಬರುತ್ತದೆ, ಅಷ್ಟು ನೀರನ್ನು ಹೊರಗೆ ಬಿಟ್ಟುಬಿಡಬೇಕು. ಈಗ ಏನಾಗಿದೆ ಎಂದರೆ ಗೇಟ್ ಓಪನ್ ಆಗಿಲ್ಲ. ಅಂದರೆ ನಮ್ಮಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂದರೆ, ಬ್ಯಾರೇಜ್‌ನಲ್ಲಿ ನೀರು ತುಂಬಬೇಕು ಎಂದು ಇರುತ್ತದೆ. ಬ್ಯಾರೇಜ್ ಓಪನ್ ಮಾಡಿ ಎಲ್ಲವನ್ನು ಖಾಲಿ ಮಾಡಿದರೆ, ನಮ್ಮ ಮೇಲೆ ದೂರು ನೀಡುತ್ತಾರೆಂದು ಅಧಿಕಾರಿಗಳು ಬ್ಯಾರೇಜ್‌ನ ಗೇಟ್ ಅನ್ನು ಓಪನ್ ಮಾಡಿಲ್ಲ. ಇದರಿಂದ ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿ ಏನಾಗಿದೆ it is a man-made mistake. ನಮ್ಮಲ್ಲಿ 'tortious liability' ಎನ್ನುತ್ತಾರೆ. ನಾನು 'Law of Torts' ಅನ್ನು ಓದಿದ್ದೇನೆ. According to the Law of Torts, master is liable for the acts of servant. ಈಗ ಇದು ಪ್ರಕೃತಿಯಿಂದ ಆದ ಘಟನೆ ಅಲ್ಲ. ಇವರು bureaucrats, engineers ಏನಿದ್ದಾರೆ. ಈ ಸೊನ್ನ ಬ್ಯಾರೇಜ್ ಅನ್ನು ಸರಿಯಾಗಿ ನಿರ್ವಹಣೆ ಮಾಡಿದ್ದರೆ, ಎಷ್ಟು ಕ್ಯೂಸೆಕ್ಸ್ ನೀರು ಒಳ ಹರಿವು ಇತ್ತು, ಅಷ್ಟನ್ನು ಹೊರ ಹರಿವಿಗೆ ಬಿಟ್ಟಿದ್ದರೆ, ಇದರಿಂದ ಯಾವ ಗ್ರಾಮಗಳು ನೀರಿನಲ್ಲಿ ಮುಳುಗುತ್ತಿರಲಿಲ್ಲ ಮತ್ತು ಯಾವ ಪೀಕು ಸಹ ಹಾಳಾಗುತ್ತಿರಲಿಲ್ಲ. ಅಲ್ಲಿ ಏನಾಗಿದೆ ಎಂದರೆ ಮೇಲಿರುವಂತಹ ಬ್ಯಾರೇಜ್ ಗೇಟ್‌ಗಳನ್ನು ಹಾಗೆಯೇ ಮುಚ್ಚಿ ಬಿಟ್ಟಿದ್ದಾರೆ. ಆ ರೀತಿಯಾದರೆ ನೀರು ತುಂಬಿದಾಗ ಎಲ್ಲಿಗೆ ಹೋಗಬೇಕು? ಆಗ ಅದು ತುಂಬಿ ರೈತರ ಹೊಲಗಳಿಗೆ ಹೋಗಿ, ಗ್ರಾಮಗಳಿಗೆ ನೀರು ಪ್ರವೇಶ ಮಾಡಿದೆ. Therefore, master is liable for the acts of servant. In this case, the NDRF and SDRF norms are

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

not applicable. I will straightaway submit to this government through the Hon. Chairman - ಇದು ಪ್ರಕೃತಿ ವಿಕೋಪದಿಂದ ಇಷ್ಟು ದೊಡ್ಡ ಪ್ರಮಾಣದ ಅವಾಂತರವಾಗಿಲ್ಲ. ಏನು ಇಂಜಿನಿಯರ್ಸ್, government servants ಇದ್ದಾರೆ, ಅವರು ಇದನ್ನು ನಿರ್ವಹಣೆ ಮಾಡುವುದಕ್ಕೆ ವಿಫಲರಾಗಿದ್ದಕ್ಕೆ ಮತ್ತು ಅವರ ತಪ್ಪಿನಿಂದ ಇದು ಆಗಿದೆ. NDRF ಮತ್ತು SDRF norms ಪ್ರಕಾರ ಪರಿಹಾರವನ್ನು ಕೇಳುವುದಿಲ್ಲ. ಎಷ್ಟು ಹಾನಿಯಾಗಿದೆ ಅಷ್ಟು ಪರಿಹಾರವನ್ನು ಈ ಸರ್ಕಾರ ನೀಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತೇನೆ. ಏಕೆಂದರೆ, ಇಷ್ಟತ್ತು ಹೇಳುವುದು ಪ್ರಕೃತಿ ವಿಕೋಪ, ಪ್ರಕೃತಿ ವಿಕೋಪ ಎಂದು. Unofficially the topmost officers have agreed that it is a mistake made by the Sonna Barrage engineers. ಅಧಿಕಾರಿಗಳಿಂದ ತಪ್ಪಾಗಿದೆ, ಅವರಿಗೆ ನೋಟಿಸ್ ಕೊಟ್ಟಿದ್ದೇವೆ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಜಗದೀಶ್ ಶೆಟ್ಟರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದಂತಹವರು, ಇದರ ಬಗ್ಗೆ ಅವರು ಮಾಹಿತಿಯನ್ನು ತೆಗೆಯಿಸಬೇಕು. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ನೀಡಿ. ತಪ್ಪು ಮಾಡಿದವರಿಗೆ ಶಿಕ್ಷೆ ನೀಡುವುದು, ಅವರನ್ನು dismiss ಮಾಡುವುದು ಮತ್ತು ಅವರನ್ನು ಜೈಲಿಗೆ ಹಾಕುವುದನ್ನು I am not interested in that matter. But for the acts of your officers i.e., the government servants, ಅದಕ್ಕೆ ನಾವುಗಳು ಏಕೆ suffer ಆಗಬೇಕು. ನಮಗೆ ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. norms applicable ಆಗುವುದಿಲ್ಲ. ಅಧಿಕಾರಿಗಳ ತಪ್ಪಿನಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಬೆಳೆ ಮತ್ತು ಗ್ರಾಮಗಳು ಮತ್ತು ಸಾರ್ವಜನಿಕ ಕಟ್ಟಡಗಳು ಕೊಚ್ಚಿಕೊಂಡು ಹೋಗಿವೆ. 100% compensate ಮಾಡಬೇಕೆಂದು ತಮ್ಮ ಮುಖಾಂತರ ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್. norms ಎಲ್ಲವನ್ನು ಬದಿಗಿರಿಸಿ, ಅಧಿಕಾರಿಗಳ ತಪ್ಪಿನಿಂದ ಆದಂತಹ ಈ ಘಟನೆಯನ್ನು ಬಹಳ serious ಆಗಿ ಹೇಳುತ್ತೇನೆ. I am telling it very seriously. Even anybody may go to the court of law for damages. Anybody can sue the government in the court of law for compensation/damages. ಅಧಿಕಾರಿಗಳು ಮಾಡಿದಂತಹ ತಪ್ಪಿಗೆ, ಉತ್ತರ ಕರ್ನಾಟಕದ ಜನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಲ್ಲೂ ಕಲ್ಯಾಣ ಕರ್ನಾಟಕದ ಜನರಿಗೆ ಏನು ತೊಂದರೆಯಾಗಿದೆ, ಅದಕ್ಕೆ ಪೂರ್ತಿಯಾಗಿ pie to pie compensate ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಉಪ ಸಭಾಪತಿಯವರು:–** ಚರ್ಚೆಯನ್ನು ನಾಳೆ ಮುಂದುವರೆಸೋಣ. ಈಗ ಪ್ರಶ್ನೋತ್ತರ ವೇಳೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಉಪ ಸಭಾಪತಿಯವರು:-** ಶ್ರೀ ಪಿ.ಆರ್.ರಮೇಶ್, ಶ್ರೀ ಎಂ.ನಾರಾಯಣಸ್ವಾಮಿ, ಶ್ರೀ ಹೆಚ್.ಎಂ.ರಮೇಶ್‌ಗೌಡ.

**(ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿರುವುದಿಲ್ಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಪ್ರಶ್ನೆ ಸಂಖ್ಯೆ:111)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಂಡ್ಯ ನಗರದಲ್ಲಿ 700 ರಿಂದ 800 ಎಕರೆಗಳಷ್ಟು ವಿಸ್ತಾರವಾದ ಒಂದು ಬೃಹತ್ ಕೆರೆ ಇತ್ತು. ಅಲ್ಲಿ ಬಡಾವಣೆ ಮಾಡುವುದಕ್ಕೆ ಅದು ಲಗತ್ತಾದ ಜಾಗವಲ್ಲ. ಆದರೆ, 1998ರಲ್ಲಿ ಅಲ್ಲಿ ಬಡಾವಣೆಯನ್ನು ಮಾಡಿಬಿಟ್ಟರು. ಆ ಬಡಾವಣೆ 2003ಕ್ಕೆ ಸಿದ್ಧವಾಯಿತು. ಅಲ್ಲಿನ ನಿವೇಶನಗಳ ಹಂಚಿಕೆಗೆ ಅರ್ಜಿ ಕರೆದರೆ ಯಾರೂ ಸಹ ನಿವೇಶನಕ್ಕೆ ಅರ್ಜಿಯನ್ನೇ ಹಾಕಲಿಲ್ಲ. ಏಕೆಂದರೆ, ಕೆರೆಯಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲವೆಂದು ಒಂದು ಅಭಿಪ್ರಾಯ ಬಂತು. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದವರು ಕೋಟಿ ಕೋಟಿ ಸಾಲ ಮಾಡಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದರು. ಪೂರ್ಣಪ್ರಮಾಣದಲ್ಲಿ ಸಾಧಾರಣವಾಗಿ ಮಾಡಿದರು. ಅದರಲ್ಲಿ ಶೇಕಡಾ 50ಕ್ಕೂ ಹೆಚ್ಚು ಭಾಗ ನಿವೇಶನಗಳು ಉಳಿದುಕೊಂಡವು. ಆಗ ನಗರಾಭಿವೃದ್ಧಿಯವರಿಗೆ ಏನಾಯಿತು ಎಂದರೆ, ಯಾರಾದರು ಬಂದು ನಿವೇಶನಗಳನ್ನು ತೆಗೆದುಕೊಂಡರೆ ಸಾಕು ಎನ್ನುವ ರೀತಿಯಾಯಿತು. ಬಹಳ ಕಷ್ಟುಪಟ್ಟು ಜನರ ಮನಸ್ಸನು ಒಲಿಸಿ ಅವರಿಗೆ ನಿವೇಶನಗಳನ್ನು ಕೊಟ್ಟರು. ಅದರ ಮೇಲೆ ಯಾರೋ ಮೂಗರ್ಜಿ ಕೊಟ್ಟರು ಎಂದು ಅದರ ಮೇಲೆ ವಿಚಾರಣೆಯನ್ನು ಪ್ರಾರಂಭ ಮಾಡಿದರು. ಈಗ ಅದೆಲ್ಲಾ ಮುಗಿದಿದೆ. ಪ್ರಸ್ತು ಅಲ್ಲಿ ಜನರ ಸಮಸ್ಯೆ ಏನಾಗಿದೆ ಎಂದರೆ, ಪ್ರಾಧಿಕಾರದ ಬಡಾವಣೆಯನ್ನು ನಗರಾಭಿವೃದ್ಧಿ ಇಲಾಖೆಯು ನಗರಸಭೆಗೆ ವಹಿಸಿಲ್ಲ. ಮತ್ತೊಂದು ಕಡೆ ಒಳಚರಂಡಿ ವ್ಯವಸ್ಥೆ ಮಾಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲ. ಅದು ಒಂದು ರೀತಿ jungle area ಆಗಿದೆ. ಅಲ್ಲಿ ಜನರು ತಿರುಗಾಡುವುದಕ್ಕೆ ಆಗುವುದಿಲ್ಲ. ಈಗ 700 ಎಕರೆಯಲ್ಲಿ ಒಂದು ರಸ್ತೆ ಬಿಟ್ಟರೆ, ಬೇರೆ ಯಾವುದಕ್ಕೂ ಸಹ ಡಾಂಬರೀಕರಣವಾಗಿಲ್ಲ. ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯೂ ಇಲ್ಲದಂತಾಗಿದೆ. ಅದರಲ್ಲಿ ಹೌಸಿಂಗ್ ಬೋರ್ಡ್‌ನವರಿಗೆ 200 ಎಕರೆ ಜಾಗವನ್ನು ಕೊಟ್ಟಿದ್ದಾರೆ. ಹೌಸಿಂಗ್ ಬೋರ್ಡ್ ಬಡಾವಣೆಯ ಕಷ್ಟ ಆ ದೇವರಿಗೆ ಪ್ರೀತಿ. ಈ ಎರಡು ಬಡಾವಣೆಗಳನ್ನು ನಗರಸಭೆಗೆ ವಹಿಸಿದ್ದರು. MUDA ದವರು charge ಕಟ್ಟಬೇಕು ಎಂದಾಗ ಅದಕ್ಕೆ ಸುಮಾರು 78 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾರೆ. ಎರಡೂ ಕಡೆ ಪರಸ್ಪರ ಖಾತೆ ಮಾಡಿಕೊಡುತ್ತಿಲ್ಲ, ಕಂದಾಯವನ್ನು ಸಹ ತೆಗೆದುಕೊಳ್ಳುವುದಿಲ್ಲ ಮತ್ತು ಮನೆ ಕಟ್ಟುವುದಕ್ಕೆ ಪರವಾನಿಗಿಯನ್ನು ಸಹ ಕೊಡುವುದಿಲ್ಲ. ಈ ರೀತಿ ಏಕೆ ಆಗುತ್ತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1034)-08.12.2020-06.30-LL-VK

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಸಂಬಂಧಪಟ್ಟ ವಿಷಯದಲ್ಲಿ ಏನಾಗಿದೆಯೆಂದರೆ, ನಮ್ಮ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಡಾವಣೆ ನಿರ್ಮಾಣ ಮಾಡಿದರು. ನಂತರ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ, ಇದರಲ್ಲಿ ಅವ್ಯವಹಾರ ನಡೆದಿದೆಯೆಂದು ದಿನಾಂಕ:09.01.2014ರಲ್ಲಿ ಈ ಪ್ರಕರಣವನ್ನು ಸರ್ಕಾರ ಸಿ.ಬಿ.ಐ.ಗೆ ವಹಿಸಿತು. ನಂತರ, ಸಿ.ಬಿ.ಐ. ಏನು ಮಾಡಿತೆಂದರೆ, ಪ್ರಕರಣದ ಬಗ್ಗೆ ತನ್ನ ವರದಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದೆ. ಈಗ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿರುವುದಿಲ್ಲ. ಅದರಂತೆ, ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗದೇ ನಾವು ಅಲ್ಲಿ ಯಾವುದೇ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೂ ಕೂಡ, ನಾನು ಸಚಿವನಾಗಿ ಬಂದ ಮೇಲೆ ಮೊನ್ನೆ ನಡೆದ ಕ್ಯಾಬಿನೇಟ್‌ನಲ್ಲಿ ಇದಕ್ಕೆ ಸುಮಾರು 16.46 ಕೋಟಿ ರೂಪಾಯಿ ಹಣ ಮಂಜೂರಾತಿ ಪಡೆದು, ಆ ಪೂರ್ತಿ ಬಡಾವಣೆಯ ಅಭಿವೃದ್ಧಿಗೆ ಮೀಸಲಿಟ್ಟು, ಟೆಂಡರ್ ಕಾಲ್ ಫಾರ್ ಮಾಡಿದ್ದೇವೆ. ಟೆಂಡರ್ ಆದ ತಕ್ಷಣವೇ ಇನ್ನು ಕೆಲವೇ ದಿನಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡುವಂತಹ ಕೆಲಸವನ್ನು ನಾವು ಖಂಡಿತವಾಗಿ ಮಾಡುತ್ತೇವೆ. ಅಷ್ಟೇ ಅಲ್ಲದೇ, ಈ ವಿಷಯದಲ್ಲಿ ಏನಾದರೂ ಅಂತಿಮ ತೀರ್ಮಾನವಾಗಬೇಕೆಂದು ಕಾನೂನು ಇಲಾಖೆಯಲ್ಲಿ ಅಭಿಪ್ರಾಯ ಪಡೆಯುವಂತಹ ಕೆಲಸವನ್ನು ಕೂಡ ಮಾಡಿದ್ದೇವೆ. ಆದರೆ, ಕಾನೂನು ಇಲಾಖೆಯವರು, "ಆ ವಿಷಯದಲ್ಲಿ ನ್ಯಾಯಾಲಯದ ತೀರ್ಪು ಬರದೇ ನಾವು ಯಾವುದೇ ಕ್ರಮ ಜರುಗಿಸುವುದಕ್ಕೆ ಸಾಧ್ಯವಿಲ್ಲ" ಎನ್ನುವ ಅಭಿಪ್ರಾಯ ನೀಡಿರುತ್ತಾರೆ. ಹಾಗಾಗಿ, ಸದರಿ ನ್ಯಾಯಾಲಯದಿಂದ ತೀರ್ಪು ಬಂದ ತಕ್ಷಣವೇ ಈ ವಿಷಯದಲ್ಲಿ ಯಾರ್‍ಯಾರು ತಪ್ಪಿತಸ್ಥರಿದ್ದಾರೆ ಮತ್ತು ಇದರಲ್ಲಿ ಯಾವ ಅವ್ಯವಹಾರವಾಗಿದೆ ಅದರ ಬಗ್ಗೆ ಸರ್ಕಾರ ಕ್ರಮ ಜರುಗಿಸುತ್ತದೆ.

**ಶ್ರೀ ಕೆ. ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ವಿಷಯಗಳಲ್ಲಿ ಕಾನೂನು ಅಭಿಪ್ರಾಯ ಪಡೆಯುತ್ತೇವೆಂದು ಹೇಳುತ್ತಾರೆ. ಆದರೆ, ಈ ಪ್ರಕರಣದಲ್ಲಿ ಏತಕ್ಕೆ ನ್ಯಾಯಾಲಯ ಎಂದು ಹೇಳುತ್ತಿದ್ದಾರೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಇದು ಸಿ.ಬಿ.ಐ. ಪ್ರಕರಣ. ಸರ್ಕಾರ ಈ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಿದಾಗ, ಸಿ.ಬಿ.ಐ. ತನ್ನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ. ಅದರಂತೆ, ನ್ಯಾಯಾಲಯ ಈ ಪ್ರಕರಣದಲ್ಲಿ ಅಂತಿಮ ತೀರ್ಪು ನೀಡಿರುವುದಿಲ್ಲ. ಆ ತೀರ್ಪು ಬರುವುದಕ್ಕೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊದಲೇ ಕಾನೂನು ಇಲಾಖೆಯಲ್ಲಿ, "ಈ ವಿಷಯದಲ್ಲಿ ಸರ್ಕಾರ ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ" ಎಂದು ಅಭಿಪ್ರಾಯ ಕೋರಿರುತ್ತೇವೆ. ಆದರೆ, ಕಾನೂನು ಇಲಾಖೆ, "ನ್ಯಾಯಾಲಯದ ತೀರ್ಪು ಬರುವವರೆಗೆ ಸಾಧ್ಯವಿಲ್ಲ" ಎಂದು ಅಭಿಪ್ರಾಯ ನೀಡಿರುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು ಬಡಾವಣೆಗಳಿವೆ. ಒಂದು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ್ದು, ಮತ್ತೊಂದು ಹೌಸಿಂಗ್ ಬೋರ್ಡ್‌ಗೆ ಸೇರಿದ್ದಾಗಿದೆ. ಹೌಸಿಂಗ್ ಬೋರ್ಡ್‌ಗೆ ಸೇರಿದ ಬಡಾವಣೆಯಲ್ಲಿ, there is no dispute at all. ಇನ್ನೂ ಖಾಲಿ ನಿವೇಶನಗಳಿದ್ದು, ತೆಗೆದುಕೊಳ್ಳುವವರಿಲ್ಲ. ಹರಾಜು ಮಾಡಿದರು ಯಾರು ಬರುವುದಿಲ್ಲ. ಏಕೆಂದರೆ, ಅದು ಪೂರ್ತಿ ಕಾಡು, ಕೆರೆ. ಅದನ್ನು ಖರೀದಿ ಮಾಡಿದವರು ಕನಿಷ್ಠ 15 ರಿಂದ 20 ಅಡಿ ಆಳದಿಂದ ಫೌಂಡೇಷನ್ ತರಬೇಕು. ಆ ಸೈಟ್‌ಗಳಿಗೆ ಸರ್ಕಾರ ನಿಗದಿ ಮಾಡಿರುವ ಹಣಕ್ಕಿಂತ ಕಡಿಮೆಗೆ ಜನ ಹರಾಜು ಮಾಡಿದ್ದಾರೆಯೇ ಹೊರತು ಮೇಲೆ ಹೋಗಿರುವುದಿಲ್ಲ. ನನ್ನ ಪ್ರಶ್ನೆ ಹೌಸಿಂಗ್ ಬೋರ್ಡ್‌ನಿಂದ ಸದರಿ ಸೈಟುಗಳನ್ನು ನಗರಸಭೆಗೆ ಹಸ್ತಾಂತರಿಸಲಾಗಿರುತ್ತದೆ. ಅದರಂತೆ, ನಗರಸಭೆಯವರು ಸದರಿ ನಿವೇಶನಗಳ ಖಾತೆ ಮಾಡಿಕೊಡುವುದಕ್ಕೆ ಅಥವಾ ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಏನು ಕಷ್ಟ ಇದೆ?

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೌಸಿಂಗ್ ಬೋರ್ಡ್ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮಾಹಿತಿ ತರಿಸಿಕೊಂಡು ಉತ್ತರ ನೀಡುತ್ತೇನೆ. **(ಗೊಂದಲ)** ಮಾನ್ಯ ಸದಸ್ಯರು ನಗರಸಭೆಯವರು ನಿವೇಶನಗಳ ಖಾತೆ ಮಾಡಿಕೊಡಬೇಕೆಂದು ಏನು ಹೇಳಿದ್ದಾರೆ, ಖಂಡಿತವಾಗಿ ಅದರ ಬಗ್ಗೆ ಸುತ್ತೋಲೆ ಹೊರಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ ನಡೆದಂತಹ ಕೆ.ಡಿ.ಪಿ. ಸಭೆಯಲ್ಲಿ ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೊಡಿಸುತ್ತೇವೆಂದು ತಾವು ಮಾತು ಕೊಟ್ಟು ಬಂದಿರುತ್ತೀರಿ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಕೆ.ಡಿ.ಪಿ. ಸಭೆಗೆ ನಾನು ಬಂದಿರುವುದಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ಬಾರಿ ತಾವು ಕೆ.ಡಿ.ಪಿ. ಸಭೆಗೆ ಬಂದಂತಹ ಸಂದರ್ಭದಲ್ಲಿ ಜನ ತಮಗೆ ಅವಹಾಲು ಕೊಟ್ಟಿರುತ್ತಾರೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ನಾನು ರಿವ್ಯೂ ಮೀಟಿಂಗ್‌ಗೆ ಬಂದಿರುತ್ತೇನೆ. ಆ ಸಂದರ್ಭದಲ್ಲಿ...

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ನಾನು ಪೂರ್ತಿ ವಿಚಾರ ಹೇಳುತ್ತೇನೆ. ಆ ಸಂದರ್ಭದಲ್ಲಿ, MUDA ದವರು ನಮಗೆ ಹೌಸಿಂಗ್ ಬೋರ್ಡ್‌ನವರು 78 ಲಕ್ಷ ರೂಪಾಯಿ ಹಣ ಕಟ್ಟಬೇಕೆಂದು ಹೇಳಿರುತ್ತಾರೆ. ಅದರಂತೆ, ಅವರು ಹಣ ಪಾವತಿ ಮಾಡಿರುತ್ತಾರೆ. ಜೊತೆಗೆ, ಬಡಾವಣೆಯನ್ನು ನಗರಸಭೆಗೆ ಹಸ್ತಾಂತರ ಸಹ ಮಾಡಿರುತ್ತಾರೆ. ಹೀಗಿರುವಾಗ, ಸದರಿ ಸೈಟುಗಳ ಖಾತೆ ಮಾಡಿಕೊಡುವುದು, ಆ ಸೈಟುಗಳಲ್ಲಿ ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಅಥವಾ ಅಲ್ಲಿ ಅಭಿವೃದ್ಧಿ ಮಾಡುವುದಕ್ಕೆ ತೊಂದರೆ ಏನಿದೆ?

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಪುರಸಭೆ ಮತ್ತು ನಗರಸಭೆಗಳು ಮಾನ್ಯ ಪೌರಾಡಳಿತ ಸಚಿವರ ವ್ಯಾಪ್ತಿಗೆ ಬರುತ್ತದೆ. ನನಗೆ ಮಹಾನಗರ ಪಾಲಿಕೆಗಳು ಮಾತ್ರ ಬರುತ್ತವೆ. ಆದರೂ ಕೂಡ, ಮಾನ್ಯ ಸದಸ್ಯರು ಯಾವ ವಿಚಾರದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ನಾನು ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಯಾವ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಉಳಿದಂತೆ ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಯ ವಿಚಾರದಲ್ಲಿ...

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ನಗರಾಭಿವೃದ್ಧಿ ಪ್ರಾಧಿಕಾರ ಬಡಾವಣೆಯ ವಿಚಾರ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕು. ಕಳೆದ ಅಧಿವೇಶನದಲ್ಲಿ ಮಾನ್ಯ ಅಪ್ಪಾಜಿಗೌಡರವರು ಸಹ ಇದೇ ಪ್ರಶ್ನೆಯನ್ನು ಕೇಳಿದ್ದು, ನಾನು ಅವರಿಗೆ ಉತ್ತರವನ್ನು ಸಹ ನೀಡಿರುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ, ಈ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ನಾವು ಯಾವುದೇ ಕಾನೂನು ಕ್ರಮ ಜರುಗಿಸುವುದಕ್ಕೆ ಸಾಧ್ಯವಿರುವುದಿಲ್ಲ. ಆದಾಗ್ಯೂ, ಈ ವಿಷಯದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಸಹ ಪಡೆದಿರುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನ್ಯಾಯಾಲಯದಲ್ಲಿ ಏನೂ ಇಲ್ಲ ಮಾನ್ಯ ಸಚಿವರೇ. ಆ ಸೈಟುಗಳನ್ನು ಶ್ರೀಮತಿ ವಿದ್ಯಾ ನಾಗೇಂದ್ರರವರು ಬಿ.ಜೆ.ಪಿ. ಅಧ್ಯಕ್ಷರಾಗಿದ್ದಾಗಲೇ ಈ ಸೈಟುಗಳ ಹಂಚಿಕೆಯಾಗಿರುತ್ತದೆ. ಆ ಸಂದರ್ಭದಲ್ಲಿ ನಗರಾಭಿವೃದ್ಧಿ ಅಧ್ಯಕ್ಷರು ಸಹ ಅವರೇ ಆಗಿದ್ದರು. ಈಗಲೂ ಸಹ ಆ ಸೈಟುಗಳನ್ನು ಕೇಳುವವರು ಇಲ್ಲ. ಇಲ್ಲಿ ಸಮಸ್ಯೆ ಏನಿದೆಯೆಂದರೆ, ಯಾರಾದರೂ ಕಷ್ಟಪಟ್ಟು ಹಣ ಹೊಂದಿಸಿ ಅಥವಾ ಸಾಲ ತೆಗೆದುಕೊಂಡು ಸೈಟುಗಳನ್ನು ತೆಗೆದುಕೊಂಡವರಿಗೆ ನಗರಸಭೆಯವರು ಮನೆ ಕಟ್ಟುವುದಕ್ಕೆ ಲೈಸೆನ್ಸ್ ನೀಡುವುದಿಲ್ಲ. ಲೈಸೆನ್ಸ್ ಇಲ್ಲದೇ ಇದ್ದರೆ, ಅವರು ಲೋನ್‌ಗೆ ಅಪ್ಲೈ ಮಾಡುವ ಹಾಗಿಲ್ಲ; ಲೋನ್ ಸಿಗದೇ ಇದ್ದರೆ ಅವರು ಮನೆ ಕಟ್ಟುವುದಕ್ಕೆ ಆಗುವುದಿಲ್ಲ. ಇದರಿಂದಾಗಿ, ಇಡೀ ಬಡಾವಣೆ ಕಾಡು ಆಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಮನೆ ಕಟ್ಟಿದ್ದಾರೆ. ಅವರು ದೈನಂದಿನ ಕೆಲಸಗಳಿಗೆ ಓಡಾಡುವುದಕ್ಕೆ ಕಷ್ಟವಾಗಿರುತ್ತದೆ. ಆದುದರಿಂದ, ಆದ್ಯತೆ ಮೇರೆಗೆ ಸದರಿ ಬಡಾವಣೆಯ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಅಲ್ಲಿರುವಂತಹ ಜಂಗಲ್ ಅನ್ನು ತೆರವುಗೊಳಿಸಿ, ಒಳಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಸದರಿ ಬಡಾವಣೆಯಲ್ಲಿ ಸಮಸ್ಯೆ ಇದೆಯೆಂದು ಸರ್ಕಾರ ಸುಮಾರು 16.46 ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಿರುತ್ತದೆ. ಅದರಂತೆ, ಆ ಕಾಮಗಾರಿ ಟೆಂಡರ್ ಹಂತದಲ್ಲಿದ್ದು, ಟೆಂಡರ್ ಆದ ತಕ್ಷಣವೇ ಆ ಬಡಾವಣೆಯಲ್ಲಿ ಯಾವ ಮೂಲಭೂತ ಸೌಕರ್ಯಗಳು ಬೇಕು ಅಂದರೆ, ಯು.ಜಿ.ಡಿ. ಇರಬಹುದು, ಒಳಚರಂಡಿ ವ್ಯವಸ್ಥೆ, ಬೀದಿದೀಪ, ರಸ್ತೆ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:-184**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಕಾಲಾವಕಾಶ ನೀಡಿದ್ದಕ್ಕಾಗಿ ವಂದನೆಗಳು. ನನ್ನ ಪ್ರಶ್ನೆಗೆ ಮಾನ್ಯ ಸಚಿವರು ವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಸಮಸ್ಯೆಗಳ ಬಗ್ಗೆ ಸರ್ಕಾರ ಕೊಟ್ಟಿರುವ ಉತ್ತರದ ಬಗ್ಗೆ ಉಪ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇವೊತ್ತಿನ ದಿವಸ ತಮಗೆಲ್ಲಾ ಗೊತ್ತಿರುವಂತೆ, ಕೃಷಿ ಉತ್ಪಾದನೆಯನ್ನು, ಅದು ತೋಟಗಾರಿಕೆ ಇರಬಹುದು ಅಥವಾ ಯಾವುದೇ ರೀತಿಯ ಕೃಷಿ ಪದಾರ್ಥಗಳಿರಬಹುದು ಮಾರುಕಟ್ಟೆಗೆ ಸರಿಯಾದ ರೀತಿಯಲ್ಲಿ, ಸರಿಯಾದ ಪ್ರಮಾಣದಲ್ಲಿ ಮಾರುಕಟ್ಟೆ ಸಿಗದೇ ಇರುವುದರಿಂದ ರೈತರಿಗೆ ಕಷ್ಟವಾಗುತ್ತಿದೆ. ಇವೊತ್ತಿನ ದಿವಸ ಧಾನ್ಯಗಳು ಇರಬಹುದು ಅಥವಾ ತೋಟಗಾರಿಕೆ ಉತ್ಪನ್ನಗಳಿರಬಹುದು, ಅದರಲ್ಲಿಯೂ ತೋಟಗಾರಿಕೆ ಉತ್ಪನ್ನಗಳ ವಿಚಾರದಲ್ಲಿ ನಮ್ಮ ರೈತರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಆದರೆ, ಉತ್ತರದಲ್ಲಿ ಇಡೀ ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಇವೆಯೆಂದು ಹೇಳಿರುತ್ತಾರೆ ಮತ್ತು 352 ಉಪ ಮಾರುಕಟ್ಟೆಗಳಿವೆಯೆಂದು ಉತ್ತರ ನೀಡಿದ್ದಾರೆ. ಈ ಮಾರುಕಟ್ಟೆಗಳಲ್ಲಿ ಕಾಯಿದೆ, ಕಾನೂನುಗಳು ಎಲ್ಲಾ ಇವೆ, ಆದರೆ, ಈ ಮಾರುಕಟ್ಟೆಗಳಿಗೆ ಹೋಗತಕ್ಕಂತಹ ಜನ ಬಹಳ ಕಡಿಮೆ. ಅದರಲ್ಲಿಯೂ ನಾನು ತರಕಾರಿ ಮತ್ತು ಹಣ್ಣು-ಹಂಪಲು ಬಗ್ಗೆ ಹೇಳುತ್ತೇನೆ. ಅಂದರೆ, ಆ ಮಾರುಕಟ್ಟೆಯಲ್ಲಿ ಬಹಳ ವಿರಳವಾದಂತಹ, ಅಂದರೆ, ಈ ರಾಜ್ಯದ ಶೇಕಡ 5ರಷ್ಟು ಬೆಳೆಗಳನ್ನು ಸಹ ತೆಗೆದುಕೊಳ್ಳುವುದಿಲ್ಲ. ಇನ್ನುಳಿದ ಶೇಕಡ 90 ಕ್ಕಿಂತಲೂ ಜಾಸ್ತಿ ಬೆಳೆಗಳ ವಿಚಾರದಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ಸಾಕಷ್ಟು ಸಮಸ್ಯೆಯಾಗುತ್ತದೆ. ಆದರೆ, ಕಾಯಿದೆಯಲ್ಲಿ ಶೇಕಡ 5 ರಷ್ಟು ತರಕಾರಿಗೆ ಕೊಟ್ಟಿದ್ದಾರೆ. ಕೃಷಿ ಉತ್ಪನ್ನಗಳಿಗೆ ಶೇಕಡ 2 ರಷ್ಟು ಕಮೀಷನ್ ಕೊಟ್ಟಿದ್ದಾರೆ. ಆದರೆ, ಶೇಕಡ 5 ರಷ್ಟು ಕಮೀಷನ್ ತೆಗೆದುಕೊಂಡಿರುವುದನ್ನು, ಎಲ್ಲಿಯಾದರೂ ನೋಡಿದ್ದಾರೆಯೇ? ಆ ಬಗ್ಗೆ ಇವೊತ್ತಿನವರೆಗೂ ಕ್ರಮ ತೆಗೆದುಕೊಳ್ಳಲಾಗಿದೆಯೇ? ಅದು ಆಗಿರುವುದಿಲ್ಲ.

ಎರಡನೆಯದಾಗಿ, 62 ನೇರ ಖರೀದಿ ಕೇಂದ್ರಗಳ ಸ್ಥಾಪನೆಗಾಗಿ ಲೈಸೆನ್ಸ್ ಮಂಜೂರು ಮಾಡಿದೆ ಎಂದು ಹೇಳಿದ್ದಾರೆ. ಅಂದರೆ, ಈ ಲೈಸೆನ್ಸ್‌ಗಳನ್ನು ಸರ್ಕಾರದ ಸಂಸ್ಥೆಗಳಿಗೆ ಕೊಡಲಾಗಿದೆಯೇ, ಸರ್ಕಾರೇತರ ಸಂಸ್ಥೆಗಳಿಗೆ ಕೊಡಲಾಗಿದೆಯೇ ಅಥವಾ ಯಾರಿಗಾದರೂ ಕೊಡಲಾಗಿದೆಯೇ? ಇಂತಹ ಖರೀದಿ ಕೇಂದ್ರಗಳ ಸ್ಥಾಪನೆಗೆ ಕೇವಲ 62 ಜನರು ಮಾತ್ರ ಲೈಸೆನ್ಸ್ ಪಡೆಯತಕ್ಕಂತಹ ಅರ್ಹತೆ ಹೊಂದಿರುತ್ತಾರೆಯೇ? ಇದು ಬಹಳ ಮುಖ್ಯವಾದ ಅಂಶವಾಗಿರುತ್ತದೆ. ಇನ್ನು ಮೇಲ್ವಿಚಾರಣೆಗೆ ಜನ ಪ್ರತಿನಿಧಿಗಳು ಇದ್ದಾರೆಂದು ಹೇಳಿರುತ್ತಾರೆ. ಆದರೆ, ಅವರ ಕೆಲಸ-ಕಾರ್ಯಗಳು ಏನೆಂದು ಇವೊತ್ತಿನವರೆಗೂ ರೈತರಿಗೆ ಸರಿಯಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿರುವುದಿಲ್ಲ. ರೈತರುಗಳು ಎ.ಪಿ.ಎಂ.ಸಿ.ಯಲ್ಲಿ ಓಟು ಹಾಕುತ್ತಾರಷ್ಟೇ. ಎ.ಪಿ.ಎಂ.ಸಿ.ಯಲ್ಲಿ ಆಗುವಂತಹ ಕೆಲಸ ಆಗುತ್ತದೆ. ಹಾಪ್‌ಕಾಮ್ಸ್‌ಗಳ ಬಗ್ಗೆ ಒಂದು ಪಟ್ಟಿ ಕೊಟ್ಟಿದ್ದಾರೆ. ಅದರಂತೆ, ಬೆಂಗಳೂರಿನಲ್ಲಿ 213 ಹಾಪ್‌ಕಾಮ್ಸ್ ಮಳಿಗೆಗಳು ಇವೆಯೆಂದು ಉತ್ತರ ನೀಡಿದ್ದಾರೆ. ಆ 213 ಮಳಿಗೆಗಳು ಒಂದು ಕಡೆ ಶೇಖರಣೆಯಾಗುವಂತಹ ತರಕಾರಿ ಅಥವಾ ಹಣ್ಣು-ಹಂಪಲು ತೆಗೆದುಕೊಳ್ಳುತ್ತಾರೆ. ಅದು ಒಂದು ಕಡೆಯಿಂದ ಎಲ್ಲಾ ಕಡೆ ಹೋಗುತ್ತದೆ. ಬೆಂಗಳೂರು ನಗರ ಅಥವಾ ಜಿಲ್ಲೆ ಇರಬಹುದು. ಇನ್ನೂ ಬೇರೆ ಕಡೆ ಬಹಳ ವಿರಳವಾಗಿದೆ. ಬೆಂಗಳೂರಿನಲ್ಲಿ 213 ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಬಿಟ್ಟು ಹೊರಗಡೆ ತಾಲ್ಲೂಕು ಮಟ್ಟದಲ್ಲಿ ಒಟ್ಟು 25 ಮಳಿಗೆಗಳು ಇವೆಯೆಂದು ಹೇಳಿದ್ದಾರೆ. ಈ ಬೆಂಗಳೂರಿನಲ್ಲಿ ಕೊಡತಕ್ಕಂತಹ 213 ಮಳಿಗೆಗಳು ಇವೆಯಲ್ಲ, ಅವುಗಳಲ್ಲಿ 115 ಮಳಿಗೆಗಳು ನಾನು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದಾಗ, ಆ ದಿನ ಗುರ್ತಿಸಿ ಕೊಟ್ಟಿರುತ್ತೇನೆ. ಇಲ್ಲದೇ ಇದ್ದರೆ ಅದು ಇರುತ್ತಿರಲಿಲ್ಲ. ಇವೊತ್ತಿನ ದಿವಸ ಬೆಂಗಳೂರಿನ ಜನಕ್ಕೆ ತಾಜಾ ತರಕಾರಿ ಮತ್ತು ಹಣ್ಣು-ಹಂಪಲುಗಳನ್ನು ಕೊಡುವುದಕ್ಕೆ ಹಾಪ್‌ಕಾಮ್ಸ್ ಅನ್ನು ನಂಬಿರುತ್ತೇವೆ. ಆದರೆ, ಅವರು ತೆಗೆದುಕೊಳ್ಳುವುದು ಬಹಳ ಕಡಿಮೆ. ನನ್ನದು ಕೂಡ ಕೃಷಿ ಜಮೀನು ಇದೆ. ನಾವು ಕೂಡ ತರಕಾರಿ ಬೆಳೆಗಳನ್ನು ಬೆಳೆಯುತ್ತೇವೆ. ನಾನು ಹೇಳುತ್ತಿರುವುದು 1977-78ರ ವಿಷಯ. ಆ ಸಂದರ್ಭದಲ್ಲಿ ನಾನೇ ಸ್ವತಃ ತರಕಾರಿ ತೆಗೆದುಕೊಂಡು ಮಾರುಕಟ್ಟೆಗೆ ಹೋಗುತ್ತಿದ್ದೆನು. ಅಲ್ಲಿ ಯಾವ ರೀತಿ ತೊಂದರೆ ಕೊಡುತ್ತಿದ್ದರೆಂದರೆ, SKR ಮಾರುಕಟ್ಟೆ ಇದೆಯಲ್ಲ.., (**ಗೊಂದಲ**) ಏಕೆಂದರೆ, ರೈತರ ಸಮಸ್ಯೆ ಏನಿದೆ ಎಂದು ಹೇಳಬೇಕು. ಇವೊತ್ತಿನ ದಿವಸ ಕೂಡ ಇದು ನಡೆಯುತ್ತಿದೆ. ಆ ಮಾರುಕಟ್ಟೆಯ ಗೇಟ್ ಬಳಿ 10 ಪೈಸೆ ಕೊಟ್ಟರೆ ಒಂದು ಚೀಟಿ ಕೊಡುತ್ತಿದ್ದರು. ಆ ಚೀಟಿಯನ್ನು ತೆಗೆದುಕೊಂಡು ನಾವು ತಂದಿರುವ ತರಕಾರಿ ಅಂದರೆ, ಬದನೆಕಾಯಿ ಇರಬಹುದು, ಬೆಂಡೆಕಾಯಿ ಇರಬಹುದು ಅಥವಾ ಯಾವುದೇ ತರಕಾರಿಯನ್ನು ತೆಗೆದುಕೊಂಡು ಒಳಗಡೆ ಹೋದರೆ, ಅಲ್ಲಿರುವಂತಹ ಮಧ್ಯವರ್ತಿಗಳು, "ಈ ತರಕಾರಿಯನ್ನು ಏತಕ್ಕೆ ತಂದೆ, ರೇಟ್ ಇಲ್ಲ" ಎಂದು ಅಥವಾ ಬೇರೆ ಏನಾದರೂ ಹೇಳಿ ಆ ರೈತ ತಾನು ತಂದಿರುವ ತರಕಾರಿಯನ್ನು ಅಲ್ಲಿಯೇ ಬಿಟ್ಟು ಹೋಗಬೇಕು ಎನ್ನುವ ರೀತಿಯ ಮಾನಸಿಕ ಒತ್ತಡ ತರುತ್ತಾರೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1035)08.12.2020/6.40/ವೈಎಲ್-ವಿಕೆ

**ಶ್ರೀ ಪಿ.ಆರ್.ರಮೇಶ್** (ಮುಂದು):-

ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರವಾಗಲಿ ಅಥವಾ ಸಂಬಂಧಪಟ್ಟ ಇಲಾಖೆಗಳಾಗಲಿ ಯಾವುದೇ ನಿಯಂತ್ರವನ್ನು ಮಾಡದೇ ಇರುವುದರಿಂದ ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ. ಇವತ್ತಿಗೂ ಸಹ ಮಂಡಿಗೆ ನಮ್ಮ ಹುಡುಗರೇ ಹೋದಂಥ ಸಂದರ್ಭದಲ್ಲಿ ಹೊರಗಡೆ 1 ಕೆ.ಜಿ. ತರಕಾರಿಗೆ ಎಷ್ಟು ಎಂದು ಕೇಳಿದರೆ, ಶೇಕಡ 3 ರಿಂದ 4 ರಷ್ಟು ಜಾಸ್ತಿ ಬೆಲೆಯನ್ನು ನಿಗದಿ ಮಾಡಿ ಹೇಳುತ್ತಾರೆ. ಆದರೆ, ರೈತರಿಗೆ ಬಹಳ ಕಡಿಮೆ ಹಣ ಸಿಗುತ್ತದೆ. ಇದರಿಂದ ನಿರಂತರವಾಗಿ ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ. ಕಷ್ಟಪಟ್ಟು ರೈತ ಬಂಗಾರದ ರೀತಿ ಬೆಳೆದಿರುತ್ತಾರೆ. ಆದರೆ, ರೈತನ ಹತ್ತಿರ ಖರೀದಿಸುವವರು ಕಬ್ಬಿಣದ ರೀತಿ ಸಹ ನೋಡದ ಹಣವನ್ನು ನೀಡುತ್ತಾರೆ. ಈ ವಿಚಾರವಾಗಿ ಇಲಾಖೆಯವರು ರೈತರ ಪರವಾಗಿ ಯಾವ ರೀತಿ ಕಡಿವಾಣ ಹಾಕುವಂತೆ ಕ್ರಮ ಕೈಗೊಂಡಿದ್ದಾರೆ ಎಂಬುದರ ಬಗ್ಗೆ ಸಂಪೂರ್ಣವಾಗಿ ಮಾಹಿತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎ.ಪಿ.ಎಂ.ಸಿ. ಕಾಯ್ದೆಯಲ್ಲಿ ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರ weighmen system ಜಾರಿಗೆ ತರಲಾಗಿದೆ. ರೈತರು ಮಾರಾಟ ಮಾಡುವಾಗ ತೂಕದಲ್ಲಾಗಲಿ ಅಥವಾ ಅಳತೆಯಲ್ಲಾಗಲಿ ಮೋಸವಾಗಬಾರದೆಂಬ ಉದ್ದೇಶದಿಂದ ಈ ಯೋಜನೆಯನ್ನು ಜಾರಿ ಮಾಡಲಾಗಿದೆ. ಈ ರಾಜ್ಯದಲ್ಲಿ ಸುಮಾರು 1200 ರಿಂದ 1300 ಜನ weighmen ಗಳಿದ್ದು, ಅವರಿಗೆ ವೇತನ ಇರುವುದಿಲ್ಲ. ಅವರುಗಳು ಹೋಗಿ ಅಂಗಡಿಗಳಲ್ಲಿ ನಿಂತು ತೂಕ ಮಾಡುವಂಥ ಪಟ್ಟಿಯೇ ಅಂತಿಮವಾಗಿ ಅಧಿಕೃತವಾಗಿರುತ್ತದೆ. ಈ ಗಳಿಗೆ ಕಮೀಷನ್ ಆಧಾರಿತ ಸಂಬಳವನ್ನು ನೀಡಲಾಗುತ್ತದೆ. ಕೋವಿಡ್-19 ಸಂದರ್ಭದಲ್ಲಿ ಅಂಗಡಿಗಳು ಮುಚ್ಚಿದ ಕಾರಣದಿಂದ weighmen ಗಳಿಗೆ ಸಂಬಳವೇ ಸಿಗದೇ, ಬೀದಿಗೆ ಬಂದು ಬಿಳುವಂಥ ಸ್ಥಿತಿ ನಿರ್ಮಾಣವಾಗಿತ್ತು. ಕೋವಿಡ್-19 ಅವಧಿಗೂ ಮುಂಚೆಯೇ weighmen ಗಳಿಗೆ ನೀಡಬೇಕಾದ ತೂಕದ ವೆಚ್ಚವೇನಿದೆ ಅದರ ಆಧಾರದ ಮೇಲೆ ಸಂಬಳ ನೀಡಿರುತ್ತಾರೆ. ಈ ಸಂಬಂಧ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಅದಕ್ಕೆ ಉಚ್ಚ ನ್ಯಾಯಾಲಯವು weighment charges ಎಪಿಎಂಸಿ ಕಾಯ್ದೆ ಅಡಿ ನೀಡಬೇಕೆಂದು ತೀರ್ಮಾನವಾಗುತ್ತದೆ. Weighment charges ಕಡಿಮೆ collection ಆದಂಥ ಸಂದರ್ಭದಲ್ಲಿ ಅವರಿಗೆ ರಾಜ್ಯ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ವೇತನ equivalent to minimum wage

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಬೇಕೆಂದು ಹೇಳುತ್ತದೆ. ದುರದೃಷ್ಟವಶಾತ್ ಅದನ್ನು ಸರ್ಕಾರ ಪಾಲನೆ ಮಾಡಲಿಲ್ಲ. Weighmen ಗಳನ್ನು exploit ಮಾಡಿದ್ದರಿಂದ ಅವರು ಮಾಲೀಕರ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಇದರಿಂದ ಮಾಲೀಕರು weighmen ಗಳಿಗೆ ಹಣ ನೀಡುವುದರಿಂದ ರೈತರಿಗೆ ಮೋಸವಾಗುತ್ತದೆ. Weighmen ಗಳ ಸ್ಥಿತಿಗತಿಯನ್ನು ಎಪಿಎಂಸಿ ಗಳನ್ನು represent ಮಾಡುತ್ತಾರೆ. ಹಾಗಾಗಿ ಎ.ಪಿ.ಎಂ.ಸಿ. ಗಳು weighmen ಗಳ ಹಿತವನ್ನು ಕಾಪಾಡುವುದಕೋಸ್ಕರ ಅವರ ಬದುಕಿನ ಬಗ್ಗೆ, ಕೆಲಸವನ್ನು ಖಾಯಂಗೊಳಿಸುವ ಬಗ್ಗೆ, ಸಂಬಳದ ಬಗ್ಗೆ ಕೂಡ ದಯವಿಟ್ಟು ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮರಿತಿಬ್ಬೇಗೌಡರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಪಿ.ಆರ್.ರಮೇಶ್‌ರವರ ಹೇಳಿದ ಹಾಗೆ ಹಣ್ಣು ಮತ್ತು ತರಕಾರಿಗಳನ್ನು ಈ ಮೊದಲು ಕೇವಲ ಎ.ಪಿ.ಎಂ.ಸಿ. ಕಾಯ್ದೆ ಅಡಿಯಲ್ಲಿಯೇ ಮಾರಾಟ ಮಾಡಬೇಕೆಂಬ ಕಾನೂನು ಜಾರಿಯಲ್ಲಿತ್ತು. ಆದರೆ, ಸುಮಾರು ವರ್ಷಗಳ ಹಿಂದೆಯೇ ಈ ಕಾನೂನನ್ನು ರದ್ದುಗೊಳಿಸಿ ಎಲ್ಲಿ ಬೇಕಾದರೂ ಹಣ್ಣು-ತರಕಾರಿಗಳನ್ನು ಮಾರಾಟ ಮಾಡಬಹುದೆಂದು ಮಾಡಲಾಗಿದೆ. ಆದರೆ, ಹಾಪ್‌ಕಾಮ್ಸ್ ಸಂಬಂಧಿಸಿದಂತೆ ಬೇರೆ ವಿಚಾರವಾಗಿದೆ. ಬೆಂಗಳೂರು ಹಾಗೂ ಇನ್ನಿತರ ಕೆಲವು ಜಿಲ್ಲೆಗಳಲ್ಲಿ ರಿಟೇಲ್ ದರದಲ್ಲಿ ವ್ಯಾಪಾರ ಮಾಡುವುದಕ್ಕೆ ಹಾಪ್‌ಕಾಮ್ಸ್ ಸೀಮಿತವಾಗಿದೆ. ಆದರೆ, ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುವುದಕ್ಕೆ ಎ.ಪಿ.ಎಂ.ಸಿ. ಗಳಿರುತ್ತದೆ. ಬೆಳಗಿನ ಜಾವದಲ್ಲಿ ದಾಸನಪುರ, ಬ್ಯಾಟರಾಯನಪುರ, ಆನೇಕಲ್ ಮತ್ತು ಅತ್ತಿಬೆಲೆ ಕಡೆಗಳಿಗೆ ಹೋದರೆ ಎ.ಪಿ.ಎಂ.ಸಿ.ಗಳಿಗೆ ಎಷ್ಟು ಲೋಡ್ ತರಕಾರಿ ಹಾಗೂ ಹಣ್ಣು ಬರುತ್ತದೆ ಎಂಬುದನ್ನು ತಿಳಿದುಕೊಳ್ಳಲು ಎಲ್ಲಾ ಕಡೆ ವ್ಯವಸ್ಥೆಯನ್ನು ಮಾಡಲಾಗಿದೆ. ಒಮ್ಮೊಮ್ಮೆ 100, 200, 300 ಲೋಡ್‌ಗಳಷ್ಟು ಹಣ್ಣು-ತರಕಾರಿಗಳು ಬರುತ್ತವೆ. ಹಣ್ಣು-ತರಕಾರಿಗಳು ಹೋಲ್‌ಸೇಲ್ ಆಗಿ ಬಂದರೆ ಎಲ್ಲರೂ ಅದನ್ನು ಬೇರೆ-ಬೇರೆ ಕಡೆ retail ಗೆ ತೆಗೆದುಕೊಂಡು ಹೋಗುವಂಥ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ಯಾವುದೇ ಹಣ್ಣು-ತರಕಾರಿಗಳಿಗೂ ಕಡಿವಾಣ ವಿಧಿಸಿರುವುದಿಲ್ಲ. ಈ ಹಿಂದೆ ಎ.ಪಿ.ಎಂ.ಸಿ. ಕಾಯ್ದೆ ಅಡಿಯೊಳಗೆ ಮಾರಾಟ ಮಾಡಬೇಕೆಂದು ಮಾಡಲಾಗಿದ್ದು, ಅದೆಲ್ಲವನ್ನೂ ತೆಗೆದು ಹಾಕಲಾಗಿದೆ. ಅದೇ ರೀತಿ ಹಣ್ಣು-ತರಕಾರಿಗಳನ್ನು ಮಾರಾಟ ಮಾಡಲು ಎಲ್ಲೆಲ್ಲಿ ವ್ಯವಸ್ಥೆ ಇದೆ, ಅಲ್ಲೆಲ್ಲಾ ಹೋಗಿ ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯರಾತ್ರಿ ಸುಮಾರು 12.30 ಅಥವಾ 1 ಗಂಟೆಗೆ ಲೋಡ್ ಬರುತ್ತದೆ. ಬೆಳಗಿನ ಜಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 5.00 ಗಂಟೆವರೆಗೂ ಹರಾಜು ಮಾಡುವವರೆಗೂ ರೈತ ಸಂಘದ ಕಮಿಟಿ ಹಾಲ್ ಏನಿರುತ್ತದೆ, ಅಲ್ಲಿ ಆತನಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯವನ್ನು ಒದಗಿಸಿ ಉಳಿದುಕೊಳ್ಳುವಂಥ ವ್ಯವಸ್ಥೆಯನ್ನು ಎ.ಪಿ.ಎಂ.ಸಿ. ನಲ್ಲಿ ಮಾಡಲಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಸಹ ಹಾಪ್‌ಕಾಮ್ಸ್ ಅಲ್ಲದೇ ಬೆಂಗಳೂರಿನಲ್ಲಿರುವ ಸುಮಾರು 1400 ಅಪಾರ್ಟ್‌ಮೆಂಟ್ಸ್‌ಗಳಿಗೂ ಹಣ್ಣು-ತರಕಾರಿಗಳನ್ನು ಸರಬರಾಜು ಮಾಡಲು ಉಚಿತವಾಗಿ ಪರವಾನಗಿ ನೀಡುವಂಥ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನ 28 ಕ್ಷೇತ್ರಗಳಲ್ಲಿ ಎ.ಪಿ.ಎಂ.ಸಿ. ಮೂಲಕ ತಳ್ಳುವ ಗಾಡಿ ಅಥವಾ ವ್ಯಾನ್‌ಗಳಲ್ಲಿ ಹೋಗಿ ಹಣ್ಣು-ತರಕಾರಿಗಳನ್ನು ಎಲ್ಲಿ ಬೇಕಾದರೂ ಮಾರಾಟ ಮಾಡುವ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಎಲ್ಲಿಯೂ ಸಹ ಅವರಿಗೆ ತೊಂದರೆಯಾಗದ ರೀತಿ ಮುತುವರ್ಜಿ ಸಹ ವಹಿಸಲಾಗಿದೆ. ಪಹಣಿ ಹೊಂದಿರುವ ರೈತ ಯಾರಿದ್ದಾರೆ, ಅವರಿಂದಲೇ ಎ.ಪಿ.ಎಂ.ಸಿ. ಬೋರ್ಡ್‌ಗೆ ಸಿಬ್ಬಂದಿಯನ್ನು ನೇಮಕ ಮಾಡಲಾಗಿರುತ್ತದೆ. ಬೆಂಗಳೂರು ಹೊರತುಪಡಿಸಿ, ಉಳಿದೆಲ್ಲಾ ಕಡೆಗಳಲ್ಲಿ ಎ.ಪಿ.ಎಂ.ಸಿ. ಬೋರ್ಡ್ ತೆರೆಯಲಾಗಿದ್ದು, ಈ ಬೋರ್ಡ್‌ನವರು ಏನಾದರೂ ಸಮಸ್ಯೆಯಾದರೆ ನಿಯಂತ್ರಣ ಮಾಡುತ್ತಿದ್ದರು. ಆದರೆ, ಈಗ ರೈತ ಬೆಳೆದಂಥ ಹಣ್ಣು-ತರಕಾರಿಗಳನ್ನು ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು. ಹೊಸ ಕಾಯ್ದೆ ಪ್ರಕಾರ ಎ.ಪಿ.ಎಂ.ಸಿ. ಬೋರ್ಡ್‌ರವರಿಗೆ ಯಾವುದೇ ರೀತಿಯಲ್ಲಿ ನಿಯಂತ್ರಣ ಮಾಡಲು ಅವಕಾಶ ಇರುವುದಿಲ್ಲ. ಈ ಹಿಂದೆ ಅವಕಾಶ ಇದ್ದು, ಅದನ್ನು ರದ್ದುಗೊಳಿಸಲಾಗಿದೆ. 62 ಕಡೆಗಳಲ್ಲಿ ನೇರ ಖರೀದಿ ಮಾಡಲು ಪರವಾನಗಿ ಮಾಡಿಕೊಡಲಾಗಿದೆ. ರಿಲಯನ್ಸ್ ಕಂಪನಿ ಒಂದಕ್ಕೆ ಪರವಾನಗಿ ನೀಡಿದರೆ, ಅವರು ಸುಮಾರು 70 ರಿಂದ 80 ಕಡೆಗಳಲ್ಲಿ ರಿಟೈಲ್ ಶಾಪ್ ಮಾಡಿಕೊಳ್ಳುತ್ತಾರೆ. ಮಾಲ್‌ಗಳಾಗಲಿ ಅಥವಾ ಇನ್ನಿತರೆ ಕಡೆಗಳಲ್ಲಿ ಎಲ್ಲಿಯೂ ಸಹ ಹಣ್ಣು-ತರಕಾರಿಗಳನ್ನು ಮಾರಾಟ ಮಾಡಲು ತೊಂದರೆಯಾಗುತ್ತಿದೆ ಎಂದು ಇದುವರೆಗೂ ನನ್ನ ಗಮನಕ್ಕೆ ಬಂದಿರುವುದಿಲ್ಲ. ಏಕೆಂದರೆ, ಬೆಳಗಿನ ಜಾವ ಸುಮಾರು 6.00 ಗಂಟೆಗೆ ಎಲ್ಲಾ ಎ.ಪಿ.ಎಂ.ಸಿ.ಗಳಿಗೆ ಹಾಗೂ ಹಾಪ್‌ಕಾಮ್ಸ್‌ಗಳಿಗೆ ಭೇಟಿ ನೀಡಿ ಇರುವಂಥ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲಾಗಿದ್ದು, ಇವತ್ತಿನವರೆಗೂ ಯಾವುದೇ ದೂರು ಬಂದಿರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದಿಂದ ಬರುವಂತಹ ಹಣ್ಣು-ತರಕಾರಿಗಳನ್ನು ಹಾಪ್‌ಕಾಮ್ಸ್‌ನವರು ತೆಗೆದುಕೊಳ್ಳದೇ ತಿರಸ್ಕರಿಸುತ್ತಾರೆ. ಇದರಿಂದಾಗಿ ಅವರು ಸಿಟಿ ಮಾರ್ಕೆಟ್‌ಗೆ ಮಾರಾಟ ಮಾಡಲು ಹೋದರೆ ಹಾಪ್‌ಕಾಮ್ಸ್‌ನವರು ತಿರಸ್ಕರಿಸಿದ್ದಾರೆ ಎಂಬುದು ಗೊತ್ತಾದರೆ ಸಾಕು ಸುಮಾರು 50 ರೂಪಾಯಿ ಕೆ.ಜಿ. ಗೆ ಮಾರಾಟವಾಗುವುದನ್ನು 20 ರೂಪಾಯಿ ಕೆ.ಜಿ.ಗೆ ಕೇಳುತ್ತಾರೆ. ಹಣ್ಣು-ತರಕಾರಿಗಳು perishable commodities

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವುದರಿಂದ ವಾಪಸ್ಸು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಆತ ಸಹ ತಂದಿದೇ ತಪ್ಪಾಯಿತ್ತು, ಕೈಗೆ ಬಂದಷ್ಟು ಬರಲಿ ಎಂದು ಮಾರಾಟ ಮಾಡಿ ಬಿಡುತ್ತಾರೆ. ಇದರಿಂದ ಆತನಿಗೆ ಪ್ರಯಾಣದ ವೆಚ್ಚವು ಸಿಗುವುದಿಲ್ಲ. ಹಾಗಾಗಿ ಹಾಪ್‌ಕಾಮ್ಸ್‌ಗಳ ಮೇಲೆಯೂ tight vision ಇರಬೇಕು. ಸುಮಾರು 500 ರಿಂದ 600 ಕಿಲೋ ಮೀಟರ್‌ನಷ್ಟು ಒಂದೊಂದು ಲೋಡ್ ಹಣ್ಣು-ತರಕಾರಿಗಳನ್ನು ತಂದಿರುತ್ತಾರೆ. ಇಂಡೆಂಟ್ ಸಹ ಕೊಟ್ಟಿರುತ್ತಾರೆ. ಆದರೆ, ಕೆಲವರ ಪ್ರಭಾವಕ್ಕೆ ಒಳಗಾಗಿ ಕೆಲವು ಮಂದಿಗಳ ಹತ್ತಿರ ಹಣ್ಣು-ತರಕಾರಿಗಳನ್ನು ತೆಗೆದುಕೊಳ್ಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಅದೇ ಸಾಮಾನ್ಯ ರೈತರು ತಂದರೆ ತಿರಸ್ಕರಿಸಿ ಬಿಡುತ್ತಾರೆ. ಇದರಿಂದಾಗಿ ಹಾಪ್‌ಕಾಮ್ಸ್‌ರವರ ಮೇಲೆ ಸ್ವಲ್ಪ ಗಮನಹರಿಸಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂಥ ಸ್ಪಷ್ಟೀಕರಣವೇನಿದೆ,...

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೆ ನೇರವಾಗಿ ಪ್ರಶ್ನೆ ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಆಗಲಿ. ಮಾನ್ಯ ಸಚಿವರು ಎ.ಪಿ.ಎಂ.ಸಿ. ಬೋರ್ಡ್ ಮೂಲಕ ಹಣ್ಣು-ತರಕಾರಿಗಳನ್ನು ಮಾರಾಟ ಮಾಡುವುದನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದರು. ಇದನ್ನು ನೋಡಿದಾಗ ಖಾಸಗಿ ಏಜೆನ್ಸಿಗಳಿಗೆ encourage ಮಾಡುವುದಕ್ಕೆ 62 ಕಡೆಗಳಲ್ಲಿ ನೇರ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಎರಡನೆಯದಾಗಿ, ಹೊಸೂರು ರಸ್ತೆ, ದಾಸನಪುರ ಇಂತಹ ಕಡೆಗಳಲ್ಲಿ ಎ.ಪಿ.ಎಂ.ಸಿ. ರವರು ಅಥವಾ ಬೇರೆಯವರು ಹಣ್ಣು-ತರಕಾರಿಗಳನ್ನು ಖರೀದಿ ಮಾಡಲು ಇರುತ್ತಾರೆ ಎಂದುಕೊಳ್ಳೋಣ. ಆದರೆ, ಮಾಗಡಿ ರಸ್ತೆ, ಕನಕಪುರ ರಸ್ತೆಗಳಲ್ಲಿ ಸಾವಿರಾರು ರೈತರು ಪ್ರತಿದಿನ ತರುವಂಥ ಹಣ್ಣು-ತರಕಾರಿಗಳನ್ನು ಅಲ್ಲಿನ ಏಜೆಂಟ್‌ಗಳು exploit ಮಾಡುತ್ತಿದ್ದಾರೆ. ಇವರುಗಳನ್ನು ನಿಯಂತ್ರಣ ಮಾಡಲು ಎ.ಪಿ.ಎಂ.ಸಿ. ಕಾಯ್ದೆಯನ್ನು ರದ್ದುಗೊಳಿಸಲಾಗಿದೆ. ಹಾಪ್‌ಕಾಮ್ಸ್‌ನವರು ತೆಗೆದುಕೊಳ್ಳುವಂಥ ಹಣ್ಣು-ತರಕಾರಿಗಳಿಗೆ ಸೀಮಿತವಾದ ಒಂದು ವ್ಯವಸ್ಥೆ ಇದೆ. ಅವರುಗಳು ಪ್ರತಿದಿನ ಸಾವಿರ ಕೆ.ಜಿ. ಹಣ್ಣು-ತರಕಾರಿ ಖರೀದಿಸಿದರೆ ಹೆಚ್ಚು. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಸಾವಿರ ಕೆ.ಜಿ. ಗಿಂತ 1 ಕೆ.ಜಿ. ಹೆಚ್ಚಾದರೂ ಖರೀದಿಸುವುದಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1036)08.12.2020/6.50/ಎಸ್‌ಕೆ-ಬಿಎನ್‌ಎಸ್ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್ (ಮುಂದು):-**

ಇಂತಹ ಪರಿಸ್ಥಿತಿ ಇರುವಾಗ, ಸರ್ಕಾರ ಈ ಒಂದು ರೈತರಿಗೂ ನಮ್ಮ consumers, ಬಳಕೆದಾರರು ಯಾರಿದ್ದಾರೋ, ಇವರ ಮಧ್ಯೆ ಯಾವ ರೀತಿ ಒಂದು ಕಂದಕವಿದೆ ಮತ್ತು ಅದನ್ನು ಹತ್ತಿರ ತರುವಂತಹದ್ದಕ್ಕೆ ಮತ್ತು ಸರಿಯಾದಂತಹ ಪ್ರಮಾಣದಲ್ಲಿ ಅವರಿಗೆ ಒಳ್ಳೆಯ price ಅನ್ನು ತೆಗೆದುಕೊಂಡು, ನಮ್ಮ ಗ್ರಾಹಕರಿಗೆ ಸರಿಯಾದಂತಹ ರೀತಿಯಲ್ಲಿ ತರಕಾರಿ ಸಿಗುವಂತಹ vast ಆಗಿ ತಾವು ಒಂದು ಯೋಜನೆ ರೂಪಿಸಿ, ಬೆಂಗಳೂರಿನಲ್ಲಿ ಪ್ರಾರಂಭ ಮಾಡಿದರೆ ಒಳ್ಳೆಯದೆನಿಸುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಕಾಯಿದೆಯನ್ನು ತರಬೇಕಾಗುತ್ತದೆ. ಇವತ್ತು ಎ.ಪಿ.ಎಂ.ಸಿಯನ್ನು ತೆಗೆದಿರುವುದನ್ನು ನೋಡಿದರೆ, ಇನ್ನೂ ನಮ್ಮ ಮುಂದೆ ಎ.ಪಿ.ಎಂ.ಸಿ. ಕಾಯಿದೆ ಬಂದಿಲ್ಲ. ಈಗಾಗಲೇ ಅವರನ್ನು ತೆಗೆದುಬಿಟ್ಟು, 62 License ಅನ್ನು ಕೊಟ್ಟಿದ್ದೇನೆಂದು ಹೇಳುತ್ತಿರುವುದನ್ನು ನೋಡಿದರೆ,

**ವೈಸ್‌ಛೇರ್ಮನ್:-** ಮಾನ್ಯ ರಮೇಶ್‌ರವರೇ ಏನು ಬೇಕೋ ಕೇಳಿ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸದಸ್ಯರೇ ತಾವು ಗೊಂದಲ ಮಾಡಿಕೊಳ್ಳಬೇಡಿ.

**ಶ್ರೀ ಪಿ.ಆರ್. ರಮೇಶ್:-** ನಾನು ಗೊಂದಲ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುತ್ತಿರುವ ಮಾತನ್ನು ಸ್ವಲ್ಪ ಕೇಳಿಸಿಕೊಳ್ಳಲಿ. ಹಣ್ಣು ಮತ್ತು ತರಕಾರಿಗಳನ್ನು ಎ.ಪಿ.ಎಂ.ಸಿ. ನಲ್ಲಿ ಮಾರಾಟ ಮಾಡುವಂತಹ ವ್ಯವಸ್ಥೆ ಈಗಲೂ ಇದೆ. ನಾವು ಎ.ಪಿ.ಎಂ.ಸಿ. ಯಿಂದ ತೆಗೆದಿಲ್ಲ. ದಾಸನಪುರ, ಬ್ಯಾಟರಾಯನಪುರ, ಅತ್ತಿಬೆಲೆ, ಕಲಾಸಿಪಾಳ್ಯ ಹಾಗೂ ಎಲ್ಲಾ ಕಡೆಗಳಲ್ಲಿ ಎ.ಪಿ.ಎಂ.ಸಿ., ನಲ್ಲಿದೆ. 62 ಪರವಾನಿಗೆಯನ್ನು ಯಾರಿಗೆ ಕೊಟ್ಟಿದ್ದೇವೋ, ರಿಲಯನ್ಸ್‌ನವರು ನೇರವಾಗಿ purchase ಮಾಡುವಂತಹ ಈ ತರಹ ಕಂಪನಿಗಳೇನಿವೆ, ಆ ಹಣ್ಣು-ತರಕಾರಿಗಳನ್ನು ಅವರು purchase ಮಾಡಬಹುದು. ಅಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಪನಿಯವರಿಗೆ ನೇರವಾಗಿ ಕೊಟ್ಟಿದ್ದೇವೆ. ಈಗ ತಾವು ಬೆಳೆದಂತಹ ಟೊಮಾಟೋವನ್ನು ದಾಸನಪುರ ಎ.ಪಿ.ಎಂ.ಸಿ. ಯಲ್ಲಾದರೂ ಮಾರಾಟ ಮಾಡಿ.

**ವೈಸ್‌ಛೇರ್ಮನ್:–** ಮಾನ್ಯ ರಮೇಶ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಟಿ. ಸೋಮಶೇಖರ್:–** ತಾವು ಅತ್ತಿಬೆಲೆ, ಕಲಾಸಿಪಾಳ್ಯ ಎ.ಪಿ.ಎಂ.ಸಿ. ಯಲ್ಲಾದರೂ ಮಾರಾಟ ಮಾಡಿ. ನಾವು restrict ಮಾಡುತ್ತಿಲ್ಲ.

**ಶ್ರೀ ಪಿ.ಆರ್. ರಮೇಶ್:–** ನಾನು 20 ಕಿಲೋ ಮೀಟರ್‌ನಿಂದ ದಾಸನಪುರ ಎ.ಪಿ.ಎಂ.ಸಿ.ಗೆ ಬರುವುದಕ್ಕೆ ಆಗುವುದಿಲ್ಲ. ನಾನು ಬರಬೇಕಾಗಿದ್ದು, ಮಾಗಡಿ ರಸ್ತೆ ಅಥವಾ ಕನಕಪುರಕ್ಕೆ ಬರುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:–** ಎ.ಪಿ.ಎಂ.ಸಿ. ಕಲಾಸಿಪಾಳ್ಯದಲ್ಲಿದೆ.

**ಶ್ರೀ ಪಿ.ಆರ್. ರಮೇಶ್:–** ನಾನು ಕಲಾಸಿಪಾಳ್ಯಕ್ಕೆ ಬರುವುದಕ್ಕಾಗುವುದಿಲ್ಲ. ನನಗೆ ಸುಮಾರು 40 ಕಿಲೋ ಮೀಟರ್ ಆಗುತ್ತದೆ. ಎಲ್ಲೋ ಒಂದು ಕಡೆ ಮಂಡಿ ಇರುತ್ತದೆ, ನಾನು ಅಲ್ಲಿಗೆ ಬರುತ್ತೇನೆ. ಅಲ್ಲಿ private ನವರ ಮೇಲೆ ತಾವು ಏನು ನಿಯಂತ್ರಣ ಇಟ್ಟಿದ್ದೀರಾ? ನನ್ನ ಪ್ರಕಾರ ಪ್ರತಿ ದಿನ ಸುಮಾರು 30–40 ಲಕ್ಷ ರೂಪಾಯಿಗಳ ವ್ಯಾಪಾರವಾಗುತ್ತದೆ. ಅಂತಹ ಜಾಗದಲ್ಲಿ ತಮ್ಮ ಸರ್ಕಾರ, ಅವರ ಮೇಲೆ ನಿಯಂತ್ರಣ ಏನು ಇಟ್ಟಿದೆ? ತಮ್ಮ ಬಳಿ ಇಡೀ ರಾಜ್ಯದ ಬಗ್ಗೆ ಮಾಹಿತಿ ಇರುತ್ತದೆ. ಅಂತಹ ಮಂಡಿಗಳಿರುವ ಕಡೆ ತಮ್ಮ ಎ.ಪಿ.ಎಂ.ಸಿ. ಕಾಯಿದೆಯ ಕೆಳಗಡೆ ಮಾಡುತ್ತೀರೋ ಅಥವಾ ಇನ್ನಾವುದಾದರೂ ಕೋ–ಆಪರೇಟಿವ್ ಸೊಸೈಟಿಯ ಕೆಳಗಡೆ ಕಾಯಿದೆಯನ್ನು ಮಾಡುತ್ತೀರೋ, ರೈತರ ಹತ್ತಿರ ಶೇಕಡ 5, 10, 20 ಎನ್ನುತ್ತಿದ್ದಾರೆ ಮತ್ತು ಶೇಕಡ 50 ರಷ್ಟು ತೆಗೆದುಕೊಳ್ಳುವವರಿದ್ದಾರೆ. ಅಂತಹವರ ಮೇಲೆ ತಾವು ನಿಯಂತ್ರಣ ಏನು ಮಾಡಿದ್ದೀರೆಂಬುದು ನನ್ನ ಪ್ರಶ್ನೆಯಾಗಿದೆ.

**ವೈಸ್‌ಛೇರ್ಮನ್:–** ಮಾನ್ಯ ರಮೇಶ್‌ರವರೇ ಆಯಿತು. ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

**ವೈಸ್‌ಛೇರ್ಮನ್:–** ಮಾನ್ಯ ಶ್ರೀಕಂಠೇಗೌಡರೇ ತಾವು ಮಾತನಾಡುವುದು ಬೇಡ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:-** ಎ.ಪಿ.ಎಂ.ಸಿ.ಯಲ್ಲಿ ವಿಜಿಲೆನ್ಸ್‌ನವರು ಇದ್ದಾರೆ. ರೈತರು ಆ ತರಹವೇನಾದರೂ ದೂರು ನೀಡಿದರೆ . . .

**ಶ್ರೀ ಪಿ.ಆರ್. ರಮೇಶ್:-** ನಾನೇ ದೂರು ನೀಡಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ ಹೇಳಿ.

**ಶ್ರೀ ಎಸ್.ಟಿ. ಸೋಮಶೇಖರ್:-** ರೈತರು, ಯಾರಾದರೂ ಬಂದು ದೂರು ನೀಡಿದರೆ, ಅವರಿಗೆ ದಂಡ ಹಾಕುವಂತಹದ್ದು ಮತ್ತೊಂದು ಇದೆ. ಆದರೆ ಇದುವರೆಗೂ ಲಾಕ್‌ಡೌನ್ ಆದಮೇಲೆ ಏನೇನು restrictions ಇತ್ತೋ, ಅದನ್ನೆಲ್ಲಾ ಹೆಚ್ಚು ಕಡಿಮೆ ತೆಗೆದಿದ್ದೇವೆ. ಎ.ಪಿ.ಎಂ.ಸಿ.ಗೆ ಯಾವುದೇ ವಿಧವಾದ ಒಂದೇ ಒಂದು ದೂರು ಬರುತ್ತಿಲ್ಲ. By chance, ಬಾಳೆಹಣ್ಣು, ಬೇರೆ ಬೇರೆ ಇರಬಹುದು ಯಾವುದಾದರೂ ಒಂದು ದೂರು ನೀಡಿದರೆ, ಅದನ್ನು ತಕ್ಷಣ ಎ.ಪಿ.ಎಂ.ಸಿ. ಕಾರ್ಯದರ್ಶಿಯವರು ಇರುತ್ತಾರೆ. ಅವರ ಗಮನಕ್ಕೆ ತಂದು ಅವರು action ಮಾಡುವಂತಹದ್ದಕ್ಕೆ ಈಗಲೂ ಕೂಡ ಮಾಡುತ್ತಿದ್ದೇವೆ. ಒಂದೊಂದೆ ಈ ತರಹ ಐದಾರು ಎ.ಪಿ.ಎಂ.ಸಿ.ಗಳು ಏನಿವೆ, ಒಂದೇ ಒಂದು ದೂರು ಬರದೇ ಇರುವಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದೇವೆ.

**ವೈಸ್‌ಛೇರ್ಮನ್:-** ಮಾನ್ಯ ಎಂ. ನಾರಾಯಣಸ್ವಾಮಿಯವರೇ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 144**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಮೂರು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಎರಡು ಪ್ರಶ್ನೆಗಳ ಉತ್ತರಗಳು ಸರಿಯಾಗಿದೆ. ಆದರೆ ಮೂರನೆ ಪ್ರಶ್ನೆ ಏನೆಂದರೆ, ರೈತರ ಸಾಲ ಮನ್ನಾ ಮಾಡಿದ್ದಲ್ಲಿ, ಆ ಸಂಘ ಸಂಸ್ಥೆಗಳಿಗೆ ಸರ್ಕಾರದಿಂದ ಹಣ ಪಾವತಿಸಲಾಗಿದೆಯೇ? ಎಂದು ಕೇಳಿದ್ದೇನೆ. ಮಾನ್ಯ ಸಚಿವರ ಉತ್ತರದಲ್ಲಿ ಪಾವತಿಸಿದ್ದೇನೆಂದು ಹೇಳಿದ್ದಾರೆ. ಸುಮಾರು 17.06 ಲಕ್ಷ ರೈತರು ಅವರು ಒಂದು ಲಕ್ಷ ಸಾಲವನ್ನು ಮಾಡಿದ್ದರು. ಆ ಸಾಲ ಮನ್ನಾದಲ್ಲಿ ಸುಮಾರು 7987.47 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ರೂ. 7692.32 ಕೋಟಿಗಳನ್ನು ಮಾತ್ರ ಕೊಟ್ಟಿದ್ದೇವೆ ಇನ್ನೂ ಸುಮಾರು 300 ಕೋಟಿ ರೂಪಾಯಿಗಳ ಬಾಕಿಯಿದೆ. ಇನ್ನೂ 57 ಸಾವಿರ ರೈತರಿಗೆ ಸಾಲ ಮನ್ನಾ ಮಾಡಬೇಕಾಗಿದೆ. ಈಗ ಕೊರೋನಾ ಬಂದಿರುವಂತಹ ಸಂದರ್ಭದಲ್ಲಿ ರೈತರು ಬಹಳಷ್ಟು ಕಷ್ಟಕ್ಕೀಡಾಗಿದ್ದಾರೆ. ಇದರ ಜೊತೆಗೆ ಅಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಮೂರು ಬಾರಿ continuous ಆಗಿ ನೆರೆ ಹಾವಳಿ ಬರುತ್ತಿದೆ. ಈಗಲೂ ಸಹಿತ ರೈತರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಕಳೆದ ಬಾರಿ ರೈತರು ಸಾಲ ಮನ್ನಾಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದರೋ, ಅದರಲ್ಲಿಯೇ ಇನ್ನು ಸುಮಾರು 57 ಸಾವಿರ ಜನ ರೈತರಿಗೆ ಬಾಕಿಯನ್ನು ಉಳಿಸಿಕೊಂಡಿದ್ದೀರಾ. ಇದರ ಜೊತೆಗೆ ಹೊಸದಾಗಿ ರೈತರು ಸಾಲ ಮನ್ನಾಕ್ಕೆ ಅರ್ಜಿಯನ್ನು ಹಾಕುತ್ತಾರೆ. ಅದಕ್ಕೋಸ್ಕರ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಸಂಘ ಸಂಸ್ಥೆಗಳು ಏನು ಸಾಲ ಮನ್ನಾ ಮಾಡಿದ್ದಾರೆ, ಆ ಸಂಸ್ಥೆಗಳಿಗೆ ಸರ್ಕಾರದಿಂದ ಹಣವನ್ನು ತುಂಬಿ, ಇನ್ನೂ ಮುನ್ನೂರು ಕೋಟಿ ರೂಪಾಯಿಗಳನ್ನು ತುಂಬಬೇಕಾಗಿದೆ. ಒಂದು ಕಡೆ ಸಹಕಾರ ಸಂಘಗಳು ಕೂಡ ಹಣವಿಲ್ಲದೇ ಮತ್ತು working capital ಇಲ್ಲದೇ ಅವರೂ ಕೂಡ ದಿವಾಳಿಯಾಗುವಂತಹ ಪರಿಸ್ಥಿತಿಯಾಗುತ್ತದೆ. ಅದಕ್ಕೋಸ್ಕರ ಆದಷ್ಟು ಬೇಗನೇ ಆ ಸಂಘ ಸಂಸ್ಥೆಗಳಿಗೆ ಹಣ ತುಂಬುವಂತಹ ಕೆಲಸವೂ ಕೂಡ ಆಗಬೇಕು. ಇದರ ಜೊತೆಗೆ ಸುಮಾರು 57 ಸಾವಿರ ಜನ ರೈತರಿಗೆ ಆದಷ್ಟು ಶೀಘ್ರದಲ್ಲಿ ಅವರಿಗೆ ಸಾಲ ಮನ್ನಾ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈ ಒಂದು ಲಕ್ಷ ಸಾಲ ಮನ್ನಾ ಮಾಡುವಂತಹದ್ದರ ಬಗ್ಗೆ ಕೆಲವು ಕಂಡಿಷನ್ಸ್ ಹಾಕಿದ್ದೇವೆ. ಯಾವ ರೈತ ಸಾಲ ಮನ್ನಾ ಮಾಡುವುದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

apply ಮಾಡುತ್ತಾನೆ. ಮೊದಲನೆಯದಾಗಿ, ಅವನು ಎ.ಪಿ.ಎಲ್. ಅಥವಾ ಬಿ.ಪಿ.ಎಲ್. ಕಾರ್ಡ್ ಕೊಡಬೇಕು. ಎರಡನೆಯದಾಗಿ, ಯಾರೂ ಆದಾಯ ತೆರಿಗೆಯನ್ನು ಪಾವತಿಸುವರೋ, ಅವರಿಗೆ ಈ ಸಾಲ ಮನ್ನಾ ಅಪ್ಲೈ ಆಗುವುದಿಲ್ಲ. ಮೂರನೆಯದಾಗಿ, ಆಧಾರ್ ಕಾರ್ಡ್ ಇರಬೇಕು. ನಾಲ್ಕನೆಯದಾಗಿ ಪಹಣಿ ಸರಿಯಾಗಿ ಇರಬೇಕು. ಪಿಂಚಣಿ ಇಪ್ಪತ್ತು ಸಾವಿರ ರೂಪಾಯಿಗಳ ಮೇಲ್ಪಟ್ಟಿದ್ದರೆ, ಅವರಿಗೆ ಸಾಲ ಮನ್ನಾ ಅಪ್ಲೈ ಆಗುವುದಿಲ್ಲ. ಆ ನಂತರ ಬ್ಯಾಂಕ್ ಅಕೌಂಟ್, ಅಂದರೆ ಯಾರಿಗೆ ಆರ್.ಟಿ.ಜಿ.ಎಸ್. ಮಾಡುತ್ತಾರೆ, ಆ ಬ್ಯಾಂಕ್ ಅಕೌಂಟ್ ವಿವರವನ್ನು ಸರಿಯಾಗಿ ಕೊಡಬೇಕು ಎನ್ನುವಂತಹದ್ದನ್ನು ಈ ಒಂದು ಲಕ್ಷ ರೂಪಾಯಿಗಳ ಸಾಲ ಮನ್ನಾ ಮಾಡುವಂತದ್ದರಲ್ಲಿ ಈ ತರಹ ಕಂಡಿಷನ್ಸ್‌ನ್ನು ಹಾಕಿದ್ದೇವೆ. 16.49 ಲಕ್ಷ ರೈತರಿಗೆ ಏನೊಂದು ಕಂಡಿಷನ್ಸ್‌ನ್ನು ಹಾಕಿದ್ದಾರೋ, ಇದನ್ನು ನೂರಕ್ಕೆ ನೂರು fulfill ಮಾಡಿದ್ದಾರೆ. ಇನ್ನುಳಿದಂತಹ ಬಿ.ಪಿ.ಎಲ್. ಕಾರ್ಡ್ ಬಿ.ಪಿ.ಎಲ್ ರೇಷನ್‌ಗೆ ಎನ್ನುವಂತಿಲ್ಲ. ಸಾಲ ಮನ್ನಾಕ್ಕೆ ಅಪ್ಲೈ ಮಾಡಿದರೂ ಕೂಡ ಬಿ.ಪಿ.ಎಲ್., ಅಥವಾ ಎ.ಪಿ.ಎಲ್., ಕಾರ್ಡ್‌ನ್ನಾದರೂ ಕೊಡಬಹುದು. ನಾನು ಸಚಿವನಾದ ಮೇಲೆ portfolio ತೆಗೆದುಕೊಂಡ ಮೇಲೆ ಮೂರ್‍ನಾಲ್ಕು ಬಾರಿ ಇದುವರೆಗೂ ಅವರಿಗೆ ಡೆಡ್‌ಲೈನ್ ಕೊಟ್ಟಿದ್ದೇನೆ. ಬಿ.ಪಿ.ಎಲ್., ಅಥವಾ ಎ.ಪಿ.ಎಲ್. ಕಾರ್ಡ್‌ನ್ನು ಕೊಡಲಿಲ್ಲವೆಂದರೆ, ಸಾಲ ಮನ್ನಾ ಆಗುವುದಿಲ್ಲ. ಬ್ಯಾಂಕ್ ಅಕೌಂಟ್‌ನ್ನು ಸರಿಯಾಗಿ ಕೊಡಲಿಲ್ಲವೆಂದರೆ, ಆರ್.ಟಿ.ಜಿ.ಎಸ್. ಮಾಡುವುದಕ್ಕಾಗುವುದಿಲ್ಲ. ಆಧಾರ್ ಕಾರ್ಡ್ ಕೊಡದಿದ್ದರೆ ಸಾಲ ಮನ್ನಾ ಆಗುವುದಿಲ್ಲ. ಈ ತರಹವಿದ್ದಂತಹ 2.30 ಲಕ್ಷ ಜನ ರೈತರು ಬ್ಯಾಲೆನ್ಸ್ ಇದ್ದರು. ಅವರಿಗೆ ನೋಟಿಸ್ ಕೊಡುವಂತಹದ್ದು, ಪೇಪರ್ ನೋಟಿಫಿಕೇಷನ್ ಮಾಡುವಂತಹದ್ದು, ಮಾರ್ಚ್ 25 ನೇ ತಾರೀಖಿಗೆ ಎಲ್ಲಾ ಮಾಹಿತಿಯನ್ನು ಕೊಡಬೇಕೆಂದು ಡೆಡ್‌ಲೈನ್ ಕೊಟ್ಟಿದ್ದೇನೆ. ಈ 2.30 ಲಕ್ಷ ಜನ ರೈತರ ಪೈಕಿ 56 ಸಾವಿರ ಜನ ರೈತರು ಮಾತ್ರ ಕೊಡಲಿಲ್ಲ. ಎಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ, ನಮ್ಮ ACS (Additional Chief Secretary) ಮತ್ತು RCS (Registrar of Co-operative Societies) ಅವರ ಜೊತೆ ಸಭೆ ಮಾಡಿ, ಅವರಿಗೂ ಒಂದು final ಆಗಿ ಕೊಟ್ಟಿದ್ದೇವೆ. ಇದನ್ನು Green List ನಲ್ಲಿ ತರುವಂತಹ ವ್ಯವಸ್ಥೆ ಆಗಬೇಕು. ಈಗ 295 ಕೋಟಿ ರೂಪಾಯಿಗಳು ಕ್ಲಿಯರ್ ಆಗಿದೆ. ಅದನ್ನು ನಾವು ಹಣಕಾಸು ಇಲಾಖೆಗೆ ಕೇಳಿದ್ದೇವೆ. ಅದನ್ನು 300 ಕೋಟಿ ರೂಪಾಯಿಗಳ ಮೇಲೆ ಬಜೆಟ್‌ನಲ್ಲಿ ಸಾಲ ಮನ್ನಾದ ಬಗ್ಗೆ ಘೋಷಣೆ ಮಾಡಿದ್ದಾರೆ. ಇನ್ನೂ ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ ಬಿಡುಗಡೆ ಮಾಡುವಂತಹದ್ದು ಇದೆ. ಇನ್ನೂ 295 ಕೋಟಿ ರೂಪಾಯಿಗಳ ಬಿಡುಗಡೆ ಮಾಡುತ್ತೇವೆ. ಅದರದ್ದು ಏನೂ ತಾಪತ್ರಯವಿಲ್ಲ. ಈ 56 ಸಾವಿರ ಏನಿದೆಯೆಲ್ಲಾ, ಅದಕ್ಕೆ ಕಾಲಾವಕಾಶವನ್ನು ಕೂಡ ಕೊಟ್ಟಿದ್ದೇವೆ. ಅವರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲಾಸ್ಟ್ ಚಾನ್ಸ್‌ನ್ನು ಕೊಟ್ಟಿದ್ದೇವೆ. ಇದ್ಯಾವುದನ್ನು fulfill ಮಾಡದೇ ಹೋದರೆ, ಇವರಿಗೆ ಸಾಲ ಮನ್ನಾ necessity ಇಲ್ಲವೆಂದು ಕಾಣುತ್ತದೆ ಮತ್ತು ಇಲ್ಲವಾದರೆ ಇವರು ಡೂಪ್ಲಿಕೇಟ್ ಇರಬೇಕೆನ್ನುವುದು ಕಾಣುತ್ತದೆ. ಅದರ ಮೇಲೆ ನಾವು ಕ್ಯಾನ್ಸಲ್ ಮಾಡುವುದಕ್ಕೆ ಚಾಲನೆ ಮಾಡುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಲ್ಲಿ ಸಹಕಾರ ಸಂಘಗಳಲ್ಲಿನ ಸಾಲ ಮನ್ನಾ ಯೋಜನೆಯಲ್ಲಿ ಇದುವರಗೆ 17.06 ಲಕ್ಷ ಅರ್ಹ ರೈತರು ಎಂದು ತಾವೇ ಹೇಳಿದ್ದೀರಾ. ಈಗ ತಾವು ಹೇಳಿರುವಂತೆ, ಆಧಾರ್ ಕಾರ್ಡ್, ಬಿ.ಪಿ.ಎಲ್. ಕಾರ್ಡ್ ಮತ್ತು ಬೇರೆ ಏನೂ ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಾ. ಆದರೆ ಅರ್ಹ ರೈತರು ಎಂದು ತಮ್ಮ ಉತ್ತರದಲ್ಲಿಯೇ ಹೇಳಿದ್ದೀರಾ. ಸುಮಾರು 16.49 ಲಕ್ಷ ಜನ ಅರ್ಹ ರೈತರಿಗೆ ಕೊಟ್ಟಿರುವಂತಹದ್ದು. ತಾವು ಎಲ್ಲಿಯೂ ಕೂಡ default ಆಗಿರುವಂತಹ ರೈತರು ಎಂದು ಹೇಳಿಲ್ಲ. ತಮ್ಮ ಉತ್ತರದಲ್ಲಿ ಅರ್ಹ ರೈತರು ಎಂದು ಹೇಳಿದ್ದೀರಾ. ಹಾಗಾದರೆ, ಈ ಪ್ರಶ್ನೆ ಬರುವುದಕ್ಕೆ ಎಲ್ಲಿ ಉದ್ಭವವಾಗುತ್ತದೆ?

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗ ಯಾರು ಅಪ್ಲೈ ಮಾಡಿದ್ದಾರೋ, ಅವರಿಗೆ ತಕ್ಷಣ ಕೊಟ್ಟಿದ್ದಾರೆ. ಆಮೇಲೆ scrutiny ಮಾಡಿದಂತಹ ಸಂದರ್ಭದಲ್ಲಿ ಕಂಡಿಷನ್‌ಗಳನ್ನು ಹಾಕಿದ್ದಾರೆ. ಈ ಹಿಂದೆ 56 ಸಾವಿರ ರೂಪಾಯಿ ಸಾಲ ಮನ್ನಾ ಇತ್ತು. ಆದರೆ ಒಂದೇ ಒಂದು ಕಂಡಿಷನ್ ಹಾಕಲಿಲ್ಲ. ಈ ಒಂದು ಲಕ್ಷ ರೂಪಾಯಿಗಳಲ್ಲಿ ಇದೆಲ್ಲಾ ಕಂಡಿಷನ್ ಹಾಕಿದ್ದಾರೆ. ಅಪ್ಲೈ ಮಾಡಿದವರಿಗೆಲ್ಲಾ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ. ಯಾವ ಕಂಡಿಷನ್ ಹಾಕಿದ್ದಾರೆ

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಅರ್ಹ ರೈತರು ಎಂದು ಹೇಳಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ನಾರಾಯಣ ಸ್ವಾಮಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಈಗ ಯಾರ‍್ಯಾರು ಸಾಲ ಮನ್ನಾಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೋ, ಅವರದೆಲ್ಲಾ scrutiny ಮಾಡಿದ್ದೇವೆ. ಅವರಿಗೆಲ್ಲರಿಗೂ ಕೂಡ ಫೈನಲ್ ನೋಟೀಸ್ ಹಾಗೂ information ಕೇಳಿದ್ದಾರೆ. ಇನ್ನೂ 56 ಸಾವಿರ ಜನ ರೈತರಿದ್ದಾರೆ. ಅವರಿಗೆಲ್ಲಾ ಫೈನಲ್ ನೋಟೀಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದೇವೆ. ಅವರಿಗೆ ಸಾಲ ಮನ್ನಾ ಮಾಡುವುದಿಲ್ಲವೆಂದು ನಾವು ಹೇಳಲಿಲ್ಲ. ಯಾವ್ಯಾವುದನ್ನು ಕೊಡುತ್ತಿದ್ದಾರೋ, ಅದನೆಲ್ಲಾ ಹಣಕಾಸು ಇಲಾಖೆಗೆ ಕಳುಹಿಸುವಂತಹದ್ದನ್ನು ಮಾಡಿ. ಸಾಲ ಅಕೌಂಟ್‌ಗೆ ಸಾಲ ಮನ್ನಾ ಮಾಡುವಂತಹದ್ದನ್ನು ಮಾಡುತ್ತಿದ್ದೇವೆ. ಇನ್ನೂ ಸ್ವಲ್ಪ ಇದೆ. ಅಂತಿಮವಾಗಿ, ಸುಮಾರು 56 ಸಾವಿರ ಜನ ರೈತರು ಸರಿಯಾದ ಮಾಹಿತಿಯನ್ನು ಒದಗಿಸಿದರೆ, ಅದನ್ನು ಕ್ಲಿಯರ್ ಮಾಡಿ, ಸಾಲ ಮನ್ನಾ ಮಾಡುತ್ತೇವೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ಮಾತನಾಡಿ. ಅವರೂ ಇಲ್ಲ. ಮಾನ್ಯ ಗೋಪಾಲಸ್ವಾಮಿಯವರೇ ಮಾತನಾಡಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1037) 08.12.2020 7.00 ಟಿಸಿಹೆಚ್-ಬಿಎನ್ಎಸ್

**ಪ್ರಶ್ನೆ ಸಂಖ್ಯೆ: 122**
**(ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಸಾಲ ವಿತರಣೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲನೆ ಮಾಡದೇ ತಾರತಮ್ಯ ನೀತಿ ಅನುಸರಿಸುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಏನು ಕೃಷಿ ಪತ್ತಿನ ಸಹಕಾರ ಸಂಘಗಳಿವೆ, ಅಲ್ಲೆಲ್ಲಾ ಕೂಡ ಯಾವುದೇ ಸಾಲವನ್ನು ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಿರುವುದಿಲ್ಲ. ಈಗಾಗಲೇ ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು. ನಮ್ಮ ಹಾಸನ ಜಿಲ್ಲೆಯ ಡಿ.ಸಿ.ಸಿ., ಬ್ಯಾಂಕ್‌ನಲ್ಲಿ ಏನಾಗುತ್ತಿದೆಯೆಂದರೆ ಅಲ್ಲಿ ಫಲಾನುಭವಿಗಳಿಗೆ ಸಾಲ ಕೊಡುವುದು ಯಾವ ರೀತಿ ಎಂದರೆ, ಕಚೇರಿಯಲ್ಲಿಯೇ ಕುಳಿತುಕೊಂಡು ಚೆಕ್ ಬರೆದು ವಿತರಣೆ ಮಾಡಿಬಿಡುತ್ತಾರೆ. ಮೈತ್ರಿ ಸರ್ಕಾರದಲ್ಲಿ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ರೈತರಿಗೆ ಸಾಲ ಮನ್ನಾ ಮಾಡಿದ ಮೇಲೆ ನಮಗೆ ಗೊತ್ತಾಯಿತು. 10 ಗುಂಟೆ ಜಮೀನು ಇದ್ದವರಿಗೆ 3 ಲಕ್ಷ ರೂಪಾಯಿಗಳು ಕೊಡುತ್ತಾರೆ. 5 ಎಕರೆಗೆ 20 ಸಾವಿರ ರೂಪಾಯಿಗಳು ಕೊಡುತ್ತಾರೆ. ಯಾವುದೂ ಕೂಡ ಸಂಬಂಧವಿಲ್ಲವೆಂದು ಹೇಳಿದರೆ, ನನ್ನ ಬಳಿ ಇರತಕ್ಕಂಥ ದಾಖಲೆಗಳನ್ನು ಮಾನ್ಯ ಸಹಕಾರ ಸಚಿವರಿಗೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಗೌಡಗೆರೆಯ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶ್ರೀ ಪುಟ್ಟೇಗೌಡ ಎಂಬುವರಿಗೆ 5 ಎಕರೆ 30 ಗುಂಟೆ ಜಮೀನು ಇದ್ದರೆ 20 ಸಾವಿರ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಶ್ರೀ ಸಣ್ಣತಿಮ್ಮೇಗೌಡ ಎಂಬುವರಿಗೆ 30 ಗುಂಟೆ ಜಮೀನು ಇದ್ದರೆ, 65 ಸಾವಿರ ರೂಪಾಯಿಗಳು ಸಾಲ ಕೊಟ್ಟಿದ್ದಾರೆ. ಈ ರೀತಿ ಸಾಲ ಕೊಟ್ಟಿರುವುದಕ್ಕೆ ಹಲವಾರು ಉದಾಹರಣೆಗಳಿವೆ. ಅಲ್ಲಿ ಸಾಲ ಕೊಡುವುದು ಯಾವ ರೀತಿ ಎಂದರೆ, ಅಲ್ಲಿ ಏನಾದರೂ ಗ್ರಾಮ ಪಂಚಾಯಿತಿ ಚುನಾವಣೆ ಬಂದಾಗ ಈ ರೀತಿ ಮಾಡುತ್ತಾರೆ. ಅದಕ್ಕೆ ಮಾನ್ಯ ಸಹಕಾರ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಆ ಚುನಾವಣಾ ಸಂದರ್ಭದಲ್ಲಿ ಚೆಕ್‌ಗಳನ್ನು ಹಳೆಯ ದಿನಾಂಕಕ್ಕೆ ಹಾಕಿ ಇಟ್ಟು ಕೊಂಡುಬಿಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಸರ್ಕಾರ ಇದ್ದಂತೆ. ಅಲ್ಲಿಗೆ ಒಬ್ಬರು ಮುಖ್ಯಮಂತ್ರಿ, ಒಬ್ಬರು ಗೃಹ ಸಚಿವರು ಮತ್ತು ಒಬ್ಬರು ಸಹಕಾರ ಸಚಿವರನ್ನು ಮಾಡಿದರೆ ಒಳ್ಳೆಯದು. ಏಕೆಂದರೆ, ಡೈರಿ ಇರಬಹುದು, ಡಿ.ಸಿ.ಸಿ., ಬ್ಯಾಂಕ್ ಇರಬಹುದು. ತಪ್ಪಿತಸ್ಥರ ವಿರುದ್ಧ ನಿಯಮ 64 ರಡಿಯಲ್ಲಿ ತನಿಖೆಗೆ ಆದೇಶಿಸಿದ್ದಾರೆ. ಮಾನ್ಯ ಸಹಕಾರ ಸಚಿವರು ಒಂದು ಒಳ್ಳೆಯ ಕೆಲಸ ಮಾಡಿದರು. ಆದರೆ ಏನು ಮಾಡುತ್ತಾರೆಂದರೆ, ಮೈಸೂರು ವಿಭಾಗದ D.R. (Deputy Registrar ಮತ್ತು J.R. (Joint Registrar) ರವರನ್ನು ಹಾಕಬೇಕು. ಆ ತನಿಖೆಗೆ ಬೆಂಗಳೂರು ವಿಭಾಗದ ಡಿ.ಆರ್.,ರವರನ್ನು ನೇಮಿಸಿದರೆ ಏನು ಕೆಲಸ ಮಾಡುತ್ತಾರೆ. ಅವರಿಗೆ ಕೆಲಸದ ಒತ್ತಡ ಇರುತ್ತದೆ. ಇನ್ನೂ 3 ತಿಂಗಳಾದರೂ ಕೂಡ ನಿಯಮ 64 ರಡಿಯಲ್ಲಿ ತನಿಖೆ ಮಾಡಲು ಬಂದಿಲ್ಲ. ಅಲ್ಲಿ ಸುಮಾರು 30 ಕೋಟಿ ರೂಪಾಯಿಗಳು ಅನ್ಯಾಯವಾಗಿದೆಯೆಂದು ನಾವೆಲ್ಲರೂ ಧರಣಿ ಮಾಡಿದರೂ ಕೂಡ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಮಾನ್ಯ ಸಚಿವರು ಬಂದು ನಿಯಮ 64 ರಡಿಯಲ್ಲಿ ತನಿಖೆಗೆ ಆದೇಶ ಮಾಡಿದ್ದಾರೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಆದರೆ ಅಧಿಕಾರಿಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. 4ನೇ ಉಪ ಪ್ರಶ್ನೆಗೆ ನಮ್ಮ ಚನ್ನರಾಯಪಟ್ಟಣ ತಾಲ್ಲೂಕಿನ ಬಗ್ಗೆ ಹೇಳುವುದಾದರೆ. .

**ವೈಸ್ ಚೇರ್ಮನ್:-** ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ಮಾನ್ಯ ಸಚಿವರಿಂದ ಏನು ಕೆಲಸ ಆಗಬೇಕೆಂದು ಕೇಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಾಲವನ್ನು ಸರಿಯಾದ ಕ್ರಮದಲ್ಲಿ ಕೊಡಬೇಕು ಎಂದು ಕೇಳುತ್ತಿದ್ದೇನೆ. ಅಲ್ಲಿ ಏನಾಗುತ್ತಿದೆಯೆಂದರೆ, 10 ಗುಂಟೆ ಜಮೀನು ಇದ್ದವರಿಗೆ 1 ಲಕ್ಷ ರೂಪಾಯಿಗಳು ಸಾಲ ಕೊಡುತ್ತಾರೆ. ಸಾಮಾನ್ಯ ರೈತರು ಅಲ್ಲಿಗೆ ಹೋಗಿ ಸಾಲ ಕೇಳಿದರೆ ಅಧಿಕಾರಿಗಳು ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಸರ್ಕಾರ ಗಮನಕ್ಕೆ ನಾನೇ ಈ ರೀತಿಯ 50 ಕೇಸ್‌ಗಳನ್ನು ಕೊಡುತ್ತೇನೆ. ಯಾರು ಅಧಿಕಾರಿಗಳು ಈ ರೀತಿ ಉತ್ತರ ಕೊಟ್ಟಿದ್ದಾರೆ, ಅವರನ್ನು ಅಮಾನತ್ತುಗೊಳಿಸಬೇಕು; ಇಲ್ಲವೇ ಅವರ ಮೇಲೆ ಕ್ರಮ ಜರುಗಿಸಬೇಕು. ನಿಯಮ 64ರಡಿಯಲ್ಲಿ enquiry conduct ಮಾಡಿದ್ದಾರೆ. ಬೆಂಗಳೂರಿನ ಡಿ.ಆರ್., ಆದ ಶ್ರೀ ವೆಂಕಟೇಶ್ ಎಂಬುವರನ್ನು ತನಿಖೆಗೆ ನೇಮಿಸಿದ್ದಾರೆ. ಆದರೆ ಅದು ಮೈಸೂರು ವಿಭಾಗಕ್ಕೆ ಸೇರುತ್ತದೆ. ವಿಭಾಗಗಳೇ ಬೇರೆ ಬೇರೆ ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಕೃಷಿ ಪತ್ತಿನ ಸಹಕಾರ ಸಂಘಗಳನ್ನು computerised ಮಾಡಿ correctly Minutes ಮಾಡಿ, ಒಂದು ಸಂಘ ಸಂಸ್ಥೆ ನಡೆಯಬೇಕಾದರೂ ಕೂಡ ಅದಕ್ಕೆ ಒಂದು ಪ್ರೊಸೀಜರ್ ಇದೆ. ನಾನು ಕೂಡ ಸಹಕಾರ

ಸಂಘದಲ್ಲಿ ಕೆಲಸ ಮಾಡಿದ್ದೇನೆ. ಮಾನ್ಯ ಸಚಿವರ ಜೊತೆ ಕೂಡ ಕೆಲಸ ಮಾಡಿದ್ದೇನೆ. ಆದರೆ ಅಲ್ಲಿ ಏನಾಗುತ್ತದೆಂದರೆ, ಈಗ ಜೂನ್‌ನಲ್ಲಿ ಚುನಾವಣೆ ನಡೆದರೆ ಜನವರಿ ಮತ್ತು ಫೆಬ್ರವರಿಯಲ್ಲಿ ಬ್ಲ್ಯಾಂಕ್ ಚೆಕ್‌ಗಳನ್ನು ಇಟ್ಟುಕೊಂಡುಬಿಟ್ಟು, ಚುನಾವಣೆ ನಡೆಯುವ ಹಿಂದಿನ ದಿವಸಕ್ಕೆ ಸರಿಯಾಗಿ ಅವರಿಗೆ 20 ಸಾವಿರ ರೂಪಾಯಿಗಳು ಅಥವಾ 30 ಸಾವಿರ ರೂಪಾಯಿಗಳು ಅಥವಾ 50 ಸಾವಿರ ರೂಪಾಯಿಗಳನ್ನು ಇಶ್ಯೂ ಮಾಡಿಬಿಡುತ್ತಾರೆ. ಈ ರೀತಿ ಯಾವುದೇ ಸರ್ಕಾರದ ಹಣ ಲೋಪವಾಗಬಾರದು. ಮಾನ್ಯ ಸಹಕಾರ ಸಚಿವರು 17 ಲಕ್ಷ ರೈತರಿಗೆ ಸಾಲ ಮನ್ನಾ ಮಾಡಿರುವುದು ಸರಿಯಾಗಿದೆಯೆಂದು ಹೇಳಿದರು. ಅಲ್ಲಿ ಏನಾಗಿದೆಯೆಂದರೆ, ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರು ಇರುವುದಿಲ್ಲ. ಶ್ರೀ ರಾಮ ಮತ್ತು ಶ್ರೀ ಭೀಮ ಎಂಬುವರನ್ನು ಕರೆದು 30 ಸಾವಿರ ರೂಪಾಯಿಗಳು ಅಥವಾ 40 ಸಾವಿರ ರೂಪಾಯಿಗಳ ಚೆಕ್‌ನ್ನು ಇಶ್ಯೂ ಮಾಡಿಬಿಡುತ್ತಾರೆ. ಈಗ ಸಾಲ ಮನ್ನಾ ಮಾಡುತ್ತಾರೆಂದರೆ ಹಳೆಯ ದಿನಾಂಕಕ್ಕೆ ಚೆಕ್‌ಗಳನ್ನು ಇಶ್ಯೂ ಮಾಡಿರುತ್ತಾರೆ.

**ವೈಸ್ ಚೇರ್ಮನ್:-** ಆಯಿತು ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಇದರ ಬಗ್ಗೆ ತನಿಖೆ ಮಾಡಬೇಕು. ಇಲ್ಲವೇ ಏನು ಮಾಡಬೇಕೆಂದು ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಮ್ಮ ಮಿತ್ರರಾದ ಮಾನ್ಯ ಎಂ.ಎ.ಗೋಪಾಲಸ್ವಾಮಿಯವರು ಡಿ.ಸಿ.ಸಿ., ಬ್ಯಾಂಕ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇವರು ಕೇಳಿರತಕ್ಕಂಥದ್ದು, ಡಿ.ಸಿ.ಸಿ., ಬ್ಯಾಂಕ್‌ನಿಂದ ನಾವು ಮಾಹಿತಿಯನ್ನು ಪಡೆದಂತಹ ಸಂದರ್ಭದಲ್ಲಿ ಯಾವುದೂ ಕೂಡ ಆ ರೀತಿ ಲೋನ್‌ಗೆ ಅಪ್ಲೈ ಮಾಡಿ, ಲೋನ್ ಕೊಡಲಿಲ್ಲ ಎನ್ನತಕ್ಕಂಥದ್ದು ಒಂದೇ ಒಂದು ಕಂಪ್ಲೇಂಟ್ ಕೂಡ ನಮ್ಮ ಗಮನಕ್ಕೆ ಬಂದಿಲ್ಲ. ಸರಿಯಾಗಿ ಲೋನ್ ಕೊಟ್ಟಿದ್ದೇವೆ. ಆ ರೀತಿಯದ್ದು ಡಿ.ಸಿ.ಸಿ., ಬ್ಯಾಂಕ್‌ಗಾಗಲೀ ಅಥವಾ ಸಹಕಾರ ನಿಬಂಧಕರಿಗಾಗಲೀ ಅಥವಾ ಜಂಟಿ ನಿಬಂಧಕರಿಗಾಗಲೀ ಒಂದೇ ಒಂದು ಕಂಪ್ಲೇಂಟ್ ಕೂಡ ಬಂದಿಲ್ಲ. ಒಂದು ವೇಳೆ ಆ ರೀತಿ ಬಂದಿದ್ದರೆ ಅದನ್ನು ತನಿಖೆ ಮಾಡುವುದಕ್ಕೆ ನಮ್ಮ ಎ.ಸಿ.ಎಸ್., ಮತ್ತು ಆರ್.ಸಿ.ಎಸ್.,ರವರು ಆದೇಶ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. 4ನೇ ಪ್ರಶ್ನೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಕಬ್ಬಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸಾಲ ವಿತರಣೆ ಮಾಡದಿರಲು ಕಾರಣಗಳೇನು ಎಂದು ಕೇಳಿದ್ದಾರೆ. ಅಲ್ಲಿ ಸಾಲಕ್ಕಾಗಿ ಯಾರೂ ಅರ್ಜಿಯನ್ನು ಸಲ್ಲಿಸಿಲ್ಲ. ಆ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಯಾರಾದರೂ ಲೋನ್ ಕೊಡಿ ಎಂದು ಅಪ್ಲೈ ಮಾಡಬೇಕಲ್ಲವೇ? ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ಲೋನ್ ಕೇಳಿದರೆ, ಅವರು ಲೋನ್ ಕೊಡದೇ ಇರತಕ್ಕಂಥ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಿ.ಸಿ.ಸಿ., ಬ್ಯಾಂಕ್ ಎಂ.ಡಿ.,ಯವರು ಯಾರು ಇರುತ್ತಾರೆ ಅವರು ಹೊಣೆಗಾರರಾಗುತ್ತಾರೆ. ಒಂದೇ ಒಂದು ಅರ್ಜಿ ಬರಲಿಲ್ಲ ಎನ್ನತಕ್ಕಂಥದ್ದು ಕೂಡ ಇದೆ. ನೋಡಿ, ಹಾಸನ ಜಿಲ್ಲೆ ಇರಲಿ ಅಥವಾ ಮತ್ತೊಂದು ಜಿಲ್ಲೆಯಾಗಿರಲಿ ಲೋನ್ ಸಿಸ್ಟಂ ಯಾವುದಾದರೂ ಇದ್ದರೆ ಅದನ್ನು ತನಿಖೆ ಮಾಡತಕ್ಕಂಥದ್ದು ಮತ್ತು ಅವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕತಕ್ಕಂಥದ್ದನ್ನು ಮಾಡಿದ್ದೇವೆ. ಇದರ ಜೊತೆಗೆ ಅಪೆಕ್ಸ್ ಬ್ಯಾಂಕ್, 21 ಡಿ.ಸಿ.ಸಿ., ಬ್ಯಾಂಕ್‌ಗಳು, 5400 ವಿ.ಹೆಚ್.ಎಸ್.ಬ್ಯಾಂಕ್‌ಗಳನ್ನು ಒಂದೇ ಸಾಫ್ಟ್‌ವೇರ್‌ನಡಿಯಲ್ಲಿ ತರತಕ್ಕಂಥದ್ದಕ್ಕೆ ನಾವು ಈಗಾಗಲೇ ಸಭೆಯನ್ನು ಮಾಡಿದ್ದೇವೆ. ಏಕೆಂದರೆ, ಸಾಲ ಮನ್ನಾ ಇರಬಹದು ಅಥವಾ ಬೇರೆ ಬೇರೆ ಇರಬಹುದು. ಮೋಸ ಮಾಡತಕ್ಕಂಥದ್ದು ಯಾವುದು ಇದೆ, ಈಗಾಗಲೇ ಯಾವ್ಯಾದು ದೂರುಗಳನ್ನು ಕೊಟ್ಟಿದ್ದಾರೆ, ಅದಕ್ಕೆ ನಿಯಮ 64ರಡಿಯಲ್ಲಿ ತನಿಖೆ ಮಾಡುವುದು ಇರಬಹುದು, ಬೇರೆ ಬೇರೆ ತನಿಖೆ ಮಾಡುವುದಕ್ಕೆ ಕೂಡ ಈಗಾಗಲೇ ಆದೇಶ ಮಾಡಿದ್ದೇವೆ. ನಿಮ್ಮ ಹಾಸನ ಏನೂ ಹೊಸದೇನಲ್ಲ. ಆದ್ದರಿಂದ ಪರ್ಟಿಕ್ಯುಲರ್ ಆಗಿ ಯಾವುದಾದರೂ ಇಂತಹ ಕೇಸ್‌ನಲ್ಲಿ ಡಿ.ಸಿ.ಸಿ., ಬ್ಯಾಂಕ್‌ನವರು ಚೀಟ್ ಮಾಡಿದ್ದಾರೆಂದು ನಮಗೆ ದೂರು ಕೊಟ್ಟರೆ, ನಾವು ತಕ್ಷಣವೇ ನಿಯಮ 64ರಡಿಯಲ್ಲಿ ತನಿಖೆಗೆ ಆದೇಶ ಮಾಡತಕ್ಕಂಥದ್ದು ಮತ್ತು ಕ್ರಮ ತೆಗೆದುಕೊಳ್ಳತಕ್ಕದ್ದನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ಅದರಲ್ಲೇನು ಏನು ಒಂದು ಸೆಕೆಂಡ್ ಡೌಟ್ ಇಲ್ಲ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ಉಪ ಪ್ರಶ್ನೆ ಇದೆ, ಅದು ಏನೆಂದರೆ, ಕಬ್ಬಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 250 ಅರ್ಜಿಗಳನ್ನು ಕೊಟಿದ್ದೇನೆ. ಆ ಸಹಕಾರ ಸಂಘದಲ್ಲಿ ಶ್ರೀ ಲೋಕೇಶ್ ಎಂಬ ಒಬ್ಬರು ಜಂಟಿ ನಿಬಂಧಕರು ಇದ್ದರು, ಅವರು ಬಹಳ ಹತ್ತಿರದವರು ಇದ್ದರು. ಯಾವುದೇ ಕಾರಣಕ್ಕೂ ಮಾಡದಿರುವುದು ಗಮನಕ್ಕೆ ಬಂದಿದೆ. ಅಂದರೆ ಮಾನ್ಯ ಸಚಿವರು ಅವರಿಗೆ ವಿತರಿಸಲಾಗುವುದರಿಂದ ನಮಗೆ ಸಂತೋಷ. ಈಗ ನಾವು ಅಲ್ಲಿಗೆ ಹೊಸದಾಗಿ ಅರ್ಜಿಗಳನ್ನು ಕೊಡುತ್ತೇವೆ. ಸಾಲ ಕೊಡತಕ್ಕಂಥದ್ದು ಆಗಬೇಕು. 15 ವರ್ಷಗಳಿಂದ ಅಲ್ಲಿಗೆ District DCC Director ರನ್ನು ಚನ್ನರಾಯಪಟ್ಟಣ ತಾಲ್ಲೂಕಿಗೆ ಹಾಕಿದ್ದಾರೆ. ಅವರು ಕೂಡ ಒಬ್ಬರು ವಿಧಾನಸಭಾ ಸದಸ್ಯರಾಗಿರುವುದರಿಂದ ಇದನ್ನು ಕೊಡುವುದಕ್ಕೆ ಅವಕಾಶವಾಗಿಲ್ಲ. ಆದರೆ ಅಲ್ಲಿ ರಾಜಕೀಯ ಎನ್ನುವುದು ಯಾವುದೂ ಕೂಡ ಇರಬಾರದು. ನನ್ನ ಉದ್ದೇಶ ಇರುವುದು ಇಷ್ಟೆ. ಯಾರೂ ಕೂಡ ರೈತರಿಗೆ ಸಾಲ ಕೊಡತಕ್ಕಂಥದ್ದು ಆಗಬೇಕು. ನಿಯಮ 64ರಡಿಯಲ್ಲಿ ತನಿಖೆಗೆ ಮಾನ್ಯ ಸಚಿವರೇ ಹಾಕಿಸಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠವನ್ನು ಅಲಂಕರಿಸಿದರು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತನಿಖೆಗೆ ಆದೇಶ ಮಾಡಿ 3 ತಿಂಗಳಾದರೂ ಇನ್ನೂ ಕೂಡ ತನಿಖೆಗೆ ಬಂದಿಲ್ಲ. ತಾವು ಅಲ್ಲಿ ತನಿಖೆ ಯಾವಾಗ ಮಾಡಿಸುತ್ತೀರಿ? ಶ್ರೀ ವೆಂಕಟೇಶ್ ಎಂಬುವರಿಗೆ ಈ ಸಂಬಂಧ ಫೋನ್ ಮಾಡಿದೆನು. ಅದಕ್ಕೆ ಅವರು ಇಲ್ಲ ಸರ್, ನನಗೆ ದೂರ ಆಗುತ್ತದೆ. ನಮ್ಮದು ಮೈಸೂರು ವಿಭಾಗವೇ ಬೇರೆ, ನಾವು ಬರುತ್ತಿಲ್ಲವೆಂದು ಉತ್ತರ ಕೊಟ್ಟರು. ಅದಕ್ಕೆ ಮಾನ್ಯ ಸಚಿವರು ಏನು ಕ್ರಮ ಜರುಗಿಸುತ್ತೀರಿ ಎನ್ನುವುದನ್ನು ಹೇಳಬೇಕು. ಈಗ ಮಾನ್ಯ ಸಚಿವರು ಸಾಲ ಕೊಡಿಸುವುದಕ್ಕೆ ಒಪ್ಪಿಕೊಂಡಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಯಾರು ಕಂಪ್ಲೇಟ್ ಕೊಡುತ್ತಾರೆ, ಆ jurisdiction ನಲ್ಲಿ ಇರತಕ್ಕಂಥ ಡಿ.ಆರ್.,ರವರು ಬೇಡ. ಪಕ್ಕದ ಜಿಲ್ಲೆಯ ಡಿ.ಆರ್.,ರವರನ್ನು ತನಿಖೆ ಮಾಡಲು ಹಾಕಿ ಎಂದು ಏನಾದರೂ ನಮ್ಮ ಗಮನಕ್ಕೆ ತಂದರೆ, ನಾವು definite ಆಗಿ ಮೈಸೂರು ವಿಭಾಗದ ಡಿ.ಆರ್.,ರವರನ್ನು ತನಿಖೆ ಮಾಡಲು ಹಾಕುವುದಿಲ್ಲ. ಬೆಂಗಳೂರು ವಿಭಾಗ, ಬೆಳಗಾಂ ವಿಭಾಗ ಮತ್ತು ಗುಲ್ಬರ್ಗಾ ವಿಭಾಗದಲ್ಲಿರತಕ್ಕಂಥ ಡಿ.ಆರ್.,ರವರನ್ನು ತನಿಖೆಗೆ ಹಾಕುತ್ತೇವೆ. ನೀವು ನಮಗೆ ಹೇಳಬೇಕು. ಯಾರು ದೂರು ಕೊಡುತ್ತಾರೆ ಅವರು ಈ ಮೈಸೂರು ವಿಭಾಗದ ಡಿ.ಆರ್.,ರವರ ಮೇಲೆ ನಮಗೆ ನಂಬಿಕೆ ಇಲ್ಲ, ಅವರು ತನಿಖೆ ಮಾಡುವುದು ಬೇಡವೆಂದು ಹೇಳಿದರೆ, ನಾವು ಪಕ್ಕದ ಜಿಲ್ಲೆಯ ಡಿ.ಆರ್.,ರವರನ್ನು ತನಿಖೆಗೆ ಹಾಕುತ್ತೇವೆ. ಆ ರೀತಿಯದ್ದು ಬೇರೆ ತನಿಖೆಗೆ ಹಾಕಿದ್ದೇವೆ. ಅದೇನಿದೆ ಆ ಮಾಹಿತಿ ತರಿಸಿ ತಮಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಚಿವರೇ, ನಮಗೆ ಸಂತೋಷ. ಅಲ್ಲಿಗೆ ಬೆಂಗಳೂರು ಡಿ.ಆರ್., ಅಥವಾ ಕೋಲಾರದ ಡಿ.ಆರ್.,ರವರನ್ನಾದರೂ ತನಿಖೆಗೆ ಹಾಕಿ. ಆದರೆ ಇನ್ನೂ ತನಿಖೆಗೆ ಏಕೆ ಬಂದಿಲ್ಲ ಎನ್ನುವುದು ನಮ್ಮ ಪ್ರಶ್ನೆ ಅಷ್ಟೆ. ಅದಕ್ಕಾಗಿ ನಾನು ಪ್ರಶ್ನೆ ಕೇಳಬೇಕಾಗಿ ಬಂತು. ಇವರು ಅಲ್ಲಿಗೆ ಬಂದು ತನಿಖೆ ಮಾಡಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ತನಿಖೆ ಮಾಡಿಸತಕ್ಕಂಥದ್ದು, ತನಿಖೆಗೆ ಇಷ್ಟೇ ದಿವಸ ಲಿಮಿಟ್ ಮಾಡಿಸತಕ್ಕಂಥದ್ದು ಮತ್ತು ಅದನ್ನು ಮುಗಿಸತಕ್ಕಂಥದ್ದಕ್ಕೆ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಚಿವರೇ, ಸಮಯ ಕೊಟ್ಟು ಈಗಾಗಲೇ 3 ತಿಂಗಳಾಗಿದೆ. ಅದಕ್ಕೆ ನಾನು ಸ್ಪಷ್ಟವಾಗಿ ಹೇಳುತ್ತಿರುವುದು.

**ಶ್ರೀ ಎಸ್.ಟಿ.ಸೋಮಶೇಖರ್:–** ಆಯಿತು, ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ನೋಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 176**
**(ಉತ್ತರ ಲಗತ್ತಿಸಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2ನೇ ಉಪ ಪ್ರಶ್ನೆಯಲ್ಲಿ ಏನು ಬಿ.ಪಿ.ಎಲ್., ಮತ್ತು ಎ.ಪಿ.ಎಲ್., ಕಾರ್ಡ್‌ಗಳಲ್ಲಿ ಎಷ್ಟು ಬೋಗಸ್ ಕಾರ್ಡ್‌ಗಳು ವಿತರಣೆಯಾಗಿದೆ. ಈ ರೀತಿ ವಿತರಣೆ ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ನಾನು ಕೇಳಿದ್ದೇನೆ. ಯಾವುದೇ ಬೋಗಸ್ ಪಡಿತರ ಚೀಟಿ ಪ್ರಕರಣಗಳು ವರದಿಯಾಗಿಲ್ಲ ಆದರೆ ಮೈಸೂರು ಜಿಲ್ಲೆಯಲ್ಲಿ 82 ಅಂತ್ಯೋದಯ, 7997 ಬಿ.ಪಿ.ಎಲ್., ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 92 ಅಂತ್ಯೋದಯ ಮತ್ತು 979 ಬಿ.ಪಿ.ಎಲ್. ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆಯೇ ಪ್ರಶ್ನೆ ಕೇಳಿದ್ದೆನು. ಯಾರು ಬೋಗಸ್ ದಾಖಲೆಗಳನ್ನು ಕೊಟ್ಟಿದ್ದಾರೆ, ಅವರ ಮೇಲೆ ಏನು ಕ್ರಮ ವಹಿಸುತ್ತೀರಿ ಎನ್ನುವುದೇ ನನ್ನ ಪ್ರಶ್ನೆ. ಆದರೆ ಮಾನ್ಯ ಸಚಿವರು ಬೋಗಸ್ ಪ್ರಕರಣ ದಾಖಲಾಗಿಲ್ಲ. ಇಷ್ಟು ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆಯೆಂದು ಹೇಳುತ್ತಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಅಷ್ಟು ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ. ಇನ್ನೂ ಇಡೀ ರಾಜ್ಯದಲ್ಲಿ ಎಷ್ಟು ಅನರ್ಹ ಪಡಿತರ ಚೀಟಿಗಳು ವಿರತಣೆ ಮಾಡಿದ್ದಾರೆಂದು ತಾವೇ ಲೆಕ್ಕಹಾಕಿಕೊಳ್ಳಿ. ಮತ್ತೆ ಬಹಳ ಪ್ರಮುಖವಾದಂತಹ ವಿಚಾರವೇನೆಂದರೆ, ತಮ್ಮ ಇಲಾಖೆಯಲ್ಲಿ ಕಳೆದ ಒಂದು ವರ್ಷಕ್ಕಿಂತ ಮೇಲ್ಪಟ್ಟು ಯಾವುದೇ ಬಿ.ಪಿ.ಎಲ್., ಮತ್ತು ಎ.ಪಿ.ಎಲ್., ಕಾರ್ಡ್‌ಗಳನ್ನು ಸರ್ಕಾರದಿಂದ ಇಶ್ಯೂ ಮಾಡುತ್ತಿಲ್ಲ. ತಾವು ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನಾವು ಪ್ರಮುಖವಾಗಿ ಇದಕ್ಕೋಸ್ಕರವೇ ಮಾಡುತ್ತಿರುವುದು. ತಾವೇ ಒಂದು ವರ್ಷದಿಂದ ಕೊಟ್ಟಿಲ್ಲವೆಂದು ಹೇಳುತ್ತೀರಿ. ಮೈಸೂರು ಜಿಲ್ಲೆಯಲ್ಲಿ ಅರ್ಜಿಗಳ ವಿಲೇವಾರಿಗೆ ಬಾಕಿ ಇರತಕ್ಕಂಥದ್ದು ಎ.ಪಿ.ಎಲ್., ಮತ್ತು ಬಿ.ಪಿ.ಎಲ್., ಕಾರ್ಡ್‌ಗಳು ಸುಮಾರು 5156 ಇವೆ. ಚಾಮರಾಜನಗರ ಜಿಲ್ಲೆಯಲ್ಲಿ ಎ.ಪಿ.ಎಲ್., ಮತ್ತು ಬಿ.ಪಿ.ಎಲ್., ಕಾರ್ಡುಗಳು ಸೇರಿದಂತೆ ಸುಮಾರು 1367 ಇದೆ. ಮಾನ್ಯ ಸಚಿವರೇ, ಕಳೆದ ಒಂದು ವರ್ಷದಲ್ಲಿ ಸಾಕಷ್ಟು ಜನ ಹೊಸದಾಗಿ ಮದುವೆಗಳಾಗಿದ್ದು, ಸಾಕಷ್ಟು ಜನ ಸಂಸಾರಸ್ಥರಾಗಿ ಹೊರಗಡೆ ಬಂದಿರುತ್ತಾರೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1038)8.12.2020/7.10/ಎಂ.ಎಂ-ಜಿ.ಆರ್

**ಶ್ರೀ ಆರ್. ಧರ್ಮಸೇನ (ಮುಂದು):**

ನಮ್ಮ ರಾಜ್ಯದಲ್ಲಿ ಮೊನ್ನೆ ದಿವಸ ಒಂದೇ ದಿನ 1000 ಮದುವೆಗಳಾಗಿವೆಯೆಂದು ದಿನಪತ್ರಿಕೆಯಲ್ಲಿ ವರದಿ ಬಂದಿದೆ. ಒಂದು ದಿವಸಕ್ಕೇ ಇಷ್ಟು ಮದುವೆಗಳಾದರೆ ಇನ್ನು ಎರಡು ತಿಂಗಳು ಬಿಟ್ಟರೆ ಧನುರ್ಮಾಸ ಮತ್ತು ಆಷಾಢ ಮಾಸ ಬಿಟ್ಟರೆ ಅದರಲ್ಲಿಯೂ ಬೇರೆ ಬೇರೆ ಧರ್ಮದವರು ಮದುವೆ ಆಗುತ್ತಾರೆ. ನಮ್ಮಲ್ಲಿ ಪ್ರತಿ ತಿಂಗಳು, ಪ್ರತಿ ದಿವಸವೂ ಮದುವೆಗಳು ನಡೆಯುತ್ತವೆ. ಎರಡು ಜಿಲ್ಲೆಗೆ ಇಷ್ಟು ಆದರೆ, ಇಡೀ ರಾಜ್ಯದಲ್ಲಿ ಬೇರೆ ಎಲ್ಲಾ ಸೇರಿಸಿದರೆ ಎಷ್ಟಾಗುತ್ತದೆ? ತಾವು ದಯಮಾಡಿ ಈ ಪ್ರಕ್ರಿಯೆಯನ್ನು ನಿಲ್ಲಿಸಬಾರದು. ಕೋವಿಡ್ ಇದ್ದರೂ ಕೂಡ ಅವಕಾಶ ಕೊಟ್ಟಿದ್ದೀರಿ. ಕೋವಿಡ್-19ರ ಹಿನ್ನೆಲೆಯಲ್ಲಿ ಅರ್ಜಿದಾರರ ವಾಸಸ್ಥಳ ಪರಿಶೀಲನೆ ಮಾಡಬೇಕಾಗಿರುವ ಕಾರಣ ಬಿ.ಪಿ.ಎಲ್., ಕಾರ್ಡುಗಳ ವಿತರಣೆಯನ್ನು ತಡೆಹಿಡಿಯಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಎಲ್ಲಾ ಕೆಲಸಗಳು ನಡೆಯುತ್ತಿರಬೇಕಾದರೆ, ತಾವು ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳ ಕಡೆಯಿಂದ ಒಳ್ಳೊಳ್ಳೆಯ ಉತ್ತರ ಗಳನ್ನು ಈ ರಾಜ್ಯದ ಜನಕ್ಕೆ, ದೇಶಕ್ಕೆ ಕೊಟ್ಟಿದ್ದೀರಿ. ಆದರೆ ಕೋವಿಡ್ ಕಾರಣ ಇಟ್ಟುಕೊಂಡರೆ ಸಾಮಾನ್ಯ ಜನರಿಗೆ ಇದರಿಂದ ಖಂಡಿತವಾಗಿಯೂ ಕಷ್ಟವಾಗುತ್ತದೆ.

**ಶ್ರೀ ಕೆ. ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೋಗಸ್ ಕಾರ್ಡ್ ಬಗ್ಗೆ ಕೇಳಿದ್ದಾರೆ. ಬೋಗಸ್ ಕಾರ್ಡ್ ಎಂದರೆ, ಒಬ್ಬ ಎರಡು ಕಾರ್ಡ್ ಮಾಡಿಸಿದ್ದರೆ ಅದು ಬೋಗಸ್ ಕಾರ್ಡ್ ಆಗುತ್ತದೆ. ಅನರ್ಹ ಎಂದರೆ, ಮೂರು ಹೆಕ್ಟೇರ್ ಎಂದು ಏನು ಲಿಮಿಟ್ ಮಾಡಿದ್ದೇವೆ, ಅದು ಬಿಟ್ಟು ತೆಗೆದುಕೊಂಡರೆ ಅದು ಅನರ್ಹವಾಗುತ್ತದೆ. ಬೋಗಸ್ ಕಾರ್ಡ್‌ನಲ್ಲಿ ಚಾಮರಾಜನಗರ ಅಥವಾ ಮೈಸೂರು ಜಿಲ್ಲೆ ಇರಬಹುದು, ಒಬ್ಬ ಮನುಷ್ಯ ಎರಡು ಕಾರ್ಡ್ ತೆಗೆದುಕೊಂಡಿರುವ ಪ್ರಕರಣ ಇಲ್ಲದಿರುವುದರಿಂದ ಯಾವುದೂ ಇಲ್ಲವೆಂದು ಉತ್ತರ ಕೊಟ್ಟಿದ್ದೇವೆ. ಮೈಸೂರು ಜಿಲ್ಲೆಯಲ್ಲಿ 82 ಅಂತ್ಯೋದಯ ಮತ್ತು 7997 ಬಿ.ಪಿ.ಎಲ್., ಕಾರ್ಡ್‌ಗಳನ್ನು ರದ್ದು ಮಾಡಿರುವಂತಹದ್ದು; ಅವರು ಆದಾಯಕ್ಕಿಂತ ಜಾಸ್ತಿ ಇರುವ ಕಾರ್ಡ್‌ಗಳನ್ನು ಅಧಿಕಾರಿಗಳು ಮತ್ತು ಕೆಲವರು ಸ್ವತಃ ಅವರೇ ಬಂದು ವಾಪಸ್ ಕೊಟ್ಟಿರುವುದು ಆಗಿದೆ. ಚಾಮರಾಜನಗರ, ಮೈಸೂರು ಜಿಲ್ಲೆ ಇರಬಹುದು ಏಪ್ರಿಲ್ 01ನೇ ತಾರೀಖಿನಿಂದ ಏನು ಕೊರೋನಾ ಸಂಬಂಧ ಲಾಕ್‌ಡೌನ್ ಪ್ರಾರಂಭವಾಗುತ್ತದೆ, ಆ ಸಂದರ್ಭದಿಂದ ಬಿ.ಪಿ.ಎಲ್., ಕಾರ್ಡ್ ಕೊಡುವುದನ್ನು ನಿಲ್ಲಿಸಿದ್ದೇವೆ. ಪ್ರತಿ ಮನೆಗಳಿಗೆ ಹೋಗಿ ಚೆಕ್ ಮಾಡಬೇಕೆನ್ನುವ ದೃಷ್ಟಿಯಿಂದ ನಿಲ್ಲಿಸಿದ್ದೇವೆ. ಈಗ ಕೊರೋನಾ ಕಡಿಮೆಯಾಗಿರುವುದರಿಂದ ಬಹುಶಃ ಈಗ ಪಂಚಾಯಿತಿ ಚುನಾವಣೆ ಕಳೆದ ನಂತರ ಕಾರ್ಡ್ ಕೊಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಾನು ಏನು ಪ್ರಶ್ನೆ ಎತ್ತಿದ್ದೇನೆ, ಸರ್ಕಾರದ ಅವಶ್ಯಕತೆ ಇರುವುದೇ ಬಿ.ಪಿ.ಎಲ್., ಕಾರ್ಡುದಾರರಿಗೆ. ಬಿ.ಪಿ.ಎಲ್., ಕಾರ್ಡುಗಳೇ ಅತಿ ಹೆಚ್ಚು ಇರುವುದು ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆತರುತ್ತೇನೆ.

**ಶ್ರೀ ಕೆ. ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಪಂಚಾಯಿತಿ ಚುನಾವಣೆ ಮುಗಿದ ಮೇಲೆ ರಾಜ್ಯದಲ್ಲಿ ಏನು 01,88,000 ಅರ್ಜಿಗಳನ್ನು ಹಾಕಿದ್ದಾರೆ, ಅವರಿಗೆ ಕಾರ್ಡುಗಳನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾರ್ಡ್‌ಗಳನ್ನು ಕೊಟ್ಟ ನಂತರ ಹೊಸ ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆ.

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಮಗೆ ಸ್ವಾಕಷ್ಟು ಜನರು ಏನು ಮನವಿ ಮಾಡುತ್ತಾರೆಂದರೆ, ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಡುಗಳನ್ನು ಹಂಚಬಹುದು. ಆ ವಿಚಾರದಲ್ಲಿ ನಮ್ಮದೇನೂ ತಕರಾರಿಲ್ಲ. ಈ ಪ್ರಕ್ರಿಯೆಯನ್ನು 2-3 ತಿಂಗಳಿನಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ. ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಕ್ರಮ ವಹಿಸುತ್ತೇವೆ. ಕೊರೋನಾ ಬಂದ ಕಾರಣ ಹೀಗೆ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 160**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಎರಡು ಪ್ರಶ್ನೆ ಕೇಳಿದ್ದೆ. ರಾಜ್ಯದಲ್ಲಿ ಇರುವ ಒಟ್ಟು ಪಟ್ಟಣ ಪಂಚಾಯಿತಿಗಳ ಪೈಕಿ ಯಾವ ಯಾವ ಪಟ್ಟಣ ಪಂಚಾಯಿತಿಗಳಿಗೆ ಒಳಚರಂಡಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ; ಸದರಿ ಯೋಜನೆಗಳ ಪ್ರಗತಿ ಯಾವ ಹಂತದಲ್ಲಿದೆ ಎಂದು ಕೇಳಿದ್ದೆ. ಅದಕ್ಕೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಎರಡನೆಯದಾಗಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಕೇಳಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಎರಡು ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಬಗ್ಗೆ ಏನು ಕೇಳಿದ್ದರು, ಅದಕ್ಕೆ ರೂ. 44.00 ಕೋಟಿ ವೆಚ್ಚದಲ್ಲಿ ಆ ಕಾಮಗಾರಿಯನ್ನು ಮಾಡುವುದಕ್ಕೆ ಸರ್ಕಾರ ಡಿ.ಪಿ.ಆರ್. ಮಾಡಿ ಆಡಳಿತಾತ್ಮಕ ಅನುಮೋದನೆಗೆ ಕ್ರಮ ಜರುಗಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 210**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ಗೆ ಸಂಬಂಧಪಟ್ಟಿದೆ. ಇದನ್ನು ಸರ್.ಎಂ. ವಿಶ್ವೇಶ್ವರಯ್ಯನವರು ಶಿವಮೊಗ್ಗದಲ್ಲಿ 1937ರಲ್ಲಿ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಪ್ರಾರಂಭ ಮಾಡಿದ್ದರು. ಇದಕ್ಕೆ ಒಂದು ಇತಿಹಾಸವಿದೆ. ನಾನು ಕಾರ್ಖಾನೆಯು ಯಾವಾಗ ನಷ್ಟವಾಗಿದೆ, ಯಾವಾಗ ಲಾಭವಾಗಿದೆಯೆಂದು ಕೇಳಿದ್ದೆ. ಇದು ನಷ್ಟವಾಗುವುದಕ್ಕೆ ಪ್ರಾರಂಭವಾಗಿದ್ದೇ 2001ರಿಂದ. ಕಾರ್ಖಾನೆಯ ಪುನರಾರಂಭಕ್ಕೆ, ಅದು ನಷ್ಟದಲ್ಲಿದೆಯೆಂದು ಬಂದಂತಹ ಎಲ್ಲಾ ಸರ್ಕಾರಗಳೂ ಪ್ರತಿ ವರ್ಷವೂ 20, 30, 70, 100 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಸಂಗತಿಯೇನೆಂದರೆ, ಇದನ್ನೂ ಖಾಸಗೀಕರಣ ಮಾಡಬೇಕೆಂದು ಇತ್ತೀಚೆಗೆ ಟೆಂಡರ್ ಕರೆದಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ನೀವು ಎಲ್ಲಾ ಸರ್ಕಾರಿ ಕಾರ್ಖಾನೆಗಳನ್ನು ಖಾಸಗೀಕರಣ ಮಾಡಿದರೆ ಏನು ಅನುಕೂಲವಾಗುತ್ತದೆ? ಈಗ ಏನಾಗಿದೆ ಎಂದರೆ, Industrial Minister ಎಂದರೆ, ಲೇಔಟ್ ಮಾಡುವುದು, ನಿವೇಶನ ಹಂಚಿಕೆ ಮಾಡುವುದಷ್ಟೇ ಎಂಬ ಮನೋಭಾವವನ್ನು ಇಟ್ಟುಕೊಳ್ಳಬಾರದು. ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದರು, ಈಗ ತಮ್ಮ ಕೈಲಾದ ಸೇವೆ ಮಾಡಬೇಕೆಂಬ ಮನೋಭಾವದಿಂದ ಮತ್ತೆ ಸಚಿವರಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿಯೂ ಕೈಗಾರಿಕಾ ಸಚಿವರಾಗಿ ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಮಾಡಬೇಕೆಂದು ಮಾಡಿದ್ದಾರೆ. ನನ್ನ ಮನವಿಯೇನೆಂದರೆ, ನೀವು ಟೆಂಡರ್ ಕರೆದಿದ್ದೀರಿ, ಆದರೆ ಆ ಕಾರ್ಖಾನೆಯ ಆಸ್ತಿ ಸುಮಾರು 40,000 ರಿಂದ 75,000 ಎಕರೆ ಇದೆ. ನಾನು ನಿಮ್ಮ ವ್ಯಾಪ್ತಿಯಲ್ಲಿ 70,000 ಎಕರೆಯಲ್ಲಿ ಎಷ್ಟು ಮರಗಳಿವೆ, ಅದು ಉಪಯೋಗಕ್ಕೆ ಎಷ್ಟು ಬರುತ್ತದೆ, ಸರ್ಕಾರ ಟೆಂಡರ್ ಕೊಟ್ಟಮೇಲೆ ಅವರು ಆ ಮರಗಳನ್ನು ಉಪಯೋಗಿಸಿಕೊಳ್ಳಬಹುದೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇದನ್ನು ಪ್ರಶ್ನೆಯಲ್ಲಿ ಕೇಳಿರಲಿಲ್ಲ, ಆದರೆ ಆ ಮರಗಳನ್ನು ಉಪಯೋಗಿಸಿಕೊಳ್ಳಬಹುದೇ ಎಂದು ಕೇಳುತ್ತೇನೆ. ನನ್ನ ಮನವಿಯೇನೆಂದರೆ, ಇಷ್ಟೊಂದು ಆತುರವಾಗಿ ಟೆಂಡರ್ ಕರೆಯುವುದು ಬೇಡವಾಗಿತ್ತು. ಏಕೆಂದರೆ, ಅಲ್ಲಿ ಇನ್ನೂ ಕೆಲಸ ಮಾಡುತ್ತಿರುವವರು ತುಂಬಾ ಜನ ಇದ್ದಾರೆ. ಟೆಂಡರ್‌ನ್ನು ಕರೆದರೂ ಪುನಃ ಆ ಹಳೆಯ ಕಾರ್ಮಿಕರಿಗೆ ಕೆಲಸ ಕೊಡುತ್ತೀರೋ ಇಲ್ಲವೋ ಅದನ್ನು ಹಾಕಿಲ್ಲ. ನೀವು ಸ್ಥಳೀಯರಿಗೆ ಕೊಟ್ಟರೆ ಅವರು ಧರಣಿ ಮಾಡುತ್ತಾರೆ, ತೊಂದರೆ ಕೊಡುತ್ತಾರೆಂದು ನಮ್ಮ ಕರ್ನಾಟಕದ ಒಬ್ಬರನ್ನೂ ಕೆಲಸಕ್ಕೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆದುಕೊಳ್ಳುವುದಿಲ್ಲ. ಸರ್ಕಾರದ ಕಾರ್ಖಾನೆ ಇರುವುದು ನಮ್ಮ ಸ್ಥಳೀಯ ಜನರಿಗೆ ಕೆಲಸ ಕೊಡುವುದಕ್ಕೆ ಇದೆ. ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾಂತರಾಜುರವರು ಪ್ರಶ್ನೆ ಕೇಳಿರುವುದು ಮುಖ್ಯವಾಗಿ ಈ ಕಾರ್ಖಾನೆ ಯಾವಾಗ ಪ್ರಾರಂಭವಾಯಿತು, ಅದರ ಇತಿಹಾಸ ಮತ್ತು ಆ ಕಂಪನಿಯ ಆರ್ಥಿಕ ಪರಿಸ್ಥಿತಿ ಏನಿದೆ ಎಂದು ಕೇಳಿದ್ದಾರೆ. 2001 ರಿಂದ ಏನೇನು ನಷ್ಟವಾಗಿದೆ, ಪ್ರತಿ ವರ್ಷ ಎಷ್ಟು ನಷ್ಟವಾಗುತ್ತಿತ್ತು ಎಂಬ ಪ್ರತಿಯೊಂದರ ವಿವರವನ್ನೂ ಕೊಟ್ಟಿದ್ದೇವೆ. ನಾನು ಯಾರ ಮೇಲೂ ಬ್ಲೇಮ್ ಮಾಡುವುದಿಲ್ಲ. ಬೇರೆ ಬೇರೆ ಹಂತದಲ್ಲಿ ಬೇರೆ ಸರ್ಕಾರ ಬಂದಾಗ ಸಹ ಇದು ನಷ್ಟದಲ್ಲಿತ್ತು. ಸರ್ಕಾರದ ವ್ಯವಸ್ಥೆಯಲ್ಲಿ ಕಾರ್ಖಾನೆಯನ್ನು ನಡೆಸುವುದಕ್ಕೆ ಹೋದಾಗ ಕೆಲವು exceptional cases ಬಿಟ್ಟರೆ almost ಎಲ್ಲಾ ನಷ್ಟದಲ್ಲಿದೆ. ಅಲ್ಲಿ ಎಂ.ಡಿ., ಗಳು ಒಂದೊಂದು ವರ್ಷಕ್ಕೆ ಬದಲಾಗುತ್ತಾ ಹೋಗುತ್ತಾರೆ. ಎಂ.ಡಿ.,ಗೆ ಕಾರ್ಖಾನೆಯನ್ನು ಬೆಳೆಸಬೇಕೆಂಬ ಸ್ವಂತ ಆಸಕ್ತಿ ಇರುವುದಿಲ್ಲ. ಆ ಹಿನ್ನೆಲೆಯಲ್ಲಿ ನಷ್ಟವಾಗುತ್ತಾ ಹೋಗುತ್ತದೆ. ಅದನ್ನು ಕಂಟ್ರೋಲ್ ಮಾಡುವವರು ಯಾರು? ಆಗಲೇ ಮಾನ್ಯ ಸದಸ್ಯರು ಪ್ರತಿ ಸರ್ಕಾರವೂ 40 ಕೋಟಿ, 50 ಕೋಟಿ ಅನುದಾನವನ್ನು ಕೊಡುತ್ತಾ ಬಂದಿದೆಯೆಂದು ಹೇಳಿದರು. ಹಾಗೆ ಅನುದಾನವನ್ನು ಕೊಟ್ಟರೂ ಎಷ್ಟು ನಷ್ಟವಾಗಿದೆಯೆಂದರೆ, ಒಟ್ಟು ಎಲ್ಲಾ ಕೂಡ 1,000 ಕೋಟಿ ರೂಪಾಯಿಗಿಂತಲೂ ಹೆಚ್ಚು consolidated loss ಇದೆ. 1,000 ಕೋಟಿ ನಷ್ಟವನ್ನು ತೆಗೆದು ಅದನ್ನು ಮತ್ತೆ ಸರ್ಕಾರ ನಡೆಸುವುದಕ್ಕಾಗುತ್ತದೆಯೇ? ಇನ್ನು ಪುನಶ್ಚೇತನ ಕೇಳಿದಿರಿ. ಸದರಿ ಜಮೀನಿನಲ್ಲಿ ಬೆಳೆದಿರುವ ಮರಗಳ ಮಾರಾಟದಿಂದ ಬರುವ ಹಣದಿಂದ ಮೈಸೂರು ಕಾಗದ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಸಾಧ್ಯವಿಲ್ಲವೇ ಎಂದು ಕೇಳಿದ್ದಾರೆ. ಕಾರ್ಖಾನೆಯ ಪುನಶ್ಚೇತನಕ್ಕಾಗಿ ಸುಮಾರು 1,500 ಕೋಟಿ ರೂಪಾಯಿಗಳು ಅಗತ್ಯವಾಗಿದೆ. ಸರ್ಕಾರ ಮೊದಲು 1,500 ಕೋಟಿ ರೂಪಾಯಿಗಳ ಬಂಡವಾಳ ಹಾಕಬೇಕಾಗಿದೆ. ಹಳೆಯ ನಷ್ಟ 1,000 ಕೋಟಿ ಮೇಲಿದೆ. ಅಂದರೆ 2,500 ಕೋಟಿ ರೂಪಾಯಿಗಳನ್ನು ಸರ್ಕಾರ bear ಮಾಡಬೇಕು. ಇದು ಯಾವ ಸರ್ಕಾರಕ್ಕೆ ಸಾಧ್ಯವಿದೆಯೆಂದು ನಾನು ಕೇಳುತ್ತಿದ್ದೇನೆ. 2012ರಲ್ಲಿ M/s.Deloit Company ಯವರು ಸದರಿ ಜಮೀನಿನಲ್ಲಿ ಬೆಳೆದಿರುವ ಮರಗಳ ಮಾರಾಟದಿಂದ ಬರುವ ಹಣದಿಂದ ಪುನಶ್ಚೇತನಗೊಳಿಸಲು ಸಾಧ್ಯವಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ ಅನಿವಾರ್ಯವಾಗಿ ಇದನ್ನು ಲೀಸ್ ಮೇಲೆ ಕೊಡಬೇಕೆನ್ನುವ ಪ್ರಸ್ತಾವ ಬಂತು. ಲೀಸ್ ಮೇಲೆ ಕೊಡುವಂತಹ ಪ್ರಕ್ರಿಯೆ ನಡೆಯುತ್ತಿದೆ ಮತ್ತು ಟೆಂಡರ್ ಬಗ್ಗೆ ತಾವು ಕೇಳಿದಿರಿ, ಆದರೆ ಟೆಂಡರ್ ಬಗ್ಗೆ ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲವೊಂದು ಷರತ್ತುಗಳ ಬಗ್ಗೆ ಯಾವ ಪ್ರಶ್ನೆಯನ್ನೂ ತಾವು ಕೇಳಿಲ್ಲ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ವಿವರವಾಗಿ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

(ಮುಂದು)

(1039) 08-12-2020/ 07-20/ ಕೆಹೆಚ್-ಜಿಆರ್

**ಶ್ರೀ ಜಗದೀಶ್ ಶೆಟ್ಟರ್ (ಮುಂದು):-**

ಅದಕ್ಕಾಗಿ ಇದನ್ನು ಖಾಸಗೀಕರಣ ಮಾಡುವಂತಹ ಮನಸ್ಸು ಸರ್ಕಾರಕ್ಕೆ ಇಲ್ಲ. ಇದನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದ್ದು, ಇದನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವುದಕ್ಕೆ ನಮ್ಮ ಇಚ್ಛೆ ಇದೆ. ನಾನು ಕೈಗಾರಿಕಾ ಸಚಿವನಾದ ಮೇಲೆ ಸ್ವತಃ ನಾನೇ ಭೇಟಿ ನೀಡಿದ್ದು, ಈಗ ಅಲ್ಲಿನ ಪರಿಸ್ಥಿತಿ ನೋಡಿದರೆ, ಸಮಯಕ್ಕೆ ಸರಿಯಾಗಿ ಆಧುನೀಕರಣ ಮಾಡಿಕೊಳ್ಳುತ್ತಾ ಹೋಗಬೇಕು. ಆಧುನೀಕರಣವನ್ನು ಯಾರು ಕೂಡ ಮಾಡಲಿಲ್ಲ. ಅದಕ್ಕೆ ಬೇರೆ ಬೇರೆ paper mills ಗಳನ್ನು ಆಧುನೀಕರಣಗೊಳಿಸುತ್ತಾರೆ. ಅದಕ್ಕೆ ಆಧುನೀಕರಣವಾದಂತಹ ಯಂತ್ರಗಳನ್ನು ತೆಗೆದುಕೊಳ್ಳುತ್ತಾರೆ. ಆಧುನೀಕರಣವಾದಂತಹ ತಂತ್ರಗಳನ್ನು ಉಪಯೋಗ ಮಾಡಿಕೊಂಡು ತಕ್ಷಣ ವೇಗವಾಗಿ ಪ್ರಿಂಟಿಂಗ್ ಅನ್ನು ಮಾಡುತ್ತಾರೆ. ಆದರೆ ಇಲ್ಲಿ ಆ ರೀತಿ ಮಾಡಲಿಲ್ಲ. ಅದು ಹಾಗೆಯೇ ಉಳಿದುಕೊಂಡು ಬಂದಿದೆ. ಇದೇ ರೀತಿಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವುದಾದರೆ ಇದನ್ನು ಆಧುನೀಕರಣಗೊಳಿಸುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ 1000 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಇದಕ್ಕೆ 1500 ಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಬೇಕು. ಇದಕ್ಕೆ ಯಾರು ಬಂಡವಾಳ ಹಾಕುತ್ತಾರೆ? ಇದು ಪ್ರಶ್ನೆ ಇರುವಂತಹದ್ದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹಾಗಾದರೆ ಈ ಕಾರ್ಖಾನೆಯನ್ನು ಭೋಗ್ಯಕ್ಕೆ ಕೊಡಿ. ಸರ್.ಎಂ.ವಿಶ್ವೇಶ್ವರಯ್ಯನವರು ‘industrialise or perish, ಉದ್ಯಮೀಕರಣ ಮಾಡಿ, ಇಲ್ಲದಿದ್ದರೆ ಕೆಲಸ ಬಿಟ್ಟು ಹೋಗಿ’ ಎನ್ನುವ ಮಾತನ್ನು ಹೇಳುತ್ತಿದ್ದರು. ಸರ್.ಎಂ. ವಿಶ್ವೇಶ್ವರಯ್ಯನವರು ಇದನ್ನು ಸ್ಥಾಪನೆ ಮಾಡಿದ್ದಾರೆ. ನಮ್ಮ ಸರ್ಕಾರದ್ದು ಏನು ಇಲ್ಲವೇ ಇಲ್ಲ. 1937ನೇ ಸಾಲಿನಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸ್ಥಾಪನೆ ಮಾಡಿರುವುದನ್ನು ಖಾಸಗಿಯವರಿಗೆ ಕೊಡುವುದಕ್ಕೆ ತಮಗೆ ಏನು ಹಕ್ಕು ಇದೆ? Morally you are not supposed to give it. ಇದರ ಬಗ್ಗೆ ಇನ್ನೊಮ್ಮೆ ಚಿಂತನೆ ಮಾಡಿ, ಏಕೆಂದರೆ technology upgradation

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬೇಕು. ನಮಗೂ ಕೂಡ ಕೈಗಾರಿಕೆಯ ಬಗ್ಗೆ ಗೊತ್ತಿದೆ. Technology upgradation ಆಗಲಿಲ್ಲವೆಂದರೆ, ಹಳೆಯ ತಂತ್ರಜ್ಞಾನದೊಳಗೆ viability ಬರುವುದಿಲ್ಲ. The Government has got everything. It has got men, material and everything. 1500 ಕೋಟಿ ರೂಪಾಯಿಗಳನ್ನು ಖಾಸಗಿಯವರು ಏನು ಮಾಡುತ್ತಾರೆ? ಈ ವ್ಯವಹಾರಗಳಿಗೆ transparency ಇರುವುದಿಲ್ಲ. I know.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇಷ್ಟು ವರ್ಷಗಳಿಂದ idle plant ಆಗಿದೆ. 1000 ಕೋಟಿ ರೂಪಾಯಿಗಳಷ್ಟು ಹಣ ಲೂಟಿಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಂತ್ರಜ್ಞಾನವನ್ನು technology upgradation ಮಾಡಬೇಡಿ ಎಂದು ಯಾರು ಹೇಳಿದ್ದರು? ಯಾವುದೇ ಸರ್ಕಾರ ಇರಲಿ. ನಮ್ಮದೇ ಸರ್ಕಾರ ಇರಲಿ, ನಿಮ್ಮದೇ ಸರ್ಕಾರ ಇರಲಿ ಅಥವಾ ಮತ್ತೊಬ್ಬರ ಸರ್ಕಾರವೇ ಇರಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, private sector ಮತ್ತು ಕೋ-ಆಪರೇಟಿವ್‌ಗಳನ್ನು ತಾವು ನೋಡಿದ್ದೀರಿ. ಕೋ-ಆಪರೇಟಿವ್ ಮೇಲಿರುವಂತಹ ಸರ್ಕಾರಿ ಸಂಸ್ಥೆಗಳು ಸಹಿತ ಮುಚ್ಚಿ ಖಾಸಗಿ ಆಗಿರುವುದಕ್ಕೆ ಕಾರಣವೇನೆಂದರೆ, ಇಲ್ಲಿರುವ ವ್ಯವಸ್ಥಾಪಕ ನಿರ್ದೇಶಕರ ಬದಲಾವಣೆ ಮತ್ತು ಇವತ್ತು ಅಲ್ಲಿರುವಂತಹ ಸರ್ಕಾರಿ ವ್ಯವಸ್ಥೆಗೆ ಎಷ್ಟು ತೊಂದರೆಯಾಗಿದೆ ಎಂದರೆ, ಕರ್ನಾಟಕದಲ್ಲಿರುವಂತಹ ಅನೇಕ ಸರ್ಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕೊಡುವಂತಹ ವ್ಯವಸ್ಥೆಗೆ ನಾವು ಬಂದಿದ್ದೇವೆ.

**ಸಭಾಪತಿಯವರು:-** ಅರ್ಧ ಗಂಟೆ ಚರ್ಚೆಗೆ ಹೋಗೋಣ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, this is going to leave the financial implication on the Government itself.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಇದಕ್ಕೆ ಯಾರು ಕಾರಣ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದರಿಂದ ಒಳ್ಳೆಯದಾಗುವುದಿಲ್ಲ. ಅದಕ್ಕೆ ನಾನು ಈ ಮಾತನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವ್ಯವಸ್ಥಾಪಕ ನಿರ್ದೇಶಕರೇ ಬಂದು ಬದಲಾವಣೆ ಮಾಡಿ ಎಂದು ಹೇಳಿರುತ್ತಾರೆಯೇ? ಇದು ತಮ್ಮ ಸರ್ಕಾರದ ಸ್ವಾಮ್ಯದಲ್ಲಿ ಇರುವಂತಹದ್ದು.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದು ನನ್ನ ಅಭಿಪ್ರಾಯ ಅಷ್ಟೇ. ಯಾವುದೇ ಸರ್ಕಾರ ಇರಬಹುದು. ನಾನು ಈ ಸರ್ಕಾರ, ಆ ಸರ್ಕಾರ ಎಂದು ಹೇಳುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಸಹ ಅದನ್ನೇ ಹೇಳುತ್ತೇನೆ. ಯಾವುದೇ ಸರ್ಕಾರ ಇರಲಿ. ಅದನ್ನು ಕ್ರಮಬದ್ಧವಾಗಿ, ಕಾಲಕಾಲಕ್ಕೆ ಏನೇನು ಮಾಡಬೇಕೆಂದು ಯೋಚಿಸಿ, ಅದನ್ನು ಮಾಡಬೇಕಲ್ಲವೇ? **(ಗೊಂದಲ)** ನಮಗೆ ಶೀತ ಆಗುತ್ತದೆ ಎಂದು ಮೂಗನ್ನು ತೆಗೆದು ಹಾಕುವುದಕ್ಕೆ ಆಗುತ್ತದೆಯೇ. ಅದಕ್ಕೆ ಚಿಕಿತ್ಸೆ ಮಾಡಬೇಕಲ್ಲವೇ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆ ಎಂದರೆ, ಮಂಡ್ಯ ಸಕ್ಕರೆ ಕಾರ್ಖಾನೆಯ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದೊಂದು ಪ್ರತಿಷ್ಠಿತ ಸಂಸ್ಥೆಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಂಡ್ಯ ಸಕ್ಕರೆ ಕಾರ್ಖಾನೆಯದ್ದು ಒಂದು ವಿಷಯವೇನೆಂದರೆ, Cane Bill ಕೊಡುವುದಕ್ಕೆ ಸರ್ಕಾರ ದುಡ್ಡು ಕೊಟ್ಟಿದ್ದು, ಇದಕ್ಕಿಂತ ಹೆಚ್ಚು ಇನ್ನೇನು ಬೇಕು. ನಾನು ಏನು ಹೇಳುತ್ತೇನೆಂದರೆ, ಪುನಶ್ಚೇತನಕ್ಕೆ ಕೊಡುವುದು ಬೇರೆ. Cane Bill ಕೊಡುವುದಕ್ಕೂ ಸಹ ಸರ್ಕಾರ ದುಡ್ಡು ಕೊಡುತ್ತದೆ. ಕಬ್ಬು ಅರೆಸಿ ಸಕ್ಕರೆ ಮಾಡಿ ಕೊಡುವುದಕ್ಕೂ ದುಡ್ಡು ಕೊಡುತ್ತದೆ ಎಂದರೆ ಹೇಗೆ? ಕಬ್ಬಿನ ಬಿಲ್ಲನ್ನು ಕೊಡಬಹುದು. Cane Bill ಕೊಡುವುದಕ್ಕೂ ಸರ್ಕಾರ ದುಡ್ಡು ಕೊಡುವಷ್ಟರ ಮಟ್ಟಿಗೆ ಬಂದರೆ ಹೇಗೆ? Where we stand now?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೋ-ಆಪರೇಟಿವ್ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾರೆ. ಅಲ್ಲಿರುವ ಮ್ಯಾನೇಜ್‌ಮೆಂಟ್‌ಗೆ accountability ಇಲ್ಲ. ಅಲ್ಲಿರುವ ಅಧಿಕಾರಿಗಳಿಗೆ accountability ಇಲ್ಲ. ಇದನ್ನು ಸರ್ಕಾರ ನಿಯಂತ್ರಣಕ್ಕೆ ಇಟ್ಟುಕೊಳ್ಳುವುದಿಲ್ಲವೆಂದರೆ ಹೇಗೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, that's the reason I am saying this.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, accumulated loss 1500 ಕೋಟಿ ರೂಪಾಯಿಗಳು ಇದೆ. 1000 ಕೋಟಿ ರೂಪಾಯಿಗಳು ಇದೆ. ಇನ್ನು ಇದರ ಪುನಃಶ್ಚೇತನಕ್ಕೆ 2000 ಕೋಟಿ ರೂಪಾಯಿಗಳಷ್ಟು ಹಾಕಬೇಕು. ಇದರ ಬಗ್ಗೆ ಹೇಗೆ ವರದಿಯನ್ನು ಕೊಡುತ್ತಾರೋ, ಏನೋ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ಚಿಂತನೆ ಮಾಡಬೇಕಲ್ಲವೇ? ನಮ್ಮ ರಾಜ್ಯ ಸರ್ಕಾರಕ್ಕೆ ಏನು ಹಕ್ಕಿದೆ, ಹಿಂದೆ ಮಹಾರಾಜರೇ ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದವರು, ಇಂತಹ Paper Mills ಅನ್ನು ಸಹ ಮಾಡಿದವರು ಅವರೇ. ಈ ರೀತಿ ಇರುವಾಗ ಇದನ್ನು ಮಾರುವುದಕ್ಕೆ ನಮಗೇನೂ ನೈತಿಕತೆ ಇದೆ. ಇದನ್ನು ಮಾರುವುದೇ ಪರಿಹಾರವಾಗಿರುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ವಿ.ಐ.ಎಸ್.ಎಲ್., ಮತ್ತು ಎಂ.ಪಿ.ಎಂ., ಎನ್ನುವ ಎರಡು ಪ್ರತಿಷ್ಠಿತ ಕಾರ್ಖಾನೆಗಳಿವೆ. ನಾನು ಬಹಳ ವಿಸ್ತಾರಕ್ಕೆ ಹೋಗುವುದಿಲ್ಲ. ನಾನು ಬಹಳ ಹತ್ತಿರದಿಂದ ಆ ಕಾರ್ಖಾನೆಯನ್ನು ನೋಡಿದ್ದೇನೆ. ಸರ್ಕಾರವೇ ಒಪ್ಪಿಕೊಳ್ಳುವ ಪ್ರಕಾರ ಅರಣ್ಯ ಭೂಮಿ ಸುಮಾರು 50 ಸಾವಿರ ಎಕರೆಗಳಷ್ಟು ಇದ್ದು, ಅರಣ್ಯೇತರ ಭೂಮಿ ಸುಮಾರು 6528 ಎಕರೆಗಳಷ್ಟು ಇದೆ. ನಮ್ಮ ರಾಜ್ಯದಲ್ಲಿ ಯಾವುದೇ ಕಾರ್ಖಾನೆಗಳಿಗೂ ಇಷ್ಟು ದೊಡ್ಡ ಜಾಗ ಇಲ್ಲ. ಸರ್ಕಾರ ಭೋಗ್ಯಕ್ಕಾಗಿ ಅರಣ್ಯ ಭೂಮಿಯನ್ನು ಕೊಟ್ಟಿದೆ. ಎಂ.ಪಿ.ಎಂ., ಎಂದರೆ ಅದು ಕೇವಲ ಕಾಗದ ಕಾರ್ಖಾನೆ ಅಲ್ಲ. ಇದರ ಜೊತೆಗೆ sugar industry ಇದೆ. Power generation ಇದೆ. ಈ ಮೂರು ಇದ್ದರೂ ಕೂಡ ಕಾರ್ಖಾನೆ ನಷ್ಟವಾಯಿತು. ಇದರ ಆಡಳಿತಗಾರರು ಕೇವಲ ಐ.ಎ.ಎಸ್., ಅಧಿಕಾರಿಗಳು ಆಗಿದ್ದಾರೆ. ಅದರಲ್ಲಿ ಕಾರ್ಖಾನೆ ಪ್ರಾರಂಭವಾಗಿ ಸುಮಾರು 64 ವರ್ಷಗಳಿಂದ ನಷ್ಟವಾಗಲಿಲ್ಲ. ಆಗಲೂ ಕೂಡ ಅಧಿಕಾರಿಗಳೇ ಇದ್ದರು. ಆದರೆ, ಕೆಲವು ಐ.ಎ.ಎಸ್., ಅಧಿಕಾರಿಗಳು ಬಂದಾಗ ಕಾರ್ಖಾನೆ ಲಾಭದಲ್ಲಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಕೆಲವು ಐ.ಎ.ಎಸ್., ಅಧಿಕಾರಿಗಳು ಬಂದಾಗ ಕಾರ್ಖಾನೆ ನಷ್ಟಕ್ಕೆ ಹೋಗುತ್ತದೆ. ಈ ರೀತಿ ಕಾರ್ಖಾನೆಯ ನಷ್ಟಕ್ಕೆ ಕಾರಣವಾದಂತಹ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಬಂದಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವತ್ತಾದರೂ ಕ್ರಮ ತೆಗೆದುಕೊಂಡಿದ್ದರೆ, ಈ ಕಾರ್ಖಾನೆ ಈ ರೀತಿ ಮುಳುಗುತ್ತಿರಲಿಲ್ಲ. ಎಲ್ಲರ ಅವಧಿಯಲ್ಲಿ 2 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ನಷ್ಟದ ಮಧ್ಯೆಯೂ ಕೂಡ 2007ನೇ ಸಾಲಿನಿಂದ 2009ನೇ ಸಾಲಿನವರೆಗೂ 17 ಕೋಟಿ ರೂಪಾಯಿಗಳಿಂದ 18 ಕೋಟಿ ರೂಪಾಯಿಗಳವರೆಗೂ ಕಾರ್ಖಾನೆ ಲಾಭಕ್ಕೆ ಬರುತ್ತದೆ. ಹಿಂದಿನವರು ಇದ್ದಾಗ ಸುಮಾರು 5 ಕೋಟಿ ರೂಪಾಯಿಗಳಿಂದ 10 ಕೋಟಿ ರೂಪಾಯಿಗಳವರೆಗೂ ನಷ್ಟವಾಗಿದೆ. ಮುಂದಿನ ವರ್ಷ ಶ್ರೀ ರಾಜಕುಮಾರ್ ಖತ್ರಿಯವರು ಬಂದಾಗ, ಶ್ರೀ ವೆಂಕಟಯ್ಯನವರು ಇದ್ದಾಗ, ಶ್ರೀ ಸುಧೀರ್‌ಕುಮಾರ್‌ರವರು ಇದ್ದಾಗ ಈ ನಷ್ಟವನ್ನು ತುಂಬಿಕೊಂಡು ಸುಮಾರು 17 ಕೋಟಿ ರೂಪಾಯಿಯಿಂದ 18 ಕೋಟಿ ರೂಪಾಯಿಗಳವರೆಗೂ ಲಾಭವನ್ನು ಮಾಡುತ್ತಾರೆ. ಆದರೆ ಬಾಕಿ ಅಧಿಕಾರಿಗಳು ಬಂದಾಗ ಏಕೆ ಕಾಗದ ಕಾರ್ಖಾನೆ ನಷ್ಟವಾಯಿತು? ಯಾವತ್ತೂ ಕೂಡ ಅಧಿಕಾರಿಗಳು ಬೆಂಗಳೂರನ್ನು ಬಿಟ್ಟು ಕಾಗದ ಕಾರ್ಖಾನೆಯನ್ನು ಭೇಟಿ ಮಾಡಲಿಲ್ಲ. ಹೆಸರಿಗೆ ಮಾತ್ರ ವ್ಯವಸ್ಥಾಪಕ ನಿರ್ದೇಶಕರು ಆಗಿದ್ದರು. ಇದರ administration ಬೆಂಗಳೂರಿನಿಂದ ನಡೆಯುತ್ತಿತ್ತು. ಕಾರ್ಖಾನೆ ಇಷ್ಟು ದೊಡ್ಡದಿದೆ. ಒಳ್ಳೆಯ ಆಫೀಸ್ ಇದೆ. ಯಾವತ್ತೂ ಕೂಡ ಕಾರ್ಖಾನೆಯ ಕಡೆ ಹೋಗಿ ನೋಡಲಿಲ್ಲ. ಆ ಕಾರ್ಖಾನೆಯಲ್ಲಿ ಪ್ರೊಡಕ್ಷನ್ ಹೇಗಾಗುತ್ತಿದೆ ಎಂದು ನೋಡಲಿಲ್ಲ. ಇಲ್ಲಿ airconditioned ಆಫೀಸ್‌ನಲ್ಲಿ ಕುಳಿತುಕೊಂಡು ನಮ್ಮ ಅಧಿಕಾರಿಗಳು ದೊಡ್ಡ ಕಾರ್ಖಾನೆಯನ್ನು ನಡೆಸುವುದಕ್ಕೆ ಹೊರಟಿದ್ದಾರೆ. 1000 ಕೋಟಿ ರೂಪಾಯಿಗಳ ನಷ್ಟವಾಗಿದೆ. ಇದು ಬಹಳ ಕಡಿಮೆ. ಈ ನಷ್ಟಕ್ಕೆ ಮಾನ್ಯ ಸಚಿವರು ಹೇಳಿರುವಂತಹ ಮಾತುಗಳನ್ನು ಒಪ್ಪುತ್ತೇನೆ. ಯಂತ್ರೋಪಕರಣಗಳ ನವೀಕರಣ ಆಗಲಿಲ್ಲ. ಹಳೆ ಮಾದರಿಯ ಯಂತ್ರಗಳು ಇವೆ. ಈ ಹಳೆ ಮಾದರಿಯ ಯಂತ್ರಗಳನ್ನು ಬದಲಾವಣೆ ಮಾಡಬೇಕೆಂದು ನಮ್ಮ ಅಧಿಕಾರಿಗಳಿಗೆ ಗೊತ್ತಾಗಲಿಲ್ಲವೇ? ಬಹಳ ದೊಡ್ಡ ದೊಡ್ಡ technology ಯ ಬಗ್ಗೆ ಓದಿಕೊಂಡು ಬಂದಂತಹವರು. ಎಲ್ಲಾ ಇಲಾಖೆಗಳನ್ನು ಸಮರ್ಥವಾಗಿ ನಿಭಾಯಿಸುವಂತಹ ಸರ್ವಜ್ಞರಿಗೆ ಇದನ್ನು ಏನು ಮಾಡಬೇಕೆಂಬುದು ಗೊತ್ತಾಗಲಿಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಐ.ಎ.ಎಸ್., ಅಧಿಕಾರಿಗಳು 'we know everything, sky had got the limit' ಎನ್ನುವ ಧೋರಣೆಯಿಂದ ಮಾತನಾಡುತ್ತಾರೆ. You should fixup the responsibility on the guilty officers.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಶ್ರೀ ಘೋರೆ ಎಂಬ ಐ.ಎ.ಎಸ್., ಅಧಿಕಾರಿ ನಿವೃತ್ತಿ ಹೊಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, they may be I.A.S., or K.A.S., officers.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, 1996-97ರಲ್ಲಿ ಆ ಕಾರ್ಖಾನೆ ತನ್ನೆಲ್ಲಾ ನಷ್ಟವನ್ನು ಮುಗಿಸಿ, ಲಾಭಕ್ಕೆ ಬಂದಿತು. ಇದರಿಂದ ಕಾರ್ಖಾನೆ ಕೆ.ಇ.ಬಿ., ಯವರಿಗೆ ಸಾಲವನ್ನು ನೀಡಿತು. ಶ್ರೀ ಘೋರೆ ಎಂಬ ಅಧಿಕಾರಿ ಈ ಕಾರ್ಖಾನೆಗೆ ಬಂದು ಇದನ್ನೆಲ್ಲಾ ಮಾಡಿದರು. ಅವರು ಎನ್.ಜಿ.ಇ.ಎಫ್., ಗೂ ಹಾಜರಾಗಿದ್ದರು. ಒಬ್ಬ ಅಧಿಕಾರಿ ಕಾರ್ಖಾನೆಯ ನಷ್ಟವನ್ನು ತುಂಬಿ, ಬರುವ ಲಾಭದಲ್ಲಿ ಬೇರೆಯವರಿಗೂ ಸಾಲ ಕೊಡುವ ಮಟ್ಟಿಗೆ ಈ ಎಂ.ಪಿ.ಎಂ., ಕಾರ್ಖಾನೆ ಹೋಗಿತ್ತು. ಈ ನಷ್ಟಕ್ಕೆ ಹಳೆ ಯಂತ್ರೋಪಕರಣಗಳು ಹೇಗೆ ಕಾರಣವೋ, ಪ್ರೊಡಕ್ಷನ್ ಕಡೆಗೆ ಗಮನಹರಿಸದೇ ಇರುವುದು ಕಾರಣವೋ, ಇದರದ್ದೇ ಆದಂತಹ ಒಂದು ಭೂಮಿ ಇದ್ದು, ಇದರಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಇದನ್ನು ಯಾವತ್ತಾದರೂ ಅಧಿಕಾರಿಗಳು ಹೋಗಿ ನೋಡಿದ್ದಾರೆಯೇ? ಆ sugar cane production cost ಎಷ್ಟು ಜಾಸ್ತಿಯಾಗುತ್ತಿತ್ತು ಎಂದರೆ, ಹೊರಗಡೆಯಿಂದ ಖರೀದಿ ಮಾಡುವುದಕ್ಕೆ ಕಡಿಮೆಯಾಗುತ್ತಿತ್ತು. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಹೊಣೆಯಲ್ಲವೇ, ಇವರಿಂದ 1000 ಜನ ಕಾರ್ಮಿಕರು ಬೀದಿ ಪಾಲಾಗಿ ಹೋದರು. ಇವರು ಇನ್ನೊಂದು ಕಡೆ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದರೋ ಅಥವಾ ಬೇರೆ ಇನ್ನೆನ್ನೋ ಅಧಿಕಾರ ಸ್ಥಾನದಲ್ಲಿ ಉಳಿದರೋ ಗೊತ್ತಿಲ್ಲ. ಒಟ್ಟಾರೆಯಾಗಿ ಕಾರ್ಖಾನೆ ನಷ್ಟಕ್ಕೆ ಐ.ಎ.ಎಸ್., ಅಧಿಕಾರಿಗಳು ಹಳೆ ಯಂತ್ರದ ರೀತಿಯಲ್ಲಿಯೇ ಜಡ್ಡು ಹಿಡಿದ ಆಡಳಿತ ಕಾರಣವಾಗಿದೆ. ಈ ಕಾರಣಕ್ಕಾಗಿ ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೇ, ನಮ್ಮ ಕಾರ್ಖಾನೆ ಉಳಿಯುತ್ತಿತ್ತು. ಇದರ ಜೊತೆಗೆ ಸುಮಾರು 55 ರಿಂದ 56 ಸಾವಿರ ಎಕರೆ ಭೂಮಿಯನ್ನು ಕೊಟ್ಟಿದ್ದು, ಈ ಭೂಮಿ ಯಾರದು? ನನ್ನ ಹತ್ತಿರ ಇರುವ ಮಾಹಿತಿಯ ಪ್ರಕಾರ 56,528 ಎಕರೆ ಭೂಮಿ ಎಂದು ಇದೆ. ಇದು ಸರ್ಕಾರದ ಭೂಮಿ - forest and non-forest land. ಇಲ್ಲಿ pulp ಬೆಳೆಯುವುಕ್ಕೆ ಈ ಭೂಮಿಯನ್ನು ಕೊಟ್ಟಿರುವುದು. ನಮ್ಮ ದೇಶದ ಯಾವುದೇ ಕಾಗದ ಕಾರ್ಖಾನೆಗೆ pulp ಬೆಳೆಯುವುದಕ್ಕೆ ಇಷ್ಟು ದೊಡ್ಡ ಭೂಮಿ ಇಲ್ಲ. ಆಕೇಷಿಯಾ, ನೀಲಗಿರಿ, ಇತ್ಯಾದಿ ಬೆಳೆದು ಕೊಡಬೇಕಾಗಿತ್ತು. Pulp ತುಂಬಾ ಸುಲಭವಾಗಿ ಸಿಗಬೇಕಾಗಿತ್ತು. ಆ ಅರಣ್ಯ ಭೂಮಿಯನ್ನು ನಿರ್ವಹಣೆ ಮಾಡುವುದಕ್ಕೆ ಐ.ಎಫ್.ಎಸ್. ಅಧಿಕಾರಿಗಳು ಹಾಕಲಾಗಿತ್ತು. ಇದಕ್ಕೆ ಒಂದು Forest Division ಇತ್ತು. ಸಿ.ಸಿ.ಎಫ್.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಡರ್ ಅಧಿಕಾರಿಗಳಿದ್ದರು. ಈ ಅರಣ್ಯವನ್ನು ಇವರು ನಿರ್ವಹಣೆ ಮಾಡಿದ್ದಾರೆಯೇ. ಈ ಅಧಿಕಾರಿಗಳು ಅರಣ್ಯದೊಳಗೆ ಹೋಗಿದ್ದಾರೆಯೇ, 56 ಸಾವಿರ ಎಕರೆಯೊಳಗೆ pulp ಬೆಳೆಯಬೇಕಾದ ಜವಾಬ್ದಾರಿ ಈ ಐ.ಎಫ್.ಎಸ್., ಅಧಿಕಾರಿಗಳಿಗೆ ಇತ್ತು. ಇದನ್ನು ಲೂಟಿ ಹೊಡೆದರು. ಅಲ್ಲಿ pulp ಅನ್ನು ಬೆಳೆಯಲೇ ಇಲ್ಲ. ಅಲ್ಲಿ ಬೆಳೆದಿರುವುದನ್ನು ಹೊಲದಲ್ಲಿ ಕಟ್ ಮಾಡುತ್ತಾ ಹೋದರೆ, ಅದನ್ನು ಕಾಯುವವರು ಯಾರು ಇಲ್ಲ. ಇದನ್ನು ಲೂಟಿ ಹೊಡೆಯುವುದಕ್ಕೆ ಐ.ಎಫ್.ಎಸ್., ಅಧಿಕಾರಿಗಳು ಇದ್ದರು. ಇದು ಈ ಕಾರ್ಖಾನೆಯ ಕಥೆಯಾಗಿದೆ. ಕಾರ್ಮಿಕರು ಬೀದಿ ಪಾಲಾಗಿರುವ ಅಕ್ರೋಶದಲ್ಲಿ ನಾನು ಮಾತನಾಡುತ್ತಿದ್ದೇನೆ. ಆದರೆ ಇವತ್ತು ಅದು ಹಾಳಾಗಿದೆ. ಈ ಬಗ್ಗೆ ನಾನು ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಏಕೆ ಎದ್ದು ನಿಂತಿದ್ದೇನೆಂದರೆ, ಇದು ಇಷ್ಟು ವಿಚಾರಗಳು ಕೂಡ ಎಂ.ಪಿ.ಎಂ., ಕಾರ್ಖಾನೆಯನ್ನು ಉಳಿಸಿಕೊಂಡಿದ್ದಾರೆ. ಹೆಚ್ಚಿನ ನೌಕರರಿಗೆ settlement ಮಾಡಿ ಕಳುಹಿಸಲಾಗಿದೆ.

(ಮುಂದು)

(1040) 08.12.2020 7.30 ಎಸ್‌ಪಿಆರ್/ಎಂಡಿ

**ಶ್ರೀ ಆಯನೂರು ಮಂಜುನಾಥ್(ಮುಂದು):-**

ಕೆಲವರು ಮಾತ್ರ ತಾವು ಸ್ವಯಂ ನಿವೃತ್ತಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಉಳಿದುಕೊಂಡಿದ್ದಾರೆ. ಅವರ ಭವಿಷ್ಯವೇನೆಂದು ಗೊತ್ತಾಗುತ್ತಿಲ್ಲ. ಕೊನೆಯದಾಗಿ ನಾನು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಅಭಿನಂದಿಸುತ್ತಾ, ಧನ್ಯವಾದಗಳನ್ನು ತಿಳಿಸುತ್ತೇನೆ. ಏಕೆಂದರೆ ಈ ಹಿಂದೆ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಅರಣ್ಯ ಕಾವಲುಗಾರರ ಬಗ್ಗೆ ಗಮನವನ್ನು ಹರಿಸಿದರು. ಅವರಿಗೆ ಸಂಬಳವಿಲ್ಲ ಕೇವಲ daily wages ಮೇಲೆ ಕರ್ತವ್ಯ ನಿರ್ವಹಿಸುತ್ತಾರೆ. ಅದು ಖಾಯಂ ಕೆಲಸವಲ್ಲ. 56,000 ಎಕರೆ ಪ್ರದೇಶವನ್ನು ಕಾಯುವ ಅರಣ್ಯ ಕಾವಲುಗಾರರು ಹಗಲು ಮತ್ತು ರಾತ್ರಿ ಓಡಾಡುತ್ತಿದ್ದರು. ಪ್ರಾರಂಭದ ದಿನಗಳಲ್ಲಿ ಅವರಿಗೆ ಧರಿಸಲು ಶೂಸ್‌ಗಳಿರಲಿಲ್ಲ ಮತ್ತು ಯಾವುದೇ ರೀತಿಯ ರಕ್ಷಣೆಯೂ ಸಹ ಅವರಿಗೆ ಇರಲಿಲ್ಲ. ಅವರುಗಳು ತಿರಳನ್ನು ಕಾದು ಕಾರ್ಖಾನೆಗಳಿಗೆ ನೀಡಬೇಕಾಗಿತ್ತು. ಅಂತಹವರನ್ನು ನಿರ್ಲಕ್ಷ್ಯ ಮಾಡಿದ್ದರು. ಆ ಸಂದರ್ಭದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರ ಹತ್ತಿರ ಹೋಗಿ ಮಾತನಾಡಿದೆವು. ಆಗ ಅವರು ಅರಣ್ಯ ಕಾವಲುಗಾರರಿಗೆ ಡೈಲಿ ವೇಜಸ್‌ನ್ನು ನೀಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರು. ನಂತರದಲ್ಲಿ ಅವರುಗಳ ಜೀವನವು ಸ್ವಲ್ಪ ಮೇಲ್ಮಟ್ಟಕ್ಕೆ ಬಂದಿತು. ಅಂತಹ ಕಾರ್ಮಿಕರು ಇನ್ನೂ ಸಹ ಇದ್ದಾರೆ. ಈ ಕಾರ್ಖಾನೆಯನ್ನು ಖಾಸಗಿಯವರಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಸ್ತಾಂತರ ಮಾಡುವ ಮುನ್ನ... ಇವತ್ತಿನ ದಿವಸ ಅಲ್ಲಿ ಯಾವ ಪರಿಸ್ಥಿತಿ ಇದೆ ಎಂದರೆ, ಕಾರ್ಖಾನೆಯನ್ನು ಖಾಸಗೀಕರಣ ಮಾಡಬೇಡಿ ಎಂದು ಹೇಳಲು ಧೈರ್ಯ ಬರದೇ ಇರುವಷ್ಟು ಕಾರ್ಖಾನೆಯು ಕೆಟ್ಟು ಹೋಗಿದೆ. ಹಾಗಂತ ನಾನು ಕಾರ್ಖಾನೆಯನ್ನು ಖಾಸಗೀಕರಣ ಮಾಡುವವರ ಪರವಾಗಿದ್ದೇನೆ ಅಂತಲ್ಲ. ಸರ್ಕಾರವು ಕಾರ್ಖಾನೆಯನ್ನು ದುರಸ್ತಿಗೊಳಿಸಲೂ ಸಹ ಆಗದೇ ಇದ್ದ ಸಂದರ್ಭದಲ್ಲಿ ಈ ಹಿಂದೆ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಸಚಿವರಾಗಿದ್ದಾಗ ಸುಮಾರು 100 ಕೋಟಿ ರೂಪಾಯಿಗಳನ್ನು ಕಾರ್ಖಾನೆಗೆ ನೀಡಿದರು. ಅವರು ನೀಡಿರುವ ಹಣವು ಹಳೆಯ ಬಡ್ಡಿ ಮೊತ್ತಕ್ಕೆ ಸರಿಹೋಗುವುದಿಲ್ಲ. ಅದು ಬಿ.ಎಫ್.ಆರ್.ನಲ್ಲಿದೆ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಶ್ರೀ ಜಗದೀಶ್ ಶೆಟ್ಟರ್‌ರವರು ತಮ್ಮ ಅಧಿಕಾರವಧಿಯಲ್ಲಿ ಅರಣ್ಯ ಕಾವಲುಗಾರರ ರಕ್ಷಣೆಗೆ ಬಂದಿದ್ದರು. ಅದೃಷ್ಟವಶಾತ್ ಇವತ್ತಿನ ದಿವಸ ಅವರೇ ಕೈಗಾರಿಕಾ ಮಂತ್ರಿಗಳಾಗಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಾರ್ಖಾನೆಯ ಖಾಸಗೀಕರಣ ಮಾಡಬೇಕೆಂದು ಹೇಳುತ್ತಾರೋ ಅಥವಾ ಸರ್ಕಾರಿ ಸ್ವಾಮ್ಯದಲ್ಲಿ ನಡೆಸಬೇಕೆಂದು ಹೇಳುತ್ತಾರೋ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅವರು ಹಿರಿಯ ಸದಸ್ಯರಾಗಿದ್ದು, ಅವರಿಗೆ ಆ ವಿಷಯದ ಬಗ್ಗೆ ಉದ್ದ, ಆಳ, ಅಗಲ ಪೂರ್ತಿಯಾಗಿ ತಿಳಿದಿದೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗಿನ ಸಂದರ್ಭದಲ್ಲಿ ಕಾರ್ಮಿಕ ನಾಯಕನಾಗಿ ನಾನು ಅರಣ್ಯ ಕಾವಲುಗಾರರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಬಳಿ ಪ್ರಸ್ತಾಪಿಸಿದಾಗ ಒಂದಿಷ್ಟು ಪರಿಹಾರವನ್ನು ನೀಡಿದ್ದರು. ಅವರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರೆಲ್ಲರೂ ಈಗ ನಿವೃತ್ತರಾಗಿದ್ದಾರೆ, ಕೆಲವರು ಸ್ವಯಂ ನಿವೃತ್ತಿಯನ್ನೂ ಸಹ ಪಡೆದುಕೊಂಡಿದ್ದಾರೆ. ಅರಣ್ಯ ಕಾವಲುಗಾರರನ್ನು ಖಾಯಂ ಮಾಡಿದ ನಂತರದಲ್ಲಿ ಅರಣ್ಯವನ್ನು ಬೇರೆಯವರಿಗೆ ಹಸ್ತಾಂತರ ಮಾಡಿದರೆ ಒಳ್ಳೆಯದಾಗುತ್ತದೆ. ಹೇಗಿದ್ದರೂ ಅರಣ್ಯ ಪ್ರದೇಶವನ್ನು ಬಿಟ್ಟು ಕೊಡದೇ, ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟು, ಹಸ್ತಾಂತರ ಮಾಡುತ್ತೀರಿ. ನಂತರದಲ್ಲಿ ಬರುವ ಖಾಸಗಿ ಕಂಪೆನಿಯವರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅರಣ್ಯ ಕಾವಲುಗಾರರನ್ನು ಕೆಲಸದಿಂದ ತೆಗೆದು ಹಾಕುವ ಬದಲಿಗೆ, ಅವರಿಗೆ ಖಾಯಂ ಆಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಿ. ಅವರುಗಳು ಮೊದಲಿನಿಂದಲೂ ಅರಣ್ಯವನ್ನು ಕಾದಿದ್ದಾರೆ. ಹೀಗಾಗಿ ಅವರ ಬದುಕನ್ನು ಕಾಪಾಡಿ. ಹೇಗಿದ್ದರೂ ಕಾರ್ಖಾನೆಯು ಕೈಬಿಟ್ಟು ಹೋಗುತ್ತಿದೆ. ಸರ್ಕಾರವು 2,500 ಕೋಟಿ ರೂಪಾಯಿಗಳನ್ನು ವ್ಯಯಿಸಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವ ಸ್ಥಿತಿಯಲ್ಲಿಲ್ಲ. ಇಲ್ಲಿನ ಸಕ್ಕರೆ ಕಾರ್ಖಾನೆ ಹಾಗೂ ಮೈಸೂರು ಪೇಪರ್ ಮಿಲ್ಸ್ ಇವೆರಡೂ ನಷ್ಟದಲ್ಲಿವೆ ಹಾಗೂ ಒಂದಕ್ಕೊಂದು ಹೊಂದಿಕೊಂಡಿವೆ. ಇವೆರಡಕ್ಕೂ ಒಂದೇ ಖಾತೆಯಿದೆ. ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಿದರೆ ಸಂತೋಷವಿದೆ, ಇದಕ್ಕೆ ಯಾವುದೇ ತಕರಾರು ಇಲ್ಲ. ಒಂದು ವೇಳೆ ಮಾನ್ಯ ಕೈಗಾರಿಕಾ ಸಚಿವರು 2,500 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರೆ, ಅದನ್ನು ಸ್ವಾಗತಿಸಿ, ಅವರ ಪ್ರತಿಮೆಯನ್ನು ಸ್ಥಾಪಿಸುತ್ತೇವೆ. ಆದರೆ ಅರಣ್ಯ ಕಾವಲುಗಾರರ ರಕ್ಷಣೆ ...

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಎಂ.ಪಿ.ಎಂ. ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದಕ್ಕೆ ಅಥವಾ ಗುತ್ತಿಗೆಗೆ ನೀಡುವುದಕ್ಕೆ ನಮಗೆ ಸುತಾರಂ ಒಪ್ಪಿಗೆ ಇಲ್ಲ. ಇದು ಸರಿಯಾದ ನಿರ್ಣಯವೂ ಸಹ ಅಲ್ಲ. ಸಕ್ಕರೆ ಕಾರ್ಖಾನೆಯನ್ನು co-generation, distillery ಮಾಡಲು rejuvenate ಮಾಡಿ ಅದನ್ನು viable ಮಾಡಲಿಕ್ಕೆ there are so many ways and means. ಇದು ಆಗುವುದಿಲ್ಲವೆಂದು ಖಾಸಗಿಯವರಿಗೆ ...

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಈ ಹಿಂದೆ ಸಚಿವರಾಗಿದ್ದರು ಮತ್ತು ಶ್ರೀ ಆರ್.ವಿ.ದೇಶಪಾಂಡೆರವರು ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಸದರಿ ಕಾರ್ಖಾನೆಯ ಖಾಸಗೀಕರಣ ಕುರಿತಾದ ಪ್ರಕ್ರಿಯೆಗಳು ಪ್ರಾರಂಭವಾದವು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾರು ಅಧಿಕಾರದಲ್ಲಿ ಇದ್ದಾಗಲೇ ಆಗಲಿ...

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ವಿರೋಧ ಪಕ್ಷದ ನಾಯಕರು ಮಂತ್ರಿ ಮಂಡಲದಲ್ಲಿದ್ದು ಐ.ಟಿ. ಮತ್ತು ಬಿ.ಟಿ. ಇಲಾಖೆಯ ಮಂತ್ರಿಗಳಾಗಿದ್ದರು; ಆಗ ಶ್ರೀ ಆರ್.ವಿ.ದೇಶಪಾಂಡೆರವರು ಕೈಗಾರಿಕಾ ಇಲಾಖೆಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿಯೇ ಎಂ.ಪಿ.ಎಂ. ಕಾರ್ಖಾನೆಯ ಖಾಸಗೀಕರಣ ಕುರಿತಾದ ಪ್ರಕ್ರಿಯೆಗಳು ಪ್ರಾರಂಭವಾದವು. ಆಗ ನಾವುಗಳು ಬಂದು ನಿಮ್ಮ ಕೈ-ಕಾಲುಗಳನ್ನು ಹಿಡಿದುಕೊಂಡೆವು. ನಿಮ್ಮದೇ ತಪ್ಪು ಎಂದು ನಾವು ಹೇಳುತ್ತಿಲ್ಲ ಹಾಗೂ ನಿಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತಿಲ್ಲ. ಖಾಸಗೀಕರಣ ಪ್ರಕ್ರಿಯೆ ಆವಾಗಿನಿಂದ ನಡೆದುಕೊಂಡು ಬಂದಿತು. ಇದು ಎಲ್ಲಾ ಸರ್ಕಾರಗಳ ಅವಧಿಯಲ್ಲಿ ನಡೆಯಿತು. ನಾವು ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮತ್ತು ವಿರೋಧ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮಾತನಾಡುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದರಿ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು ಸಾಧ್ಯವಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅದನ್ನು ವಿರೋಧ ಪಕ್ಷದ ನಾಯಕರು ಸಚಿವರಾಗಿದ್ದ ಅವಧಿಯಲ್ಲಿ ಏಕೆ ಮಾಡಿಲ್ಲ. ಇದರಿಂದಾಗಿ ನಮ್ಮ ಕಾರ್ಖಾನೆಯ ನೌಕರರು ಬೀದಿಪಾಲಾಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಗಿನ ಸಂದರ್ಭದಲ್ಲಿ ಯಾರು ಕೈಗಾರಿಕಾ ಸಚಿವರಾಗಿದ್ದರು ಅದು ಅವರಿಗೆ ಸಂಬಂಧಪಟ್ಟಿದ್ದಾಗಿದೆ. ಒಬ್ಬ ಸಚಿವರಿಗೆ ಎಷ್ಟೋ ಖಾತೆಗಳಿರುತ್ತವೆ. ಆದರೆ, ಅದು ಯಾರಿಗೆ ಬರುತ್ತದೆಯೋ ಅವರನ್ನು ಜವಾಬ್ದಾರರನ್ನಾಗಿ ಮಾಡಿ. ಕಾರ್ಖಾನೆಯ ಖಾಸಗೀಕರಣ ಅಥವಾ ಗುತ್ತಿಗೆ ಮೇಲೆ ನೀಡುವ ಪ್ರಕ್ರಿಯೆಯು ಒಳ್ಳೆಯದಲ್ಲ ಹಾಗೂ ಇದು ಕೆಟ್ಟ ಸಂಪ್ರದಾಯವಾಗಿದೆ. ಇದರಲ್ಲಿಯೇ ದೊಡ್ಡ ವ್ಯವಹಾರವು ನಡೆಯುತ್ತದೆ. ಇದರ ಬಗ್ಗೆ ನಮಗೆ ಯಾವುದೇ ಮರ್ಜಿ, ಬಿಡೆ ಅಥವಾ ಮುಲಾಜು ಇಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕಾರ್ಖಾನೆಯ ಖಾಸಗೀಕರಣ ಮಾಡಬಾರದು ಎನ್ನುವುದಕ್ಕೆ ನನ್ನ ಬೆಂಬಲವಿದೆ. **(ಗೊಂದಲ)** ತಾವು ಬಿತ್ತಿದ ಕಾರ್ಖಾನೆಯ ಖಾಸಗೀಕರಣದ ಬೀಜ ಈಗ ಮರವಾಗಿದೆ. ನಾನು ವಿರೋಧ ಪಕ್ಷದ ನಾಯಕರ ವಿರುದ್ಧ ಆಪಾದನೆಯನ್ನು ಮಾಡುತ್ತಿಲ್ಲ. ಅಂದಿನ ದಿನ ಏಕೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಭದ್ರಾವತಿಯಲ್ಲಿ ನಮ್ಮ ಜಿಲ್ಲೆಯ ಕಾರ್ಮಿಕರು ಬೀದಿ ಪಾಲಾಗಿ ಹೋದರಲ್ಲ. ಅವರು ಖಾಸಗೀಕರಣದ ಬೀಜ ಹಾಕಿ ಏಕೆ ಹೋದರು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, We will fight against this. ಎಂತಹುದೇ ಪರಿಸ್ಥಿತಿಯಲ್ಲಿ ಎಂ.ಪಿ.ಎಂ. ಕಾರ್ಖಾನೆಯ ಖಾಸಗೀಕರಣ ಮಾಡುವುದು ಅಥವಾ ಗುತ್ತಿಗೆಯ ಮೇಲೆ ನೀಡುವುದಕ್ಕೆ ನಾವು ಸುತಾರಾಂ ಒಪ್ಪುವುದಿಲ್ಲ. We will take it to the logical end.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರವು ಕರೆದಿರುವ ಟೆಂಡರ್‌ನ ನಿಯಮ ಮತ್ತು ಷರತ್ತುಗಳೇನು? ಬಹಳ ಜಮೀನು ಇರುವುದರಿಂದ ಸರ್ಕಾರವು ಕಾರ್ಖಾನೆಯನ್ನು ಉಳಿಸಿಕೊಂಡು, ಇದರಲ್ಲಿ ಭಾಗಶಃ ಜಮೀನನ್ನು ಮಾಡಿ, re-wind ಮಾಡಿ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಲು ಸಾಧ್ಯವೇ ಇಲ್ಲ ಎನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತಿಮ ತೀರ್ಮಾನಕ್ಕೆ ಬಂದಿದೆಯೇ ಅಥವಾ ಇನ್ನೊಂದು ಬಾರಿ ಇದನ್ನು ಪುನರ್ ಪರಿಶೀಲನೆ ಮಾಡಿ ಕಾರ್ಖಾನೆಯನ್ನು re-wind ಮಾಡುವ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸಚಿವರು ಪ್ರಯತ್ನಗಳನ್ನು ಮಾಡುತ್ತಾರೆ ಎಂದು ನಾನು ಹೇಳುತ್ತೇನೆ. ದಾಂಡೇಲಿ ಪೇಪರ್ ಮಿಲ್ ಇದು ಲಾಭದಲ್ಲಿ ನಡೆಯುತ್ತಿದೆ. ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಹೇಳಿದಂತೆ, ಎಲ್ಲೆಲ್ಲಿ ಸಹಕಾರಿ ಸಂಸ್ಥೆಗಳಿವೆ, ಅಲ್ಲಿ ಎಲ್ಲವನ್ನೂ ಲೂಟಿ ಮಾಡಲಾಗಿದೆ. ಹಿಂದಿನ ಕೆಲವು ಮಹಾರಾಜರು, ಮಹನೀಯರು ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಇವರುಗಳು ಕಟ್ಟಿದ ಕಾರ್ಖಾನೆಗಳನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರವು ಯಾವುದೇ ರೀತಿಯಾದ via media ದಾರಿ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮೇಲ್ನೋಟಕ್ಕೆ ನೋಡಿದಾಗ, ಕಾರ್ಖಾನೆಗೆ ಬಹಳ ದೊಡ್ಡ ಮಟ್ಟದ ಆಸ್ತಿ ಇದ್ದು, ಅದರಲ್ಲಿ ಅವ್ಯವಹಾರ ನಡೆಯುತ್ತದೆ ಎಂದು ಅಭಿಪ್ರಾಯವಿರುತ್ತದೆ. ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸುವ ಬದಲು *PPP (Public–Private Partnership)* ಅಡಿ ಪುನರಾಂಭಿಸಿ ಎಂದು ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಖಾಸಗಿ ಸಹಯೋಗದೊಂದಿಗೆ ಸರ್ಕಾರವು ಬಂಡವಾಳವನ್ನು ಹೂಡಲಿ. ಇದರಿಂದ ಸರ್ಕಾರಕ್ಕೆ ಅನುಕೂಲವಾಗಿ, ಸರ್ಕಾರದ ಆಸ್ತಿಯನ್ನು ಉಳಿಸಬಹುದು. ಕಾರ್ಖಾನೆಯು ಸರ್ಕಾರದ ನಿಯಂತ್ರಣದಲ್ಲಿದ್ದರೆ, ರಾಜ್ಯದವರಿಗೆ ಉದ್ಯೋಗ ದೊರೆಯಬಹುದು. ಒಂದು ವೇಳೆ ಖಾಸಗಿಯವರಿಗೆ ವಹಿಸಿದರೆ, ಅವರು ಉತ್ತರ ಭಾರತ ದೇಶದ ಭಾಗದಿಂದ ಕೆಲಸದವರನ್ನು ಕರೆದುಕೊಂಡು ಬರುತ್ತಾರೆ. ಒಂದು ವೇಳೆ ನಮ್ಮ ಸ್ಥಳೀಯರಿಗೆ ಏಕೆ ಉದ್ಯೋಗವನ್ನು ನೀಡುವುದಿಲ್ಲವೆಂದು ಕೇಳಿದರೆ, ಇವರುಗಳು ಬಾವುಟ ಹಿಡಿದುಕೊಂಡು ಮುಷ್ಕರ ಹೂಡುತ್ತಾರೆಂದು ತಿಳಿಸುತ್ತಾರೆ. *PPP* ಸಹಯೋಗದಲ್ಲಿ ಕಾರ್ಖಾನೆಯನ್ನು ಪುನರಾರಂಭ ಮಾಡಿದರೆ, ಸರ್ಕಾರದ ಆಸ್ತಿಯೂ ಉಳಿಯುತ್ತದೆ, greenery ಉಳಿಯುತ್ತದೆ. ಮುಂದುವರೆದು, ನಮ್ಮ ರಾಜ್ಯದ ಯುವಕರಿಗೆ ಉದ್ಯೋಗ ದೊರೆಯುತ್ತದೆ ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹೀಗಾಗಿ ಸರ್ಕಾರವು ಈ ಪ್ರಕ್ರಿಯೆಯನ್ನು ಹಿಂಪಡೆಯಲಿ. ಏಕೆಂದರೆ, ಎಂ.ಪಿ.ಎಂ. ಕಾರ್ಖಾನೆಯನ್ನು ಹೊರತುಪಡಿಸಿದರೆ, ರಾಜ್ಯದ ಇನ್ನಾವುದೇ ಕಾರ್ಖಾನೆಗೆ ಇಷ್ಟು ದೊಡ್ಡ ಪ್ರಮಾಣದ ಆಸ್ತಿ ಇಲ್ಲ. ಈ ವಿಚಾರದಲ್ಲಿ ಸಚಿವರು ಸ್ಪಂದಿಸಬೇಕೆಂದು ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರು ಕಾಗದ ಕಾರ್ಖಾನೆ ರಾಜ್ಯದ ಬಿಳಿ ಆನೆಯಾಗಿ ಪರಿವರ್ತನೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ಈ ಹಿಂದೆ ಶ್ರೀ ಎಸ್.ಎಂ.ಕೃಷ್ಣ ರವರ ನೇತೃತ್ವದ ಸರ್ಕಾರವು ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ, ಶ್ರೀ ಕಾಗೋಡು ತಿಮ್ಮಪ್ಪನವರ ನೇತೃತ್ವದಲ್ಲಿ ನಾವೇ ಹೋಗಿ, ಸದರಿ ಕಾರ್ಖಾನೆಯ ಖಾಸಗೀಕರಣ ಮಾಡಬಾರದು ಎಂದು ಅವತ್ತಿನ ದಿವಸ ಹೇಳಿದ್ದು ಇವತ್ತಿನ ದಿವಸ ತಪ್ಪಾಗಿದೆ ಎಂದು ನಮಗನ್ನಿಸುತ್ತಿದೆ. ಅದೇ ರೀತಿಯಾಗಿ ಪುನಃ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರದ ಅವಧಿಯಲ್ಲಿಯೂ ಸಹ ನಾವು ಕಾರ್ಖಾನೆಯ ಖಾಸಗೀಕರಣ ಮಾಡಬಾರದು ಎಂದು ಹೇಳಿದ್ದೆವು. ಇವತ್ತಿನ ದಿವಸ ಅದೂ ಸಹ ತಪ್ಪಾಗಿದೆ ಎಂದು ನಮಗನ್ನಿಸುತ್ತಿದೆ. ಇದಕ್ಕೆ ಕಾರಣವೇನೆಂದರೆ, ಈ ಹಿಂದೆ ಸದರಿ ಕಾರ್ಖಾನೆಯು ಬಹಳ ಚೆನ್ನಾಗಿ ನಡೆಯುತ್ತಿತ್ತು.

**ಸಭಾಪತಿಯವರು:–** ಮಾನ್ಯ ಸದಸ್ಯರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರವು 40,000 ಹೆಕ್ಟೇರ್ ಭೂಮಿಯನ್ನು ಅಂದರೆ 'ಸಿ' ಮತ್ತು 'ಡಿ' ಜಮೀನನ್ನು captive plantation ಮಾಡಿಕೊಂಡು, ಅದರಿಂದ ಬಂದ ಎಲ್ಲಾ ರೀತಿಯ ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಒಳ್ಳೆಯ ಕಾರ್ಖಾನೆಯಾಗಲಿ ಎನ್ನುವ ಸದುದ್ದೇಶದಿಂದ ಒಂದು ಲಕ್ಷ ಎಕರೆ ಭೂಮಿಯನ್ನು 40 ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತು. ಸದರಿ ಗುತ್ತಿಗೆ ಅವಧಿಯು ಪೂರ್ಣಗೊಂಡಿದ್ದು, ಇವತ್ತಿನ ದಿವಸ ಅದು ಅರಣ್ಯ ಭೂಮಿಯಾಗಿದೆ ಹೊರತು ಎಂ.ಪಿ.ಎಂ. ಕಾರ್ಖಾನೆಯದ್ದಲ್ಲ. ಒಂದು ವೇಳೆ, ಇವತ್ತಿನ ದಿವಸ ಅರಣ್ಯ ಭೂಮಿಯನ್ನು ಯಾರಿಗಾದರೂ ಪುನಃ ನೀಡಬೇಕೆಂದರೆ, ಹಳೆಯ ಗುತ್ತಿಗೆಯನ್ನು ನವೀಕರಿಸಬೇಕು. ಗುತ್ತಿಗೆಯನ್ನು ನವೀಕರಿಸದಿದ್ದರೆ, ಆ ಭೂಮಿಯಲ್ಲಿನ ಮರಗಳು ಹಾಗೂ ಕಚ್ಚಾ ವಸ್ತುಗಳ ಕಳ್ಳತನವಾಗುತ್ತದೆ ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಆದ್ದರಿಂದ ತಕ್ಷಣವೇ ಮರಗಳನ್ನು ಕಡಿತ ಮಾಡುವ ಕೆಲಸಗಳನ್ನು ಮಾಡಬೇಕು. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕಬ್ಬನ್ನು ಅರೆಯುವ ಕೆಲಸವಾಗುತ್ತದೆ ಹಾಗೂ ಅದರಿಂದ ಬರುವ Bagasse ನ್ನು ಪೇಪರ್ ಕಾರ್ಖಾನೆಗೆ ಕಚ್ಚಾವಸ್ತುವನ್ನಾಗಿ ಬಳಸಲಿ ಎನ್ನುವ ಉದ್ದೇಶವನ್ನಿಟ್ಟುಕೊಂಡು ಸರ್ಕಾರವು ಆ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಿತ್ತು ಮತ್ತು co-generationನ್ನೂ ಸಹ ಮಾಡಲಾಗಿತ್ತು. ಬಹಳ ಸುಸ್ಥಿತಿಯಲ್ಲಿ ನಡೆಯುತ್ತಿದ್ದ ಸದರಿ ಕಾರ್ಖಾನೆಗೆ ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷದ ಸರ್ಕಾರಗಳು ಬಹಳಷ್ಟು ಪ್ರಮಾಣದಲ್ಲಿ ಹಣವನ್ನು ನೀಡಿದ್ದಾರೆ. ಹೀಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದಿಂದ ಬಂದ ಹಣವು ಅಲ್ಲಿನ ಸಿಬ್ಬಂದಿಗಳ ವೇತನ ಪಾವತಿ ಹಾಗೂ ಇನ್ನಿತರೆಗಾಗಿ ವಿನಿಯೋಗಿಸಲಾಯಿತು. ಯಾವುದೇ ಕಾರ್ಖಾನೆಯ establishment ಶೇಕಡಾ 8 ರಷ್ಟು ಇರಬೇಕು. ಆದರೆ, ಅಲ್ಲಿನ ಶೇಕಡಾ 30 ರಷ್ಟು ಸಿಬ್ಬಂದಿಗಳಿದ್ದರು.

**ಸಭಾಪತಿಯವರು:–** ಇದು ಪ್ರಶ್ನೋತ್ತರ ವೇಳೆಯಾಗಿದೆ.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಹಾಲಿ ಇರುವ 40,000 ಹೆಕ್ಟೇರ್ ಭೂಮಿಯ ಗುತ್ತಿಗೆಯನ್ನು ನವೀಕರಿಸಿ. ಅಲ್ಲಿನ ಕಚ್ಚಾ ವಸ್ತುಗಳನ್ನು ಕತ್ತರಿಸಿ, ಅವುಗಳನ್ನು ಸರ್ಕಾರ ಮಾರಾಟ ಮಾಡಬೇಕು ಅಥವಾ ಕಾರ್ಖಾನೆಗೆ ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯವು ಬಹಳ ಮಹತ್ವದ ವಿಷಯವಾಗಿರುವುದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಬೇಕೆಂದು ನಾನು ಕೋರುತ್ತೇನೆ.

**ಸಭಾಪತಿಯವರು:–** ಇದರ ಬಗ್ಗೆ ಪತ್ರವನ್ನು ನೀಡಿದ್ದಲ್ಲಿ ನಾಳೆಯ ದಿನವೇ ಚರ್ಚೆಗೆ ತೆಗೆದುಕೊಳ್ಳಲಾಗುವುದು.

**Sri.S.R.PATIL:-** With regard to this we will give a letter.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1041)08-12-2020(07-40)ಬಿಎಸ್‌ಡಿ–ಎಂಡಿ

**ಪ್ರಶ್ನೆ ಸಂಖ್ಯೆ: 118**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನಃ–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳ ಶೇಖರಣೆಗೆ ಇರುವ ಒಟ್ಟು ಮಾಹಿತಿ ಮತ್ತು ಶೀಥಲಿಕರಣ ಘಟಕಗಳ ಬಗ್ಗೆ ಮಾಹಿತಿಯನ್ನು ಕೇಳಿದ್ದೆನು. ಸಂಪೂರ್ಣವಾದ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ನನ್ನ ಮುಂದುವರೆದ ಪ್ರಶ್ನೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿರುವ ಒಟ್ಟು Cold Storage ವಿಚಾರವಾಗಿ ಕೇಳಿದ್ದು, ರಾಜ್ಯದ ಮಾಹಿತಿಯಾಗಿ ಅವರು ಉತ್ತರದಲ್ಲಿ ಎಲ್ಲಾ ಜಿಲ್ಲೆಗಳ ಮಾಹಿತಿಯನ್ನು ಕೊಟ್ಟಿದ್ದಾರೆ. ಬೆಳಗಾವಿ ಜಿಲ್ಲೆಯು ಅತೀ ಹೆಚ್ಚು ಕಾಯಿಪಲ್ಯೆ ಬೆಳೆಯುವ ಜಿಲ್ಲೆಯಾಗಿರುವುದರಿಂದ ಸುಮಾರು 1 ಸಾವಿರ ಹೆಕ್ಟೇರ್‌ನಲ್ಲಿ vegetables ಅನ್ನು ಬೆಳೆಯಲಾಗುತ್ತದೆ. ಕರ್ನಾಟಕದ ಕಾಶ್ಮೀರ ಎಂದು ಕರೆಯುವ ಬೆಳಗಾವಿಯಲ್ಲಿ ಬೆಳೆಯುವ vegetables ಗೋವಾ ಮತ್ತು ಮಹಾರಾಷ್ಟ್ರಕ್ಕೆ ರಫ್ತು ಆಗುತ್ತದೆ. ಆದರೆ ಅಲ್ಲಿರುವ Cold Storage ವ್ಯವಸ್ಥೆ ಬಹಳ ಕಡಿಮೆ ಇದ್ದು, ಕೇವಲ 3 Cold Storage ವ್ಯವಸ್ಥೆ ಇದೆ. ಅದರಲ್ಲಿ ಒಂದು Cold Storage ಮಾತ್ರ ನಡೆಯುತ್ತಿದ್ದು, ಉಳಿದ ಎರಡು Cold Storage ಗಳು ಬಂದ್ ಆಗಿವೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸುವುದೇನೆಂದರೆ, ಅಲ್ಲಿರುವ Cold Storage ಗಳನ್ನು ಹೆಚ್ಚು ಮಾಡಿದರೆ ಅಲ್ಲಿನ ರೈತರು ಬೆಳೆಯುವ ಕಾಯಿಪಲ್ಯೆಗಳನ್ನು ಬೇರೆ ರಾಜ್ಯ ಮತ್ತು ಬೇರೆ ದೇಶಗಳಿಗೆ ರಫ್ತು ಮಾಡುವ ಅವಕಾಶ ಹೆಚ್ಚಾಗುತ್ತದೆ. ಆದ್ದರಿಂದ Cold Storage ಗಳನ್ನು ಹೆಚ್ಚು ಮಾಡಬೇಕು ಹಾಗೂ ಕೊಟ್ಟಿರುವ ಅನುದಾನದ ವಿಚಾರವಾಗಿ ಗಮನಿಸಿದಾಗ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಬೆಳಗಾಂ ಜಿಲ್ಲೆಗೆ ಕೊಟ್ಟಿರುವ ಅನುದಾನ ಬಹಳ ಕಡಿಮೆ ಇದೆ. ಆ ಅನುದಾನವನ್ನು ಹೆಚ್ಚು ಮಾಡಿ, Cold Storage ಘಟಕಗಳನ್ನು ಹೆಚ್ಚು ಮಾಡಬೇಕೆಂದು ಮಾನ್ಯ ಸಚಿವರಿಗೆ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ರೈತರು ಬೆಳೆಯುವ ತೋಟಗಾರಿಕೆ ಬೆಳೆಗಳನ್ನು ಸಂರಕ್ಷಣೆ ಮಾಡಲು ಶೀಥಲೀಕರಣ ಘಟಕಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದು, ನಮ್ಮಲ್ಲಿ ಒಟ್ಟು 147 ಶೀಥಲೀಕರಣ ಘಟಕಗಳು ಇವೆ. ಅದರಲ್ಲಿ 11 ಮಾತ್ರ ಸರ್ಕಾರಿ ಘಟಕಗಳಾಗಿದ್ದು, ಸುಮಾರು 136

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟಕಗಳನ್ನು ಖಾಸಗಿಯವರು ನಡೆಸುತ್ತಿದ್ದಾರೆ. ಮಾನ್ಯ ಸದಸ್ಯರು ಬೆಳಗಾವಿ ಜಿಲ್ಲೆಯಲ್ಲಿ ಶೀಥಲೀಕರಣ ಘಟಕಗಳನ್ನು ಹೆಚ್ಚು ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಸ್ವಾಭಾವಿಕವಾಗಿ 147 ಘಟಕಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು 25 ಘಟಕಗಳಿವೆ. ಹಾವೇರಿ ಜಿಲ್ಲೆಯಲ್ಲಿ 24 ಹಾಗೂ ಬೆಳಗಾವಿ ಜಿಲ್ಲೆಯಲ್ಲಿ 3 ಘಟಕಗಳು ಎಂದು ಮಾನ್ಯ ಸದಸ್ಯರು ಹೇಳಿದ್ದು, ನಮ್ಮ ಅಂಕಿ ಅಂಶಗಳ ಪ್ರಕಾರ 6 ಘಟಕಗಳಿವೆ. ಕೆಲವು ಪ್ರಸ್ತಾಪನೆಯಲ್ಲಿವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನಃ–** 6 ಘಟಕಗಳು ಇದ್ದರೂ ಅವು ನಡೆಯುತ್ತಿಲ್ಲ, ಒಂದೇ ಒಂದು Cold Storage working ಇದೆ. All other Cold Storages are defunct. They are not working.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ 4015 ಮೆಟ್ರಿಕ್ ಟನ್ ಸಂಗ್ರಹಿಸಲು ಶೀಥಲೀಕರಣ ವ್ಯವಸ್ಥೆ ಇದೆ. ವಿಜಯಪುರದಲ್ಲಿ 33036 ಮೆಟ್ರಿಕ್ ಟನ್‌ಗಳಿಗೆ ಅವಕಾಶ ಇದ್ದು, ಈ ಅಂತರವನ್ನು ಸರಿದೂಗಿಸಬೇಕು ಮತ್ತು ಹೆಚ್ಚು ಮಾಡಬೇಕು ಎಂದು ಹೇಳಿದ್ದಾರೆ. ಈ ಸಾಲಿನಲ್ಲಿ *RIDF (Rural Infrastructure Development Fund)* ಯೋಜನೆಯಡಿ ಸುಮಾರು ರೂ.41,93 ಕೋಟಿಗಳ ಅನುದಾನದಲ್ಲಿ ಶೀಥಲೀಕರಣವನ್ನು ನಿರ್ಮಿಸುವಂತಹ ಯೋಜನೆಗಳನ್ನು ಹಾಕಿಕೊಂಡಿದ್ದು, ಬೆಳಗಾವಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಯೋಜನೆಯನ್ನು ರೂಪಿಸುತ್ತೇವೆ. ಈ ಕೊರತೆಯನ್ನು ಸರಿದೂಗಿಸುತ್ತೇವೆ.

**ಸಭಾಪತಿಯವರುಃ–** ಮಾನ್ಯ ತಿಪ್ಪೇಸ್ವಾಮಿಯವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 138**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಪ್ರತಿ ಸದನದಲ್ಲಿ ಈ ಪ್ರಶ್ನೆಯನ್ನು ಪ್ರಸ್ತಾಪಿಸುತ್ತಿದ್ದೇನೆ. ಏಕೆಂದರೆ ಮಡಿಕೇರಿ ನಗರದಲ್ಲಿ ಕಸ ವಿಲೇವಾರಿ ವಿಚಾರದಲ್ಲಿ ತಾಂತ್ರಿಕ ಸಲಹೆ ಎಂದುಕೊಂಡು ಯಾವುದೋ ಒಂದು Agency ಯನ್ನು ನಿಯೋಜನೆ ಮಾಡಿಕೊಂಡು, ಪ್ರಸ್ತುತ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಸ್ಯಾನಿಟರಿ ನೆಲಭರ್ತಿ ಜಾಗವು ಎತ್ತರದ ಪ್ರದೇಶದಲ್ಲಿರುತ್ತದೆ. ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ರೀತ್ಯಾ ಸೂಕ್ತವಿಲ್ಲದಿರುವುದರಿಂದ ಪರ್ಯಾಯ ಜಾಗ ಗುರುತಿಸಿ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು ತಿಳಿಸಲಾಗಿರುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಬಹುಶಃ ಈ place ಸುಬ್ರಮಣ್ಯನಗರದ ಮಧ್ಯದಲ್ಲಿದ್ದು, ಸಾಧಾರಣವಾಗಿ ಜನವರಿಯಿಂದ ಜೂನ್ ತಿಂಗಳವರೆಗೆ ಅಲ್ಲಿನ ಮನೆಗಳಲ್ಲಿ ಬಾಗಿಲು ತೆಗೆಯುವ ಪರಿಸ್ಥಿತಿ ಇರುವುದಿಲ್ಲ. ಏಕೆಂದರೆ ಅಷ್ಟು ಕೆಟ್ಟ ವಾಸನೆ ಮತ್ತು ಹುಳುಗಳ ಹಾವಳಿ ಇರುತ್ತದೆ. ಹಾಗಾಗಿ ನಗರ ಸಭೆಗೆ ಜಾಗವನ್ನು ಗುರುತು ಮಾಡಲು ಹೇಳಿದ್ದಾರೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೂ ತರುತ್ತಿದ್ದೇನೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಈ ಕೆಲಸ ಆಗಬೇಕು. ಬಹುಶಃ ಕಳೆದ ಬಾರಿ ಪೌರಾಡಳಿತ ಸಚಿವರು ಜಾಗವನ್ನು ಪರಿಶೀಲನೆ ಮಾಡಿದ್ದಾರೆ. ನಗರ ಸಭೆಯವರು ಆದಷ್ಟು ಬೇಗ ಸ್ಥಳವನ್ನು ಗುರುತು ಮಾಡಿ ಸ್ಥಳ ಬದಲಾವಣೆ ಮಾಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದು, ಮಡಿಕೇರಿ ನಗರದಲ್ಲಿ ಪ್ರತಿ ದಿನ ಸುಮಾರು 23 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಅಲ್ಲಿ 8,969 ಮನೆಗಳಿದ್ದು, ಪ್ರತಿ ವಾರ 5 Tractor ಗಳ ಮೂಲಕ ಮತ್ತು Auto Tipper ಗಳ ಮೂಲಕ ಕಸವನ್ನು ಸಂಗ್ರಹಣೆ ಮಾಡಲಾಗುತ್ತಿದೆ. ಆದರೆ ಹಿಂದೆ ಮಾಡಿರುವ ಘಟಕ ಗುಡ್ಡದ ಮೇಲಿದೆ ಎಂಬ ದೂರುಗಳಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಪೌರಾಡಳಿತ ಸಚಿವರು ದಿನಾಂಕ 29–11–2020 ರಂದು ಸ್ಥಳ ತನಿಖೆ ಮಾಡಿದ್ದಾರೆ. ಮಡಿಕೇರಿ ನಗರ ಸಭೆಗೆ ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡಲು ಕಳೆದ 3 ವರ್ಷಗಳಿಂದ ರೂ.231 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತ್ಯಾಜ್ಯ ವಿಲೇವಾರಿ ಸಂಗ್ರಹಣೆ ಮತ್ತು ಸಂಸ್ಕರಣೆ ಮಾಡಲು ರೂ.561 ಲಕ್ಷಗಳ ಯೋಜನೆಗೆ ಸರ್ಕಾರ ಅನುಮತಿ ನೀಡಿದೆ. ಸ್ವಲ್ಪಮಟ್ಟಿಗೆ ಮಾನ್ಯ ಸದಸ್ಯರ ಉಲ್ಲೇಖದಂತೆ ಅಲ್ಲಿ ಸ್ಥಳದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆ ಇರುವುದರಿಂದ ಹಾಗೂ ಗುಡ್ಡದ ಮೇಲೆ ತ್ಯಾಜ್ಯ ಘಟಕವನ್ನು ಮಾಡಿದ್ದರಿಂದ ಅದರಿಂದ ಬರುವ ಕೊಳಚೆಗಳಿಂದ ಮತ್ತಷ್ಟು ಸಮಸ್ಯೆಗಳಾಗಿದ್ದರಿಂದ, ಹೊಸ ಪ್ರದೇಶವನ್ನು ಸರ್ವೆ ಮಾಡಲು ಕಂದಾಯ ಇಲಾಖೆಯವರೊಡನೆ ಚರ್ಚೆ ಮಾಡುತ್ತಿದ್ದೇವೆ. ನಗರದಲ್ಲಿ ಸೂಕ್ತ ಪ್ರದೇಶವನ್ನು ಗುರುತಿಸಿ, ಪ್ರಸ್ತಾವನೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ನಗರ ಸಭೆಗೆ ಸೂಚನೆ ಕೊಡಲಾಗಿದೆ. ನಗರ ಸಭೆ ಬದಲಿ ಸ್ಥಳವನ್ನು ಗುರುತಿಸುವ ಹಂತದಲ್ಲಿದೆ. ಬದಲೀ ಸ್ಥಳವನ್ನು ಗುರುತಿಸಿದ ನಂತರ ಪರಿಪೂರ್ಣವಾಗಿ, ವೈಜ್ಞಾನಿಕವಾಗಿ ತ್ಯಾಜ್ಯ ಘಟಕವನ್ನು ನಿರ್ಮಿಸಲು ಬೇಕಾದ ಅನುದಾನವನ್ನು ಸರ್ಕಾರ ಕೊಡುತ್ತದೆ. ಆ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೇವೆ. ಮಾನ್ಯ ಸಚಿವರು ಹಾಗೂ ಅಧಿಕಾರಿಗಳು ಸ್ಥಳಕ್ಕೆ ಹೋಗಿದ್ದಾರೆ. ಮತ್ತೊಮ್ಮೆ ಪರಿಶೀಲನೆ ಮಾಡಿ, ತ್ಯಾಜ್ಯ ಘಟಕವನ್ನು ಪುನರ್‌ನಿರ್ಮಿಸುವ ಯೋಜನೆ ರೂಪಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 128**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಒಳ್ಳೆಯ ಉತ್ತರವನ್ನು ಮಾನ್ಯ ಸಚಿವರು ಒದಗಿಸಿದ್ದು, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನಾನು ನೇರವಾಗಿ ಮೂರು ಉಪ ಪ್ರಶ್ನೆಗಳನ್ನು ಕೇಳುತ್ತೇನೆ. ಪೌರ ಕಾರ್ಮಿಕರಲ್ಲಿ 2468 ಖಾಯಂ ಪೌರ ಕಾರ್ಮಿಕರು 10 ಮಹಾನಗರ ಪಾಲಿಕೆಗಳಲ್ಲಿ, 4849 ಗುತ್ತಿಗೆ ಪೌರ ಕಾರ್ಮಿಕರು ಇದ್ದಾರೆ. ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕನಾಗಿದ್ದಾಗ ಇದೇ ಬೆಂಗಳೂರು ಪುರಭವನದಲ್ಲಿ ನಡೆದ ಸಮ್ಮೇಳನದಲ್ಲಿ " ನಾನು ಮುಖ್ಯಮಂತ್ರಿಯಾದರೆ 24 ಗಂಟೆಯೊಳಗೆ ಎಲ್ಲಾ ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂ ಮಾಡುತ್ತೇನೆ" ಎನ್ನುವ ಹೇಳಿಕೆ ಕೊಟ್ಟಿದ್ದರು ಜೊತೆಗೆ ಹಿಂದಿನ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದ ಸಚಿವರ ಸಂಪುಟದಲ್ಲಿ ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂ ಮಾಡಲು ತೀರ್ಮಾನ ತೆಗೆದುಕೊಂಡಿದ್ದು, ಇದುವರೆಗೂ ಕಾರ್ಯಗತವಾಗಿಲ್ಲ. ಯಾವ ಸಮಯದಲ್ಲಿ ಮಾಡುತ್ತಾರೆ ಎನ್ನುವುದು ಒಂದು ಪ್ರಶ್ನೆಯಾಗಿದೆ.

ಇನ್ನು ಎರಡನೆಯದಾಗಿ ಪೌರ ಕಾರ್ಮಿಕರಿಗೆ ಗೃಹ ಭಾಗ್ಯ ಎಂದು 2014–15ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯಲ್ಲಿ ಒಂದು ಯೋಜನೆಯನ್ನು ತಂದಿದ್ದು, ಆ ಯೋಜನೆಯಲ್ಲಿ ಯಾವ್ಯಾವ ನಗರಪಾಲಿಕೆಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ ಎಂಬ ಮಾಹಿತಿ ನೀಡಬೇಕು.

ಇನ್ನು ಮೂರನೆಯದಾಗಿ ಪೌರ ಕಾರ್ಮಿಕರ ಮಕ್ಕಳ ಶಿಕ್ಷಣದ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದು, ಉತ್ತರದಲ್ಲಿ Medical and Engineering course ಓದುವವರೆಲ್ಲರಿಗೂ Computer, Laptop ಗಳನ್ನು ನೀಡುವ ಬಗ್ಗೆ ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆದರೂ ಪೌರ ಕಾರ್ಮಿಕರ ಮಕ್ಕಳು Medical and Engineering course ಓದಲು ಆಗುತ್ತಿಲ್ಲ. ಕೇವಲ 1% ಅಲ್ಲ, 0.001% ಕೂಡ ಯಾರೂ Medical and Engineering course ಮಾಡಲು ಆಗುತ್ತಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1042)/08.12.2020/7.50/ಹೆಚ್‌ವಿಃಎಕೆ

**ಶ್ರೀ ಮರಿತಿಬ್ಬೇಗೌಡ**(ಮುಂದುವರೆದದ್ದು):-

ಸನ್ಮಾನ್ಯ ಸಭಾಪತಿಯವರೇ, ಪೌರ ಕಾರ್ಮಿಕರ ಮಕ್ಕಳು ಶೇಕಡಾ 1 ರಷ್ಟಲ್ಲ, ಶೇಕಡಾ 0.55ರಷ್ಟು ಇಂಜಿನಿಯರಿಂಗ್ ಅಥವಾ ಮೆಡಿಕಲ್ ಓದುವುದಕ್ಕೆ ಸಾಧ್ಯವಾಗುತ್ತಿಲ್ಲ. ದಿನದಲ್ಲಿ ಸುಮಾರು 8 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿರುವುದರಿಂದ ಪೌರ ಕಾರ್ಮಿಕರಾದ ತಂದೆ-ತಾಯಿಗಳಿಬ್ಬರೂ ಬೆಳಿಗ್ಗೆ 5 ಗಂಟೆಗೆ ಮನೆ ಬಿಡುತ್ತಾರೆ. ಅವರ ಮಕ್ಕಳನ್ನು ಪಾಲನೆ ಪೋಷಣೆ ಮಾಡಿ ಶಾಲೆಗೆ ಕಳುಹಿಸುವವರು ಯಾರೂ ಇಲ್ಲ. ಪೌರ ಕಾರ್ಮಿಕರ ಮಕ್ಕಳು ಪೌರ ಕಾರ್ಮಿಕರಾಗಿಯೇ ಸಾಯುತ್ತಿದ್ದಾರೆಯೇ ಹೊರತು ಅವರು ಶಿಕ್ಷಣದಲ್ಲಿ ಮುಂದುವರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಓದುವುದಕ್ಕೆ ಬೇಕಾಗಿರುವ ಪ್ರಾಥಮಿಕ ಹಂತದ ಶಿಕ್ಷಣವೇ ಅವರಿಗೆ ದೊರೆಯುತ್ತಿಲ್ಲ. ಪೌರ ಕಾರ್ಮಿಕರ ಮಕ್ಕಳಿಗಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವಂತಹ ಇಂತಹ ಕಾಲೋನಿಗಳಲ್ಲಿ ವಿಶೇಷವಾದ ಶಾಲೆಗಳನ್ನು ತೆರೆಯಲಾಗಿದೆ. ಈ ಕಾಲೋನಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿದ್ದಾರೆ. ಇಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕಾಗಿ ಅಂಗನವಾಡಿಗಳನ್ನು ಮತ್ತು ಪ್ರಾಥಮಿಕ ಶಾಲೆಗಳನ್ನು ತೆರೆಯುವಂತಹ ಕೆಲಸ ಮಾಡಿದರೆ, ಮುಂದೆ ಅವರು ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಮತ್ತು ತಾಂತ್ರಿಕ ಶಿಕ್ಷಣವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ವರ್ಗಕ್ಕೆ ಪ್ರಾಥಮಿಕ ಶಿಕ್ಷಣವನ್ನು ನೀಡಲು ನಗರಾಭಿವೃದ್ಧಿ ಇಲಾಖೆಯಿಂದ ಯಾವುದಾದರೊಂದು ಹೊಸ ಯೋಜನೆಯನ್ನು ರೂಪಿಸಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ವಿಕಲಚೇತನರಿಗೂ ಮೀಸಲಾತಿಯನ್ನು ಕೊಟ್ಟಿದ್ದೇವೆ. ನಗರದಲ್ಲಿ ವಾಸ ಮಾಡುವ ನಾವೆಲ್ಲರೂ ದುರ್ವಾಸನೆಯಿಂದ ಮುಕ್ತರಾಗಿ ಬದುಕುತ್ತಿರುವುದಕ್ಕೆ ಕಾರಣ ಈ ಪೌರ ಕಾರ್ಮಿಕರಾಗಿದ್ದಾರೆ. ಇವರದೇ ನಿಜವಾಗಿರುವಂತಹ ಸೇವೆ. ಇಂತಹ ಸಮಾಜದ ಕಟ್ಟಕಡೆಯ ವರ್ಗಕ್ಕೆ ಸೇರಿದಂತಹವರ ಮಕ್ಕಳಿಗೆ ಮೀಸಲಾತಿಯನ್ನು ಒದಗಿಸಲು ಸರ್ಕಾರ ಚಿಂತನೆ ನಡೆಸುತ್ತದೆಯೇ ಎನ್ನುವ ನನ್ನ ಪ್ರಶ್ನೆಗೆ ಸರ್ಕಾರದಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಬಿ.ಎ.ಬಸವರಾಜು:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ 10 ಮಹಾನಗರಪಾಲಿಕೆಗಳಲ್ಲಿ ಎಷ್ಟು ಜನ ಪೌರ ಕಾರ್ಮಿಕರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಮತ್ತು ಗುತ್ತಿಗೆ ಪೌರ ಕಾರ್ಮಿಕರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಯಂಗೊಳಿಸಲಾಗುತ್ತದೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಈ ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಪೌರ ಕಾರ್ಮಿಕರ ಸಂಖ್ಯೆ 2468 ಮತ್ತು ಗುತ್ತಿಗೆ ಪೌರ ಕಾರ್ಮಿಕರ ಸಂಖ್ಯೆ 4849 ಎನ್ನುವ ಉತ್ತರವನ್ನು ಒದಗಿಸಿದ್ದೇನೆ. ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮತ್ತು ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಎಸ್.ಎಸ್.ಎಲ್.ಸಿ., ಅದಕ್ಕೂ ಮೇಲ್ಪಟ್ಟ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಮತ್ತು ಸ್ಟೈಫಂಡ್ ಅನ್ನು ನೀಡಲಾಗುತ್ತಿದೆ. ಯಾರು ಬಿ.ಇ. ಅಥವಾ ಎಂ.ಬಿ.ಬಿ.ಎಸ್.ನಲ್ಲಿ ಓದುತ್ತಿದ್ದಾರೆ ಆ ವಿದ್ಯಾರ್ಥಿಗಳಿಗೆ ಕಂಪ್ಯೂಟರ್, ಲ್ಯಾಪ್‌ಟಾಪ್ ಖರೀದಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ನಮ್ಮ ಸರ್ಕಾರ ಬಡವರ ಪರವಾಗಿ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರು ಕೇಳಿರುವ ವಿಚಾರಗಳಿಗೆ ಸಂಬಂಧಪಟ್ಟಂತೆ ಮುಂದಿನ ಕ್ರಮ ಜರುಗಿಸಲಾಗುವುದು.

ಸನ್ಮಾನ್ಯ ಸಭಾಪತಿಯವರೇ, ಪೌರ ಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿಯಲ್ಲಿ ಮನೆಗಳನ್ನು ನೀಡಲಾಗುತ್ತಿದೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಎಲ್ಲ ಜಿಲ್ಲೆಗಳಲ್ಲಿ ಪೌರ ಕಾರ್ಮಿಕರ ಗೃಹ ನಿರ್ಮಾಣ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. ಇದನ್ನು ಬೇಗ ಮುಗಿಸಿ ಅವರಿಗೆ ಹಸ್ತಾಂತರ ಮಾಡುವಂತಹ ಕೆಲಸವನ್ನು ಮಾಡಲಾಗುತ್ತದೆ.

**ಶ್ರೀ ಆರ್.ಧರ್ಮಸೇನ:–** ಸನ್ಮಾನ್ಯ ಸಭಾಪತಿಯವರೇ, ನರ್ಮ್ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಏರ್‌ಫೋರ್ಟ್ ಹಿಂಭಾಗದಲ್ಲಿಯೇ ಮನೆಗಳನ್ನು ಮತ್ತು ಕಲ್ಯಾಣಮಂಟಪವನ್ನು ಕಟ್ಟಲಾಗಿದೆ. ಅಲ್ಲಿ ಸುಮಾರು ಒಂದು ಸಾವಿರ ಜನರು ವಾಸವಾಗಿದ್ದಾರೆ. ಇಲ್ಲಿ ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆ ಆದರೆ, ಶಾಲೆ ಅಥವಾ ಬಸ್‌ಗಳ ಸೌಲಭ್ಯವಿಲ್ಲ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ನಾನು ರಿವ್ಯೂ ಮೀಟಿಂಗ್‌ಗೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸಹ ಹಾಜರಿದ್ದರು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ, ಅಲ್ಲಿ ನಮ್ಮ ಇಲಾಖೆಯ ಆಯುಕ್ತರು ಉಪಸ್ಥಿತರಿದ್ದರು. ಸ್ಥಳದಲ್ಲಿಯೇ ನಮ್ಮ ಆಯುಕ್ತರಿಗೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ಕೊಟ್ಟು ಈ ಕೆಲಸವನ್ನು ಮಾಡಿಸಿಕೊಡುತ್ತಿದ್ದೆ. ಅಲ್ಲಿರುವವರ ಬಗ್ಗೆ ಕಾಳಜಿ ವಹಿಸುವಂತಹ ಕೆಲಸವನ್ನು ಮಾಡಲಾಗುತ್ತಿತ್ತು. ರಾಜ್ಯ ಕೋವಿಡ್–19ನಿಂದ ಬಾಧಿತವಾಗುತ್ತಿದ್ದ ಸಂದರ್ಭದಲ್ಲಿಯೂ ಸಹ ಅವರುಗಳಿಗೆ ಸಮವಸ್ತ್ರವನ್ನು ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸ್ಥಿತಿ ಅಧೋಗತಿಯಾಗಿದೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಅವರ ಸ್ಥಿತಿ ಅಧೋಗತಿಯಾಗಿಲ್ಲ. ಅವರಿಗೆ ಒಳ್ಳೆಯ ಸಂಬಳವನ್ನು ಕೊಡುತ್ತಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಒಳ್ಳೆಯ ಸಂಬಳವನ್ನು ಸರ್ಕಾರ ಗುತ್ತಿಗೆದಾರರಿಗೆ ಕೊಡುತ್ತಿದೆ. ಅದು ಪೌರ ಕಾರ್ಮಿಕರಿಗೆ ಮುಟ್ಟುತ್ತಿಲ್ಲ. ಈ ರೀತಿ ಹಣ ದುರುಪಯೋಗಪಡಿಸಿಕೊಂಡಿರುವ ಗುತ್ತಿಗೆದಾರರ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಹುಬ್ಬಳ್ಳಿಯಲ್ಲಿ ಕಸ ವಿಂಗಡಣೆ ಮಾಡಿ ತೆಗೆದುಕೊಂಡು ಹೋಗುವ ವಾಹನದ ಚಾಲಕರು ಮುಷ್ಕರ ಮಾಡಿದ್ದಾರೆಂದು ಗುತ್ತಿಗೆದಾರ ಕೆಲಸದಿಂದ ತೆಗೆದು ಹಾಕಿದ್ದಾನೆ. ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ಸರ್ಕಾರ ಇಂತಹ ಒಬ್ಬ ಗುತ್ತಿಗೆದಾರನ ಮೇಲೆ ಕ್ರಮ ತೆಗೆದುಕೊಂಡಿರುವ ಉದಾಹರಣೆ ಇದೆಯೇ? ಈ ನಿಟ್ಟಿನಲ್ಲಿ ಇಲಾಖೆಯ ಆಯುಕ್ತರು ಮತ್ತು ಸರ್ಕಾರ ಇಲ್ಲಿಯವರೆಗೆ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮವನ್ನು ಜರುಗಿಸಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ನಾನು ಹುಬ್ಬಳ್ಳಿಗೆ ಸಂಬಂಧಪಟ್ಟಂತೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆಯೆಂದು ಕೇಳುತ್ತಿದ್ದೇನೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ನಾನು ಹುಬ್ಬಳ್ಳಿ ವಿಚಾರವಾಗಿಯೇ ಉತ್ತರವನ್ನು ಕೊಡುತ್ತಿದ್ದೇನೆ. ಮೊನ್ನೆ ನಾನು ಹುಬ್ಬಳ್ಳಿಯಲ್ಲಿ ಒಂದು ಕಾರ್ಯಕ್ರಮಕ್ಕೆ ಹೋದಂತಹ ಸಂದರ್ಭದಲ್ಲಿ ಅವರುಗಳು ಬಂದು ನನಗೂ ಸಹ ಮನವಿಯನ್ನು ಕೊಟ್ಟಿದ್ದಾರೆ. ಆ ಮನವಿಯನ್ನು ಮತ್ತು ಅಲ್ಲಿ ಆಗಿರುವಂತಹ ಲೋಪದೋಷಗಳ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ಪರಿಶೀಲನೆ ಮಾಡಿದ ನಂತರವೇ ಸರ್ಕಾರ ಸೂಕ್ತ ಕ್ರಮವನ್ನು ಜರುಗಿಸಬೇಕಾಗುತ್ತದೆ. ಏಕಾಏಕಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಪರಿಶೀಲನೆ.......ಪರಿಶೀಲನೆ ಎಂದು ಹೇಳುತ್ತಾ, ಇಲ್ಲಿಗೆ ಸುಮಾರು ಆರು ತಿಂಗಳುಗಳು ಕಳೆದು ಹೋಗಿವೆ. ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಪರಿಶೀಲನೆ ಮಾಡದೇ ಹಾಗಾಯೇ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆಯೇ? ಅವರುಗಳು ನನಗೆ ಮನವಿ ಕೊಟ್ಟಿದ್ದಾರೆ. ನಾನು ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಏನಾದರು ಲೋಪದೋಷಗಳಾಗಿದ್ದರೆ ಅದನ್ನು ಸರಿಪಡಿಸಬೇಕಾಗುತ್ತದೆ. ಗುತ್ತಿಗೆದಾರ ತಪ್ಪು ಮಾಡಿದ್ದರೆ, ಆತನ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ. ತಪ್ಪು ಮಾಡದಿದ್ದರೆ, ಆತನನ್ನು ಪುನಃ ಗುತ್ತಿಗೆದಾರನನ್ನಾಗಿ ಮುಂದುವರಿಸಲಾಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರ್:–** ಸನ್ಮಾನ್ಯ ಸಭಾಪತಿಯವರೇ, ಗುತ್ತಿಗೆದಾರನ ಅವಧಿ ಮುಗಿದು ಹೋಗಿದೆ ಮತ್ತು ಆತನಿಗೆ ಲೈಸೆನ್ಸ್ ಸಹ ಇಲ್ಲ. ಇಂಥವನಿಗೆ ಗುತ್ತಿಗೆ ನೀಡಲಾಗಿದೆ. ಅವಧಿ ಮುಗಿದಿರುವಂತಹ ಗುತ್ತಿಗೆದಾರ ಕಸ ವಿಂಗಡಣೆ ಮಾಡುವ ವಾಹನ ಚಾಲಕರ ಮೇಲೆ ದಬ್ಬಾಳಿಕೆ ಮಾಡುವುದು ಸರಿಯಾದ ಕ್ರಮವಲ್ಲ. ಈ ಪೌರ ಕಾರ್ಮಿಕರ ಸ್ಥಿತಿ ಹೇಗಿರಬೇಕು? ಅವರ ಸಹಾಯಕ್ಕೆ ಸರ್ಕಾರ ಬರಬೇಕಾಗಿದೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದಲೇ ನಾನು ಕ್ರಮ ತೆಗೆದುಕೊಳ್ಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಯಾವ ಅವಧಿಯೊಳಗೆ ಖಾಯಂಗೊಳಿಸುತ್ತದೆನ್ನುವುದು ನನ್ನ ಪ್ರಶ್ನೆಯಾಗಿದೆ. ಪೌರ ಕಾರ್ಮಿಕರ ಮಕ್ಕಳು ನಮ್ಮ ಸರ್ಕಾರಿ ಶಾಲೆಗಳಿಗೆ ಬಂದು ಹೋಗುತ್ತಾರೆ. ಆದರೆ, ಅವರು ವಾಸಿಸುವ ಕಾಲೋನಿಗಳಲ್ಲಿ ಅವರಿಗಾಗಿ ಪ್ರತ್ಯೇಕವಾದ ಶಾಲೆಗಳು ಇಲ್ಲ. ನಾನು ಈಗಾಗಲೇ ಉಲ್ಲೇಖ ಮಾಡಿರುವಂತೆ ಈ ಮಕ್ಕಳ ತಂದೆ ತಾಯಂದಿರು ಬೆಳಗ್ಗೆ 5 ಗಂಟೆಗೆ ಕೆಲಸಕ್ಕೆ ಹೋಗುತ್ತಾರೆ. ಆದ್ದರಿಂದ ಆ ಕಾಲೋನಿಯೊಳಗೆ ಪ್ರಾಥಮಿಕ ಹಂತದವರೆಗಿನ ಶಿಕ್ಷಣ ಕೊಡುವುದಕ್ಕೆ ನಗರಾಬಿವೃದ್ಧಿ ಇಲಾಖೆಯಿಂದ ವಿಶೇಷವಾದ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದರೆ ಉತ್ತಮವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದಯೇ?

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮುಂದೆ ಯಾವ ಕ್ರಮವನ್ನು ಜರುಗಿಸಬೇಕೆನ್ನುವುದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ನಮ್ಮ ಸರ್ಕಾರ ಈ ಮಕ್ಕಳ ರಕ್ಷಣೆಗೆ ಬದ್ಧವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 220+142**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, ಸ್ಮಾರ್ಟ್ ಸಿಟಿ ಯೋಜನೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಸ್ಮಾಟ್ ಸಿಟಿಗೆ ಎಷ್ಟು ನಗರಗಳು ಆಯ್ಕೆಯಾಗಿವೆ ಮತ್ತು ಅವುಗಳ ಕಾಮಗಾರಿಗಳ ಪ್ರಗತಿಗೆ ಸಂಬಂಧಪಟ್ಟಂತೆ ಹೇಳಿರುವ ಎಲ್ಲ ಪ್ರಶ್ನೆಗಳಿಗೆ ಸಮಗ್ರವಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ.

**ಶ್ರೀ ಕೆ.ಗೋವಿಂದರಾಜುಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಉತ್ತರದೊಂದಿಗೆ ಕೊಟ್ಟಿರುವ ಅನುಬಂಧವನ್ನು ದುರ್ಬೀನು ಹಾಕಿಕೊಂಡು ಓದಿದರೂ ಸರಿಯಾಗಿ ಕಾಣಿಸುವುದಿಲ್ಲ ಆ ರೀತಿ ಇದೆ.

**ಶ್ರೀ ಬಿ.ಎ.ಬಸವರಾಜಃ–** ಸನ್ಮಾನ್ಯ ಸಭಾಪತಿಯವರೇ, ಅಕ್ಷರಗಳ ಗಾತ್ರವನ್ನು ದೊಡ್ಡದು ಮಾಡಿ ಅವರಿಗೆ ಒದಗಿಸಲಾಗುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿ ಮತ್ತು ದಾವಣಗೆರೆ ಈ ಎರಡು ನಗರಗಳು ಸ್ಮಾರ್ಟ್ ಸಿಟಿ ಅಭಿಯಾನದಡಿ ದಿನಾಂಕಃ11.05.2016ರಂದು ಆಯ್ಕೆಗೊಂಡಿವೆ. ಕಾಮಗಾರಿಗಳು 2021–22ನೇ ಸಾಲಿಗೆ ಮುಕ್ತಾಯಗೊಳ್ಳಬೇಕಾಗಿದೆ. ಕಾಮಗಾರಿಗಳ ಪ್ರಗತಿಯನ್ನು ಗಮನಿಸಿದಾಗ, ಮಾನ್ಯ ಬಸವರಾಜುರವರು ಸಚಿವರಾದ ಮೇಲೆ ಅನೇಕ ಬಾರಿ ಬೆಳಗಾವಿ ನಗರಕ್ಕೆ ಭೇಟಿ ನೀಡಿದ್ದಾರೆ ಮತ್ತು ಇಲಾಖಾ ಅಧಿಕಾರಿಗಳ ಸಭೆಗಳನ್ನು ಸಹ ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ನಾನು ಕೇಳಿರುವಂತಹ ಲಿಖಿತ ರೂಪದ ಪ್ರಶ್ನೆಯಲ್ಲಿ, ಬೆಳಗಾವಿ ಮತ್ತು ದಾವಣಗೆರೆಯಲ್ಲಿ ಕೈಗೆತ್ತಿಗೊಂಡಿರುವ ಒಟ್ಟು ಕಾಮಗಾರಿಗಳ ವಿಚಾರ ಮತ್ತು ಮುಕ್ತಾಯಗೊಂಡಿರುವ ಕಾಮಗಾರಿಗಳ ಸಂಖ್ಯೆ ಮತ್ತು ಪ್ರಗತಿಯ ಬಗ್ಗೆ ಮಾಹಿತಿಯನ್ನು ಕೇಳಿದ್ದೇನೆ. ಅವರು ಕೊಟ್ಟಿರುವ ಉತ್ತರದಲ್ಲಿ ಕಾಮಗಾರಿಗಳ ಸಂಖ್ಯೆಃ108 ಎಂದು ಹೇಳಿ ಅದರ ಬಗ್ಗೆ ವಿವರಗಳನ್ನು ನೀಡಿದ್ದಾರೆ. ಶೇಕಡಾ 70ರಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ.

(ಮುಂದುವರಿದಿದೆ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1043) 8.12.2020 8.00 ಪಿಕೆ:ಎಕೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಮುಂದು):**

ಮಾನ್ಯ ಸಭಾಪತಿಯವರೇ, ಮುಗಿದಿರುವ ಕಾಮಗಾರಿಗಳ ಸಂಖ್ಯೆ:25. ಕಾಮಗಾರಿ ಪ್ರಾರಂಭವಾಗದೇ ಇರುವ ಸಂಖ್ಯೆ: 12. ಕಾಮಗಾರಿ ಮುಗಿಸುವುದಕ್ಕೆ ಇನ್ನು ಒಂದು ವರ್ಷ ಉಳಿದಿದೆ. ಪ್ರಗತಿಯಲ್ಲಿರುವ ಕಾಮಗಾರಿ, ಪ್ರಾರಂಭವಾಗದೇ ಇರುವ ಕಾಮಗಾರಿ ಮತ್ತು ಟೆಂಡರ್ ಹಂತದ ಕಾಮಗಾರಿಗಳನ್ನು ಒಟ್ಟುಗೂಡಿಸಿದರೆ ಶೇಕಡ 50ರಷ್ಟನ್ನು ನಾವು ಪೂರ್ಣ ಮಾಡಿಲ್ಲ. ಮಾನ್ಯ ಸಚಿವರು ಉತ್ತರದಲ್ಲಿ, ಬೇರೆ ಬೇರೆ ಇಲಾಖೆಗಳ ಮಧ್ಯೆ ಕೋ-ಆರ್ಡಿನೇಷನ್ ಆಗುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಕಾಲ ಕಾಲಕ್ಕೆ ಇಲಾಖೆಯ ಅಧಿಕಾರಿಗಳು ಸಮಯದ ಒಳಗೆ ಪ್ರಗತಿ ಮಾಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಬೆಳಗಾವಿ ನಗರಕ್ಕೆ ಸಂಬಂಧಪಟ್ಟಂತೆ, ಅನುಬಂಧದಲ್ಲಿ 'because of Covid, because of heavy rainfall' ಎಂದು ಹೇಳಿದ್ದೀರಿ. ನಾನು ಒಪ್ಪುತ್ತೇನೆ. ಕಳೆದ 4 ವರ್ಷಗಳ ಹಿಂದೆ ಈ ವಿಚಾರವಾಗಿ ಏಕೆ ಪ್ರಗತಿಯಾಗಲಿಲ್ಲ? ನನಗೆ ತಿಳಿದ ಮಟ್ಟಿಗೆ, ಟೆಂಡರ್ ಪಡೆದುಕೊಂಡಿರುವಂತಹ ಜನ ಬೇರೊಬ್ಬರಿಗೆ ಟೆಂಡರ್ ಕೊಟ್ಟಿದ್ದಾರೆ. ಅಂದರೆ ಸಬ್ ಕಾಂಟ್ರ್ಯಾಕ್ಟ್ ಕೊಟ್ಟಿದ್ದಾರೆ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸದಸ್ಯರು ಹೇಳಿದಂತಹ ಈ ಅಂಶಕ್ಕೆ ನನ್ನ ಸಹಮತ ಕೂಡ ಇದೆ.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ನಗರದಲ್ಲಿ ಏಕೆ ಪ್ರಗತಿಯಾಗುತ್ತಿಲ್ಲ ಎಂದು ಕಾಂಟ್ರ್ಯಾಕ್ಟರನ್ನು ಕೇಳಿದರೆ ಆತ, 'ನಹೀ ಸರ್, ಹಮ್ ತೋ ಕಾಮ್ ಕರ್ ರಹೇ ಹೈ, ಜೋ ಕಾಮ್ ಲಿಯಾ ಹೈ ವೋ ಆದ್ಮಿ ಅಲಗ್ ಹೈ' ಎಂದು ಉತ್ತರ ಕೊಡುತ್ತಾರೆ. ಇದರ ಅರ್ಥ, ಕಾಮಗಾರಿಗಳು sub-standard ಆದರೆ ಅದಕ್ಕೆ ಜವಾಬ್ದಾರರು ಯಾರು? ಕಾಮಗಾರಿ ಕೆಲಸಗಳು ನಿಗದಿತ ಸಮಯದ ಒಳಗೆ ಪೂರ್ಣವಾಗದಿದ್ದರೆ ಅದಕ್ಕೆ ಜವಾಬ್ದಾರರು ಯಾರು? "ಸ್ಮಾರ್ಟ್ ಸಿಟಿ" ಎನ್ನುವುದು ಮಾನ್ಯ ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಬೆಳಗಾವಿ ನಗರವನ್ನು ಮಾದರಿ ನಗರವನ್ನಾಗಿ ಮಾಡಬೇಕು ಎನ್ನುವ ಯೋಜನೆ ಕಾಲಮೀತಿಯಲ್ಲಿ ಯಾವ ರೀತಿ ಪೂರ್ತಿಗೊಳ್ಳಬೇಕು ಎನ್ನುವುದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ಈಗೇನು ಕಾಮಗಾರಿ ಕೆಲಸಗಳು ಆಗಿದೆಯೋ ಆ ಕೆಲಸಗಳನ್ನು ಮಾಡಲು ಸಬ್-ಕಾಂಟ್ರ್ಯಾಕ್ಟ್ ಕೊಟ್ಟು ಮಾಡಿಸಿದ್ದರೆ ಅದರ ಗುಣಮಟ್ಟಕ್ಕೆ ಜವಾಬ್ದಾರರು ಯಾರು? ನಮ್ಮ ನಗರಾಭಿವೃದ್ಧಿ ಸಚಿವರು ಸಮರ್ಥರಿದ್ದಾರೆ. ಕಾಲಮಿತಿಯೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ತಿ ಮಾಡುತ್ತಾರೆ ಎನ್ನುವಂತಹ ನಿರೀಕ್ಷೆ ನಮಗಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೆಳಗಾವಿಗೆ ಸಂಬಂಧಪಟ್ಟಂತೆ ಮಾತ್ರ ಹೇಳಿದರು. ಇನ್ನು 6 ಸಿಟಿಗಳನ್ನು ಬಿಟ್ಟುಬಿಟ್ಟಿದ್ದಾರೆ. 6 ಸಿಟಿಗಳ ಪರ್ಫಾಮೆನ್ಸ್ ನೋಡಿದರೆ ಶೇಕಡ 25 ರಷ್ಟು ಮಾತ್ರ ಕೆಲಸ ಆಗಿರುವುದು ಗೊತ್ತಾಗುತ್ತದೆ. ಇದ್ದ 5 ವರ್ಷಗಳ ಕಾಲಾವಧಿಯಲ್ಲಿ ಈಗಾಗಲೇ 4 ವರ್ಷಗಳು ಕಳೆದು ಹೋಗಿವೆ. ಇನ್ನೊಂದು ವರ್ಷ ಬಾಕಿ ಇದೆ. ಇಲಾಖೆಯವರು ಬ್ಲಾಕ್‌ಲಿಸ್ಟ್ ಆಗಿರುವವರಿಗೂ ಗುತ್ತಿಗೆಯನ್ನು ಕೊಟ್ಟಿದ್ದಾರೆ.

**ಶ್ರೀ ಬಿ.ಎ.ಬಸವರಾಜ:-** ಅದು ಕಳೆದ ಸರ್ಕಾರ ಕೊಟ್ಟಿದ್ದು.

**ಶ್ರೀ ಕೆ.ಗೋವಿಂದರಾಜು:-** ಯಾವ ಸರ್ಕಾರ ಕೊಟ್ಟಿತ್ತು ಎಂದು ನಾನು ಕೇಳುತ್ತಿಲ್ಲ ಅಥವಾ ನೀವೇ ಕೊಟ್ಟಿದ್ದೀರಿ ಎಂದು ಹೇಳುತ್ತಿಲ್ಲ. ನಿಮ್ಮ ಮೇಲೆ ನಾನು ಏನನ್ನೂ ಹೇಳಲಿಲ್ಲ. ನೀವೇಕೆ ಆತುರಪಟ್ಟು ಮಾತನಾಡುವುದಕ್ಕೆ ಹೋಗುತ್ತೀರಿ? ಯಾವುದೇ ಸರ್ಕಾರ ಇರಲಿ, ಗುತ್ತಿಗೆಯನ್ನು 4 ವರ್ಷದ ಹಿಂದೆ ಅಥವಾ 2 ವರ್ಷದ ಹಿಂದೆ ಕೊಟ್ಟಿರಬಹುದು. ಆದರೆ ಬ್ಲಾಕ್‌ಲಿಸ್ಟ್ ಆಗಿರುವಂಥವರಿಗೆ ಈ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಬೇರೆ ಯಾರಿಗೋ ಸಬ್‌ಲೀಸ್‌ಗೆ ಕೊಟ್ಟಿದ್ದಾರೆ. ಆತ ಕೆಲಸ ಬಿಟ್ಟು ಹೋಗಿರುತ್ತಾನೆ, ಅವನ ಮೇಲೆ ಕ್ರಮ ಕೂಡ ಕೈಗೊಳ್ಳುವುದಿಲ್ಲ. ಜೊತೆಗೆ, ಅರ್ಧ ದುಡ್ಡು ಬ್ಯಾಂಕ್‌ನಲ್ಲಿದ್ದು ಬಡ್ಡಿ ಬರುತ್ತಿದೆ, ಆ ಬಡ್ಡಿಗೆ ಕಮಿಷನ್ ಕೂಡ ಬರುತ್ತದೆ. ಇದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೇಕಾದರೆ ತಾವು ಒಂದು ಸಭೆಯನ್ನು ಕರೆಯಿರಿ. ನನ್ನ ಹತ್ತಿರ ಒಂದಷ್ಟು ವಿಚಾರಗಳಿವೆ. ಆ ಕುರಿತು ನಿಮ್ಮ ಅಧಿಕಾರಿಗಳೊಂದಿಗೆ ಚರ್ಚೆ ಮಾಡಲು ನಿಮಗೆ ಸಹಾಯವಾಗುತ್ತದೆ. ಮತ್ತೆ, ಉತ್ತರದ ಜೊತೆ ಅನುಬಂಧ – 1 ಏನು ಕೊಟ್ಟಿದ್ದೀರೋ ಅದು ಸರಿಯಾಗಿ ಕಾಣಿಸುತ್ತಿಲ್ಲ. ಅದರ ಬೇರೆ ಪ್ರತಿಯನ್ನು ಕಳುಹಿಸಿ ಕೊಟ್ಟರೆ ಒಳ್ಳೆಯದು.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ 7 ಸ್ಮಾರ್ಟ್ ಸಿಟಿಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರು, ಈ 7 ಸಿಟಿಗಳನ್ನು ಅತ್ಯುತ್ತಮ ಸಿಟಿಗಳನ್ನಾಗಿ ಮಾಡಬೇಕು ಎಂದು ಮಾನ್ಯ ಪ್ರಧಾನ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ಇನ್ನೂ ನಮಗೆ 3 ಸಿಟಿಗಳನ್ನು ಸ್ಮಾರ್ಟ್ ಸಿಟಿ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೇನೆ. ನಾನು ಸಚಿವನಾದ ಮೇಲೆ ಸುಮಾರು 2-3 ಬಾರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿ ಮಹಾನಗರ ಪಾಲಿಕೆಗಳಿಗ ವಿಸಿಟ್ ಮಾಡಿ ರಿವ್ಯೂ ಮಾಡಿದ್ದೇನೆ. ಆ ಸಂದರ್ಭದಲ್ಲಿ ಎಲ್ಲಾ ಅಧಿಕಾರಿಗಳಿಗೆ ಚುರುಕು ಮುಟ್ಟಿಸುವಂತಹ ಕೆಲಸ ಮಾಡಿದ್ದೇನೆ.

**ಶ್ರೀ ಕೆ.ಗೋವಿಂದರಾಜ್:–** ಬಹಳಷ್ಟು ಕಡೆ ನಿವೃತ್ತರಾಗಿರುವ ಇಂಜಿನಿಯರ್‌ಗಳನ್ನು ಮತ್ತು ಅಧಿಕಾರಿಗಳನ್ನು ಎಂಡಿ ಗಳನ್ನಾಗಿ ನೇಮಕ ಮಾಡಿದ್ದೀರಿ. ಆದರೆ ಅವರಿಗೆ ಚಿಛಿಛಿಡಿಣಟಿಣಚಿಛುಟುಣಥಿ ಇಲ್ಲ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಯಾವುದೇ ಮಹಾ ನಗರ ಪಾಲಿಕೆಯಲ್ಲಿ ನಿವೃತ್ತರಾಗಿರುವಂತಹ ಯಾರೂ ಕೂಡ ಎಂಡಿ ಆಗಿ ಕೆಲಸ ಮಾಡುತ್ತಿಲ್ಲ. ಕೆಲವು ರಿಟೈರ್ಡ್ ಚೀಫ್ ಇಂಜಿನಿಯರ್‌ಗಳನ್ನು KUIDFC (Karnataka Urban Infrastructure Development and Finance Corporation) ನಲ್ಲಿ ತೆಗೆದುಕೊಂಡಿದ್ದಾರೆ. ನಾನು ಪ್ರತಿಯೊಂದು ಮಹಾನಗರ ಪಾಲಿಕೆಗಳಿಗೆ ಭೇಟಿ ಕೊಟ್ಟು ರಿವ್ಯೂ ಮಾಡಿ, ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಮಗೇನು ಕಾಲಮಿತಿಯೊಳಗೆ ಕಾಮಗಾರಿಗಳನ್ನು ಮುಗಿಸಬೇಕೆಂದು ಹೇಳಿದ್ದಾರೋ ಆ ಅವಧಿಯ ಒಳಗೆ ಮುಗಿಸಬೇಕೆಂದು ಹೇಳಿದ್ದೇನೆ. ನಾನು ಮೊನ್ನೆ ಹುಬ್ಬಳ್ಳಿ–ಧಾರವಾಡಕ್ಕೆ ಹೋಗಿ ಸಭೆ ಮಾಡಿದ್ದಾಗ ಆ ಸಭೆಯಲ್ಲಿ ಮಾನ್ಯ ಸದಸ್ಯರಾದ ಹೊರಟ್ಟಿಯವರೂ ಇದ್ದರು. ಕೋವಿಡ್–19ರ ಕಾರಣದಿಂದ 3 ತಿಂಗಳು ಕಾಮಗಾರಿ ಕೆಲಸ ನಿಂತು ಹೋಯಿತು. ಅದಾದ ಮೇಲೆ ಮಳೆಗಾಲ ಪ್ರಾರಂಭವಾಯಿತು. ಸದರಿ ಕಾಲಾವಧಿಯನ್ನು ವಿಸ್ತರಣೆ ಮಾಡಿಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ನಮಗೇನು ಕಾಲಮಿತಿ ಕೊಟ್ಟಿದ್ದಾರೋ ಆ ಅವಧಿಯ ಒಳಗೆ ಕಾಮಗಾರಿ ಕೆಲಸಗಳನ್ನು ಮುಗಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಅದರ ಬಗ್ಗೆ ಹೆಚ್ಚು ನಿಗಾ ವಹಿಸಿದ್ದೇವೆ. ಎಲ್ಲೂ ಕಳಪೆ ಮಟ್ಟದ ಕಾಮಗಾರಿ ಆಗಬಾರದು; ಗುಣಮಟ್ಟದ ಕಾಮಗಾರಿ ಆಗಬೇಕು ಎನ್ನುವ ಸೂಚನೆಯನ್ನು ನಮ್ಮ ಎಂಡಿ ಗಳಿಗೆ ಕೊಟ್ಟಿದ್ದೇನೆ. ಇನ್ನೇನು ಅಲ್ಲಿ ಸಾಧಕ–ಬಾಧಕಗಳಿದೆಯೋ ಅಂದರೆ, ಕೋ–ಆರ್ಡಿನೇಷನ್ ಇತ್ಯಾದಿಗಳನ್ನು ಸರಿ ಮಾಡಿಕೊಂಡು ಮುಂದುವರೆಯುವಂತಹ ಕೆಲಸವನ್ನು ಸರ್ಕಾರ ಮಾಡಿದೆ.

ನಾನು ಸಚಿವನಾಗಿ ಬಂದಮೇಲೆ ಈ ಕಾಮಗಾರಿ ಕೆಲಸಗಳು ಬಹಳಷ್ಟು ವೇಗವಾಗಿ ನಡೆಯುತ್ತಿವೆ. ಕೇಂದ್ರ ಸರ್ಕಾರ ಕೊಟ್ಟಿರುವ ಕಾಲಮಿತಿಯೊಳಗೆ ಕಾಮಗಾರಿಗಳನ್ನೂ ಪೂರ್ಣಗೊಳಿಸುವ ಕೆಲಸ ಮಾಡುತ್ತೇವೆ, ಇದರಲ್ಲಿ ಯಾವುದೇ ಸಂಶಯ ಬೇಡ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 164**

**(ಉತ್ತರ ಪ್ರತಿಯನ್ನು ಲಗತ್ತಿಸಲಾಗಿದೆ)**

**ಡಾಃ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆ ಯಾವುದು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳು ಕರ್ನಾಟಕ ಪೌರಸೇವಾ ಅಧಿನಿಯಮ 1964ರನ್ವಯ ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರಡಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವ ಸಾಮಾನ್ಯ ಉತ್ತರ ಕೊಟ್ಟಿದ್ದಾರೆ. ಆಧುನಿಕ ಯುಗದಲ್ಲಿ, ಅತಿ ಮಳೆ ಬಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ನಮ್ಮೆಲ್ಲರಿಗೂ ಮಾದರಿ ಆಗಬಹುದಾದಂತಹ, ಪರಿಣಾಮಕಾರಿಯಾಗಿ, ಇನ್ನೊಬ್ಬರು ಪಾಲನೆ ಮಾಡಬಹುದಾದ ರೀತಿಯಲ್ಲಿ ಯಾವುದಾದರೂ ನಗರಪಾಲಿಕೆ, ಪುರಸಭೆ ಚೆನ್ನಾಗಿ ಕೆಲಸ ನಿರ್ವಹಿಸಿದೆಯೇ ಎಂದು ಅಧ್ಯಯನದ ದೃಷ್ಟಿಯಿಂದ ಪ್ರಶ್ನೆ ಕೇಳಿದ್ದೆ. ಅದರ ಕಡೆ ಹೆಚ್ಚು ಗಮನಹರಿಸಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರಈ ನಿಟ್ಟಿನಲ್ಲಿ ಗಮನಹರಿಸಲಿ.

ತಾಲ್ಲೂಕು ಕೇಂದ್ರಗಳಂತಹ ಪುರಸಭಾ ಪ್ರದೇಶದಲ್ಲಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ, 14ನೇ ಹಣಕಾಸು ಆಯೋಗದ ಅನುದಾನದಡಿ 2015–16ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಪುರಸಭೆಗಳಿಗೆ ಒಟ್ಟು ಅನುದಾನ ರೂ. 906.53 ಕೋಟಿಗಳನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಪುರಸಭೆಗಳು ರೂ. 644.31 ಕೋಟಿಯನ್ನು ಮೂಲಭೂತ ಸೌಕರ್ಯಗಳಿಗೆ ಅಕ್ಟೋಬರ್ 31, 2020ರ ಅಂತ್ಯದವರೆಗೆ ವೆಚ್ಚ ಮಾಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇನ್ನೂ ಸುಮಾರು ರೂ. 256 ಕೋಟಿ ಹಣವನ್ನು ಉಪಯೋಗ ಮಾಡಿಲ್ಲ ಎನ್ನುವುದನ್ನು ಗಂಭೀರವಾಗಿ ಗಮನಿಸಬೇಕಾಗುತ್ತದೆ. ಕಷ್ಟಪಟ್ಟು ಬಜೆಟ್‌ನಲ್ಲಿ ಇದಕ್ಕೆಂದು ನಿಧಿಯನ್ನಿಟ್ಟು, ಪಕ್ಷಭೇದ ಮರೆತು ಎಲ್ಲಾ ಸದಸ್ಯರು ಸದರಿ ಬಜೆಟ್‌ನ್ನು ಪಾಸ್ ಮಾಡುತ್ತಾರೆ. ಈ ಹಣವನ್ನು ಖರ್ಚು ಮಾಡದೇ ಇದ್ದಾಗ, ಅದನ್ನು ಗುರುತಿಸಿ ಚಾಟಿ ಬೀಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಬೆಂಗಳೂರಿಗೆ ಜನ ಏಕೆ ವಲಸೆ ಬರುತ್ತಾರೆ? ಬೆಂಗಳೂರಿಗೆ ಹತ್ತಿರ ಇರುವಂತಹ ಪುರಸಭೆಗಳ ಮೇಲೆ ಒತ್ತಡ ಜಾಸ್ತಿ ಇರುತ್ತದೆ. ಯಾವುದೇ ಮುಖ್ಯ ನಗರಗಳ ಮೇಲೆ ಒತ್ತಡ ಕಡಿಮೆ ಆಗಲಿ ಎನ್ನುವ ಉದ್ದೇಶದಿಂದ ಪ್ರತಿನಿತ್ಯ ಮೆಟ್ರೋ ಟ್ರೇನ್ ಬಿಡುತ್ತೇವೆ, ಬಸ್‌ಗಳನ್ನು ಬಿಡುತ್ತೇವೆ. ಉತ್ತರದಲ್ಲಿ, ಅಮೃತ್ ಯೋಜನೆ, ಸ್ವಚ್ಛ ಭಾರತ್ ಮಿಷನ್, ನಗರೋತ್ಥಾನ ಯೋಜನೆ, ಎಸ್.ಎಫ್.ಸಿ. ಮುಕ್ತನಿಧಿ ಇವುಗಳಿಗೆ ಸಂಬಂಧಪಟ್ಟಂತೆ ಇದೆ. ಈ ನಿಧಿಗೆ ಸಂಬಂಧಪಟ್ಟಂತೆ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಎಸ್.ಎಫ್.ಸಿ. ನಿಧಿಯನ್ನು ವಿಶೇಷ ಅನುದಾನ

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದ್ದಾರೆ. 2020-21ನೇ ಸಾಲಿಗೆ ಹಂಚಿಕೆ ಮಾಡಿರುವ ಅನುದಾನ ರೂ. 5168.04. ಇದೇನು ಕೋಟಿಯೋ ಅಥವಾ ಲಕ್ಷವೋ ಎಂಬುದನ್ನು ತೋರಿಸಿಲ್ಲ. ಬಿಡುಗಡೆಯಾದ ಅನುದಾನ ರೂ. 2571.71 ಮತ್ತು ಖರ್ಚಾಗಿರುವುದು ರೂ. 1000.11 ಎಂದು ಹೇಳಿದ್ದಾರೆ. ಕುಡಿಯುವ ನೀರಿಗೆ 375.00 ಅನುದಾನ ಇದ್ದು, ಬಿಡುಗಡೆಯಾಗಿರುವುದೂ ರೂ. 375.00 ಹಾಗೂ ಖರ್ಚಾಗಿರುವುದು ಕೇವಲ ರೂ. 50.92 ಎಂದು ಹೇಳಿದ್ದಾರೆ. ಅದು ರೂ. 50 ಲಕ್ಷವೋ ಅಥವಾ ಕೋಟಿಯೋ ನನಗೆ ಗೊತ್ತಾಗುತ್ತಿಲ್ಲ.

(ಮುಂದು)

(1044) 8-12-2020 8.10 ಡಿಎಸ್-ವಿಕೆ

**ಡಾ||ತೇಜಸ್ವಿನಿಗೌಡ(ಮುಂದು):**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ಕೇಂದ್ರದಲ್ಲಿ ಸುಸಜ್ಜಿತವಾದ ಬಸ್ ನಿಲ್ದಾಣ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆ ಸರ್ಕಾರದ ಮುಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಈಗಾಗಲೇ ಸಾರಿಗೆ ಇಲಾಖೆಯಿಂದ ಸುಸಜ್ಜಿತ ಬಸ್ ನಿಲ್ದಾಣ ಹಾಗೂ ಬಸ್ ನಿಲ್ದಾಣದಲ್ಲಿ 20 ವಾಣಿಜ್ಯ ಮಳಿಗೆಗಳು ನಿರ್ಮಾಣಗೊಂಡಿದ್ದು, ನಗರಸಭೆಗೆ ಹಸ್ತಾಂತರಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೃದಯ ಭಾಗ. ಬೆಂಗಳೂರಿಗೆ ಕೇವಲ 35 ಕಿ.ಮೀ. ಇರತಕ್ಕಂಥ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯ ಕೇಂದ್ರವಾಗಬೇಕಾಗಿದ್ದಂತಹ ಪ್ರದೇಶ. ಈ ಭಾಗದಲ್ಲಿ ಚಿಕ್ಕಬಳ್ಳಾಪುರ, ದೇವನಹಳ್ಳಿ, ಗೌರಿಬಿದನೂರು, ತುಮಕೂರು, ಹೀಗೆ ಅತ್ಯುನ್ನತ ಆಯಾಕಟ್ಟಿನ ಜಾಗದಲ್ಲಿತ್ತು. ಅದು ಒಂದು ಜಿಲ್ಲಾ ಕೇಂದ್ರವಾಗಿದ್ದರೆ ಬೆಂಗಳೂರಿನ ಒತ್ತಡ ಶಾಲಾ-ಕಾಲೇಜುಗಳಿಂದ ಅರ್ಧ ಕಡಿಮೆಯಾಗುತ್ತಿತ್ತು. ಅದರ ಬಗ್ಗೆ ಗಮನ ಕೊಟ್ಟಿಲ್ಲ. ಅದನ್ನು ಕೆ.ಎಸ್.ಆರ್.ಟಿ.ಸಿ. ಯವರಿಗೆ ಬಿಟ್ಟುಕೊಟ್ಟಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಯವರಿಗೆ ಬಿಟ್ಟುಕೊಟ್ಟಿರುವ ಬಗ್ಗೆ ಉತ್ತರದಲ್ಲಿ ನಿರ್ದಿಷ್ಟ ಮಾಹಿತಿ ಇಲ್ಲ. ಅಲ್ಲಿ ಮೂಲಭೂತ ಸೌಕರ್ಯಗಳೇನು ಇಲ್ಲ. ಅವರೇನು ಉತ್ತರದಲ್ಲಿ ಹೇಳುತ್ತಾರೆ, ಸರ್ಕಾರ ಉದ್ದೇಶವನ್ನು ಹೊಂದಿದೆ, ಹಣ ಬಿಡುಗಡೆಯಾಗುತ್ತದೆ. ಆದರೆ, ಅಲ್ಲಿ ವಸ್ತುಸ್ಥಿತಿ ಮೂಲಭೂತ ಸೌಕರ್ಯಗಳ ಗುಣಮಟ್ಟದ ಕಾಮಗಾರಿಯಾಗಲಿ ನಡೆಯುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಗಂಭೀರವಾಗಿರುವಂತಹ ಪ್ರಶ್ನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದ್ದಾರೆ. ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆ ಯಾವುದು ಎಂದು ಅವರು ಪ್ರಶ್ನೆ ಕೇಳಿದ್ದಾರೆ. ನಮ್ಮ ಪೌರಾಡಳಿತ ಇಲಾಖೆಯಲ್ಲಿ ಮಹಾನಗರಗಳು 10 ಬರುತ್ತದೆ, ನಗರಸಭೆಗಳು 59 ಬರುತ್ತದೆ, ಪುರಸಭೆಗಳು 117, ಪಟ್ಟಣ ಪಂಚಾಯಿತಿಗಳು 102 ಬರುತ್ತದೆ. ಒಟ್ಟಿಗೆ 288 ನಗರಾಡಳಿತ ಸಂಸ್ಥೆಗಳು ನಮ್ಮ ಪೌರಾಡಳಿತ ವ್ಯವಸ್ಥೆಯಲ್ಲಿ ಬರುತ್ತದೆ. ಅವರ ಮೂಲ ಪ್ರಶ್ನೆಯ ಸೂಕ್ಷ್ಮತೆ ಏನೆಂದರೆ, ಇದರಲ್ಲಿ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆ ಯಾವುದು ಎಂದು ಕೇಳಿದ್ದಾರೆ. ಇದನ್ನು ಹುಡುಕುವುದು ಕಷ್ಟ. ಏಕೆಂದರೆ, ನಾವೇನಾದರೂ ಅಂಕಿಅಂಶವನ್ನು ತೆಗೆದುಕೊಂಡು ಸ್ವಚ್ಛ ಭಾರತವನ್ನು ಯಾವ ನಗರಸಭೆಯವರು ಅತ್ಯಂತ ಅರ್ಥಪೂರ್ಣವಾಗಿ ಮಾಡಿದ್ದಾರೆ, ಯಾರು ಸರಿಯಾಗಿ ಶೇಕಡವಾರು ತೆರಿಗೆಯನ್ನು ಹೆಚ್ಚು ವಸೂಲಿ ಮಾಡಿದ್ದಾರೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಯಾರು ಮಾಡಿದ್ದಾರೆ, ಬೀದಿ ದೀಪ ನಿರ್ವಹಣೆಯನ್ನು ಹೇಗೆ ಮಾಡಿದ್ದಾರೆಂದು ಅಂಕಿಅಂಶಗಳನ್ನು ತೆಗೆದುಕೊಂಡರೆ ನಮ್ಮ ಮಾನದಂಡದ ಅಡಿಯಲ್ಲಿ ಈ ಸ್ಥಳೀಯ ಸಂಸ್ಥೆ ಅತ್ಯುತ್ತಮವಾಗಿ ಕೆಲಸ ಮಾಡಿದೆ ಎಂದು ನಾವು ಹೇಳಬಹುದು. ಆದರೆ ನಮ್ಮ ಇಲಾಖೆ ಇಲ್ಲಿಯವರೆಗೆ ಇದನ್ನು ನಿರ್ವಹಿಸಿಲ್ಲ. ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆಯ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕೊಡಲಾಗುವುದು. ಪ್ರಮುಖ ಯೋಜನೆಯ ಅನುಷ್ಠಾನದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವಂತಹ ವಿಚಾರ. 14ನೇ ಹಣಕಾಸು ಆಯೋಗದ ರಚನೆ ಮತ್ತು 15ನೇ ಹಣಕಾಸು ಆಯೋಗದ ರಚನೆ ಮೂಲಕ ಅಮೃತ್ ಯೋಜನೆ, ಸ್ವಚ್ಛ ಭಾರತ್ ಮಿಷನ್, ನಗರೋತ್ಥಾನ ಯೋಜನೆ, ಎಸ್.ಎಫ್.ಸಿ. ಮುಕ್ತನಿಧಿ ಅನುದಾನ ಮತ್ತು ಕುಡಿಯುವ ನೀರಿನ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಈ ಅಂಕಿಅಂಶಗಳ ಪ್ರಕಾರ ಕೆಲವು ಕಡೆ ಖರ್ಚು ಕಡಿಮೆಯಾಗಿರುವುದು ಸತ್ಯ. 14ನೇ ಹಣಕಾಸು ಆಯೋಗದ ಅನುದಾನದಡಿ 2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಪುರಸಭೆಗಳಿಗೆ ಒಟ್ಟು ಅನುದಾನ ರೂ.906.53 ಕೋಟಿಗಳನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಪುರಸಭೆಗಳು ರೂ.644.31 ಕೋಟಿಯನ್ನು ಮೂಲಭೂತ ಸೌಕರ್ಯಗಳಿಗೆ ವೆಚ್ಚ ಮಾಡಲಾಗಿದೆ. ಇನ್ನು ಹಣ ಉಳಿದುಕೊಂಡಿದೆ. ಕೆಲವು ಕಡೆ ಪ್ರಗತಿಯಲ್ಲಿದೆ, ಕೆಲವು ಕಡೆ ನ್ಯಾಯಾಲಯದಲ್ಲಿರುವುದರಿಂದ ವಿಳಂಬವಾಗಿರಬಹುದೆಂದು ಅನಿಸುತ್ತಿದೆ.

15ನೇ ಹಣಕಾಸು ಆಯೋಗದ ಅನುದಾನದಡಿ 2020-21ನೇ ಸಾಲಿಗೆ ರಾಜ್ಯದ ಪುರಸಭೆಗಳಿಗೆ ಒಟ್ಟು ಅನುದಾನ ರೂ.240.56 ಕೋಟಿಗಳನ್ನು ಹಂಚಿಕೆ ಮಾಡಿ ಮೊದಲನೆಯ ಕಂತಿನ ಅನುದಾನ ರೂ.120.28 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಅಮೃತ್ ಯೋಜನೆ ಬಗ್ಗೆ ಒಂದು ಲಕ್ಷ ಜನಸಂಖ್ಯೆಗಿಂತ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಸ್ತಿಯಿರುವ 26 ಸಂಸ್ಥೆಗಳಿಗೆ ಅಮೃತ್ ಯೋಜನೆಯನ್ನು ಅಳವಡಿಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡಿದೆ. ಅದರ ಕಾರ್ಯಕ್ರಮಗಳು ಸಾಗುತ್ತಿದೆ. ಇದಿಷ್ಟು ಪುರಸಭೆಗಳಿಗೆ ಸಂಬಂಧಿಸಿರುವಂತಹ ಪ್ರಶ್ನೆ. ಇನ್ನು ವಿಸ್ತೃತವಾಗಿ ಚರ್ಚೆ ಮಾಡಬೇಕಾದರೆ ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಅದರಲ್ಲಿ ವಿವರವಾಗಿ ಮಾಹಿತಿಯನ್ನು ಕೊಡುತ್ತೇವೆ. ಒಟ್ಟಾರೆಯಾಗಿ ನಗರ ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆನ್ನುವುದು ನಮ್ಮ ಯೋಜನೆ ಮತ್ತು ಯೋಚನೆ. ಎರಡನೇಯ ಪ್ರಶ್ನೆಯಲ್ಲಿ ಏನು ಕೇಳಿದ್ದಾರೆಂದರೆ, ದೊಡ್ಡಬಳ್ಳಾಪುರ ನಗರಸಭೆಗೆ ಸಾರಿಗೆ ಇಲಾಖೆಯಿಂದ ಈಗಾಗಲೇ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣವಾಗಿದೆ ಎಂದು ಹೇಳಿದ್ದೇವೆ. ದೊಡ್ಡಬಳ್ಳಾಪುರ ನಗರಸಭೆಯಿಂದ ಕೇವಲ ಜಾಗ ಮಾತ್ರ ನಾವು ಕೊಟ್ಟಿದ್ದೇವೆ. ಕೆ.ಎಸ್.ಆರ್.ಟಿ.ಸಿ.ಯವರು ಪೂರ್ಣವಾಗಿ ಬಸ್ ನಿಲ್ದಾಣವನ್ನು ರಚನೆ ಮಾಡಿ ನಾವು ಜಾಗ ಕೊಟ್ಟಿರುವುದರಿಂದ 20 ವಾಣಿಜ್ಯ ಮಳಿಗೆಗಳನ್ನು ನಮ್ಮ ಸುಪರ್ದಿಗೋಸ್ಕರ ಕೊಟ್ಟಿದ್ದಾರೆ. ಟೆಂಡರ್ ಕರೆದು ಯಾರ್ಯಾರಿಗೆ ಕೊಡಬೇಕು ಅವರಿಗೆಲ್ಲಾ ಕೊಡುತ್ತಿದ್ದೇವೆ. ಅದರಿಂದ ನಮಗೆ ಉತ್ಪಾದನೆ ಬರುತ್ತಿದೆ. ಆ ಕಟ್ಟಡಕ್ಕೆ ಬಸ್ ನಿಲ್ದಾಣ ರಚನೆ ಮಾಡುವುದಕ್ಕಾಗಲಿ, ವಾಣಿಜ್ಯ ಕಟ್ಟಡ ನಿರ್ಮಾಣಕ್ಕಾಗಲಿ ನಾವು ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಕೆ.ಎಸ್.ಆರ್.ಟಿ.ಸಿ. ಯವರು ನಮಗೆ 20 ಮಳಿಗೆಗಳನ್ನು ಕೊಟ್ಟಿರುತ್ತಾರೆ. ಅದು ಆದಾಯದ ವ್ಯಾಪ್ತಿಯೊಳಗೆ ಬಂದಿರುತ್ತದೆ. ಇದಿಷ್ಟು ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರೇನಾದರೂ ಹೆಚ್ಚಿಗೆ ಚರ್ಚೆ ಮಾಡಬೇಕೆಂದು ಅನಿಸಿದರೆ ಬೇರೆ ರೂಪದಲ್ಲಿ ಚರ್ಚೆ ಮಾಡಬಹುದು. ನಗರಾಡಳಿತ ಅತ್ಯಂತ ಪರಿಣಾಮಕಾರಿಯಾಗಿ ಕೆಲಸಗಳನ್ನು ಮಾಡಬೇಕು ಎನ್ನುವುದಕೋಸ್ಕರ ಸಂವಿಧಾನದ ಕಲಂ 73 ಅನ್ನು ತಿದ್ದುಪಡಿ ಮಾಡಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಮತ್ತಷ್ಟು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಮತ್ತು ಪೂರಕವಾಗಿರುವಂತಹ ಸಹಕಾರ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಬೇರೆ ರೂಪದಲ್ಲಿ ತಂದರೆ ಚರ್ಚೆ ಮಾಡಬಹುದು.

**ಡಾ॥ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ದೊಡ್ಡಬಳ್ಳಾಪುರ ನೇಯ್ಗೆಗೆ ತುಂಬಾ ಹೆಸರುವಾಸಿಯಾಗಿದೆ. ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿದೆ. ಬೆಂಗಳೂರು ಸಿಲ್ಕ್ ಎನ್ನುವಂಥದ್ದು ಬಡವರು, ಮಧ್ಯಮ ವರ್ಗದವರು, ಶುದ್ಧ ರೇಷ್ಮೆಯನ್ನು ಖರೀದಿಸಲಾಗದಿರುವಂಥವರಿಗೆ ಹೆಚ್ಚಿನ ರೀತಿಯಲ್ಲಿ ಸೀರೆಗಳನ್ನು ನೇಯ್ಗೆ ಮಾಡುತ್ತಿರುವಂಥದ್ದು ದೊಡ್ಡಬಳ್ಳಾಪುರ. ಅಲ್ಲಿ ಕುಡಿಯುವ ನೀರಿಗೆ ಎಷ್ಟು ತೊಂದರೆ ಇದೆ ಎಂದರೆ ಫ್ಲೋರೈಡ್‌ಯುಕ್ತ ನೀರು ಸಿಗುತ್ತಿದೆ. ಅಲ್ಲಿ ಜಕ್ಕಲಮಡುಗು ಎನ್ನುವ ಕಡೆಯಿಂದ ನೀರು ಬರುತ್ತದೆ. ಅಲ್ಲೂ ಮಳೆ ಕಡಿಮೆಯಾದರೆ ಬಯಲು ಸೀಮೆ ಪ್ರದೇಶಕ್ಕೆ ನೀರಿನ ಪೂರೈಕೆ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗುತ್ತದೆ. ಇಲ್ಲಿಗೆ ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಇದು ಒಳ್ಳೆಯ potential ಇರುವಂತಹ ಜಾಗದಲ್ಲಿದೆ. ನಾನು ಬಸ್ ನಿಲ್ದಾಣದ ಬಗ್ಗೆ ಏಕೆ ಕೇಳಿದ್ದೇನೆಂದರೆ, ಹೊರ ವಲಯದಿಂದ ಬರತಕ್ಕಂಥ ಬಸ್‌ಗಳಿಗೆ ಬೇರೆ ಬಸ್ ನಿಲ್ದಾಣ, ಬೆಂಗಳೂರಿನಿಂದ ಬಿಎಂಟಿಸಿ ಬಸ್ ಹೋಗುತ್ತದೆ, ಹಾಗಾಗಿ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಅದೊಂದೇ ಅಲ್ಲ, ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಪುರಸಭೆಗಳಿಗೆ ಹೆಚ್ಚಿನ ಆದ್ಯ ಗಮನ ಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಮತ್ತು ಆ ಬಸ್ ನಿಲ್ದಾಣವನ್ನು ಸುಸಜ್ಜಿತ ಮಾಡುವುದಕ್ಕೆ ಮುಂದಿನ ದಿನಗಳಲ್ಲಿ ಯೋಜನೆಯನ್ನು ರೂಪಿಸುತ್ತೇವೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:08ನೇ ಡಿಸೆಂಬರ್ 2020, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 61 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**(ಅ) ವಿಷಯ: ಸರ್ಕಾರಿ ಸ್ವಾಮ್ಯದ ಮಂಡ್ಯ ಶುಗರ್ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ಹಾಗೂ ಕಾರ್ಮಿಕರ ಸಮಸ್ಯೆ ಬಗೆಹರಿಸುವ ಬಗ್ಗೆ.**

----

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಸಕ್ಕರೆ ಕಾರ್ಖಾನೆಯಾದ ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲೇ ಉಳಿಸಿಕೊಂಡು ಪ್ರಸಕ್ತ ಸಾಲಿನಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಬೇಕು ಹಾಗೂ ಇಲ್ಲಿನ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೋರುತ್ತೇನೆ.

ಈ ಕಂಪನಿಯಲ್ಲಿ ಖಾಯಂ ನೌಕರರಾಗಿ ಉಳಿದಿರುವ ಕಾರ್ಮಿಕರ ಸೇವೆಯನ್ನು ಮುಂದುವರಿಸುವುದು ಈ ನೌಕರರು ಸಂಪೂರ್ಣ ಸೇವಾವಧಿಯನ್ನು ಪೂರೈಸಲು ಅವಕಾಶ ಮಾಡಿಕೊಡಬೇಕು. ಈಗಾಗಲೇ ಕಂಪನಿಯಲ್ಲಿ ಸ್ವಯಂ ನಿವೃತ್ತಿ ಯೋಜನೆಯು ಸಂಪೂರ್ಣವಾಗಿ ಮುಗಿದಿದ್ದರೂ ಸಹ ದಿನಾಂಕ:15-6-2020ರ ಸರ್ಕಾರದ ನಡವಳಿ ಆದೇಶದ ಷರತ್ತುಗಳಿಗೆ ವಿರುದ್ಧವಾಗಿ ಆಡಳಿತ ಮಂಡಳಿಯು ಪದೇಪದೇ ಪ್ರಕಟಣೆಯ ಮೇಲೆ ಪ್ರಕಟಣೆಯನ್ನು ಹೊರಡಿಸುತ್ತಾ ಬಂದಿದ್ದು, ದಿನಾಂಕ:25-11-2020 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆದೇಶ ಮೇರೆಗೆ ಹಾಗೂ ದಿನಾಂಕ:4-12-2020 ರಂದು ಸ್ವಯಂ ನಿವೃತ್ತಿ ಪ್ರಕಟಣೆಯಲ್ಲಿ ಉಳಿದ ಕಾರ್ಮಿಕರನ್ನು Layoff ಗೊಳಿಸಲು ಕೈಗಾರಿಕಾ ವಿವಾದ ಕಾಯ್ದೆ 1947ರ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ ಎಂಬ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಇದು ಕಾರ್ಮಿಕ ವಿರೋಧಿ ನೀತಿಯಾಗಿರುತ್ತದೆ. ತಕ್ಷಣ ಈ ಪ್ರಕಟಣೆಯನ್ನು ಹಿಂಪಡೆದು ಕಾರ್ಮಿಕರ ಸೇವೆಯನ್ನು ಮುಂದುವರಿಸಬೇಕೆಂದು ಒತ್ತಾಯಿಸುವುದರ ಜೊತೆಗೆ ಸರ್ಕಾರ ಸಕ್ಕರೆ ಕಾರ್ಖಾನೆಯನ್ನು 40 ವರ್ಷಗಳಷ್ಟು ಸುದೀರ್ಘ ಅವಧಿಗೆ ಗುತ್ತಿಗೆ ನೀಡಲು ಮುಂದಾಗಿರುವ ಕ್ರಮವನ್ನು ಕೈಬಿಟ್ಟು ಕಬ್ಬು ಅರೆಯುವ ಕಾರ್ಯವನ್ನು ಕಂಪನಿಯ ಮೂಲಕವೇ ನಡೆಸಬೇಕು. ಆ ಮೂಲಕ ರೈತರು ಹಾಗೂ ಕಾರ್ಮಿಕರ ಹಿತವನ್ನು ಕಾಪಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡ ರವರು ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆಯ ಬಗ್ಗೆ ಕೇಳಿರುವ ಪ್ರಶ್ನೆಗೆ ಮಾನ್ಯ ಕಾರ್ಮಿಕ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**(ಆ) ವಿಷಯ: ಜಮಖಂಡಿ ತಾಲ್ಲೂಕಿನ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.**

-----

**ಶ್ರೀ ಹಣಮಂತ ರುದ್ರಪ್ಪ ನಿರಾಣಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಇತ್ತೀಚಿನ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಬೇಕೆನ್ನುವುದು ಅಲ್ಲಿನ ಜನರ ಮಹದಾಸೆ ಮತ್ತು ಒಕ್ಕೊರಲಿನ ಕೂಗಾಗಿದೆ. ಸದರಿ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿಸುವ ಕುರಿತು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಮಾಹಿತಿ ಮತ್ತು ಸ್ಪಷ್ಟ ಅಭಿಪ್ರಾಯ ಕೋರಿ ದಿನಾಂಕ:28.06.2019 ರಂದು ಪತ್ರ ಬರೆದಿರುತ್ತಾರೆ. ಅದರಂತೆ ದಿನಾಂಕ:22.07.2019ರ ಪತ್ರದಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿಗಳು ಶಿಫಾರಸ್ಸು ಮಾಡದೇ ಇರುವಂತಹ ಪ್ರದೇಶಗಳನ್ನು ಸಹ ಇತ್ತೀಚೆಗೆ ಹೊಸ ತಾಲ್ಲೂಕುಗಳೆಂದು ಘೋಷಿಸಿರುವ ಹಿನ್ನಲೆಯಲ್ಲಿ ಲಭ್ಯವಿರುವ ವಿಸ್ತೀರ್ಣ, ಜನಸಂಖ್ಯೆ ಮತ್ತು ಇತ್ಯಾದಿ ಮಾಹಿತಿಗಳೊಂದಿಗೆ ಸಾವಳಗಿ ಹೋಬಳಿಯು ಒಂದು ಲಕ್ಷಕ್ಕಿಂತ ಹೆಚ್ಚು ವಿಸ್ತೀರ್ಣ ಮತ್ತು ಒಂದು ಲಕ್ಷಕ್ಕಿಂತ ಅಧಿಕ ಜನಸಂಖ್ಯೆಯನ್ನು ಹೊಂದಿರುವುದರಿಂದ, ತಾಲ್ಲೂಕು ರಚಿಸಲು ಸೂಕ್ತವಾಗಿರುವುದರಿಂದ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವುದಕ್ಕಾಗಿ ಪರಿಗಣಿಸುವ ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದಾಗ್ಯೂ ಇಲ್ಲಿಯವರೆಗೆ ಸದರಿ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸದಿರುವುದು ವಿಷಾದನೀಯವಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(1045) 08.12.2020 08.20 ಎಸ್‌ವಿ-ವಿಕೆ**

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಮುಂದು):**

ಮಾಜಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಹಾಗೂ ಇನ್ಫೋಸಿಸ್ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರ ಹುಟ್ಟೂರು ಸಹ ಸಾವಳಗಿ ಪಟ್ಟಣವೇ ಎಂಬುದನ್ನು ಗಮನಿಸುತ್ತಾ, ಸಾವಳಗಿ ಹೋಬಳಿಯಲ್ಲಿ ಒಟ್ಟು 24 ಗ್ರಾಮಗಳು ಒಳಪಡುತ್ತಿದ್ದು, ಭೌಗೋಳಿಕವಾಗಿ 1,09,050 ಎಕರೆ ಕ್ಷೇತ್ರವನ್ನು ಹೊಂದಿರುತ್ತದೆ. 2011ರ ಜನಗಣತಿಯ ಪ್ರಕಾರ 96,073 ಜನಸಂಖ್ಯೆಯನ್ನು ಹೊಂದಿದ್ದು, ಪ್ರಸ್ತುತ 1 ಲಕ್ಷದ ಗಡಿಯನ್ನು ದಾಟಿರುತ್ತದೆ. ಮೂಲ ತಾಲ್ಲೂಕು ಕೇಂದ್ರ ಜಮಖಂಡಿಯಿಂದ ಸಾವಳಗಿ ವಲಯದ ಗ್ರಾಮಗಳು ಕನಿಷ್ಠ 10 ಕಿ.ಮೀ. ದಿಂದ ಗರಿಷ್ಠ 45 ಕಿ.ಮೀ.ಗಳವರೆಗೆ ಅಂತರವನ್ನು ಹೊಂದಿವೆ. ಈಗಾಗಲೇ ನಾಡಕಛೇರಿ, ಪೊಲೀಸ್ ಠಾಣೆ, ರೈತ ಸಂಪರ್ಕ ಕೇಂದ್ರ, ಪಶು ಚಿಕಿತ್ಸಾಲಯ, ಸರ್ಕಾರಿ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಸಾವಳಗಿಯನ್ನು ತಾಲ್ಲೂಕನ್ನಾಗಿ ಘೋಷಿಸಿದ ಸಂದರ್ಭದಲ್ಲಿ ಸಾವಳಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಕೂರ ಪುನರ್ವಸತಿ ಕೇಂದ್ರದಲ್ಲಿರುವ ಸುಮಾರು 35ಕ್ಕಿಂತ ಅಧಿಕ ಬಳಕೆಯಾಗದ ಸರ್ಕಾರಿ ಕಟ್ಟಡಗಳನ್ನು ಬಳಸಿಕೊಳ್ಳಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವವರೆಗೂ, ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಅಲ್ಲಿನ ಜನತೆಯು ತೀರ್ಮಾನಿಸಿರುವ ವಿಷಯ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ನಿಜಕ್ಕೂ ಖೇದದ ಸಂಗತಿಯಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸುತ್ತಾ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಕೂಡಲೇ ಘೋಷಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ:- ವೃತ್ತಿ ಶಿಕ್ಷಣ (ಜೆ.ಓ.ಸಿ.) ಇಲಾಖೆಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ 95 ಉಪನ್ಯಾಸಕರು ಬಿ.ಇಡಿ ಷರತ್ತಿನಿಂದ 7 ವರ್ಷ ಕಳೆದರೂ ಪ್ರೊಬೇಷನರಿ ಅವಧಿ ಘೋಷಿಸದೇ ಖಾಯಂ ಆಗದೇ ಅತಂತ್ರರಾಗಿರುವ ಕುರಿತು.**

------

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ವೃತ್ತಿ ಶಿಕ್ಷಣ (ಜೆ.ಓ.ಸಿ) ಇಲಾಖೆಯಿಂದ ಸುಮಾರು 3,000 ಸಿಬ್ಬಂದಿಯನ್ನು ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಿ ಸೇವಾ ಖಾಯಂಗೊಳಿಸಲಾಯಿತು. ಆದರೆ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ 95 ಉಪನ್ಯಾಸಕರು ಬಿ.ಇಡಿ. ಷರತ್ತಿನಿಂದಾಗಿ 7 ವರ್ಷ ಕಳೆದರೂ ಸಹ ಪ್ರೊಬೇಷನರಿ ಅವಧಿಯನ್ನು ಘೋಷಿಸದೆ ಇವರ ಸೇವೆಯು ಖಾಯಂ ಆಗಿರದೆ ಅತಂತ್ರರಾಗಿರುತ್ತಾರೆ. ಇದರ ಸಂಬಂಧ ಇವರು ನನಗೆ ದಿನಾಂಕ 08.12.2020ರಂದು ಮನವಿ ಸಲ್ಲಿಸಿರುತ್ತಾರೆ.

ಇವರಲ್ಲಿ ಕೆಲವು ಜನರು ಈಗಾಗಲೇ ನಿವೃತ್ತಿ ಹೊಂದಿದ್ದು, ಬಾಕಿಯವರು ನಿವೃತ್ತಿಯ ಅಂಚಿನಲ್ಲಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಯು ಕಡತ ಸಂಖ್ಯೆ ಇಡಿ 615 ಎಸ್‌ಹೆಚ್‌ಹೆಚ್ 2017ರಲ್ಲಿ ನಡೆದಿರುತ್ತದೆ.

ಆದ್ದರಿಂದ ಮಾನವೀಯತೆಯ ಹಿನ್ನೆಲೆಯಲ್ಲಿ ಇವರಿಗೆ ಬಿ.ಇಡಿ ಯಿಂದ ವಿನಾಯಿತಿ ನೀಡಿ ಪ್ರೊಬೇಷನರಿ ಘೋಷಿಸಿ ಖಾಯಂಗೊಳಿಸಿ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಈ) ವಿಷಯ:- ಗ್ರಾಮ ಪಂಚಾಯತಿಯ ಸದಸ್ಯತ್ವವನ್ನು ಬಹಿರಂಗವಾಗಿ ಹರಾಜು ಹಾಕುತ್ತಿರುವ ವಿಷಯ ಇಂದಿನ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವ ಬಗ್ಗೆ**

------

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮಪಂಚಾಯ್ತಿಯ ಸದಸ್ಯತ್ವವನ್ನು ಬಹಿರಂಗವಾಗಿ ಹರಾಜು ಹಾಕುತ್ತಿರುವುದು ಇಂದಿನ ಪ್ರಜಾವಾಣಿ, ವಿಜಯ ಕರ್ನಾಟಕ, ವಿಜಯವಾಣಿ ಹಾಗೂ ಎಲ್ಲ ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

ಭಾರತೀಯ ಸಂವಿಧಾನವು ಇಡೀ ಜಗತ್ತೇ ಹೆಮ್ಮೆ ಪಡುವ ಅದ್ಭುತವಾಗಿರುವಂತಹ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೊಡಮಾಡಿದೆ. ಪ್ರತಿಯೊಬ್ಬ ನಾಗರಿಕನು ಅತ್ಯಂತ ನಿರ್ಣಾಯಕ ಮತಾಧಿಕಾರವನ್ನು ಹೊಂದಿದ್ದು, ಪಂಚಾಯಿತಿ ವ್ಯವಸ್ಥೆಗಳ ಪ್ರತಿನಿಧಿಗಳ ಆಯ್ಕೆಯಲ್ಲಿ ಮತ ಚಲಾಯಿಸುವ ಮೂಲಕ ಜನಾದೇಶ ದೊರಕಬೇಕು ಎನ್ನುವುದು ಪ್ರಜಾತಂತ್ರದ ಆಶಯ. ಈ ಆಶಯಕ್ಕೆ ಭಂಗ ತರುವ ರೀತಿಯಲ್ಲಿ ಇಂದು ಕರ್ನಾಟಕದಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಅವಿರೋಧ ಆಯ್ಕೆ ಮಾಡುವ ಅದನ್ನೂ ಬಹಿರಂಗ ಹರಾಜು ಮೂಲಕ ಎನ್ನುವ ವರದಿಗಳು ಆತಂಕಕಾರಿ. ಪ್ರಜಾತಂತ್ರದ ಆಶಯಗಳಿಗೆ ಅಪಾಯ ಒಡ್ಡಬಲ್ಲ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ತಕ್ಷಣ ಮಧ್ಯ ಪ್ರವೇಶಿಸಿ ಎಲ್ಲೆಲ್ಲಿ ಈ ರೀತಿ ನಡೆದಿದೆಯೋ ಅಲ್ಲಿ ಚುನಾವಣೆಗಳನ್ನು ನಿಲ್ಲಿಸಿ ಜನಜಾಗೃತಿ ಮೂಡಿಸಿ ಕಟ್ಟಕಡೆಯ ವ್ಯಕ್ತಿಯೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಾಲ್ಗೊಂಡು ಆಯ್ಕೆಯಾಗಿ ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸುವಲ್ಲಿ ಪಾತ್ರ ವಹಿಸುವ ವ್ಯವಸ್ಥೆ ಕಲ್ಪಿಸಬೇಕು. ಆ ಮೂಲಕ ಗ್ರಾಮಗಳಲ್ಲಿ ಅಂತ್ಯೋದಯದ ಕಲ್ಪನೆಗಳನ್ನು ಸಾಕಾರಗೊಳಿಸಿ ಗುರುತರಗೊಳಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ ಎಂದು ಶೂನ್ಯವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 11 ರಂತೆ ಯಾವುದೇ ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರುತ್ತೇನೆ.

ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಗಳನ್ನು ನಡೆಸುವ) ನಿಯಮಗಳು, 1993ರ ನಿಯಮ 12 ರಂತೆ ಜಿಲ್ಲಾಧಿಕಾರಿಯು ಗ್ರಾಮ ಪಂಚಾಯತಿ ಚುನಾವಣೆಗಾಗಿ ಅಧಿಸೂಚನೆಯನ್ನು ಹೊರಡಿಸಿದ ಮೇಲೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಮ 14ರಂತೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ಅಥವಾ ಅವನ ಸೂಚಕನ ಮೂಲಕ ನಾಮಪತ್ರವನ್ನು ಚುನಾವಣಾ ಅಧಿಕಾರಿಗೆ ಸಲ್ಲಿಸಬೇಕಾಗಿರುತ್ತದೆ.

ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂಪಡೆದ ನಂತರ ಉಳಿದ ಅಭ್ಯರ್ಥಿಗಳಿಗಾಗಿ ಮತದಾನವನ್ನು ನಡೆಸಲಾಗುತ್ತದೆ. ತದನಂತರ ಚುನಾವಣಾ ಫಲಿತಾಂಶ ಘೋಷಣೆ ಮಾಡಿ ಅಭ್ಯರ್ಥಿಗಳನ್ನು ಆಯ್ಕೆಯಾಗಿರುವುದಾಗಿ ಘೋಷಿಸಲಾಗುತ್ತದೆ.

ರಾಜ್ಯದಲ್ಲಿ ಅವಧಿ ಪೂರ್ಣಗೊಂಡಿರುವ ಗ್ರಾಮ ಪಂಚಾಯತಿಗಳಿಗೆ ಚುನಾವಣೆ ನಡೆಸಲು ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಿರುತ್ತಾರೆ. ರಾಜ್ಯದ ಬಳ್ಳಾರಿ, ಮಂಡ್ಯ, ತುಮಕೂರು, ಕಲಬುರಗಿ ಜಿಲ್ಲೆಗಳ ಕೆಲವು ಗ್ರಾಮ ಪಂಚಾಯತಿಗಳ ಸದಸ್ಯ ಸ್ಥಾನಗಳನ್ನು ಹರಾಜು ಮಾಡಿರುವ ಆರೋಪವು ಕನ್ನಡ ದಿನಪತ್ರಿಕೆಗಳಾದ ವಿಜಯ ಕರ್ನಾಟಕ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಇನ್ನಿತರ ಪತ್ರಿಕೆಗಳಲ್ಲಿ ದಿನಾಂಕ 08.12.2020ರಂದು ಸುದ್ದಿ ಪ್ರಕಟಗೊಂಡಿದೆ. ಗ್ರಾಮ ಪಂಚಾಯತಿಗಳ ಸದಸ್ಯ ಸ್ಥಾನಗಳನ್ನು ಹರಾಜು ಮಾಡಲಾಗಿದೆ ಎಂಬ ಆರೋಪಗಳಲ್ಲಿ ಸತ್ಯಾಂಶವಿದ್ದರೆ, ಇದೊಂದು ಗಂಭೀರ ದುರ್ನಡತೆ ಮತ್ತು ಅವ್ಯವಹಾರವಾಗುತ್ತದೆ ಹಾಗೂ ಇದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಪತ್ರಿಕಾ ವರದಿಯನ್ನು ಪರಿಶೀಲಿಸಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ರಾಜ್ಯ ಚುನಾವಣಾ ಆಯೋಗವನ್ನು ದಿನಾಂಕ 08.12.2020ರಂದು ಕೋರಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಮಹತ್ವದ ವಿಷಯವಾಗಿದ್ದು, ಅರ್ಧಗಂಟೆ ಕಾಲಾವಧಿ ಚರ್ಚೆ ಅಥವಾ ಇನ್ನಾವುದೇ ವಿಷಯದಡಿಯಲ್ಲಿ ಚರ್ಚಿಸಬೇಕೆಂದು ವಿನಂತಿಸುತ್ತೇನೆ. ಇದು ನಾಚಿಕೆಯಾಗುವಂತಹ ವಿಷಯವಾಗಿದ್ದು, ಮಾನ-ಮರ್ಯಾದೆ ಇರುವವರು ರಾಜಕಾರಣದಲ್ಲಿ ಇರಬಾರದು ಎನ್ನುವ ಮಾತನ್ನು ಇಂದು ಹೇಳಬೇಕಾಗಿದೆ. ಇದನ್ನು ಯಾವುದಾದರೊಂದು ರೀತಿಯಲ್ಲಿ ಚರ್ಚೆ ಮಾಡಿದರೆ ಜನರಿಗೆ ಮಾಹಿತಿ ತಲುಪುತ್ತದೆ ಎನ್ನುವುದು ನನ್ನ ಉದ್ದೇಶ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೇರೆ ಯಾವುದಾದರೊಂದು ಸ್ವರೂಪದಲ್ಲಿ ಚರ್ಚೆಗೆ ತಂದರೆ ಚರ್ಚಿಸೋಣ. ಈಗ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವುದಕ್ಕೆ ಉತ್ತರವನ್ನು ನೀಡುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ನಾನು ಅರ್ಜಿಯನ್ನು ಕೊಡುತ್ತೇನೆ. ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು. ಶೂನ್ಯವೇಳೆಯಲ್ಲಿ ಉತ್ತರವನ್ನು ಕೊಟ್ಟಿರುವುದರಿಂದ ಇದನ್ನು ಚರ್ಚಿಸಲು ಅವಕಾಶವಿದೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರ ಅವರು ಪ್ರಸ್ತಾಪಿಸಿರುವ ವಿಷಯವು ಎಲ್ಲಾ ಕಡೆಗಳಲ್ಲಿ ಶುರುವಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ವಿಚಾರವಾಗಿದ್ದು, ಗಂಭೀರವಾದ ಚರ್ಚೆಯಾಗಬೇಕಿದೆ. ಹರಾಜು ಮಾಡಲು ಇದೇನು ಸರಕು ವಸ್ತುವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಹೊರಗೆ ಹೋದರೆ ಜನ ನಮ್ಮನ್ನು ನೋಡಿ ಹೇಗೆ ಮಾತನಾಡುತ್ತಾರೆ? ಬಿಜಾಪುರ ಜಿಲ್ಲೆಯಲ್ಲಿ ಒಬ್ಬರು ತಮ್ಮ ಪತ್ನಿಯನ್ನು ಅಧ್ಯಕ್ಷರನ್ನಾಗಿ ಮಾಡಿದರೆ ರೂ.20 ಲಕ್ಷ ಕೊಡುವುದಾಗಿ ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಅರುಣ ಶಹಾಪುರ ಅವರೇ, ಈಗ ಬೇಕಾದರೆ ಮಾತನಾಡಿ. ಅರ್ಧಗಂಟೆ ಚರ್ಚೆಗೆ ಅವಕಾಶ ನೀಡಲು ಆಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಂತಹ ಹಿರಿಯರ ಮನೆಯಲ್ಲಿ ಇದನ್ನು ಸುಮ್ಮನೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ, ಸರ್ಕಾರದಿಂದ ಉತ್ತರ ಪಡೆದುಕೊಂಡರೆ ಅದರ ಪರಿಣಾಮವೇನೂ ಆಗುವುದಿಲ್ಲ. ಇದರ ಬಗ್ಗೆ ಚರ್ಚೆಯಾಗಿ ಕನಿಷ್ಠ ರಾಜಕಾರಣದಲ್ಲಿ ಈ ರೀತಿ ನಡೆದು ಕೊಳ್ಳುತ್ತಾರೆ ಎನ್ನುವ ಕೆಟ್ಟ ಅಭಿಪ್ರಾಯವು ಹೋಗಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದ್ದರಿಂದ ದಯವಿಟ್ಟು ಯಾವುದಾದರೊಂದು ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಿ. ಏಕೆಂದರೆ ಒಳ್ಳೆಯವರು ಕೆಟ್ಟವರಾಗುತ್ತಾರೆ, ಕೆಟ್ಟವರಂತು ಕೆಟ್ಟವರಾಗಿಯೇ ಇರುತ್ತಾರೆ. ಒಳ್ಳೆಯವರನ್ನು ಕೆಟ್ಟವರನ್ನಾಗಿ ಮಾಡುತ್ತಾರೆ. ಆದ್ದರಿಂದ ಈ ವ್ಯವಸ್ಥೆಯ ಬಗ್ಗೆ ಮಾತನಾಡುವುದು ಸೂಕ್ತ. ಇದು ನನ್ನ ಕಳಕಳಿಯ ಮನವಿಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಓದುತ್ತೇನೆ. ನಂತರ ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಕೊಡುವುದು ತಮಗೆ ಸೇರಿದ ವಿಚಾರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ದಿನಪತ್ರಿಕೆಯಲ್ಲಿ ಬಂದಿದ್ದರೆ ಏನು ಅನ್ನಿಸುತ್ತಿರಲಿಲ್ಲ. ಎಲ್ಲಾ ದಿನಪತ್ರಿಕೆಗಳಲ್ಲಿಯೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಾನು ಸರ್ಕಾರಕ್ಕೆ ಒಂದು ಮಾತನ್ನು ಹೇಳುತ್ತೇನೆ. ಯಾರು ಈ ರೀತಿಯ ಹೇಳಿಕೆಗಳನ್ನು ನೀಡಿದ್ದಾರೆಯೋ ಅವರನ್ನು ತಕ್ಷಣ ಬಂಧಿಸಬೇಕು. ಮಾಡಿದವರು ವೀಡಿಯೋ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಇದು ಸಂವಿಧಾನ ಬಾಹಿರ ಅಲ್ಲವೇ? ಸರ್ಕಾರ ತಕ್ಷಣ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು.

**Sri S.R.PATIL:-** It is an offence under the Indian Penal Code and you can book a criminal case against him.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ವ್ಯಕ್ತಪಡಿಸಿರುವಂತಹ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವಂತೆ ಚುನಾವಣಾ ಆಯೋಗಕ್ಕೆ ಪತ್ರವನ್ನು ಬರೆದಿದ್ದೇವೆ. ಇದರ ಬಗ್ಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳೆಲ್ಲವನ್ನು ಕೈಗೊಳ್ಳಲಾಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾನಾಯಕರೇ, ನೀವು ಜಿಲ್ಲಾಧಿಕಾರಿಗಳಿಗೆ ಹೇಳುವುದು ಬೇಡ. ಸರ್ಕಾರಕ್ಕೆ ಎಲ್ಲಾ ರೀತಿಯ ಅಧಿಕಾರವಿದೆ. ತಕ್ಷಣವೇ ಹರಾಜು ಮಾಡಿರುವವರನ್ನು ಬಂಧಿಸಿ. ಪತ್ರಿಕೆಯವರು ಸುಳ್ಳು ಬರೆಯುವುದಕ್ಕೆ ಸಾಧ್ಯವಿಲ್ಲ. ಒಂದು ಪತ್ರಿಕೆಯವರು ಬರೆದಿದ್ದರೆ ಸುಳ್ಳು ಎಂದು ಹೇಳಬಹುದು. ಎಲ್ಲಾ ಪತ್ರಿಕೆಗಳಲ್ಲಿಯೂ ಬರೆದಿದ್ದಾರೆ ಎಂದರೆ ಇದರರ್ಥ ಏನು? ದಯಮಾಡಿ ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇದರಿಂದ ಬರುವ ದಿನಗಳಲ್ಲಿ ರಾಜಕಾರಣ ವ್ಯವಸ್ಥೆಯಲ್ಲಿ ಶಾಸಕರು ಹರಾಜಾಗುತ್ತಾರೆ. ಆಗ ಏನು ಮಾಡುತ್ತೀರಿ? ದಯಮಾಡಿ ನನ್ನ ಮಾತನ್ನು ಗಂಭೀರವಾಗಿ ಪರಿಗಣಿಸಿ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಹೊರಟ್ಟಿಯವರೇ, ತಮ್ಮ ಮಾತು ಸರಿಯಿದೆ. ಖಂಡಿತವಾಗಿ ಸರ್ಕಾರ ಇದನ್ನು ಪರಿಶೀಲಿಸುತ್ತದೆ.

**.ಮುಂದು)**

(1046) 08.12.2020 KG.BNS 08.30

**ಊ) ವಿಷಯ:- ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸೃಷ್ಟಿಸಿರುವ ಪ್ರತ್ಯೇಕ ಸಚಿವಾಲಯದ ವ್ಯಾಪ್ತಿಗೆ ಕೇಂದ್ರದ ಹಿಂದುಳಿದ ಪಟ್ಟಿಯಲ್ಲಿ ಇಲ್ಲದೇ ಇರುವ ಜಾತಿಗಳಿಗೂ ಅನ್ವಯಿಸುವುದರ ಬಗ್ಗೆ.**

**- - -**

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗ (OBC) ಹಾಗೂ ಆರ್ಥಿಕವಾಗಿ ಹಿಂದುಳಿದ ಜಾತಿಗಳನ್ನು ಪ್ರವರ್ಗದಡಿಯಲ್ಲಿ ವರ್ಗೀಕರಿಸಿ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ I, II(A), II(B), III(A), III(B) ಎಂದು 2002 ಏಪ್ರಿಲ್ 11 ರಂದು ರಾಜ್ಯ ಸರ್ಕಾರ ಸಂವಿಧಾನ ಅನುಚ್ಛೇಧ 15 (4) ಮತ್ತು ಅನುಚ್ಛೇಧ 16 (4)ರ ಪ್ರಕಾರ ಆದೇಶ ಹೊರಡಿಸಿರುವುದು ಸರಿಯಷ್ಟೇ.

2018 ರಲ್ಲಿ ಕೇಂದ್ರ ಸರ್ಕಾರವು ಸಂವಿಧಾನ ತಿದ್ದುಪಡಿ ತಂದು ಅನುಚ್ಛೇಧ 338 ಬಿ ಯಡಿಯಲ್ಲಿ ನ್ಯಾಷನಲ್ ಕಮಿಷನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ NCBC ರಚನೆಯಾಗಿರುವುದರ ಜೊತೆಗೆ 2019 ರಲ್ಲಿ ಸಂವಿಧಾನ ಅನುಚ್ಛೇಧ 15(6) ಮತ್ತು ಅನುಚ್ಛೇಧ 16(6) ರನ್ನು ತಂದು ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಎಲ್ಲಾ ಜಾತಿಗಳಿಗೂ ರಾಜ್ಯ ಸರ್ಕಾರಗಳ ವತಿಯಿಂದ ಶೈಕ್ಷಣಿಕ ಅಭಿವೃದ್ಧಿಗೆ ಕ್ರಮಕೈಗೊಳ್ಳಲು ಅಧಿಕಾರ ನೀಡಿರುತ್ತದೆ.

ಅದರ ಪ್ರಕಾರ, ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ 199 ಹಿಂದುಳಿದ ಜಾತಿಗಳನ್ನು ಮಾತ್ರ ಗುರುತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಆ ಪ್ರಕಾರ ರಾಜ್ಯ ಸರ್ಕಾರವು 2002 ರ ಅಧಿಸೂಚನೆಯಂತೆ ಹಿಂದುಳಿದ ವರ್ಗಗಳ ಜಾತಿಗಳನ್ನು ಪ್ರವರ್ಗ-1, ಪ್ರವರ್ಗ II(A), ಪ್ರವರ್ಗ II(B), ಪ್ರವರ್ಗ III(A) ಮತ್ತು ಪ್ರವರ್ಗ III(B) ರಲ್ಲಿ ಪರಾಮರ್ಶಿಸಿ ಕೇಂದ್ರದ ಪಟ್ಟಿಯ ಆಧಾರದ ಮೇಲೆ ಮರುಪರಿಶೀಲಿಸಬೇಕಾದಂತಹ ಅವಶ್ಯಕತೆ ರಾಜ್ಯ ಸರ್ಕಾರಕ್ಕೆ ಸಂವಿಧಾನದ ಅನುಚ್ಛೇಧ 338ಬಿ ರ ಪ್ರಕಾರ ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂವಿಧಾನ ಅನುಚ್ಛೇದ 15(6) ಮತ್ತು ಅನುಚ್ಛೇದ 16(6) ರಂತೆ ಎಲ್ಲಾ ಜಾತಿಗಳಲ್ಲಿ ಬರುವ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಜಾತಿಗಳಿಗೆ ಶೈಕ್ಷಣಿಕ ಅಭಿವೃದ್ಧಿಗೆ ಹಾಗೂ ಉದ್ಯೋಗ ಕಲ್ಪಿಸಲು ಅಧಿಕಾರ ನೀಡಿರುತ್ತದೆ. ಆದರೆ, ಈ ಅನುಚ್ಛೇಧಗಳ ಪ್ರಕಾರ ಕೇಂದ್ರದ ಪಟ್ಟಿಯಲ್ಲಿರುವ 199 ಹಿಂದುಳಿದ ಜಾತಿಗಳನ್ನು (OBC) ಹೊರತುಪಡಿಸಿ ಇನ್ನುಳಿದ ಎಲ್ಲ ಜಾತಿಗಳ ಆರ್ಥಿಕವಾಗಿ ಹಿಂದುಳಿದವರು ಹಾಗೂ ದುರ್ಬಲ ವರ್ಗದವರಿಗೆ ಶೇ.10% ಶೈಕ್ಷಣಿಕ ಹಾಗೂ ಉದ್ಯೋಗಗಳಲ್ಲಿ ಮಾತ್ರ ಮೀಸಲಾತಿ ನೀಡಲು ಸಂವಿಧಾನದಡಿ ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ರಾಜ್ಯ ಸರ್ಕಾರದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಒಂದು ಪ್ರತ್ಯೇಕ ಸಚಿವಾಲಯ ಸೃಷ್ಠಿಸಿರುವ ಹಿನ್ನೆಲೆಯಲ್ಲಿ ಈ ಸಚಿವಾಲಯದ ಕಾರ್ಯವ್ಯಾಪ್ತಿಗೆ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಬರುವ ಹಿಂದುಳಿದ ಜಾತಿಗಳು ಮಾತ್ರ ಒಳಪಡುತ್ತಿದೆಯೇ ಅಥವಾ ಕೇಂದ್ರದ ಹಿಂದುಳಿದ ಪಟ್ಟಿಯಲ್ಲಿ (OBC) ಇಲ್ಲದೇ ಇರುವ ಜಾತಿಗಳಿಗೂ ಅನ್ವಯಿಸುತ್ತದೆಯೇ? ಈ ಎಲ್ಲಾ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಿ ಸಂವಿಧಾನ ಅನುಚ್ಛೇದ 338 ಬಿ ಹಾಗೂ ಅನುಚ್ಛೇದ 15(6) ಮತ್ತು ಅನುಚ್ಛೇದ 16(6) ಪ್ರಕಾರ ರಾಜ್ಯ ಸರ್ಕಾರ ಕ್ರಮಕೈಗೊಳ್ಳಲು ಹಾಗೂ ಮೇಲೆ ತಿಳಿಸಿರುವ ಎಲ್ಲಾ ಅಂಶಗಳಿಗೂ ಸೃಷ್ಟೀಕರಣವನ್ನು ನೀಡಬೇಕೆಂದು ಶೂನ್ಯವೇಳೆಯಲ್ಲಿ ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ರಚಿಸಿರುವಂತಹ ಪ್ರತ್ಯೇಕ ಸಚಿವಾಲಯದಲ್ಲಿ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಬರುವ ಹಿಂದುಳಿದ ಜಾತಿಗಳ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ರಾತ್ರಿ 8 ಗಂಟೆ 35 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ದಿನಾಂಕ 9ನೇ ಡಿಸೆಂಬರ್ 2020ರ ಬುಧವಾರದಂದು ಪೂರ್ವಾಹ್ನ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು